ಮಾನವಿಕ ಕರ್ಣಾಟಕ

ಸಂಪುಟ ೧೯ ; ಸಂಚಿಕೆ ೨, ೩ (ಸಂಯುಕ್ತ)

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೯

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೯ ; ಸಂಚಿಕೆ ೨-೩
(ಸಂಯುಕ್ತ ಸಂಚಿಕೆ)

೭೪-೭೫

ಏಪ್ರಿಲ್-ಜುಲೈ ೧೯೮೯ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೯

MANAVIKA KARNATAKA, Kannada Quarterly of the *University of Mysore*, Volume 19, Number 2-3, April-July 1989, Edited by Dr. M. V. Srinivas and Sri M. N. Nanjundaraje Urs.

ಪ್ರಧಾನ ಸಂಪಾದಕರು

ಡಾ. ಸಿ. ಪಿ. ಕೃಷ್ಣಕುಮಾರ್

ಸಂಪಾದಕರು

ಡಾ. ಎಂ. ವಿ. ಶ್ರೀನಿವಾಸ್
ಎಂ. ಎನ್. ನಂಜುಂಡರಾಜೇ ಅರಸ್

ಪ್ರಕಾಶಕರು

ಕೆ. ಟಿ. ವೀರಪ್ಪ
ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦ ೦೦೬

ಮುದ್ರಕರು

ಬಿ. ಎಸ್. ಸಿದ್ದೇಗೌಡ
ಕಾರ್ಯಭಾರಿ ನಿರ್ದೇಶಕರು,
ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೫೭೦ ೦೦೬

ವಿಷಯಸೂಚಿ

ಲೇಖಕರ ಸೂಚಿ

ಜಿ. ಕುಮಾರಪ್ಪ	ಸಹಾಯಕ ಗ್ರಂಥಪಾಲಕ, ರಾಷ್ಟ್ರೀಯ ಗ್ರಂಥಾಲಯ, ಕಲ್ಕತ್ತ
ಟಿ. ಎ. ವಿ. ಮೂರ್ತಿ	ಸಹಾಯಕ ಗ್ರಂಥಪಾಲಕ, ರಾಷ್ಟ್ರೀಯ ಗ್ರಂಥಾಲಯ, ಕಲ್ಕತ್ತ
ಡಾ. ಹು. ಲ. ಚಂದ್ರಶೇಖರ	೧೬೦/೧, ನಾರಾಯಣಶಾಸ್ತ್ರಿ ರಸ್ತೆ, ಕೃಷ್ಣರಾಜ ಮೊಹಲ್ಲಾ, ಮೈಸೂರು-೫೭೦೦೨೪
ಡಾ. ಆರ್. ಆರ್. ಕುಲಕರ್ಣಿ	ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ಸಹ್ಯಾದ್ರಿ ಕಲಾ ಮಹಾವಿದ್ಯಾಲಯ, ಶಿವಮೊಗ್ಗ.
ಯಮುನಾಬಾಯಿ, ಆರ್. ರಾವ್	'ಶ್ರೀ', ೪೦೯, ೧೨ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು
ಆರ್. ಸರ್ವಮಂಗಳ	ಉಪನ್ಯಾಸಕರು, ಶಿಕ್ಷಣವಿಭಾಗ, ಮಾನಸಗಂಗೋತ್ರಿ, ಮೈಸೂರು
ಡಾ. ಟಿ. ಬಿ. ಬಸವರಾಜ್	ಉಪನ್ಯಾಸಕರು, ತತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
ಡಾ. ಎ. ವಿ. ನರಸಿಂಹಮೂರ್ತಿ	ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸ ಗಂಗೋತ್ರಿ, ಮೈಸೂರು
ಡಾ. ಜಿ. ಪುರುಷೋತ್ತಮ	ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
ಡಾ. ಸಿ. ಎಸ್. ರಾಮಚಂದ್ರ	ಉಪನ್ಯಾಸಕರು, ಭಾಷಾಶಾಸ್ತ್ರ ವಿಭಾಗ ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು
ಎಂ. ಎಸ್. ಚಂದ್ರಶೇಖರಪ್ಪ	ಉಪನ್ಯಾಸಕರು, ಸಮಾಜ ಕಾರ್ಯ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಎಸ್. ತಿಪ್ಪೇಸ್ವಾಮಿ	ಪತ್ರಿಕಾ ಛಾಯಾಗ್ರಹಕ ಪತ್ರಿಕೋದ್ಯಮ ವಿಭಾಗ ಮಾನಸಗಂಗೋತ್ರಿ, ಮೈಸೂರು
ಡಾ. ಹೆಚ್. ಆರ್. ರಘುನಾಥ ಭಟ್	ಪ್ರವಾಚಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ
ಡಾ. ಅಂಬಳಿಕೆ ಹಿರಿಯಣ್ಣ	ಪ್ರವಾಚಕರು, ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
ಪಿ. ಆರ್. ಶಾಲಿನಿ	ಸಂಶೋಧಕರು, ಸಂಸ್ಕೃತ ವಿಭಾಗ, ಮಾನಸಗಂಗೋತ್ರಿ, ಮೈಸೂರು
ಡಿ. ಎ. ಗಿರಿಜಮ್ಮ	ಸಂಶೋಧಕರು, ಇತಿಹಾಸ ವಿಭಾಗ, ಮಾನಸಗಂಗೋತ್ರಿ, ಮೈಸೂರು
ಡಾ. ಕೃ. ಪೊದುವಾಳ್	

ಜಿ. ಕುಮಾರಪ್ಪ, ಟಿ. ಎ. ವಿ. ಮೂರ್ತಿ

ಭಾರತೀಯ ಭಾಷೆಗಳಲ್ಲಿ ಪಾರಿಭಾಷಿಕ ಪದಗಳ ಮಾನಕೀಕರಣ*

ಸಂವಹನ ಮಾಧ್ಯಮಗಳಲ್ಲಿ ಭಾಷೆಯು ಅತಿಮುಖ್ಯ ಹಾಗೂ ಶಕ್ತಿಶಾಲಿಯಾದ ಮಾಧ್ಯಮವಾಗಿದೆ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಾಗೆಯೇ ಸಂಕೀರ್ಣಗೊಳ್ಳುತ್ತಿರುವ ವ್ಯಕ್ತಿಯ ಅನುಭವಗಳು ಹಾಗೂ ಭಾವನೆಗಳನ್ನು ಅಭಿವ್ಯಕ್ತಿಸಲು ಭಾಷೆಯು ಅವಶ್ಯಕತೆ ಇದೆ. ಸಂಸ್ಕೃತಿ ಮತ್ತು ನಾಗರೀಕತೆಗಳ ಬೆಳವಣಿಗೆಯಲ್ಲಿ ಭಾಷೆಯ ಪಾತ್ರ ಅತ್ಯಂತ ಮಹತ್ವವಾದುದು. ವ್ಯಕ್ತಿಯ ಅನುಭವಗಳು, ಅನಿಸಿಕೆಗಳು ಹಾಗೂ ಆವಿಷ್ಕಾರಗಳನ್ನು ಜನಾಂಗದಿಂದ ಜನಾಂಗಕ್ಕೆ—ತಲೆಮಾರಿನಿಂದ ತಲೆಮಾರಿಗೆ–ಕೊಂಡೊಯ್ಯುವ ಕಾರ್ಯ ಭಾಷೆಯದಾಗಿದೆ. ಆದುದರಿಂದಲೇ ಅದು ಬದಲಾಗುವ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳನ್ನು, ವೈಜ್ಞಾನಿಕ ಹಾಗೂ ತಾಂತ್ರಿಕ ಬೆಳವಣಿಗೆಗಳನ್ನು ಸಮರ್ಥವಾಗಿ ಸಂವಹನಗೊಳಿಸುವ ಶಕ್ತಿಯನ್ನು ಹೊಂದಿರಬೇಕಾಗುತ್ತದೆ. ಅಂದರೆ ಈ ಮೇಲಿನ ಬದಲಾವಣೆ ಹಾಗೂ ಬೆಳವಣಿಗೆಗಳ ಜೊತೆ ಜೊತೆಯಲ್ಲಿಯೇ ಭಾಷೆಯೂ ಸಹ ಬದಲಾಗುತ್ತಾ, ತನ್ನ ಪದ ಸಂಪತ್ತಿಯಲ್ಲಿ ಶ್ರೀಮಂತಗೊಳ್ಳುತ್ತಾ ಸಾಗಬೇಕಾಗುತ್ತದೆ. ಇದೇ ರೀತಿಯಲ್ಲಿ ಶ್ರೀಮಂತ ಪಾರಿಭಾಷಿಕ ಪದಗಳನ್ನು ಹೊಂದಿದೆ. ಭಾಷೆಯಿಂದ ಸಮಾಜ ಸಹಜವಾಗಿಯೇ ಸಾಮಾಜಿಕವಾಗಿ ಹಾಗೂ ವೈಜ್ಞಾನಿಕವಾಗಿ ಮುನ್ನಡೆಯಲು ಸಾಧ್ಯ.

ಭಾರತೀಯ ಭಾಷೆಗಳು : ಒಂದು ನೋಟ

ಭಾರತವು ಬಹುಭಾಷಿಕ ದೇಶ. ಭಾಷಾಶಾಸ್ತ್ರಜ್ಞರ ಪ್ರಕಾರ ಭಾರತದಲ್ಲಿ ಐದು ನೂರಕ್ಕೂ ಹೆಚ್ಚು ಭಾಷೆಗಳು ಇವೆಯಾದರೂ, ಇಲ್ಲಿನ ಶೇ. 98 ರಷ್ಟು ಜನರು ಆಡುವ ಭಾಷೆಗಳು ಕೇವಲ ಇಪ್ಪತ್ನಾಲ್ಕು ಮಾತ್ರ. ಇವು : ಅಸ್ಸಾಮಿ, ಉರ್ದು ಒರಾನ್, ಒರಿಯಾ, ಕನ್ನಡ, ಕಾಶ್ಮೀರಿ, ಕೊಂಕಣಿ, ಗುಜರಾತಿ, ಗೊಂಡಿ, ತಮಿಳು,

*1989 ರ ನವೆಂಬರ್ ತಿಂಗಳಿನಲ್ಲಿ ಪುಣೆಯಲ್ಲಿ ನಡೆದ ಅಖಿಲ ಭಾರತ ಗ್ರಂಥಾಲಯ ಸಮ್ಮೇಳನದಲ್ಲಿ ಮಂಡಿಸಿದ ಇಂಗ್ಲೀಷ್ ಲೇಖನದ ಸರಳಾನುವಾದ.

ತೆಲುಗು, ನೇಪಾಲಿ, ಪಂಜಾಬಿ, ಬಂಗಾಲಿ, ಬಿಹಾರಿ, ಭಿಲಿ, ಭೋಜ'ಪುರಿ, ಮರಾಠಿ, ಮಲಯಾಳಂ, ಮೈಥಿಲಿ, ರಾಜಸ್ಥಾನಿ, ಸಂತಾಲಿ, ಸಿಂಧಿ ಮತ್ತು ಹಿಂದಿ.

ಮೇಲಿನ ಈ ಇಪ್ಪತ್ನಾಲ್ಕು ಭಾಷೆಗಳಲ್ಲಿ ಆರು ಭಾಷೆಗಳು–ಒರಾನ್, ಕನ್ನಡ, ಗೊಂಡಿ, ತಮಿಳು, ತೆಲುಗು ಮತ್ತು ಮಲಯಾಳಂ–ದ್ರಾವಿಡ ಭಾಷಾ ವರ್ಗಕ್ಕೆ, ಸಂತಾಲಿ ಹಾಗೂ ಕಾಶ್ಮೀರಿ ಭಾಷೆಗಳು ಕ್ರಮವಾಗಿ ಆಸ್ಟ್ರಿಕ್ ಹಾಗೂ ದಾರ್ಡಿಕ್ ಭಾಷಾ ವರ್ಗಗಳಿಗೂ, ಉಳಿದ ಹದಿನಾರು ಭಾಷೆಗಳಲ್ಲಿ ಉರ್ದುವನ್ನುಳಿದು ಇತರ ಭಾಷೆಗಳು ಇಂಡೋ–ಆರ್ಯನ್ ಭಾಷಾವರ್ಗಕ್ಕೆ ಸೇರಿವೆ. ಉರ್ದು ಯಾವುದೇ ಭಾಷಾವರ್ಗಕ್ಕೆ ಸೇರದ, ಸಂಮಿಶ್ರ ಭಾಷೆಯಾಗಿದೆ. ಇಂಡೋ ಆರ್ಯನ್ ಗುಂಪಿಗೆ ಸೇರಿದ ಹದಿನೈದು ಭಾಷೆಗಳ ಮೂಲ ಸಂಸ್ಕೃತ ಭಾಷೆಯಾಗಿದೆ. ಉಳಿದ ಭಾಷೆಗಳಲ್ಲಿ ತಮಿಳು ಹಾಗೂ ಉರ್ದುವನ್ನುಳಿದು ಇತರ ಭಾಷೆಗಳು ಸಂಸ್ಕೃತದಿಂದ ಹೆಚ್ಚಾಗಿ ಪ್ರಭಾವಿತಗೊಂಡಿವೆ. ಈ ಭಾಷೆಗಳ ಹೆಚ್ಚಿನ ಪದಗಳು ಸಂಸ್ಕೃತ ಮೂಲವನ್ನೇ ಹೊಂದಿವೆ.

ಭಾರತೀಯ ಭಾಷೆಗಳಲ್ಲಿ ವಿಜ್ಞಾನ ಸಾಹಿತ್ಯ

ಸಮಕಾಲೀನ ಇಂಗ್ಲಿಷ್ ಹಾಗೂ ಇತರ ಯೂರೋಪಿಯನ್ ಭಾಷೆಗಳಲ್ಲಿ ಪ್ರಕಟವಾಗುತ್ತಿರುವ ವೈಜ್ಞಾನಿಕ–ಸಾಮಾಜಿಕ ಹಾಗೂ ಶುದ್ಧ ವಿಜ್ಞಾನಗಳೆರಡೂ–ಬರವಣಿಗೆಗೆ ಹೋಲಿಸಿದಲ್ಲಿ ಭಾರತೀಯ ಭಾಷೆಗಳಲ್ಲಿ ವೈಜ್ಞಾನಿಕ ಸಾಹಿತ್ಯ ಇಲ್ಲವೇ ಇಲ್ಲವೆನ್ನುವಷ್ಟು ಕಡಮೆ. ಹೆಚ್ಚಿನ ಭಾಷೆಗಳಲ್ಲಿ ವಿಜ್ಞಾನದ ಕೆಲವೊಂದು ವಿಚಾರಗಳನ್ನುಳಿದು ಇತರ ವಿಷಯಗಳ ಬಗೆಗೆ ನಿಘಂಟುಗಳಾಗಲಿ, ಪಾರಿಭಾಷಿಕಪದಕೋಶಗಳಾಗಲಿ ಇಲ್ಲ. ವೈಜ್ಞಾನಿಕ ವಿಚಾರಗಳ ವಿಶೇಷ ವಿಶ್ವಕೋಶಗಳ ಮಾತಂತೂ ದೂರವೇ ಉಳಿಯಿತು. ಪ್ರಕಟವಾಗಿರುವ ಪಾರಿಭಾಷಿಕ ಪದಕೋಶಗಳೂ ಸಹ ಅನೇಕ ನ್ಯೂನತೆಗಳಿಂದ ಕೂಡಿವೆ. ಈ ಬಗೆಯ ಕೆಲವು ವಿರಳ ಪ್ರಯತ್ನಗಳನ್ನು ಬಿಟ್ಟರೆ, ಉಳಿದಂತೆ ವೈಜ್ಞಾನಿಕ ಸಾಹಿತ್ಯ ರಚನೆಯ ಬಗೆಗೆ ಯಾರೊಬ್ಬರೂ ಗಂಭೀರವಾಗಿ ಯೋಚಿಸಿರುವಂತೆ ತೋರುತ್ತಿಲ್ಲ. ಈ ಕೊರತೆಗೆ ಮುಖ್ಯ ಕಾರಣ ನಮ್ಮ ಭಾಷೆಗಳಲ್ಲಿನ ಪದಸಂಪತ್ತಿಯ ಕೊರತೆಯಾಗಲಿ, ಜನರಲ್ಲಿನ ಪಾಂಡಿತ್ಯದ ಕೊರತೆಯಾಗಲಿ ಕಾರಣವಾಗಿರದೆ ವಿಜ್ಞಾನದ ವಿಷಯಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಆಲೋಚಿಸುವ ಅಥವಾ ವೈಜ್ಞಾನಿಕ ಚಿಂತನೆಯನ್ನು ಪ್ರಾದೇಶಿಕ ಭಾಷಾ ಸಂಪತ್ತಿನಲ್ಲಿ ಹಿಡಿದಿಡುವ ಪ್ರಯತ್ನಗಳ ಕೊರತೆಯೇ ಆಗಿದೆ. ಆದುದರಿಂದ ನಮ್ಮ ಭಾರತೀಯ ಭಾಷೆಗಳನ್ನು ಬದಲಾಗುತ್ತಿರುವ ತಾಂತ್ರಿಕ ಜಗತ್ತಿನ ಅವಶ್ಯಕತೆಗಳಿಗನುಸಾರವಾಗಿ ಬೆಳೆಸಬೇಕಾದ ಅವಶ್ಯಕತೆ ಎಂದಿಗಿಂತಲೂ ಇಂದು ಹೆಚ್ಚಾಗಿದೆ.

ಭಾಷೆಯ ಬೆಳವಣಿಗೆ ಆ ಭಾಷೆಯಲ್ಲಿ ಪ್ರಕಟವಾಗುವ ವೈಜ್ಞಾನಿಕ ಪ್ರಕಟಣೆಯನ್ನು ಅವಲಂಬಿಸಿರುವಂತೆಯೇ, ಆ ಭಾಷೆಯಲ್ಲಿ ಪ್ರಕಟವಾಗುವ ನಿಘಂಟು,

ಪಾರಿಭಾಷಿಕ ಪದಕೋಶ, ವಿಶ್ವಕೋಶ ಮೊದಲಾದ ಆಕರ ಗ್ರಂಥಗಳ ರಚನೆಗಳನ್ನೂ ಅವಲಂಬಿಸಿದೆ. ಭಾರತೀಯ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಒಂದೇ ವಿಷಯದ ಪಾರಿಭಾಷಿಕ ಪದಕೋಶಗಳ ಕೂಲಂಕಶ ಅಧ್ಯಯನ ಮಾಡಿದಾಗ ಒಂದು ಅಂಶ ಸ್ಪಷ್ಟವಾಗುತ್ತದೆ. ಅದೆಂದರೆ ಪ್ರತಿ ಭಾಷೆಯಲ್ಲಿಯೂ ಶೇ. ಐವತ್ತಕ್ಕಿಂತಲೂ ಹೆಚ್ಚು ಪದಗಳು ಒಂದೇ ಮೂಲದವುಗಳಾಗಿವೆ (ಕೆಲವು ಭಾಷೆಗಳಲ್ಲಂತೂ, ಉದಾಹರಣೆಗೆ ಬಂಗಾಲಿ, ಒರಿಯಾ ಮತ್ತು ಅಸ್ಸಾಮಿ—ಈ ಬಗೆಯ ಪದಗಳ ಸಂಖ್ಯೆ ಅತಿ ಹೆಚ್ಚು). ಉಳಿದ ಪದಗಳನ್ನೂ ಸಹ ಹೆಚ್ಚು ಬದಲಾವಣೆ ಇಲ್ಲದೆ ಬೇರೆ ಭಾಷೆಗಳಲ್ಲಿ ಬಳಸಬಹುದಾಗಿದೆ. ಭಾರತೀಯ ಭಾಷೆಗಳಲ್ಲಿರುವ ಈ ಆಂತರಿಕ ಸಂಬಂಧದಿಂದಾಗಿ, ಈ ಎಲ್ಲಾ ಭಾಷೆಗಳಲ್ಲೂ ಬಳಸಬಹುದಾದ ಮಾನಕೀಕೃತ (standardized) ಪದಕೋಶಗಳನ್ನು ರಚಿಸಬಹುದಾಗಿದೆ. ಈ ಬಗೆಯ ಪ್ರಯತ್ನ ಭಾರತದ ಎಲ್ಲಾ ಭಾಷೆಗಳಲ್ಲೂ ಬೇರೆ ಬೇರೆಯಾಗಿ ಪದಕೋಶಗಳನ್ನು ರಚಿಸಲು ಬೇಕಾಗುವ ಕಾಲ, ಶ್ರಮ ಹಾಗೂ ವೆಚ್ಚವನ್ನು ಉಳಿಸುತ್ತದೆ. ಅಲ್ಲದೆ, ಭಾರತದ ಎಲ್ಲಾ ಭಾಷೆಗಳಲ್ಲೂ ಏಕರೂಪತೆಯನ್ನು ತರಲು ಸಹಾಯಕವಾಗುತ್ತದೆ.

೧. ಮಾನಕೀಕರಣದ ಉಪಯೋಗಗಳು:

ಪಾರಿಭಾಷಿಕ ಪದ ಅಥವಾ ಪದಕೋಶಗಳ ರಚನೆಯಲ್ಲಿ ಕಾಲ, ಶ್ರಮ ಹಾಗೂ ವೆಚ್ಚದ ಉಳಿತಾಯ ಮಾಡುವುದೇ ಮಾನಕೀಕರಣದ ಬಹುಮುಖ್ಯ ಉಪಯೋಗವಾಗಿದೆ. ವಿವಿಧ ಭಾಷೆಗಳ ವಿದ್ವಾಂಸರು ಒಂದೇ ವಿಜ್ಞಾನದ ಪದಗಳಿಗೆ ಸಂವಾದಿ ಪದಗಳನ್ನು ತಮ್ಮ ಭಾಷೆಗಳಲ್ಲಿ ರಚಿಸಲು ನಡೆಸುವ ಯತ್ನಕ್ಕಿಂತಲೂ, ಆಯ್ಕೆ ಮಾಡಿದ ರಾಷ್ಟ್ರೀಯ ಮಟ್ಟದ ಒಂದೇ ವಿದ್ವತ್ ಮಂಡಲಿ ಪಾರಿಭಾಷಿಕ ಪದಗಳ ರಚನೆ ಮಾಡುವುದರಿಂದ ಅಪಾರವಾದ ಕಾಲ ಹಾಗೂ ಶ್ರಮವನ್ನೂ, ಇದಕ್ಕಾಗಿ ತಗಲುವ ವೆಚ್ಚವನ್ನು ಉಳಿಸಬಹುದಾಗಿದೆ. ಅಲ್ಲದೆ ರಾಷ್ಟ್ರೀಯ ಮಟ್ಟದಲ್ಲಿ ಈ ಬಗೆಯ ಕಾರ್ಯ ನಡೆಯುವುದರಿಂದ, ಬೇರೆ ಬೇರೆ ಭಾಷೆಗಳ ವಿದ್ವಾಂಸರ-ವಿಜ್ಞಾನಿಗಳು ಹಾಗೂ ಭಾಷಾ ಶಾಸ್ತ್ರಜ್ಞರು-ನೆರವು ದೊರೆಯುವುದರಿಂದ ಇದು ಹೆಚ್ಚು ಅಧಿಕೃತವಾದುದೂ ಆಗುತ್ತದೆ.

೨. ನಿಷ್ಕೃಷ್ಟತೆ

ಒಂದೇ ಭಾಷೆಯಲ್ಲಿ ಯಾವುದೇ ಒಂದು ಪಾರಿಭಾಷಿಕ ಪದ ಒಂದು ಅಥವಾ ಅನೇಕ ಅರ್ಥಗಳನ್ನು ನೀಡಬಹುದು. ಇಲ್ಲವೇ ಒಂದೇ ಭಾವವನ್ನು (Concept) ಬೇರೆ ಬೇರೆ ಪದಗಳ ಮೂಲಕ ಅಭಿವ್ಯಕ್ತಿಗೊಳಿಸಬಹುದು. ಈ ಎರಡೂ ಬಗೆಯ ಬಳಕೆಗಳು ಓದುಗನಲ್ಲಿ ಗೊಂದಲವನ್ನುಂಟುಮಾಡಬಹುದು. ಮಾನಕೀಕೃತ ಪಾರಿಭಾಷಿಕ ಪದಕೋಶಗಳು ನಿರ್ದಿಷ್ಟ ಪದಕ್ಕೆ ನಿರ್ದಿಷ್ಟ ಅರ್ಥವನ್ನು ನಿರ್ಧರಿಸುವ ಮೂಲಕ ಈ ಬಗೆಯ ಗೊಂದಲಗಳನ್ನು ನಿವಾರಿಸುತ್ತದೆ.

೩. ಸುಲಭ ಸಂವಹನ

ಮಾನಕೀಕೃತ ಪಾರಿಭಾಷಿಕ ಪದಕೋಶಗಳು ವಿವಿಧ ಭಾಷಾಜನರ ಮಧ್ಯದಲ್ಲಿನ ಸಮಸ್ಯೆಗಳನ್ನು ಕಡಮೆಮಾಡುತ್ತವೆ. ಲೇಖನ, ಗ್ರಂಥ, ಪಠ್ಯಪುಸ್ತಕ ಇಲ್ಲವೇ ವಿಶ್ವಕೋಶಗಳ ರಚನೆಗೆ ಅಥವಾ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದಿಸುವಲ್ಲಿ ಈ ಬಗೆಯ ಪದಕೋಶಗಳ ಕೊಡುಗೆ ಅಪಾರವಾದುದು.

ಮುಂದಿನ ದಿನಗಳಲ್ಲಿ ಸಾಧ್ಯವಾಗಬಹುದಾಗಿರುವ ಮಾಹಿತಿ ಜಾಲಗಳ ಸಂಪರ್ಕದಲ್ಲಿ ಮಾನಕೀಕೃತ ಪಾರಿಭಾಷಿಕ ಪದಸಂಪತ್ತಿ ಅತಿ ಮುಖ್ಯವಾದ ಪಾತ್ರವನ್ನು ವಹಿಸುವುದರಲ್ಲಿ ಸಂಶಯವಿಲ್ಲ. ಈ ಬಗೆಯ ಪದಗಳನ್ನು ಕಂಪ್ಯೂಟರ್‌ಗಳಲ್ಲಿ ಮೂಲಪದ (key word)ಗಳಾಗಿ ಬಳಸಬಹುದು. ಇದರಿಂದ ಒಂದು ವಿಷಯದ ಬಗ್ಗೆ ವಿವಿಧ ಭಾಷೆಗಳಲ್ಲಿ ಇರಬಹುದಾದ ಸಾಹಿತ್ಯ ಕೃತಿಗಳ ಸೂಚಿ, ಸಾರ ಸಂಗ್ರಹ ಇತ್ಯಾದಿಗಳನ್ನು ಸುಲಭವಾಗಿ ಪಡೆಯಬಹುದು.

೪. ಭಾಷೆಯಲ್ಲಿನ ಪದಸಂಪತ್ತಿಯ ಬೆಳವಣಿಗೆ

ಯಾವುದೇ ಒಂದು ವಿದ್ವನ್ಮಂಡಳಿ ಸಿದ್ಧಪಡಿಸುವ ಮಾನಕೀಕೃತ ಪಾರಿಭಾಷಿಕ ಪದಗಳನ್ನು ಯಥಾವತ್ತಾಗಿ ಇಲ್ಲವೇ ಅತ್ಯಲ್ಪ ಬದಲಾವಣೆಗಳೊಂದಿಗೆ ಭಾರತದ ಬೇರೆಲ್ಲಾ ಭಾಷೆಗಳೂ ಬಳಸಿಕೊಳ್ಳುವ ಮೂಲಕ ತಮ್ಮ ಭಾಷಾ ಸಂಪತ್ತನ್ನೂ ಹೆಚ್ಚಿಸಲು ಸಾಧ್ಯವಾಗುತ್ತದೆ.

೫. ಭಾಷಾಬಾಂಧವ್ಯ

ವಿವಿಧ ಭಾಷೆಗಳಲ್ಲಿ ಒಂದೇ ಬಗೆಯ ಪಾರಿಭಾಷಿಕ ಪದಗಳ ಬಳಕೆ ಹೆಚ್ಚುತ್ತಾ ಸಾಗಿದಂತೆ ಬೇರೆ ಬೇರೆ ಭಾಷೆಗಳ ಮಧ್ಯೆ ಇರಬಹುದಾದ ಅಂತರ ನಿಧಾನವಾಗಿಯಾದರೂ ಕಡಮೆಯಾಗುತ್ತಾ ಸಾಗುತ್ತದೆ. ಈ ಬೆಳವಣಿಗೆ ಮುಂದೆ ವಿವಿಧ ಭಾಷೆಗಳ ಮಧ್ಯೆ ನಡೆಯಬಹುದಾದ ಕೊಡುಕೊಳ್ಳುವಿಕೆ ಹೆಚ್ಚಾಗಲೂ ಸಹಕಾರಿಯಾಗುತ್ತದೆ.

ಸಮಸ್ಯೆಗಳು

ಯಾವುದೇ ಬಗೆಯ ಪಾರಿಭಾಷಿಕ ಪದಕೋಶದ ರಚನೆ ಸುಲಭವಾದ ಕಾರ್ಯವೇನೂ ಅಲ್ಲ. ಭಾರತದಂತಹ ಬಹು ಭಾಷೀಯ ದೇಶದಲ್ಲಿ ಈ ಕಾರ್ಯ ಮತ್ತಷ್ಟು ಕಠಿಣವಾದುದೂ, ಸಂಕೀರ್ಣವಾದುದೂ ಆಗಿದೆ. ಈ ಬಗೆಯ ಕಾರ್ಯದಲ್ಲಿರುವ ಅಡೆತಡೆಗಳನ್ನು ಕೆಳಗಿನಂತೆ ಪಟ್ಟಿಮಾಡಬಹುದಾಗಿದೆ.

೧. ಮೂಲಪದ ಸಂಪತ್ತಿಯ ಕೊರತೆ

ಪಾರಿಭಾಷಿಕ ಪದಕೋಶದ ರಚನೆಗೆ ಮುನ್ನ ಆಯಾ ವಿಷಯದಲ್ಲಿ ಬಳಕೆ

ಯಾಗುತ್ತಿರುವ ಪದಗಳನ್ನು ಒಂದೆಡೆ ಸಂಗ್ರಹಿಸಬೇಕಾಗುತ್ತದೆ. ಹೀಗೆ ಎಲ್ಲಾ ಪದಗಳನ್ನು ಒಂದೆಡೆ ಸಂಗ್ರಹಿಸುವ ಕಾರ್ಯ ಸುಲಭಸಾಧ್ಯವಾದುದೇನೂ ಅಲ್ಲ. ಏಕೆಂದರೆ ವಿಜ್ಞಾನದ ಬೆಳವಣಿಗೆ ಅತಿ ಶೀಘ್ರಗತಿಯದಾಗಿದ್ದು ಪ್ರತಿದಿನವೂ ಹೊಸ ಹೊಸ ಪದಗಳ ಸೃಷ್ಟಿಯಾಗುತ್ತಲೇ ಇರುತ್ತದೆ. ಇದರೊಂದಿಗೆ ಯಾವುದೇ ವೈಜ್ಞಾನಿಕ ವಿಷಯ ತನ್ನಷ್ಟಕ್ಕೇ ಪರಿಪೂರ್ಣವಾಗಿರದೆ, ಅದು ಇತರ ಅನೇಕ ಸಂಬಂಧಿತ ವಿಜ್ಞಾನಗಳಲ್ಲಿ ಹಂಚಿಹೋಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ನಾವು ಪದಸಂಗ್ರಹಕ್ಕಾಗಿ ಸಂಬಂಧಿಸಿದ ವಿಜ್ಞಾನದ ಆಕರ ಗ್ರಂಥಗಳೊಂದಿಗೆ, ಸಂಬಂಧಿತ ಬೇರೆ ಬೇರೆ ವಿಜ್ಞಾನಗಳ ಗ್ರಂಥಗಳ ಅವಲೋಕನವನ್ನು ಮಾಡಬೇಕಾಗುತ್ತದೆ.

೨. ಅರ್ಥನಿಷ್ಕೃಷ್ಟಗೊಳಿಸುವಿಕೆ

ಯಾವುದಾದರೊಂದು ಭಾಷೆಯಲ್ಲಿ, ಯಾವುದಾದರೊಂದು ಭಾವವನ್ನು (concept) ಅಭಿವ್ಯಕ್ತಿಗೊಳಿಸುವ ಪದ ಬೇರೊಂದು ಭಾಷೆಯಲ್ಲಿ ಬೇರೆ ಮತ್ತಾವುದೋ ಅರ್ಥವನ್ನು ನೀಡುತ್ತಿರಬಹುದು. ಕೆಲವೊಮ್ಮೆ ಈ ಅರ್ಥಗಳು ಪರಸ್ಪರ ವಿರುದ್ಧಾರ್ಥಗಳನ್ನು ನೀಡುತ್ತಿರಬಹುದು. ಭಾಷೆಗಳ ಸಂಖ್ಯೆ ಹೆಚ್ಚಿದಷ್ಟೂ ಈ ಬಗೆಯ ಸಮಸ್ಯೆ ಹೆಚ್ಚಾಗುತ್ತವೆ. ಇಂತಹ ಸಂದರ್ಭಗಳಲ್ಲಿ ಒಂದು ಭಾಷೆಯಿಂದ ಆಯ್ಕೆ ಮಾಡಿಕೊಂಡ ಪಾರಿಭಾಷಿಕ ಪದ ಬೇರೆ ಭಾಷೆಯ ಜನರಲ್ಲಿ ಗೊಂದಲವನ್ನು ಉಂಟುಮಾಡುವಂತಿರಬಾರದು. ಇದು ಅವರಲ್ಲಿ ತಪ್ಪು ಭಾವನೆಯನ್ನು ಬೆಳೆಸಬಹುದು.

೩. ಸಾಮಾಜಿಕ ಮತ್ತು ರಾಜಕೀಯ ಅಶಾಂತಿ

ನಾವು ಈ ಮೊದಲೇ ಗಮನಿಸಿರುವಂತೆ, ಭಾಷೆ ಒಂದು ಸಂಸ್ಕೃತಿಯ ಮೂಲಸೆಲೆ, ಅದು ಸಂಸ್ಕೃತಿಯ ಜೀವನಾಡಿ. ಹೀಗಾಗಿ ಭಾಷೆಯ ಬಗೆಗಿನ ಯಾವುದೇ ಪ್ರಯತ್ನವೂ ಜನರಲ್ಲಿ ಅನುಮಾನವನ್ನುಂಟುಮಾಡಬಹುದು, ಇದು ಮುಖ್ಯವಾಗಿ ಅಲ್ಪ ಸಂಖ್ಯಾತ ಭಾಷಿಕರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಜನರು ತಮ್ಮ ಮೇಲೆ ಬೇರೆ ಭಾಷೆಯನ್ನು ಹೇರಲಾಗುತ್ತಿದೆ, ತನ್ಮೂಲಕ ತಾವು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದೇವೆ ಎಂದು ಅವರು ಭಾವಿಸಲು ಅವಕಾಶಗಳಿರುತ್ತವೆ. ಈ ಬಗೆಯ ಅನುಮಾನ ಮಾನಕೀಕೃತ ಪಾರಿಭಾಷಿಕ ಪದಕೋಶಗಳ ರಚನೆಯ ಮೂಲ ಉದ್ದೇಶಕ್ಕೆ ಧಕ್ಕೆಯನ್ನುಂಟುಮಾಡಬಹುದು.

೪. ಮೂಲ ಭಾಷೆಯ ಆಯ್ಕೆ

ಪಾರಿಭಾಷಿಕ ಪದಗಳನ್ನು ಸೃಷ್ಟಿಸುವ ಸಂದರ್ಭದಲ್ಲಿ ಯಾವುದಾದರೊಂದು ಮೂಲ ಭಾಷೆಯನ್ನು ಆಯ್ಕೆ ಮಾಡಿಕೊಳ್ಳುವುದು ಅವಶ್ಯಕವಾಗಿದೆ ಏಕೆಂದರೆ, ಈ ಭಾಷೆಯ ಪದಗಳ ವ್ಯುತ್ಪತ್ತಿಯ ಮೂಲಕ ಸೃಷ್ಟಿಸುವ ಪದಗಳನ್ನು ಭಾರತದ

ಬೇರೆಲ್ಲಾ ಭಾಷೆಗಳಲ್ಲಿ ಸಹಜವಾಗಿ ಉಳಿಸಬಹುದು. ಹೆಚ್ಚಿನ ಭಾರತೀಯ ಭಾಷೆಗಳ ಮೂಲಭಾಷೆಯಾಗಿಯೂ, ಇತರ ಭಾಷೆಗಳ ಪದ ಸಂಪತ್ತಿಯ ಮೇಲೆ ಹೆಚ್ಚಿನ ಪ್ರಭಾವ ಬೀರಿರುವ ಕಾರಣದಿಂದಾಗಿಯೂ ಸಂಸ್ಕೃತವನ್ನು ಇಂತಹ ಮೂಲ ಭಾಷೆಯಾಗಿ ಪರಿಗಣಿಸಬಹುದು.

೫. ಪಾರಿಭಾಷಿಕ ಪದಗಳ ಆಯ್ಕೆ

ಮಾನಕೀಕೃತ ಪಾರಿಭಾಷಿಕ ಪದದ ರಚನೆ ಎಂದರೆ ಹೊಸ ಪದದ ಸೃಷ್ಟಿ, ಎಂದೇನೂ ಅಲ್ಲ. ಸಾಮಾನ್ಯವಾಗಿ ದೇಶದ ಹೆಚ್ಚಿನ ಭಾಷೆಗಳಲ್ಲಿ ಒಂದೇ ಅರ್ಥದಲ್ಲಿ ಬಳಕೆಯಾಗುತ್ತಿರುವ ಅಥವಾ ಹೆಚ್ಚಿನ ಭಾಷೆಗಳಲ್ಲಿ ಸುಲಭವಾಗಿ ಅರ್ಥ ಅಭಿವ್ಯಕ್ತ ವಾಗುವ ಪದಗಳನ್ನು ನಾವು ಮಾನಕೀಕೃತ ಪಾರಿಭಾಷಿಕ ಪದವೆಂದು ಪರಿಗಣಿಸ ಬಹುದು. ಅಂದರೆ, ವಿವಿಧ ಭಾಷೆಗಳಲ್ಲಿ ಕೆಲವೊಮ್ಮೆ ಒಂದೇ ಭಾಷೆಯಲ್ಲಿ—ಬಳಕೆ ಯಲ್ಲಿರುವ ಅನೇಕ ಪದಗಳಲ್ಲಿ ಒಂದರ ಆಯ್ಕೆ. ಹೀಗೆ ಆಯ್ಕೆಮಾಡಲು, ಸ್ಪರ್ಧಾತ್ಮಕವಾಗಿ, ನಿಲ್ಲುವ ವಿವಿಧ ಪದಗಳ ಸೂಕ್ಷ್ಮ ಹಾಗೂ ಜಾಗರೂಕ ವಿಶ್ಲೇಷಣೆ ಅತ್ಯಗತ್ಯ.

ಹೀಗೆ ಆಯ್ಕೆಗೊಳ್ಳುವ ಪದ ಈ ಕೆಳಗಿನ ಗುಣಗಳನ್ನು ಹೊಂದಿರಬೇಕಾಗು ತ್ತದೆ.

(ಅ) ಪದ ಸಾಮರ್ಥ್ಯ

ಮಾನಕೀಕೃತ ಪಾರಿಭಾಷಿಕ ಪದದ ಆಯ್ಕೆಯಲ್ಲಿ ಬಹಳ ಮುಖ್ಯವಾಗಿ ಪರಿಗಣಿಸಬೇಕಾದ ಅಂಶವೆಂದರೆ ಆ ಪದದ ಸಾಮರ್ಥ್ಯ. ಅಂದರೆ ಯಾವ ಭಾವ, ಕ್ರಿಯೆ ಅಥವಾ ವಸ್ತುವಿನ ನಿರ್ದೇಶಿಯಾಗಿ ಒಂದು ಪದ ಬಳಕೆಯಾಗಿರುತ್ತದೋ ಆ ಭಾವ, ಕ್ರಿಯೆ ಅಥವಾ ವಸ್ತುವನ್ನು ಅದು ಸಮರ್ಥವಾಗಿ ಅಭಿವ್ಯಕ್ತಿಸುವಂತಿರ ಬೇಕು. ಅರ್ಥಾಭಿವ್ಯಕ್ತಿಯಲ್ಲಿ ಯಾವುದೇ ಬಗೆಯ ಗೊಂದಲ ಅಥವಾ ಲೋಪ ಉಂಟಾಗುವಂತಿರಬಾರದು. ಅಲ್ಲದೆ, ಹೀಗೆ ಬಳಕೆಯಾಗುವ ಪದ ಬೇರೆ ಭಾಷೆಯಲ್ಲಿ ಮಾನಕೀಕೃತ ಅರ್ಥಕ್ಕಿಂತ ಭಿನ್ನ ಅರ್ಥವನ್ನು—ಮುಖ್ಯವಾಗಿ ವಿರುದ್ಧಾರ್ಥವನ್ನು ನೀಡುವಂತಿರಬಾರದು.

(ಆ) ಮಿತವ್ಯಯ

ಮಾನಕೀಕೃತವಾಗಿ ಬಳಕೆಯಾಗುವ ಪದ ಭಾರತದ ಯಾವುದೇ ಭಾಷೆಯ ಜನರು ಸುಲಭವಾಗಿ ಕಲಿಯಲು, ನೆನಪಿನಲ್ಲಿರಿಸಿಕೊಳ್ಳಲು ಹಾಗೂ ಬಳಸಲು ಸುಲಭ ವಾಗುವಂತಿರಬೇಕು. ಹೆಚ್ಚಿನ ಸಂಯುಕ್ತಾಕ್ಷರಗಳಿಂದ ಕೂಡಿದ ಇಲ್ಲವೇ ಉದ್ದುದ್ದದ ಪಾರಿಭಾಷಿಕ ಪದಗಳನ್ನು ಅತ್ಯವಶ್ಯಕವಲ್ಲದೆ ಬಳಸಬಾರದು. ಅದು ಭಾಷೆಯೊಂದಿಗೆ ಸಹಜವಾಗಿ ಬೆರೆಯುವಂತಿರಬೇಕು.

(ಇ) ಬಹುಮಾನ್ಯ ಪದಗಳ ಆಯ್ಕೆ

ವಿವಿಧ ಭಾಷೆಗಳಿಂದ ಮಾನಕೀಕೃತ ಪದಗಳಿಗಾಗಿ ಪದಗಳನ್ನು ಆಯ್ಕೆ ಮಾಡುವಾಗ ಹೆಚ್ಚಿನ ಭಾಷೆಗಳಲ್ಲಿ ಬಳಕೆಯಾಗುತ್ತಿರುವ ಪದಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ. ಆದರೆ ಎಲ್ಲಾ ಭಾಷೆಗಳಿಂದಲೂ ಪದಗಳನ್ನು ಆಯ್ಕೆ ಮಾಡಿಕೊಳ್ಳುವತ್ತ ಗಮನಹರಿಸಬೇಕಾದುದೂ ಮುಖ್ಯ. ಇದರಿಂದ ಎಲ್ಲಾ ಭಾಷೆಯ ಜನರಲ್ಲಿ ತಮ್ಮ ಭಾಷೆಯ ಬಗೆಗಿನ ಅಭಿಮಾನ, ಗೌರವಗಳು ಹೆಚ್ಚಾಗುವಂತೆಯೇ ತಾವೂ ಸಹ ಮಾನಕೀಕರಣದಲ್ಲಿ ನೇರವಾಗಿ ಭಾಗವಹಿಸುತ್ತಿರುವ ಮತ್ತು ತಾವೆಲ್ಲರೂ ಒಂದೇ ಎನ್ನುವ ಭಾವನೆಯನ್ನು ಬೆಳೆಸಿಕೊಳ್ಳಲು ಸಹಾಯವಾಗುತ್ತದೆ. ಇದರಿಂದ ಅವರೆಲ್ಲರೂ ಈ ಬಗೆಯ ಪದಕೋಶಗಳನ್ನು ಒಪ್ಪಿಕೊಳ್ಳುತ್ತಾರೆ.

(ಈ) ಪದ ಸೌಂದರ್ಯ

ಮಾನಕೀಕೃತ ಪಾರಿಭಾಷಿಕ ಪದರಚನೆಯ ಸಂದರ್ಭದಲ್ಲಿ, ಕೊನೆಯದಾದರೂ ಮುಖ್ಯವಾಗಿ ಪರಿಗಣಿಸಬೇಕಾದ ಅಂಶವೆಂದರೆ 'ಪದಸೌಂದರ್ಯ'. ಅಪಸ್ವರದಂತಹ, ಸ್ವರ ಲಾಲಿತ್ಯವಿಲ್ಲದ, ಕರ್ಕಶ ಹಾಗೂ ಶೃತಿ ಕಷ್ಟವಾದ ಪದಗಳನ್ನು ಸಾಧ್ಯವಾದಷ್ಟೂ ನಿವಾರಿಸಬೇಕು. ಬದಲಾಗಿ ಕೇಳಲು ಹಿತವಾದ, ಸುಂದರ ಹಾಗೂ ಚಿಕ್ಕ ಚಿಕ್ಕ ಪದಗಳನ್ನು ಬಳಸಬೇಕು.

ಸಾಮಾನ್ಯ ನಿಯಮಗಳು

ಪಾರಿಭಾಷಿಕ ಪದ ರಚನೆಗೆ ಯಾವುದೇ ನಿರ್ದಿಷ್ಟಪಡಿಸಿದ ನೀತಿ ನಿಯಮಗಳೇನೂ ಇಲ್ಲ. ಜಗತ್ತಿನ ಬೇರೆ ಬೇರೆ ಭಾಷೆಗಳಲ್ಲಿ ಆಯಾ ಭಾಷೆಗಳಲ್ಲಿನ ಪಾರಿಭಾಷಿಕ ಪದಗಳ ಮಾನಕೀಕರಣದ ಪ್ರಯತ್ನಗಳು ನಡೆದೇ ಇವೆ. ಆದುದರಿಂದ ಭಾರತೀಯ ಭಾಷೆಗಳಲ್ಲಿ ಪಾರಿಭಾಷಿಕ ಪದಗಳ ಮಾನಕೀಕರಣಕ್ಕೆ ತೊಡಗುವ ಮುನ್ನ ಜಗತ್ತಿನ ವಿವಿಧ ಭಾಷೆಗಳಲ್ಲಿ ಈ ಬಗ್ಗೆ ನಡೆದಿರುವ ಪ್ರಯತ್ನಗಳ ಅಧ್ಯಯನ ಹೆಚ್ಚು ಫಲಕಾರಿಯಾದುದು. ಅಂತರ ರಾಷ್ಟ್ರೀಯ ಮಾನಕೀಕರಣ ಸಂಘಟನೆ (International Standards Organisation)ಯು ಪಾರಿಭಾಷಿಕ ಪದಗಳ ಮಾನಕೀಕರಣದ ಬಗೆಗೆ ಕೆಲವು ಸೂಚನೆಗಳನ್ನು ಪ್ರಕಟಿಸಿದೆ. ಈ ಸೂಚನೆಗಳ ಅಧ್ಯಯನ ಮತ್ತು ಅನುಷ್ಠಾನವು ರಾಷ್ಟ್ರೀಯ ಮಟ್ಟದ ಈ ಕಾರ್ಯವನ್ನು ಅಂತರ ರಾಷ್ಟ್ರೀಯ ಮಟ್ಟದ ಕಾರ್ಯವನ್ನಾಗಿಸುತ್ತದೆ. ಇವುಗಳೊಂದಿಗೆ, ಈ ಕೆಳಗಿನ ಕೆಲವು ಸಾಮಾನ್ಯ ನಿಯಮಗಳನ್ನು ಅನುಸರಿಸಬಹುದು.

(೧) ಹೆಚ್ಚಿನ ಭಾಷೆಗಳಲ್ಲಿ ಬಳಕೆಯಾಗುವ ಪದಗಳನ್ನು ಯಥಾವತ್ತಾಗಿ ಮಾನಕೀಕೃತ ಪದವಾಗಿ ಬಳಸುವಲ್ಲಿ ಆದ್ಯತೆ ನೀಡಬೇಕು.

(೨) ಯಾವುದಾದರೊಂದು ಭಾವನೆಯ (Concept) ಅಭಿವ್ಯಕ್ತಿಗಾಗಿ ಯಾವುದೇ ಭಾಷೆಯಲ್ಲಿ ಸೂಕ್ತ ಪದ ದೊರೆಯದೇ ಇದ್ದಾಗ ಆಯಾ ಭಾಷೆಗಳ ಪ್ರಾಚೀನ ಸಾಹಿತ್ಯದಲ್ಲಿ ಈ ಬಗೆಯ ಬಳಕೆ ಇದೆಯೇ ಎಂದು ಹುಡುಕಬೇಕು. ಇಂತಹ ಬಳಕೆ ಕಂಡುಬಂದಲ್ಲಿ ಆ ಪದವನ್ನು ಮಾನಕೀಕೃತ ಪಾರಿಭಾಷಿಕ ಪದವಾಗಿ ಪರಿಗಣಿಸಬಹುದು.

(೩) ಈ ಬಗೆಯ ಪ್ರಯತ್ನದಿಂದಲೂ ಯಾವುದಾದರೊಂದು ಭಾವದ ಸ್ಪಷ್ಟ ಅಭಿವ್ಯಕ್ತಿ ಸಾಧ್ಯವಾಗದೇ ಇದ್ದಲ್ಲಿ ವಿದೇಶೀ ಭಾಷೆಯ ಪದಗಳನ್ನು ಯಥಾವತ್ತಾಗಿ ಇಲ್ಲವೇ ಸೂಕ್ತ ಮಾರ್ಪಾಡಿನೊಂದಿಗೆ ಬಳಸಿಕೊಳ್ಳಬಹುದು.

(೪) ಈ ಎಲ್ಲಾ ಪ್ರಯತ್ನಗಳೂ ನಿಷ್ಫಲವಾದಾಗ ಮಾತ್ರ—ಕೊನೆಯ ಪ್ರಯತ್ನವಾಗಿ ಹೊಸ ಪದದ ಸೃಷ್ಟಿ ಮಾಡಬಹುದು. ಮಾನಕೀಕೃತ ಪದ ರಚನೆಯ ಉತ್ಸಾಹದಲ್ಲಿ ಎಲ್ಲಾ ಪದಗಳಿಗೂ ಹೊಸ ಪದಗಳನ್ನು ಸೃಷ್ಟಿಸುವುದು ಆರೋಗ್ಯಕರ ಲಕ್ಷಣವೇನೂ ಅಲ್ಲ.

ಹೀಗೆ ಎಲ್ಲಾ ಬಗೆಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡು ರಚಿಸಬೇಕಾದ ಮಾನಕೀಕೃತ ಪದಕೋಶದ ರಚನೆ ಸುಲಭ ಸಾಧ್ಯವಾದುದೇನೂ ಅಲ್ಲ. ಇದಕ್ಕಾಗಿ ವಿಷಯ ತಜ್ಞರು, ಭಾಷಾ ಶಾಸ್ತ್ರಜ್ಞರು ಜೊತೆ ಜೊತೆಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದುದರಿಂದ ವಿವಿಧ ವಿಜ್ಞಾನಗಳ ರಾಷ್ಟ್ರೀಯ ಮಟ್ಟದ ಸಂಘ ಸಂಸ್ಥೆಗಳು ಇಂತಹ ಕೆಲಸವನ್ನು ಕೈಗೆತ್ತಿಕೊಳ್ಳಬಹುದು. ಇಂತಹ ಪದಕೋಶಗಳನ್ನು ಆಯಾ ವಿಷಯಗಳ ವೃತ್ತಿ ಸಂಘಟನೆ (Professional Bodies)ಗಳಲ್ಲಿ ಚರ್ಚೆಗೆ ಒಳಪಡಿಸಬೇಕು. ಇತರ ವಿದ್ವಾಂಸರ, ಭಾಷಾಶಾಸ್ತ್ರಜ್ಞರ ಅಭಿಪ್ರಾಯಗಳನ್ನು ಪಡೆಯಬೇಕು. ಕೊನೆಯಲ್ಲಿ ಭಾರತೀಯ ಮಾನಕೀಕರಣ ಸಂಘಟನೆ (Bureau of Indian Standards)ಯ ಅನುಮೋದನೆ ಪಡೆದಲ್ಲಿ ಅದು ಅಧಿಕೃತವಾದ ಪಾರಿಭಾಷಿಕ ಪದಕೋಶವಾಗುತ್ತದೆ.

ಈ ಬಗೆಯ ಪದಕೋಶಗಳು ಭಾಷೆಯ ಸಮರ್ಥ ಬಳಕೆಗೆ ಒಂದು ಸಾಧನ ಮಾತ್ರ ಇವು ಸರ್ಕಾರದ ಇತರ ಮಾನಕೀಕರಣಗಳಂತೆ ಕಡ್ಡಾಯವಾಗಲಾರದು. ಏಕೆಂದರೆ ಇಂತಹುದೇ ಪದವನ್ನು ಬಳಸಬೇಕೆಂದು ಯಾರನ್ನೂ ಒತ್ತಾಯಿಸಲು ಸಾಧ್ಯವಿಲ್ಲ, ಆದರೆ ವಿದ್ಯಾರ್ಥಿಗಳಲ್ಲಿ ವಿದ್ವಾಂಸರಲ್ಲಿ, ಲೇಖಕರಲ್ಲಿ ಈ ಬಗೆಯ ಪದಕೋಶಗಳ ಬಗೆಗೆ ಮತ್ತು ಅವುಗಳ ಉಪಯುಕ್ತತೆಯ ಬಗ್ಗೆ ತಿಳುವಳಿಕೆ ನೀಡುವುದರ ಮೂಲಕ ಅವುಗಳನ್ನು ಬಳಸುವಂತೆ ಮಾಡಬಹುದು. ಈ ಬಗೆಯ ಪ್ರಯತ್ನಗಳು ದೇಶೀಯ ಭಾಷೆಗಳನ್ನು ಶ್ರೀಮಂತಗೊಳಿಸುತ್ತವೆಯಷ್ಟೇ ಅಲ್ಲ, ಆಯಾ ಭಾಷೆಗಳಲ್ಲಿ ವೈಜ್ಞಾನಿಕ ಸಾಹಿತ್ಯದ ಬೆಳವಣಿಗೆಯಲ್ಲೂ ಸಹಾಯವಾಗುತ್ತವೆ.

ಡಾ. ಹು. ಲ. ಚಂದ್ರಶೇಖರ

ಮಧ್ಯಯುಗದ ತಾತ್ವಿಕರು ಮತ್ತು ಜಗತ್ತು

ಮಧ್ಯಯುಗವು ಕ್ರೈಸ್ತಧರ್ಮ ಪ್ರಚಲಿತವಾಗಿದ್ದ ಕಾಲ. ವಿಕಾರ ಹಾಗೂ ಅಪೂರ್ಣ ಜಗತ್ತನ್ನು ಅವಿಕಾರ ಹಾಗೂ ಪರಿಪೂರ್ಣ ಈಶ್ವರನೊಂದಿಗೆ (God) ಸಮನ್ವಯಿಸುವ ಗ್ರೀಕರ ಪ್ರಯತ್ನವು ಈ ಕಾಲದಲ್ಲೂ ಮುಂದುವರೆಯಿತು. ಈ ರೀತಿ ಪ್ರಯತ್ನ ನಡೆಸಿದವರಲ್ಲಿ ಅಗ್ರಗಣ್ಯರಾದ ಸಮರ್ಥಕರ* (Apologists) ಪ್ರಕಾರ ಜಗತ್ತಿನಲ್ಲಿ ಕಾಣಬರುವ ಉದ್ದೇಶ ವ್ಯವಸ್ಥೆಗಳಲ್ಲಿ ಈಶ್ವರನ ಸರ್ವಜ್ಞತ್ವವು ಪ್ರಕಟ ವಾಗುತ್ತದೆ. ಲೊಗೊಸ್ (Logos) ಎನ್ನಲ್ಪಡುವ ಇದು ಜಗತ್ತಿನ ಒಂದು ಪರಿ ಪೂರ್ಣ ಮಾದರಿ ಅಥವಾ ಯೋಜನೆಯನ್ನು ಹಾಗೂ ಸಾಮಾನ್ಯಗಳ (Ideas, Universals ಅಥವಾ forms) ಏಕತೆಯನ್ನು ಪ್ರತಿನಿಧಿಸುತ್ತದೆ. ಈಶ್ವರನು ತನ್ನ ಮನಸ್ಸಿನಲ್ಲಿರುವ ಈ ಮಾದರಿಗೆ ಅನುಗುಣವಾಗಿ ಜಗತ್ತನ್ನು ಸೃಷ್ಟಿಸುತ್ತಾನೆ. ಸೂರ್ಯನ ಪ್ರಕಾಶ ಮೂಲತಃ ಸೂರ್ಯನಿಂದ ಬೇರೆಯಲ್ಲದಿರುವಂತೆ ಲೊಗೊಸ್ ಮೂಲತಃ ಈಶ್ವರನನ್ನೇ ಆದರೂ ಮತ್ತು ಅದು ತನ್ನ ಅಸ್ತಿತ್ವಕಾರ್ಯಗಳಿಗೆ ಈಶ್ವರ ನನ್ನೇ ಅವಲಂಬಿಸಿದರೂ ಅದಕ್ಕೆ ಈಶ್ವರನೊಂದಿಗೆ ಒಂದು ಸಮಾನಾಂತರ ಹಾಗೂ ಪ್ರತ್ಯೇಕ ಸ್ಥಾನವುಂಟು. ಆದರೆ ಈ ಪ್ರತ್ಯೇಕತೆಯಿಂದ ಈಶ್ವರನ ಸರ್ವಜ್ಞತ್ವಕ್ಕೆ ಭಂಗಬರುವುದಿಲ್ಲ. ಏಕೆಂದರೆ ಲೊಗೊಸ್‌ನ ಸೃಷ್ಟಿಕರ್ತ ಈಶ್ವರನೇ.

ಈಶ್ವರನು ಜಗತ್ತಿನ ಸೃಷ್ಟಿಗೆ ಪ್ರಕೃತಿಯೆಂಬ (Matter) ಸಾಮಗ್ರಿಯನ್ನು ಬಳಸುತ್ತಾನೆ. ಆದರೆ ಇಲ್ಲಿ ಗ್ರೀಕ್ ಸಿದ್ಧಾಂತದಂತೆ ಪ್ರಕೃತಿಯು ಈಶ್ವರನೊಂದಿಗೆ ಸಮಸ್ಥಾನವನ್ನು ಹೊಂದಿಲ್ಲ. ಪ್ರಕೃತಿಯೂ ಈಶ್ವರ ಸೃಷ್ಟಿಯೇ. ಈಶ್ವರನು ಮೊದಲು ಪ್ರಕೃತಿಯನ್ನು ಶೂನ್ಯದಿಂದ (Nothing) ಸೃಷ್ಟಿಸಿ ಅನಂತರ ಅದರ ಮೇಲೆ ತನ್ನ ಮನಸ್ಸಿನಲ್ಲಿರುವ ಸಾಮಾನ್ಯಗಳನ್ನು ಮುದ್ರಿಸುವ ಮೂಲಕ ಜಗತ್ತಿನ ವಿವಿಧ ವಸ್ತುಗಳನ್ನು ಸೃಷ್ಟಿಸುತ್ತಾನೆ. ಈಶ್ವರನ ಪಾರಮ್ಯಕ್ಕೆ ಒಳಪಡದ ತತ್ವದ ಅಭಾವವೇ ಶೂನ್ಯ. ಎಂದರೆ ಶೂನ್ಯಶಬ್ದವು ಸರ್ವಶಕ್ತನಾದ ದೇವರು ಸೃಷ್ಟಿಗೆ

---

* ಅಲೆಕ್ಸಾಂಡ್ರಿಯಾದ ಒರಜೆನ್ ಇವರಲ್ಲಿ ಮುಖ್ಯ. ಈತನ ಕಾಲ ಕ್ರಿ. 185–254

ತನಗೆ ಬಾಹ್ಯವಾದ ಇನ್ನೊಂದು ತತ್ವವನ್ನು ಆಶ್ರಯಿಸುವುದಿಲ್ಲವೆಂಬುದನ್ನು ಸೂಚಿಸುತ್ತದೆ. ಸಮರ್ಥಕರ ಪ್ರಕಾರ ಸೃಷ್ಟಿಯು ಒಂದು ನಿರಂತರ ವ್ಯಾಪಾರ, ನಿರ್ದಿಷ್ಟ ಜಗತ್ತುಗಳಿಗೆ ಆದ್ಯಂತಗಳಿದ್ದರೂ ಸೃಷ್ಟಿಕಾರ್ಯವು ಮಾತ್ರ ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಈಶ್ವರನ ಈ ನಿರಂತರ ಸೃಷ್ಟಿಯೇ ವಿಶ್ವದ ಸ್ಥಿತಿಗೆ ಕಾರಣ. ಈ ಕಾರ್ಯವು ಸ್ಥಗಿತವಾಯಿತೆಂದರೆ ವಿಶ್ವವು ಲಯವಾಗುತ್ತದೆ.

ಸಮರ್ಥಕರ ಸಿದ್ಧಾಂತಕ್ಕೆ ಪೂರ್ಣರೂಪವನ್ನು ನೀಡಲೆಳಸಿದ ಸಂತ ಆಗಸ್ಟೈನನ (354–430) ಪ್ರಕಾರ ಈಶ್ವರೇಚ್ಛೆಯನ್ನು ಬದಲಿಸಲು ಸಾಧ್ಯವಿಲ್ಲ. ಸಮರ್ಥಕರಿಗೂ ಮತ್ತು ಆತನಿಗೂ ಇರುವ ಒಂದು ವ್ಯತ್ಯಾಸವೆಂದರೆ ಈಶ್ವರನ ಸರ್ವಜ್ಞತ್ವಕ್ಕೆ ಈಶ್ವರನಿಗಿಂತಲೂ ಪ್ರತ್ಯೇಕ ವ್ಯಕ್ತಿತ್ವವಿಲ್ಲ. ದೇವರು ತನ್ನ ಇಚ್ಛೆಯನ್ನು ಯಾವುದೇ ಮಧ್ಯವರ್ತಿ ಲೊಗೊಸ್‌ನ ನೆರವಿಲ್ಲದೇ ಕಾರ್ಯಗತಗೊಳಿಸಬಲ್ಲ. ಆತನ ಇಚ್ಛೆ ಹಾಗೂ ಕಾರ್ಯಗಳು ಕಾಲಮಾನದಿಂದ ಬೇರೆಂದು ಗುರುತಿಸಲಾಗದಷ್ಟು ಒಂದಾಗಿವೆ. ವಾಸ್ತವವಾಗಿ ದೇಶಕಾಲಗಳೂ ಆತನಿಂದಲೇ ಹುಟ್ಟಿದುದು. ಆದರೆ ಅವು ಮತ್ತೊಂದು ದೇಶಕಾಲಗಳಲ್ಲಿ ಹುಟ್ಟುವುದಿಲ್ಲ. ದೇವರು ಮೊಟ್ಟಮೊದಲ ಬಾರಿಗೆ ಸೃಷ್ಟಿಕಾರ್ಯ ಕೈಗೊಂಡಾಗಲೇ ದೇಶಕಾಲಗಳು ಪ್ರಾರಂಭವಾದವು. ಸೃಷ್ಟಿಯ ಆರಂಭವೇ ದೇಶಕಾಲಗಳ ಆರಂಭ. ಈಶ್ವರನ ಮೇಧೆಯಲ್ಲಿ ಸುಪ್ತವಾಗಿರುವ ಸಾಮಾನ್ಯಗಳ ಮುದ್ರಣಕ್ಕೆ ಆತನಿಂದಲೇ ಶೂನ್ಯದಿಂದ ಜನಿತವಾದ ಪ್ರಕೃತಿಯು ಒಂದು ತಾರ್ಕಿಕ ಅಗತ್ಯ.

ಜಾನ್ ಸ್ಕಾಟಸ್ ಎರಿಯುಜೆನನನ್ನು (ಕ್ರಿ. 800–877) ಆತನ ಪೂರ್ವಜರಿಂದ ಪ್ರತ್ಯೇಕಿಸುವ ಅಂಶವೆಂದರೆ ಆತನ ಪ್ರಕಾರ ದೇವರು ಪ್ರಕೃತಿ ಸಾಮಗ್ರಿಯ ನೆರವಿಲ್ಲದೇ ಜಗತ್ತನ್ನು ನೇರವಾಗಿ ಶೂನ್ಯದಿಂದ ಸೃಷ್ಟಿಸುತ್ತಾನೆ. ಆತನ ಈ ವಿವರಣೆಯು ದೇವರು ಸರ್ವಶಕ್ತನೆಂಬ ನಿರೂಪಣೆಗೆ ಸೊಗಸಾಗಿ ಹೊಂದಿಕೊಳ್ಳುತ್ತದೆ. ಏಕೆಂದರೆ ದೇವರು ನಿಜವಾಗಿಯೂ ದೇವರಾಗಿದ್ದಲ್ಲಿ ಆತನಿಗೆ ಸೃಷ್ಟಿಗೆ ಯಾವುದೇ ಬಾಹ್ಯ ಆಲಂಬನದ–ಅದನ್ನು ಈ ಮೊದಲು ಆತನೇ ಸೃಷ್ಟಿಸಿದ್ದರೂ ಅಗತ್ಯವಿರುವುದಿಲ್ಲ. ಎರಿಯುಜೆನನ ಪ್ರಕಾರ Nature ಮತ್ತು nature ಗಳಿಗೆ ವ್ಯತ್ಯಾಸವಿದೆ. Nature ಲೊಗೊಸ್‌ಗಿಂತ ಬೇರೆಯಲ್ಲ. ಇದಕ್ಕೆ ಜಗತ್ತನ್ನು ಸೃಷ್ಟಿಸುವ ಸಾಮರ್ಥ್ಯವಿದೆ. ಈ ಸಾಮರ್ಥ್ಯದಿಂದ ಹೊರಹೊಮ್ಮುವ nature (ಕಾರ್ಯಜಗತ್ತು) ಗಾದರೋ ಈ ಸಾಮರ್ಥ್ಯವಿಲ್ಲ. ಎರಡೂ ಈಶ್ವರನ ಅಭಿವ್ಯಕ್ತಿಯಾದರೂ, Nature ಈಶ್ವರನ ನೇರ ಅಭಿವ್ಯಕ್ತಿಯಾದರೆ nature Natureನ ಮಧ್ಯವರ್ತಿತ್ವದಿಂದ ಹೊರಹೊಮ್ಮುತ್ತದೆ. ಈ ಕಾರಣದಿಂದಲೇ ಎರಿಯುಜೆನ Nature ಅನ್ನು ಸೃಷ್ಟಿಸಲ್ಪಟ್ಟ ಸೃಷ್ಟಿಕರ್ತನೆನ್ನುವುದು. ಈಶ್ವರೇಚ್ಛೆಯ ಅಭಿವ್ಯಕ್ತಿಯಾದ್ದರಿಂದ ಅದು ಸೃಷ್ಟಿಸಲ್ಪಟ್ಟ ವಸ್ತು. ಇದರಿಂದ ಜಗತ್ತು ಅಥವಾ nature ಹೊರಹೊಮ್ಮುವುದರಿಂದ ಅದು ಸೃಷ್ಟಿಕರ್ತನೂ ಹೌದು.

ಜ್ಯೋತಿಯಿಂದ ಬೆಳಕಿನಂತೆ ಈ ಜಗತ್ತು ಈಶ್ವರನಿಂದ ಹೊರಹೊಮ್ಮುತ್ತದೆ. ವಾಸ್ತವವಾಗಿ ಅದು ಆತನ ಅನಂತ ವಿಭೂತಿಯ ಭಾಗಶಃ ಅಭಿವ್ಯಕ್ತಿ. ಈಶ್ವರನ ಉಳಿದ ಶಕ್ತಿಯು ಪ್ರಕಟವಾಗದೇ ಆತನಲ್ಲೇ ಸುಪ್ತವಾಗಿದೆ. ಜಗತ್ತು ಈಶ್ವರನಿಗಿಂತಲೂ ಬೇರೆಯಾಗಿರದ ಆತನ ಒಂದು ಜೈವಿಕ ವಸ್ತ್ರ. ಈಶ್ವರನು ತನ್ನನ್ನು ಸೃಷ್ಟಿಯಲ್ಲಿ ಪ್ರಕಟಪಡಿಸಿಕೊಳ್ಳುವನೆಂಬ ಅರ್ಥದಲ್ಲಿ ವಿಶ್ವೇಶ್ವರರು ಒಂದೇ. ಮೂಲತಃ ಅದೃಶ್ಯ ಮತ್ತು ಅಗ್ರಾಹ್ಯನಾದವನು ದೃಶ್ಯ ಮತ್ತು ಗ್ರಾಹ್ಯನಾಗುತ್ತಾನೆ. ನಿರ್ಗುಣ ನಿರಾಕಾರನಾದವನು ಆಕಾರಗುಣಗಳನ್ನು ತಳೆಯುತ್ತಾನೆ. ಪ್ರತಿಯೊಂದು ವಸ್ತುವೂ–ದೈವಾಂಶಸಂಭೂತವಾದ್ದರಿಂದ ಅದು ಅಂತಿಮವಾಗಿ ದೈವದಲ್ಲೇ ನೆಲೆಗೊಳ್ಳಲು ತವಕಿಸುತ್ತದೆ. ದೇವರು ಈ ಜಗತ್ತಿನಲ್ಲಿ ಅಂತಸ್ಥನಷ್ಟೇ ಅಲ್ಲ, ಅತೀತನೂ ಹೌದು. ಈಶ್ವರನು ಎರಡು ಅರ್ಥಗಳಲ್ಲಿ ಜಗತ್ತಿಗಿಂತಲೂ ಅತೀತ. ಒಂದು, ಆತನು ಈ ಕಾರ್ಯಜಗತ್ತಿಗಷ್ಟೇ ಸೀಮಿತವಾಗಿರದೇ ಅದರ ಆಚೆಯೂ ವ್ಯಾಪಿಸಿರುವನು. ಎರಡು, ಆತನು ಈ ಜಗತ್ತಿನಲ್ಲಿ ಅಂತಸ್ಥನಾಗಿದ್ದರೂ ಅದರ ಪರಿಮಿತಿಗೆ ಅಂಟಿಕೊಳ್ಳದಂತಿರುವನು. ಎಂದರೆ ಬೆಳಕು ಅಥವಾ ಶಬ್ದವನ್ನು ಅನೇಕರು ಏಕಕಾಲದಲ್ಲಿ ಗ್ರಹಿಸುತ್ತಿದ್ದರೂ ಅದು ಲುಪ್ತವಾಗದಿರುವಂತೆ ಈ ಜಗತ್ತು ಈಶ್ವರನ ದೈವಿಕಕತೆಯಲ್ಲಿ ಪಾಲುಗೊಂಡಿದ್ದರೂ ಅದು ಆತನ ಪರಿಪೂರ್ಣತೆಗೆ ಭಂಗ ತರುವುದಿಲ್ಲ.

ಪಾಂಡಿತ್ಯವಾದಿಗಳ (Scholastics) ಚಳವಳಿಯ ಪ್ರಾರಂಭದಲ್ಲಿ ಗ್ರೀಕ್ ಹಾಗೂ ಕ್ರೈಸ್ತಚಿಂತನೆಗಳಲ್ಲಿ ಪ್ರಾಧಾನ್ಯವನ್ನು ಪಡೆದುಕೊಂಡಿದ್ದ ಸಾಮಾನ್ಯಗಳ ಸತ್ಯತೆಯನ್ನು ಪ್ರಶ್ನಿಸಿದವನು ರೊಸೆಲಿನ್ ಅಥವಾ ರೊಸೆಲಿನಸ್ (ಕ್ರಿ. 1050–1122). ಈತನ ಪ್ರಕಾರ ಪ್ರತ್ಯೇಕಗಳೇ (Particulars) ಎಂದರೆ ಬಿಡಿ ವಸ್ತುಗಳೇ ಏಕೈಕ ಸತ್ಯಗಳು. ಜಗತ್ತಿನ ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಸ್ವಂತ ಅಸ್ತಿತ್ವ ಅಥವಾ ವ್ಯಕ್ತಿತ್ವವಿದೆ. ಆದರೆ ಅದರಲ್ಲಿ ಅಂತಸ್ಥವಾಗಿರುವ ಇಲ್ಲವೇ ಅದಕ್ಕೆ ಅತೀತವಾಗಿರುವ ಸಾಮಾನ್ಯವಿಲ್ಲ. ಪ್ರತಿ ಮನುಷ್ಯನಿಗೂ ಒಂದು ವ್ಯಕ್ತಿತ್ವವಿರುವುದು ನಿಜವಾದರೂ ಎಲ್ಲ ಮನುಷ್ಯರಿಗೂ ಸಮನಾದ ಮನುಷ್ಯತ್ವ ಎಂಬ ಸಾಮಾನ್ಯವಿಲ್ಲ. ಈ ಸಾಮಾನ್ಯವು ವ್ಯವಹಾರದಲ್ಲಿ ಸದೃಶವಸ್ತುಗಳ ಸಮೂಹಕ್ಕೆ ನಾವು ಅನ್ವಯಿಸುವ ಹೆಸರು ಮಾತ್ರ. ಅದು ವಾಕ್ಕಿನಲ್ಲಿ ಸತ್ಯವೇ ಹೊರತು ವಾಸ್ತವತೆಯಲ್ಲಿ ಅಲ್ಲ. ಸಾಮಾನ್ಯಗಳನ್ನು ನಾಮಮಾತ್ರಗಳೆಂದು ತಿರಸ್ಕರಿಸುವುದರಿಂದ ರೊಸೆಲಿನ್‌ನ ಈ ವಾದಕ್ಕೆ ನಾಮಿನಲಿಸಂ ಎಂದು ಹೆಸರು. ಇದು ಸಾಮಾನ್ಯಗಳಿಗೆ ಮನಸ್ಸಿಗಿಂತಲೂ ಸ್ವತಂತ್ರ ಅಸ್ತಿತ್ವವನ್ನು ನೀಡುವ ರಿಯಲಿಸಂಗೆ ವಿರುದ್ಧವಾದುದು. ರೊಸೆಲಿನ್ ತನ್ನ ತ್ರಿಮೂರ್ತಿವಾದವನ್ನು ಸಮರ್ಥಿಸಲು ಈ ವಾದವನ್ನು ಮಂಡಿಸಿದ. ಆತನ ಪ್ರಕಾರ ಈಶ್ವರೇಕತೆಯು ಮಾತಿನಲ್ಲಿ ಮಾತ್ರ ಸತ್ಯ, ವಸ್ತುಸ್ಥಿತಿಯಲ್ಲಿ ಅಲ್ಲ. ಇರುವುದು Father, Son ಮತ್ತು Holy ghost ಎಂಬ ದೇವತಾತ್ರಯ. ಆತನ ಪ್ರಕಾರ ಈ ಮೂರು ದೇವತೆಗಳೂ ಸಮಾನವಾಗಿ ಸರ್ವಶಕ್ತರು.

ರೊಸೆಲಿನ್‌ನ ಪರಮ ತಾತ್ವಿಕ ವಿರೋಧಿಯೂ ಹಾಗೂ ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್‌ನೂ ಆದ ಆ್ಯನ್‌ಸೆಲ್ಮ್ (1033-1109) ಸಾಮಾನ್ಯಗಳಿಗೆ ವಿಶೇಷ ಗಳಿಗಿಂತಲೂ ಸ್ವತಂತ್ರ ಅಸ್ತಿತ್ವವನ್ನು ನೀಡುವಲ್ಲಿ ಪ್ಲೇಟೋನಿಂದ ಪ್ರಭಾವಿತನಾದ. ಆತನ ಪ್ರಕಾರ ಮನುಷ್ಯತ್ವವು ಎಲ್ಲ ಬಿಡಿ ಮನುಷ್ಯರಿಗೂ ಮೇಲ್ಪಟ್ಟು ಇರುವ ಒಂದು ಸ್ವತಂತ್ರವಾದ ಸತ್ಯ. ಸಾಮಾನ್ಯಗಳಿಗೆ ನಮ್ಮ ಮನಸ್ಸಿಗಿಂತಲೂ ಸ್ವತಂತ್ರವಾದ ಅಸ್ತಿತ್ವವಿದೆ. ಅವು ರೊಸೆಲಿನ್ ಹೇಳಿದಂತೆ ಕೇವಲ ಬಾಯಿಮಾತಿನ ಸತ್ಯವಲ್ಲ. ಬಿಡಿವಸ್ತುಗಳಲ್ಲಿರುವ ಸಾದೃಶ್ಯವು ನಮ್ಮ ಮನಸ್ಸಿನಲ್ಲಿ ಅವುಗಳ ಬಗ್ಗೆ ಒಂದು ಸಾಮಾನ್ಯ ನಿರ್ಣಯವನ್ನು ಮೂಡಿಸುತ್ತವೆ. ಮೂಲತಃ ಅವು ಸಮಾನ ಲಕ್ಷಣ ವನ್ನು ಹೊಂದಿರದೇ ಅವು ಸದೃಶವಾಗಿರುವಂತೆ ತೋರುತ್ತಿರಲಿಲ್ಲ. ಆದ್ದರಿಂದ ಸಾಮಾನ್ಯಗಳು ನಮ್ಮ ಪರಿಮಿತ ಮನಸ್ಸಿಗೆ ದತ್ತವಾಗುವ ಮೊದಲು ಬಾಹ್ಯವಸ್ತು ಗಳಲ್ಲಿ ಇರಲೇಬೇಕು. ಅಲ್ಲದೇ ಅವು ಮನಸ್ಸು ಮತ್ತು ಬಾಹ್ಯವಸ್ತುಗಳಿಗೂ ಮೊದಲು ಈಶ್ವರನ ಬುದ್ಧಿಯಲ್ಲಿ ಭವ್ಯವಾದ ಯೋಜನೆಯ ರೂಪದಲ್ಲಿ ಇದ್ದವು. ಲೊಗಾಸ್ ಅಥವಾ ಅವ್ಯಕ್ತ ಶಬ್ದವೆನ್ನಲ್ಪಡುವ ಈ ಯೋಜನೆಯನ್ನು ಕಾರ್ಯಗತ ಗೊಳಿಸುವ ಎಂದರೆ ಅದನ್ನು ಪ್ರಕೃತಿಯ ಮೇಲೆ ಎರಕ-ಹೊಯ್ಯುವ ಮೂಲಕ ಈಶ್ವರನು ಈ ದೃಶ್ಯಪ್ರಪಂಚವನ್ನು ಸೃಷ್ಟಿಸುತ್ತಾನೆ.

ಪಾಂಡಿತ್ಯವಾದಿಗಳಲ್ಲಿ (Scholastics) ಅಗ್ರಗಣ್ಯನಾದ ಸಂತ ಥಾಮಸ್ ಅಕ್ವಿನಾಸ್ (ಕ್ರಿ. 1225-1274) ಸಾಮಾನ್ಯಗಳು ಬಿಡಿವಸ್ತುಗಳಲ್ಲಿ ಅವಿಭಾಜ್ಯ ವಾಗಿ, ಏಕವಾಗಿ ಮತ್ತು ಆ ವಸ್ತು ಸತ್ವವಾಗಿ (Essence) ಇರುತ್ತವೆಂಬ ವಿಷಯ ದಲ್ಲಿ ಪ್ಲೇಟೋಗಿಂತ ಭಿನ್ನನಾಗಿ ಅರಿಸ್ಟಾಟಲನ್ನು ಹೋಲಿಕೊಂಡ. ಜಗತ್ತನ್ನು ಸಮರ್ಪಕವಾಗಿ ವಿವರಿಸಬಲ್ಲ ಏಕೈಕ ಪದಾರ್ಥಗಳೆಂದರೆ ಸಾಮಾನ್ಯಗಳು. ಆದರೆ ಬರಿಯ ಸಾಮಾನ್ಯಗಳು ಪ್ರಪಂಚವನ್ನು ವಿವರಿಸಲಾರವು. ಅದರ ವಿವರಣೆಗೆ ಪ್ರಕೃತಿಯೂ ಒಂದು ತಾರ್ಕಿಕ ಅಗತ್ಯ. ಈ ಸಾಮಾನ್ಯ ಪ್ರಕೃತಿಗಳಿಗೂ ಈಶ್ವರನೆಂಬ ಮೂಲವಿದೆ. ಸರ್ವಜ್ಞನಾದ ಈ ಈಶ್ವರನ ನೇತೃತ್ವದಲ್ಲಿ ಅವು ಮಿಲನಗೊಂಡು ಜಗತ್ತಿನ ವಿವಿಧ ವಸ್ತುಗಳು ಉತ್ಪನ್ನವಾಗುತ್ತವೆ. ಅಕ್ವಿನಾಸ್ ತನ್ನ ಕ್ರೈಸ್ತ ಸಂಪ್ರದಾಯಕ್ಕೆ ಅನುಗುಣವಾಗಿ ಸಾಮಾನ್ಯಗಳನ್ನು ಈಶ್ವರನ ಮನಸ್ಸಿನಲ್ಲಿರಿಸಿದ. ಹಾಗೆಯೇ ಅರಿಸ್ಟಾಟಲ್‌ನಿಂದ ಪ್ರಭಾವಿತನಾಗಿ ಅವುಗಳನ್ನು ಬಿಡಿವಸ್ತುಗಳಲ್ಲೂ ಅಂತಸ್ಥಗೊಳಿಸಿ ನಮ್ಮ ಮನಸ್ಸಿನ ವಿಷಯವನ್ನೂ ಆಗಿಸಿದ.

ಆತನ ಪ್ರಕಾರ ಪ್ರಪಂಚದ ವೈವಿಧ್ಯತೆಗೆ ಕಾರಣ ಪ್ರಕೃತಿಯೇ ಹೊರತು ಸಾಮಾನ್ಯಗಳಲ್ಲ. ಇದು ಬೊನಾವೆಂಚರ್‌ನಂತಹ ಕೆಲವು ವಾಸ್ತವಿಕವಾದಿಗಳಿಗೆ ವಿರುದ್ಧವಾದ ಅಭಿಪ್ರಾಯ. ಬೊನಾವೆಂಚರ್ (1231-1274) ಪ್ರಕಾರ ಒಂದು ವರ್ಗದ ಪ್ರತಿಯೊಂದು ವಸ್ತುವಿಗೂ ಒಂದು ಅಥವಾ ಒಂದಕ್ಕಿಂತಲೂ ಹೆಚ್ಚು ಸಾಮಾನ್ಯಗಳಿದ್ದು ಈ ಸಾಮಾನ್ಯಗಳ ಸಂಯೋಜನಾ ವೈವಿಧ್ಯವು ವಸ್ತುವೈವಿಧ್ಯಕ್ಕೆ

ಕಾರಣ. ಆದರೆ ಅಕ್ವಿನಾಸ್ ಪ್ರಕಾರ ವರ್ಗವೊಂದನ್ನು ಪ್ರತಿನಿಧಿಸುವುದು ಒಂದೇ ಸಾಮಾನ್ಯ. ಆದರೆ ಆ ವರ್ಗದ ವಸ್ತುಗಳಲ್ಲಿನ ವ್ಯತ್ಯಾಸಕ್ಕೆ ಅವು ಹೊಂದಿರುವ ಪ್ರಕೃತಿಯ ವಿವಿಧ ಪ್ರಮಾಣವೇ ಕಾರಣ. ಆದ್ದರಿಂದ ವಸ್ತುಗಳನ್ನು ಪ್ರತ್ಯೇಕ ಅಥವಾ ವೈಯುಕ್ತಿಕಗೊಳಿಸುವ ತತ್ತ್ವವು ಪ್ರಕೃತಿಯೇ ಹೊರತು ಸಾಮಾನ್ಯವಲ್ಲ. ಸಮರ್ಥಕರಂತೆ ಅಕ್ವಿನಾಸ್ ಪ್ರಕಾರವೂ ಕೂಡ ಸೃಷ್ಟಿಯೆಂಬುದು ಈಶ್ವರನ ಒಂದು ನಿರಂತರ ವ್ಯಾಪಾರ. ಸೃಷ್ಟಿಯಲ್ಲಿ ನೈರಂತರ್ಯವಿಲ್ಲದೇ ಸ್ಥಿತಿಗೆ ಅರ್ಥಬರುವುದಿಲ್ಲ.

ಥಾಮಸನ ಅನುಚರ ಹಾಗೂ ಸಂತ ಫ್ರಾನ್ಸಿಸ್ ಪರಂಪರೆಯ ಸನ್ಯಾಸಿಯಾದ ಜಾನ್ ಡನ್ಸ್ ಸ್ಕಾಟಸ್ (ಕ್ರಿ. 1274-1308) ಚರ್ಚ್‌ವಿರೋಧೀ ಧೋರಣೆಯನ್ನು ಪ್ರತಿಬಂಧಿಸುವ ಸರ್ವಪ್ರಯತ್ನಗಳನ್ನೂ ಮಾಡಿದ. ಈತನ ಪ್ರಕಾರ ಸಾಮಾನ್ಯಗಳ ಮೂಲನೆಲೆ ಈಶ್ವರನ ಮನಸ್ಸಾದರೂ ನಮ್ಮ ಪರಿಮಿತ ಮನಸ್ಸಿಗೆ ಅವು ಅಮೂರ್ತಕಲ್ಪನೆಗಳಾಗಿ ಬರುವುದು ಬಾಹ್ಯಜಗತ್ತಿನಿಂದ ಮಾತ್ರ. ಈ ವಿಷಯದಲ್ಲಿ ಸ್ಕಾಟಸ್ ಒಬ್ಬ ವಾಸ್ತವಿಕವಾದಿ. ಏಕೆಂದರೆ ಅತನ ಪ್ರಕಾರ ನಮ್ಮ ಆಲೋಚನೆಗಳಿಗೆ ವಸ್ತುಸಾಂಗತ್ಯವಿಲ್ಲದಿದ್ದಲ್ಲಿ ಆಲೋಚನೆಯೇ ಸಾಧ್ಯವಿಲ್ಲ. ಸಾಮಾನ್ಯಗಳು ಅನೇಕವಾಗಿರುವುದರಿಂದ ಪ್ರತಿಯೊಂದು ಸಾಮಾನ್ಯಕ್ಕೂ ತನ್ನದೇ ಆದ ಸ್ವಂತಿಕೆಯಿದೆ. ಈ ಅರ್ಥದಲ್ಲಿ ಪ್ರತಿಯೊಂದು ಸಾಮಾನ್ಯವು ಒಂದು ವಿಶೇಷವೂ ಹೌದು. ಈ ಸ್ವಂತಿಕೆಯು ಈಶ್ವರನ ನೇತೃತ್ವದಲ್ಲಿ ಸಾಮಾನ್ಯ ಪ್ರಕೃತಿಗಳ ಸಂಪರ್ಕದಿಂದ ಉಂಟಾಗುವ, ಬಿಡಿವಸ್ತುವಿಗೂ ರವಾನಿಸುತ್ತದೆ. ಆದ್ದರಿಂದ ಬಿಡಿವಸ್ತುವಿನ ಉತ್ಪತ್ತಿಗೆ ಪ್ರಕೃತಿಯು ಎಷ್ಟೇ ಅಗತ್ಯವಾಗಿದ್ದರೂ ಮತ್ತು ಆ ವಸ್ತುವು ತನ್ನ ವರ್ಗದ ಇತರ ವಸ್ತುಗಳಿಗೆ ಎಷ್ಟೇ ಸದೃಶವಾಗಿದ್ದರೂ ಅದರತನಕ್ಕೆ ಕಾರಣ ಅರಿಸ್ಟಾಟಲ್ ಮತ್ತು ಅಕ್ವಿನಾಸ್ ಹೇಳುವಂತೆ ಪ್ರಕೃತಿಯಲ್ಲ. ಏಕೆಂದರೆ ತತ್ತ್ವವಾಗಿ ಪ್ರಕೃತಿಯು ಒಂದೇ. ಜಗತ್ತಿನ ವೈವಿಧ್ಯಕ್ಕೆ ಕಾರಣ ಸಾಮಾನ್ಯಗಳೇ ಹೊರತು ಪ್ರಕೃತಿಯಲ್ಲ. ವಾಸ್ತವವಾಗಿ ಸಾಮಾನ್ಯಗಳಿಗೆ ಪೂರ್ಣತೆ ಬರುವುದು ಅವು ಪ್ರಕೃತಿ ಮಿಲನದಿಂದ ಬಿಡಿವಸ್ತುಗಳಾಗಿ ಸಂಕೋಚಗೊಂಡಾಗ ಮಾತ್ರ. ಈ ವಿಷಯದಲ್ಲಿ ಸ್ಕಾಟಸ್ ವೈವಿಧ್ಯವು ಅಪೂರ್ಣತೆಯ ದ್ಯೋತಕವೆಂಬ ಅಕ್ವಿನಾಸ್‌ವಾದವನ್ನು ತಳ್ಳಿ ಹಾಕುತ್ತಾನೆ.

ಪ್ರತಿಯೊಂದು ವಸ್ತುವಿಗೂ ಜಾತಿ (Genus), ವರ್ಗ (species) ಮತ್ತು ಅದರತನ (Thisness) ಇರುತ್ತದೆ. ಜಾತಿಯು ವರ್ಗವನ್ನು ಮತ್ತು ವರ್ಗವು ವ್ಯಕ್ತಿಗಳನ್ನು ಒಳಗೊಂಡಿರುತ್ತದೆ. ಆದರೆ ವ್ಯಕ್ತಿಯು ಇನ್ನೇನನ್ನೂ ಒಳಗೊಂಡಿಲ್ಲ. ಅಂತಿಮವಾದ ಅದನ್ನು ಪುನಃ ತಾರ್ಕಿಕವಾಗಿ ವಿಭಜಿಸಲು ಸಾಧ್ಯವಿಲ್ಲ. ಎಂದರೆ ವಸ್ತುವು ಜಾತಿ ಮತ್ತು ವರ್ಗಗಳ ಸದಸ್ಯವಷ್ಟೇ ಅಲ್ಲ, ಅದು ತನ್ನ ಮತ್ತು ಇತರ ವರ್ಗಗಳ ಎಲ್ಲ ಸದಸ್ಯರಿಗಿಂತಲೂ ಭಿನ್ನವಾದ ಒಂದು ವ್ಯಕ್ತಿಯೂ ಹೌದು. ಜೇಮ್ಸ್ ಪ್ರಾಣಿಜಾತಿ ಮತ್ತು ಮನುಷ್ಯವರ್ಗಕ್ಕೆ ಸೇರಿದವನಷ್ಟೇ ಅಲ್ಲ, ಅವನು ಪ್ರಾಣಿಜಾತಿ

ಮತ್ತು ಮನುಷ್ಯವರ್ಗದ ಎಲ್ಲ ಸದಸ್ಯನಿಗಿಂತಲೂ ಭಿನ್ನವಾದ ಒಬ್ಬ ವ್ಯಕ್ತಿ. ಮೂಲತಃ ಅವನು ಜೇಮ್ಸ್ ಆಗಿರುವುದರಿಂದಲೇ ಅವನು ಟಾಮ್ ಅಥವಾ ಇನ್ನಾವುದೇ ವಸ್ತುವಿಗಿಂತ ಭಿನ್ನ. ಅವನು ತನ್ನ ವರ್ಗದ ಇತರ ಎಲ್ಲ ಸದಸ್ಯರಲ್ಲೂ ಇರುವ ಮನುಷ್ಯತ್ವ ಎಂಬ ಸತ್ವ ಅಥವಾ ಸಾಮಾನ್ಯದ (Essence, whatness ಅಥವಾ Quidditas) ಜೊತೆಗೆ ಅವನನ್ನು ಇತರರಿಂದ ಪ್ರತ್ಯೇಕಿಸುವ ತನ್ನತನವನ್ನೂ (Thisness ಅಥವಾ haecceitas) ಹೊಂದಿದ್ದಾನೆ. ಇದರಿಂದ ಸ್ಕಾಟಸ್‌ನ ತಾತ್ತ್ವಿಕ ಒಲವು ಹೆಚ್ಚಾಗಿ ಬಹುತ್ವವಾದದೆಡೆಗೆ ಎಂಬುದು ಸ್ಪಷ್ಟವಾಗುತ್ತದೆ. ಆತನು ತನ್ನೀ ವ್ಯಕ್ತಿವಾದವನ್ನು ಯಾವ ಮಟ್ಟಕ್ಕೆ ಒಯ್ಯುವನೆಂದರೆ ಆತನು ಒಂದೇ ವರ್ಗದ ವಿವಿಧ ವಸ್ತುಗಳಿಗಿರುವ ಮತ್ತು ಬೇರೆಬೇರೆ ವರ್ಗಗಳ ಬೇರೆಬೇರೆ ವಸ್ತುಗಳಿಗಿರುವ ಭೇದವು ಒಂದೇ ರೀತಿಯದಲ್ಲವೆನ್ನುತ್ತಾನೆ. ಉದಾಹರಣೆಗೆ ಆತನ ಪ್ರಕಾರ ಜೇಮ್ಸ್ ಮತ್ತು ಟಾಮ್‌ಗಿರುವ ಹಾಗೂ ಜೇಮ್ಸ್ ಮತ್ತು ಒಂದು ಹಸುವಿಗಿರುವ ಭೇದವು ಒಂದೇ ರೀತಿಯದಲ್ಲ

ಭೇದವು ಒಂದು ಪದಾರ್ಥವಲ್ಲವೆಂಬ ವಿಷಯದಲ್ಲಿ ಸ್ಕಾಟಸ್‌ನಿಂದ ಮತ್ತು ಭಾರತದ ದ್ವೈತವೇದಾಂತಿಗಳಿಗೂ ಹೋಲಿಕೆಯಿದ್ದರೂ ವಸ್ತು ಮತ್ತು ಭೇದ ಗಳಿಗಿರುವ ಸಂಬಂಧವನ್ನು ವಿವರಿಸುವಲ್ಲಿ ಸ್ಕಾಟಸ್‌ನಿಗಿಂತಲೂ ದ್ವೈತಿಗಳೇ ನಿಖರ ವಾಗಿದ್ದಾರೆ. ಸ್ಕಾಟಸ್ ಪ್ರಕಾರ ಭೇದವು ವಸ್ತುವಿನ ಗುಣ. ದ್ವೈತಿಗಳ ಪ್ರಕಾರ ಇದು ಸರಿಯಲ್ಲ. ಭೇದವು ವಸ್ತುವಿನ ಗುಣವಾದರೆ ವಸ್ತುಭೇದಗಳಿಗೆ ಮತ್ತೊಂದು ಭೇದವು ಕಲ್ಪಿಸಬೇಕಾಗಿ ಬಂದು ಇದು ಅನವಸ್ಥೆಯಲ್ಲಿ ಪರ್ಯವಸಾನವಾಗುತ್ತದೆ. ಆದ್ದರಿಂದ ಅವರ ಪ್ರಕಾರ ಭೇದವು ವಸ್ತುವಿನಿಂದ ಬೇರೆಂದು ಕಲ್ಪಿಸಿಕೊಳ್ಳಲು ಸಾಧ್ಯವಾಗದ ವಸ್ತುವಿನ ಸ್ವರೂಪವೇ ಹೊರತು ಗುಣವಲ್ಲ. ವಸ್ತುವೊಂದರ ಅಸ್ತಿತ್ವವು ಇತರ ವಸ್ತುಗಳಿಂದ ಅದರ ಭಿನ್ನತೆಯನ್ನು ಸೂಚಿಸುತ್ತದೆ. ಒಟ್ಟಿನಲ್ಲಿ ಸ್ಕಾಟಸ್ ಮತ್ತು ದ್ವೈತಿಗಳು ತಮ್ಮೀ ಬಹುತ್ವವಾದವನ್ನು ಸಮರ್ಥಿಸಲು ಎಷ್ಟೇ ಪ್ರಯತ್ನಿಸಿದರೂ ಅವರು ಎಲ್ಲ ವಸ್ತುಗಳಲ್ಲೂ ಸಮಾನವಾಗಿದ್ದು ಅವುಗಳಿಂದ ಅತೀತ ವಾಗಿರುವ ಸತ್ (Being ಅಥವಾ Essence)ಅನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಈಶ್ವರನು ಎಲ್ಲ ವಸ್ತುಗಳ ಸತ್ ಆಗಿರುವುದರಿಂದ ಎಲ್ಲ ವಿಶೇಷಣಗಳು ಅಂತಿಮವಾಗಿ ಆತನಿಗೇ ಸಲ್ಲುತ್ತವೆ.

ಓಕ್ಕಾಂನ ವಿಲಿಯಂ (ಕ್ರಿ. 1349) ರೊಸೆಲಿನ್ ಹಾಕಿಕೊಟ್ಟ ನಾಮಿನಲಿಸಂ ಪಥವನ್ನು ಅನುಸರಿಸಿದವನು. ವಸ್ತುಗಳ ನಡುವೆ ಭೇದಸಾಮ್ಯಗಳನ್ನು ಕಂಡು ಅವುಗಳ ಬಗ್ಗೆ ನಾವು ಕೆಲವೊಂದು ಸಾಮಾನ್ಯ ನಿರ್ಣಯಗಳನ್ನು ಕಳೆಯುವೆವಾದರೂ ಆ ನಿರ್ಣಯಗಳಿಗೆ ಮನೋಬಾಹ್ಯವಾದ ಸಾಂಗತ್ಯವಿಲ್ಲ. ಇವು ಈಶ್ವರನ ಮನಸ್ಸಿನಲ್ಲೂ ಇಲ್ಲ. ಎಲ್ಲರಂತೆ ದೇವರೂ ಕೂಡ ಇವುಗಳನ್ನು ಹೊಸದಾಗಿ ತಳೆಯುತ್ತಾನೆ.

ತತ್ತ್ವಗಳನ್ನು ಅನಗತ್ಯ ಸಂಖ್ಯೆಗೆ ಏರಿಸಬಾರದೆಂಬ ನಿಯಮಕ್ಕೆ* ಅನುಗುಣವಾಗಿ ವಿಲಿಯಂ ಸಾಮಾನ್ಯಗಳನ್ನು ತಿರಸ್ಕರಿಸುತ್ತಾನೆ.

ಜರ್ಮನ್ ಅನುಭಾವಿಯಾದ ಮೀಸ್ಟರ್ ಎಕ್ಹಾರ್ಟ್‌ನ (ಕ್ರಿ. 1250-1329) ಪ್ರಕಾರ ಚಿತ್ರಕಾರನು ಕಲಾಕಲ್ಪನೆಗಳ ತವರಾಗಿರುವಂತೆ ಈಶ್ವರನು ನಿತ್ಯ ಸಾಮಾನ್ಯಗಳ ನೆಲೆಯಾಗಿರುವನು. ಈ ಚಿದಚಿತ್ ಪ್ರಪಂಚವು ಸಾಮಾನ್ಯಗಳ ನಕಲು ಎಂಬ ವಿಷಯದಲ್ಲಿ ಪ್ಲೇಟೋನಿಂದ ಪ್ರಭಾವಿತನಾದರೂ ಪ್ರಪಂಚದ ಸಾಮಗ್ರಿಯು ಶೂನ್ಯ ಎಂಬ ವಿಷಯದಲ್ಲಿ ಗ್ರೀಕ್ ಹಾಗೂ (ಎರಿಯುಜೆನಿನ ಹೊರತಾಗಿ) ಉಳಿದ ಎಲ್ಲ ಕ್ರೈಸ್ತರಿಗಿಂತಲೂ ಭಿನ್ನನಾಗಿದ್ದಾನೆ. ಗ್ರೀಕ್ ಹಾಗೂ ಈ ಕ್ರೈಸ್ತ ತಾತ್ವಿಕರ ಪ್ರಕಾರ ಪ್ರಪಂಚವು ಸಾಮಾನ್ಯ ಪ್ರಕೃತಿಗಳ ಸಂಯೋಜನೆಯಿಂದ–ಪ್ರಕೃತಿಗೆ ಈಶ್ವರನೊಂದಿಗೆ ಸಮಾನಾಂತರ ಸ್ಥಾನವಿರಲಿ ಅಥವಾ ಈಶ್ವರನೇ ಅದನ್ನು ಸೃಷ್ಟಿಸಿರಲಿ– ಉಂಟಾಗುತ್ತದೆ. ಆದರೆ ಎಕ್ಹಾರ್ಟ್‌ನ ವಿಚಾರಧಾರೆಯಲ್ಲಿ ಪ್ರಕೃತಿಯ ಪ್ರಸ್ತಾಪವಿಲ್ಲ. ಅವನ ಪ್ರಕಾರ ಈಶ್ವರನು ಜಗತ್ತನ್ನು ಯಾವುದೇ ಸಾಮಗ್ರಿಯ ನೆರವಿಲ್ಲದೆ ಶೂನ್ಯದಿಂದ ನೇರವಾಗಿ ಸೃಷ್ಟಿಸುವನು.

ಹೀಗೆ ಮಧ್ಯಯುಗದಲ್ಲಿ ಜಗತ್ತಿನ ಬಗ್ಗೆ ಎಂದು ಸಿದ್ಧಾಂತಗಳು ಹುಟ್ಟಿಕೊಂಡವು. ಮೊದಲನೆಯದು ಪ್ಲೇಟೋ ಅದರಲ್ಲೂ ವಿಶೇಷವಾಗಿ ಅರಿಸ್ಟಾಟಲನ ಚಿಂತನೆಯಿಂದ ಪ್ರಭಾವಿತವಾಗಿ ಅದನ್ನು ಶೂನ್ಯದಿಂದ ಪ್ರಕೃತಿಯನ್ನು ತನ್ಮೂಲಕ ಪ್ರಪಂಚವನ್ನು ಅಥವಾ ಶೂನ್ಯದಿಂದಲೇ ನೇರವಾಗಿ ಪ್ರಪಂಚವನ್ನು ಸೃಷ್ಟಿಸುವ ದೇವರಲ್ಲಿನ ತನ್ನ ಕ್ರೈಸ್ತ ನಂಬಿಕೆಗೆ ಹೊಂದಿಸಿಕೊಳ್ಳಲು ಯತ್ನಿಸಿತು. ಇದರ ಪ್ರಕಾರ ಸಾಮಾನ್ಯಗಳಿಗೆ ನಮ್ಮ ಮನಸ್ಸಿಗಿಂತಲೂ ಸ್ವತಂತ್ರವಾದ ಅಸ್ತಿತ್ವವಿದೆ. ಎಕ್ಹಾರ್ಟ್‌ನ ಹೊರತಾಗಿ ಈ ಸಿದ್ಧಾಂತಕ್ಕೆ ಸೇರಿದ ಹೆಚ್ಚುಕಡಮೆ ಎಲ್ಲರೂ ಸಾಮಾನ್ಯಗಳನ್ನು ಬಾಹ್ಯ ಪ್ರತ್ಯೇಕಗಳೊಂದಿಗೆ ಅವಿಭಾಜ್ಯವಾಗಿಸಿದರು. ಅವುಗಳನ್ನು ಈಶ್ವರನ ಮೇಧೆಯಲ್ಲಿರುವ ಜಗತ್ತಿನ ಒಂದು ಪರಿಪೂರ್ಣ ಮಾದರಿಯಾಗಿಸಿ ಆ ಮಾದರಿಯನ್ನು ಲೊಗೊಸ್ ಎಂದು ಕರೆದರು.

ಎರಡನೇ ಸಿದ್ಧಾಂತವು ಸಾಮಾನ್ಯಗಳ ಸತ್ಸತೆಯನ್ನೇ ಪ್ರಶ್ನಿಸಲು ಮೊದಲು ಮಾಡಿತು. ಈ ಸಿದ್ಧಾಂತಕ್ಕೆ ಸೇರಿದ ರೊಸೆಲಿನ್ ಮತ್ತು ವಿಲಿಯಂರ ಪ್ರಕಾರ ಸಾಮಾನ್ಯಗಳು ಮಾತಿನಲ್ಲಿ ನಿಜವೇ ಹೊರತು ಅವುಗಳಿಗೆ ಮನೋಬಾಹ್ಯವಾದ ಅಸ್ತಿತ್ವವಿಲ್ಲ. ಈ ಇಬ್ಬರು ತಾತ್ತ್ವಿಕರು ಇಂದ್ರಿಯಾನುಭವವೊಂದನ್ನೇ ಬಂಡವಾಳವಾಗಿಸಿಕೊಂಡು ವಿಶೇಷಗಳನ್ನು ಮಾತ್ರ ನಿಜವೆಂದರು. ಇವರಿಗೂ ಅರಿಸ್ಟಾಟಲ್‌ಗೂ ಇದ್ದ ವ್ಯತ್ಯಾಸವೆಂದರೆ ಅರಿಸ್ಟಾಟಲ್ ಸಾಮಾನ್ಯ ವಿಶೇಷಗಳೆರಡೂ ಸಮವಾಗಿ ಸತ್ಯವೆಂದರೆ ಇವರು ಸಾಮಾನ್ಯಗಳನ್ನು ತಿರಸ್ಕರಿಸಿ ವಿಶೇಷಗಳನ್ನು ಮಾತ್ರ ಅಂಗೀಕರಿ

*ಈ ನಿಯಮಕ್ಕೆ ಓಕ್ಹಾಂನ ಖಡ್ಗವೆಂದು ಹೆಸರು.

ಸಿದರು. ತಮ್ಮ ಚಿಂತನೆಗೆ ಅರಿಸ್ಟಾಟಲ್‌ನನ್ನು ಆಶ್ರಯಿಸಿ ಕೊನೆಗೆ ಸಾಮಾನ್ಯಗಳಿಗೆ ಸಂಬಂಧಿಸಿದಂತೆ ಆತನ ಸಿದ್ಧಾಂತವನ್ನೇ ಬಲಿತೆಗೆದುಕೊಂಡರು. ಒಟ್ಟಿನಲ್ಲಿ ಮೊದಲ ಪಂಥವು ಮತಧರ್ಮಕ್ಕೆ ಪ್ರಾಧಾನ್ಯ ನೀಡಿದರೆ ಎರಡನೇ ಪಂಥವು ಆಧುನಿಕ ವಿಜ್ಞಾನಕ್ಕೆ ಬುನಾದಿಪ್ರಾಯವಾಗಿ ಜಗತ್ತನ್ನು ಕುರಿತ ಒಂದು ಹೊಸ ನಿಲುವಿಗೆ ನಾಂದಿಯಾಯಿತು.

ಆರ್. ಆರ್. ಕುಲಕರ್ಣಿ

ಧಾರವಾಡ ಜಿಲ್ಲೆಯ ವಿಭಜನೆ ಹಾಗೂ ಸವಣೂರ ಜಿಲ್ಲೆಯ ನಿರ್ಮಾಣ

ಧಾರವಾಡ ಜಿಲ್ಲೆಯ ಇತಿಹಾಸವೆಂದರೆ ಹಿಂದಿನ ಮುಂಬಯಿ ಕರ್ನಾಟಕದ ಜಿಲ್ಲೆಗಳ ಇತಿಹಾಸವೆಂದರ್ಥ. ಅವೆರಡರ ನಡುವೆ ಅಷ್ಟೊಂದು ಅನ್ಯೋನ್ಯ ಸಂಬಂಧ ಇದೆ. ಧಾರವಾಡ ಜಿಲ್ಲೆಯ ವಿಭಜನೆಯ ಸಮಸ್ಯೆಗಳನ್ನು ಅರಿತುಕೊಳ್ಳಬೇಕಾದರೆ ಹಿಂದಿನ ಮುಂಬಯಿ ಕರ್ನಾಟಕದ ಜಿಲ್ಲೆಗಳ ಬೆಳವಣಿಗೆಯ ಬಗ್ಗೆ ಸಿಂಹಾವಲೋಕನ ಅತ್ಯಂತ ಅವಶ್ಯಕ. ಕ್ರಿಸ್ತಶಕ 1791ರ ಮೇ ದಿನಾಂಕ : 4ರಂದು ಟಿಪ್ಪೂಸುಲ್ತಾನನು ಬ್ರಿಟಿಷರೊಂದಿಗೆ ಸಖ್ಯವನ್ನು ಹೊಂದಿದ್ದನು. ಟೀಪೂವು ಕೊನೆಯ ಉಸಿರು ಇರುವ ವರೆಗೂ ಹೋರಾಡಿ ವೀರಮರಣವನ್ನು ಅಪ್ಪಿದನು. ಅವಿಭಕ್ತ ಕಾನಡಾ ಜಿಲ್ಲೆಯು ಟೀಪೂವಿನ ಮರಣಾನಂತರ 1799ರಲ್ಲಿ ಇಂಗ್ಲೀಷರ ಕೈಸೇರಿತು. ಮುಂದೆ 1878ರಲ್ಲಿ ಎರಡನೆಯ ಬಾಜೀರಾಯನು ಬ್ರಿಟಿಷರೊಂದಿಗೆ ಯುದ್ಧದಲ್ಲಿ ಹೋರಾಡಿ ಸೋತು ಓಡಿಹೋದನು. ಅಂದಿನಿಂದ ಅಂದರೆ 1818ರ ಫೆಬ್ರವರಿ 11 ರಿಂದ ವಿಜಾಪುರ, ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳ ಈಗಿದ್ದ ಪ್ರದೇಶವು ಬ್ರಿಟಿಷರ ಕೈಸೇರಿತು. ಈ ಮೂರು ಜಿಲ್ಲೆಗಳ ಪ್ರದೇಶವು ಬಳ್ಳಾರಿಯ ಕಲೆಕ್ಟರನ ಅಧೀನವಾಗಿ ಮದ್ರಾಸ್ ಇಲಾಖೆಗೆ ಸೇರಿತ್ತು. ಆಗ ಈ ನಾಲ್ಕೂ ಜಿಲ್ಲೆಗಳ ಪ್ರದೇಶವನ್ನು ಬ್ರಿಟಿಷರು ದಕ್ಷಿಣ ಮಹಾರಾಷ್ಟ್ರದ ಆಟ ಎಂದು ಕರೆಯುತ್ತಿದ್ದರು. 1830ರ ಮಾರ್ಚ್ 17ರಂದು ಮುಂಬಯಿ ಸರ್ಕಾರವು ಹೊಸ ಆಜ್ಞೆಯನ್ನು ಹೊರಡಿಸಿ ಮೂರು ಜಿಲ್ಲೆಗಳ ಪ್ರದೇಶಕ್ಕಾಗಿ ಕೇವಲ ಒಂದೇ ಒಂದು ಅವಿಭಕ್ತ ಧಾರವಾಡ ಜಿಲ್ಲೆಯನ್ನು ನಿರ್ಮಿಸಿತು. ಆಗ ಈ ಜಿಲ್ಲೆಯಲ್ಲಿ ಸೊಲ್ಲಾಪುರ ಜಿಲ್ಲೆಯ ಕೆಲವು ಪ್ರದೇಶ ಸೇರಿಕೊಂಡಿತ್ತು ಎಂದು ಹೇಳಿದರೆ ಅನೇಕರಿಗೆ ಆಶ್ಚರ್ಯವಾಗಬಹುದು, ಆದರೆ ಇದು ಐತಿಹಾಸಿಕ ಸತ್ಯ. 1836 ಏಪ್ರಿಲ್ 28ರಂದು ಬೆಳಗಾವಿ ಎಂಬ ಹೊಸ ಜಿಲ್ಲೆಯನ್ನು ನಿರ್ಮಿಸಿ ಅದರಲ್ಲಿ ಪಾಚ್ಛಾಪುರ, ಸಂಪಗಾವಿ, ಬೀಡಿ, ಚಿಕ್ಕೋಡಿ, ಪರಸಗಡ, ಬಾಗಲಕೋಟೆ, ಬಾದಾಮಿ, ಹುನಗುಂದ, ಇಂಡಿ, ಮುದ್ದೇಬಿಹಾಳ ಎಂಬ ಹತ್ತು ತಾಲ್ಲೂಕುಗಳನ್ನು ಸೇರಿಸಲಾಯಿತು. 1864ರಲ್ಲಿ

ಸೊಲ್ಲಾಪುರ ಜಿಲ್ಲೆಗೆ ಸೇರಿದ ಭೀಮಾ, ಕೃಷ್ಣಾ ಇವುಗಳ ನಡುವಿನ ಇಂಡಿ, ಹಿಪ್ಪರಗಿ, ವಿಜಾಪುರ, ಮನಗೂಳಿ, ಮುದ್ದೇಬಿಹಾಳ ಈ ಐದು ಕನ್ನಡ ತಾಲ್ಲೂಕುಗಳನ್ನು ಬೆಳಗಾವಿ ಜಿಲ್ಲೆಗೆ ಸೇರಿದ ಬಾಗಲುಕೋಟೆ, ಬಾದಾಮಿ, ಹನಗುಂದ ಈ ಮೂರು ಪೂರ್ವದ ತಾಲ್ಲೂಕುಗಳನ್ನು ಸೇರಿಸಿ ಕಲಾದಗಿ ಎಂಬ ಜಿಲ್ಲೆಯನ್ನು ನಿರ್ಮಿಸಿದರು. 1884 ರಲ್ಲಿ ಕಲಾದಗಿಯನ್ನು ಬಿಟ್ಟು ವಿಜಾಪುರ ಜಿಲ್ಲೆಯನ್ನು ಮಾಡಿದರು. ಅವಿಭಕ್ತ ಕಾನಡಾ ಜಿಲ್ಲೆಯನ್ನು 1862ರಲ್ಲಿ ಒಡೆದು ಉತ್ತರ ಕನ್ನಡ ಜಿಲ್ಲೆಯನ್ನು ಮುಂಬಯಿ ಇಲಾಖೆಗೂ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಮದ್ರಾಸ್ ಇಲಾಖೆಗೂ ಸೇರಿಸಲಾಯಿತು.

ಧಾರವಾಡ ಜಿಲ್ಲೆಯು ಕಾಲಕಾಲಕ್ಕೆ ಬೇರೆ ಬೇರೆ ಆಳರಸರ ಅಧೀನಕ್ಕೆ ಒಳಪಟ್ಟಿತ್ತು. ಅದರಂತೆಯೇ ಕಾಲಕಾಲಕ್ಕೆ ಧಾರವಾಡ ಜಿಲ್ಲೆಯ ಗಡಿಗಳು ಬದಲಾವಣೆ ಹೊಂದುತ್ತಾ ಬಂದಿರುವುವು. 1336 ರಿಂದ 1565ರ ವರೆಗೆ ವಿಜಯನಗರದ ಅರಸರು, 1565 ರಿಂದ 1686ರ ವರೆಗೆ ಮುಸ್ಲಿಮರ ದೊರೆಗಳು, 1686 ರಿಂದ 1720ರ ವರೆಗೆ ಮೊಘಲರು, 1720 ರಿಂದ 1818ರ ವರೆಗೆ ಮರಾಠಾ ದೊರೆಗಳು, 1818 ರಿಂದ 1947ರ ವರೆಗೆ ಬ್ರಿಟಿಷ ಅರಸರ ಆಳ್ವಿಕೆಗೆ ಧಾರವಾಡ ಜಿಲ್ಲೆ ಒಳಪಟ್ಟಿತ್ತು. 1884ರಲ್ಲಿ ಧಾರವಾಡ ಜಿಲ್ಲೆಯು ಬಂಕಾಪುರ, ಡಂಬಳ, ಧಾರವಾಡ, ಹಾನಗಲ, ಹುಬ್ಬಳ್ಳಿ, ಕೋಡ, ನವಲಗುಂದ, ರಾಣಿಬೆನ್ನೂರ ಎಂಬ ಎಂಟು ತಾಲ್ಲೂಕುಗಳನ್ನು ಹೊಂದಿದ್ದಿತು. ಮುಂದೆ 1937ರ ಸುಮಾರಿಗೆ ಧಾರವಾಡ ಜಿಲ್ಲೆಯು 11 ತಾಲ್ಲೂಕುಗಳು, ಹಾಗೂ ಹೊಸ ಪೇಠಾಗಳನ್ನು ಹೊಂದಿತ್ತು. ಸ್ವಾತಂತ್ರ್ಯ ದೊರಕಿದ ನಂತರ 1949 ಆಗಸ್ಟ್ 1ರಂದು ಧಾರವಾಡ ಜಿಲ್ಲೆಯನ್ನು ಪುನರ್ಘಟಿಸಲಾಯಿತು. ಸಮಗ್ರ ಸವಣೂರು ಸಂಸ್ಥಾನ ಹಾಗೂ ಸಾಂಗ್ಲಿ, ಹಿರಿಯ ಮಿರಜ, ಕಿರಿಯ ಮಿರಜ, ಜಮಖಂಡಿ ಹಾಗೂ ರಾಮದುರ್ಗ ಸಂಸ್ಥಾನದ ಕೆಲವು ಹಳ್ಳಿಗಳನ್ನು ಹಾಗೂ ಕೆಲವು ನಗರಗಳನ್ನು ಸೇರಿಸಲಾಯಿತು. ಮತ್ತೆ 1950ರಲ್ಲಿ ಧಾರವಾಡ ಜಿಲ್ಲೆಯನ್ನು ಪುನರ್ಘಟಿಸಿ ಅದರಲ್ಲಿ ನಾಲ್ಕು ಪ್ರಾಂತಗಳನ್ನು (ಉಪವಿಭಾಗಗಳನ್ನು) 12 ತಾಲ್ಲೂಕುಗಳನ್ನು ಹಾಗೂ 4 ಪೇಠಾಗಳನ್ನು ರಚಿಸಲಾಯಿತು. ಬಂಕಾಪೂರ ತಾಲ್ಲೂಕನ್ನು ರದ್ದುಗೊಳಿಸಿ ಅದರ ಬದಲಾಗಿ ಶಿಗ್ಗಾವಿ ಎಂಬ ತಾಲ್ಲೂಕನ್ನು ರಚಿಸಿ ಅದನ್ನು ಸವಣೂರು ಪ್ರಾಂತಕ್ಕೆ ಸೇರಿಸಲಾಯಿತು. ಧಾರವಾಡ ಪ್ರಾಂತವು ಗದಗ ಪ್ರಾಂತದಿಂದ ಬ್ಯಾಡಗಿ ಎಂಬ ಹೊಸ ಪೇಠಾವನ್ನು ಪಡೆದುಕೊಂಡು ಹಾನಗಲ್ಲ ತಾಲ್ಲೂಕನ್ನು ಸವಣೂರು ಪ್ರಾಂತಕ್ಕೆ ಕೊಟ್ಟು ಅದನ್ನು ಕಳೆದುಕೊಂಡಿತು. ಕೋಡ ಎಂಬ ತಾಲ್ಲೂಕನ್ನು ರದ್ದುಗೊಳಿಸಿ ಹಿರೇಕೆರೂರ ಎಂಬ ಹೊಸ ತಾಲ್ಲೂಕನ್ನು ರಚಿಸಲಾಯಿತು. ಕರಜಗಿ ಎಂಬ ತಾಲ್ಲೂಕನ್ನು ರದ್ದುಗೊಳಿಸಿ ಅದಕ್ಕೆ ಬದಲಾಗಿ ಹಾವೇರಿಯನ್ನು ತಾಲ್ಲೂಕನ್ನಾಗಿ ರಚಿಸಲಾಯಿತು ಶಿಗ್ಗಾಂವ, ಹಾನಗಲ, ಶಿರಹಟ್ಟಿ ತಾಲ್ಲೂಕುಗಳನ್ನು ಹಾಗೂ ಹೊಸನಾಗಿ ನಿರ್ಮಿಸಿದ ಕುಂದಗೋಳ ಎಂಬ ಮಹಾಲನ್ನು ಸೇರಿಸಿ ಸವಣೂರ

ಎಂಬ ಪ್ರಾಂತವನ್ನು ರಚಿಸಲಾಯಿತು. 1951ರ ಜನಗಣತಿಯ ಸಮಯದಲ್ಲಿ ಧಾರವಾಡ ಜಿಲ್ಲೆಯು ಹೊಂದಿದ ಆಡಳಿತ ಘಟಕಗಳು, ಪ್ರದೇಶ ಹಾಗೂ ಜನಸಂಖ್ಯೆಯ ಬಗ್ಗೆ ವಿವರಗಳನ್ನು ಕೆಳಗೆ ಕಾಣಿಸಲಾಗಿದೆ.

ಪ್ರಾಂತಗಳು	ತಾಲ್ಲೂಕುಗಳು ಹಾಗೂ ಪೇಠಾಗಳು	ಪ್ರದೇಶ ಚದುರ ಮೈಲುಗಳಲ್ಲಿ	ಜನಸಂಖ್ಯೆ
ಧಾರವಾಡ	ಧಾರವಾಡ	430.4	1,61,020
	ಕಲಘಟಗಿ	259.0	50,860
	ಹುಬ್ಬಳ್ಳಿ	290.0	1,95,532
	ನವಲಗುಂದ	417.9	75,237
ಹಾವೇರಿ	ರಾಣೇಬೆನ್ನೂರು	361.3	1,20,813
	ಹಾವೇರಿ	401.4	1,24,198
	ಹಿರೇಕೆರೂರು	310.0	96,568
	ಬ್ಯಾಡಗಿ	167.7	58,853
ಗದಗ	ಗದಗ	412.7	1,44,260
	ರೋಣ	476.3	1,27,874
	ಮುಂಡರಗಿ	336.4	48,963
	ನರಗುಂದ	176.2	33,313
ಸವಣೂರು	ಶಿಗ್ಗಾಂವ	344.3	98,004
	ಹಾನಗಲಿ	298.7	89,627
	ಶಿರಹಟ್ಟಿ	366.8	81,447
	ಕುಂದಗೋಳ	234.8	68,817
	ಒಟ್ಟು	5284.5	15,75,386

1956 ನವೆಂಬರ್ 1ರಂದು ನೂತನ ಕರ್ನಾಟಕ ರಾಜ್ಯವು ಪೂರ್ಣಗೊಂಡ ನಂತರ ಧಾರವಾಡ ಜಿಲ್ಲೆಯಲ್ಲಿ ನಾಲ್ಕು ಪೇಠಾಗಳನ್ನು ರದ್ದುಗೊಳಿಸಿ ಅವುಗಳನ್ನು ತಾಲ್ಲೂಕುಗಳ ಮಟ್ಟಕ್ಕೆ ಎತ್ತರಿಸಲಾಯಿತು. ಹೀಗಾಗಿ 4 ಉಪವಿಭಾಗಗಳು ಹಾಗೂ 16 ತಾಲ್ಲೂಕುಗಳು ನಿರ್ಮಾಣಗೊಂಡವು. ಆದರೆ ಪ್ರಾಂತಗಳ ಇಲ್ಲವೆ ಉಪ ವಿಭಾಗಗಳ ವ್ಯಾಪ್ತಿಯಲ್ಲಿ ಬದಲಾವಣೆಯಾಗಲಿಲ್ಲ. 1969 ಜನವರಿ 26ರಂದು ಸವಣೂರು ಎಂಬ ತಾಲ್ಲೂಕನ್ನು ರಚಿಸಲಾಯಿತು. ಹೀಗಾಗಿ ಸವಣೂರು ಉಪ

ವಿಭಾಗಕ್ಕೆ 5 ತಾಲ್ಲೂಕುಗಳನ್ನು ಅಳವಡಿಸಲಾಯಿತು. ಈ ರೀತಿಯಾಗಿ ಧಾರವಾಡ ಜಿಲ್ಲೆಯು ಕಾಲ ಕಾಲಕ್ಕೆ ಪ್ರದೇಶಗಳ ವಿಲೀನೀಕರಣ ಹಾಗೂ ವಿನಿಮಯಗಳ ಮೂಲಕ ಪರಿವರ್ತನೆ ಹೊಂದುತ್ತ ಇಂದಿನ ಸ್ವರೂಪವನ್ನು ಪಡೆದಿರುತ್ತದೆ.

ಸವಣೂರ ಜಿಲ್ಲೆಯ ನಿರ್ಮಾಣ

ಉತ್ತರ ಕರ್ನಾಟಕದ ಜಿಲ್ಲೆಗಳು ಅಂದರೆ ಹಿಂದಿನ ಮುಂಬಯಿ ಕರ್ನಾಟಕದ ಜಿಲ್ಲೆಗಳು ಹಾಗೂ ಹಿಂದಿನ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು ಪ್ರದೇಶ ಹಾಗೂ ಜನಸಂಖ್ಯೆಗಳ ದೃಷ್ಟಿಯಿಂದ ಹೆಚ್ಚು ವಿಸ್ತಾರವಾಗಿರುತ್ತವೆ. ಇವುಗಳ ಆಡಳಿತ ನಿರ್ವಹಣೆಯು ತೊಂದರೆದಾಯಕವಾಗಿ ಪರಿಣಮಿಸತೊಡಗಿದೆ ಎಂಬ ಸಂಗತಿಯು ಅತ್ಯಂತ ಸ್ಪಷ್ಟವಾಗಿದೆ. ವಾಸುದೇವರಾವ್ ಸಮಿತಿಯು ಧಾರವಾಡ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಡೆದು ಸುರಪುರ ಹಾಗೂ ಗದಗ ಜಿಲ್ಲೆಗಳನ್ನು ನಿರ್ಮಿಸಬೇಕೆಂಬ ಸೂಚನೆಗಳನ್ನು ಸಲ್ಲಿಸಿದ ಸಂಗತಿಯು ಸರ್ವವೇದ್ಯವಾಗಿರುತ್ತವೆ. ಗದಗ ಜಿಲ್ಲೆಯು ಗದಗ, ನರಗುಂದ, ನವಲಗುಂದ, ಬಾದಾಮಿ, ಹುನುಗುಂದ, ಕುಷ್ಟಗಿ, ರೋಣ, ಯಲಬುರ್ಗಾ, ಕೊಪ್ಪಳ, ಮುಂಡರಗಿ ಹಾಗೂ ಶಿರಹಟ್ಟಿ ಎಂಬ ಹನ್ನೊಂದು ತಾಲ್ಲೂಕುಗಳನ್ನು ಹೊಂದಬೇಕು. ಧಾರವಾಡ ಜಿಲ್ಲೆಯು ಧಾರವಾಡ, ಸವದತ್ತಿ, ಹುಬ್ಬಳ್ಳಿ, ಕಲಘಟಗಿ, ಶಿಗ್ಗಾಂವ, ಕುಂದಗೋಳ, ಸವಣೂರು, ಹಾನಗಲ್, ಹಾವೇರಿ, ಬ್ಯಾಡಗಿ ಹಾಗೂ ರಾಣಿಬೇನ್ನೂರು ತಾಲ್ಲೂಕುಗಳನ್ನು ಒಳಗೊಳ್ಳಬೇಕು. ಅದರಂತೆಯೇ ಗುಲ್ಬರ್ಗಾ ಜಿಲ್ಲೆ ಗುಲಬುರ್ಗಾ ದಕ್ಷಿಣ, ಗುಲಬುರ್ಗಾ ಉತ್ತರ, ಆಳಂದ, ಅಫಜುಲಪೂರ, ಸೇಡಂ. ಚಿಂಚೋಳಿ, ಚಿತಾಪುರ ಹಾಗೂ ಕಾಳಗಿ ಎಂಬ ಎಂಟು ತಾಲ್ಲೂಕುಗಳನ್ನು ಹೊಂದಬೇಕು. ಸುರಪುರ ಜಿಲ್ಲೆಯು ಹುಣಸಗಿ, ಸುರಪುರ, ಮುದ್ದೇಬಿಹಾಳ, ಯಾದಗೀರ, ವಡಗೆರೆ, ಶಹಾಪುರ, ಜೇವರಗಿ ಹಾಗೂ ಎಡ್ರಾಮಿ ಎಂಬ 8 ತಾಲ್ಲೂಕಗಳನ್ನು ಹೊಂದಬೇಕು. ಈ ರೀತಿಯಾಗಿ ವಾಸುದೇವರಾವ್ ಸಮಿತಿಯು ತನ್ನ ಶಿಫಾರಸುಗಳನ್ನು ಸಲ್ಲಿಸಿತು.

ಇತ್ತೀಚಿಗೆ ಹುಂಡೇಕಾರ ಸಮಿತಿಯು ಧಾರವಾಡ ಜಿಲ್ಲೆಯಲ್ಲಿ ಸಂಚರಿಸುತ್ತಿರುವಾಗ ಕೆಲವೊಂದು ತಾಲ್ಲೂಕುಗಳ ಜನರು ತಮ್ಮ ತಾಲ್ಲೂಕುಗಳನ್ನು ಜಿಲ್ಲೆಗಳನ್ನಾಗಿ ಪರಿವರ್ತಿಸಬೇಕೆಂದು ಮನವಿಗಳನ್ನು ಸಲ್ಲಿಸಿದ್ದಾರೆ. ಆದರೆ ಅನೇಕ ಮನವಿಗಳಲ್ಲಿ ವೈಜ್ಞಾನಿಕ ವಿಶ್ಲೇಷಣೆಗಿಂತ ರಾಜಕೀಯ ಹಿತಾಸಕ್ತಿಗಳು ಕಂಡು ಬರುತ್ತವೆ. ಕೆಲವು ಜನರು ಹಾಗೂ ಸಂಘ ಸಂಸ್ಥೆಗಳು ಹಾವೇರಿಯನ್ನು ಜಿಲ್ಲೆಯನ್ನಾಗಿ, ಕೆಲವರು ಗದಗನ್ನು ಜಿಲ್ಲೆಯನ್ನಾಗಿ ಹಾಗೂ ಮತ್ತೆ ಕೆಲವರು ಸವಣೂರನ್ನು ಜಿಲ್ಲೆಯನ್ನಾಗಿ ಪರಿವರ್ತಿಸಬೇಕೆಂದು ಬೇಡಿಕೆಗಳನ್ನು ಮಂಡಿಸಿದ್ದಾರೆ. ಈ ಬೇಡಿಕೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಒಂದು ನೈಜ ಚಿತ್ರಣವನ್ನು ಜನತೆಯ ಮುಂದೆ ಇಡಬೇಕೆಂಬುದು ಈ ಲೇಖನದ ಉದ್ದೇಶ. ಯಾವುದೇ ಒಂದು ನಿರ್ದಿಷ್ಟ ಪ್ರದೇಶವನ್ನು ಜಿಲ್ಲೆಯನ್ನಾಗಿ

ನಿರ್ಮಿಸಬೇಕಾದರೆ ಜನಸಂಖ್ಯೆ, ಪ್ರದೇಶ, ಭೂಕಂದಾಯ, ಆಡಳಿತ ನಿರ್ವಹಣೆಗಾಗಿ ಇರುವ ಸೌಲಭ್ಯಗಳು, ಇವೆಲ್ಲವುಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಧಾರವಾಡ ಜಿಲ್ಲೆಯಲ್ಲಿ ಧಾರವಾಡ ಉಪವಿಭಾಗ, ಗದಗ ಉಪವಿಭಾಗ, ಸವಣೂರು ಉಪವಿಭಾಗ ಹಾಗೂ ಹಾವೇರಿ ಉಪವಿಭಾಗ ಎಂಬ ನಾಲ್ಕು ಉಪವಿಭಾಗಗಳು ಇರುತ್ತವೆ. ಅವುಗಳ ಬಗ್ಗೆ ವಿವರಗಳನ್ನು ಕೆಳಗೆ ಕಾಣಿಸಿದ ಪಟ್ಟಿಗಳಲ್ಲಿ ನೀಡಲಾಗಿದೆ.

ಪ್ರದೇಶ ಹಾಗೂ ಜನಸಂಖ್ಯೆಯ ವಿವರಗಳು

ಉಪವಿಭಾಗಗಳು	ತಾಲ್ಲೂಕುಗಳು	ಪ್ರದೇಶ (ಚದರ : ಕಿಲೋ ಮೀಟರುಗಳಲ್ಲಿ)	ಜನಸಂಖ್ಯೆ		ಪ್ರತಿ ಚದರ ಕಿಲೋ ಮೀ. ಜನಸಂಖ್ಯೆ
ಧಾರವಾಡ	ಧಾರವಾಡ	1082.96	1,60,073		0148
	ಹುಬ್ಬಳ್ಳಿ	604.14	6,23,173		1032
	ಕಲಘಟಗಿ	681.30	0,99,467		0146
	ನವಲಗುಂದ	1045.66	1,37,978		0132
ಗದಗ	ಗದಗ	1092.84	253,395		232
	ರೋಣ	1285.93	193,445		150
	ನರಗುಂದ	0420.59	048,473		163
	ಒಟ್ಟು	3681.61	582,803	ಸರಾಸರಿ :	161
ಹಾವೇರಿ	ಹಾವೇರಿ	795.85	180,922		227
	ರಾಣಿಬೇನ್ನೂರು	904.55	217,001		240
	ಹಿರೇಕೆರೂರ	798.57	162,150		203
	ಬ್ಯಾಡಗಿ	440.95	093,314		212
	ಒಟ್ಟು	2939.92	653,387	ಸರಾಸರಿ :	220.5
ಸವಣೂರು	ಸವಣೂರು	538.62	104,405		194
	ಶಿಗ್ಗಾಂವ	586.07	121,787		208
	ಶಿರಹಟ್ಟಿ	949.18	139,158		147
	ಹಾನಗಲ್	722.22	170,291		236
	ಕುಂದಗೋಳ	648.42	127,466		197
	ಒಟ್ಟು	3444.51	663,107	ಸರಾಸರಿ :	196.4

ಭೂ ಪ್ರದೇಶ ಹಾಗೂ ಭೂ ಕಂದಾಯ ವಿವರಗಳು

ಉಪವಿಭಾಗಗಳು	ತಾಲ್ಲೂಕುಗಳು	ಹಳ್ಳಿಗಳು	ಭೂ ಪ್ರದೇಶ ಹೆಕ್ಟೇರುಗಳಲ್ಲಿ	ಭೂ ಕಂದಾಯ 1982–83	ಭೂ ಕಂದಾಯ 1983–84	ಭೂ ಕಂದಾಯ 1984–85
ಧಾರವಾಡ	ಧಾರವಾಡ	111	117788	4,31,018	1,72,302	2,99,345
	ಹುಬ್ಬಳ್ಳಿ	058	073707	2,28,010	0,60,279	0,49,699
	ಕಲಘಟಗಿ	082	068757	2,29,854	0,89,377	0,86,721
	ನವಲಗುಂದ	058	108218	4,16,176	1,38,618	2,20,548
	ಒಟ್ಟು	309	368470	13,05,058	4,60,576	6,56,313
ಗದಗ	ಗದಗ	055	109751	5,87,543	6,28,856	3,19,324
	ರೋಣ	091	129091	3,63,172	1,01,465	0,23,777
	ನರಗುಂದ	035	043562	0,83,916	1,02,276	1,20,403
	ಮುಂಡರಗಿ	048	088398	0,56,086	0,47,997	0,11,350
	ಒಟ್ಟು	229	370802	10,90,717	8,80,594	4,74,854

ಉಪವಿಭಾಗಗಳು	ತಾಲ್ಲೂಕುಗಳು	ಹಳ್ಳಿಗಳು	ಭೂ ಪ್ರದೇಶ ಹೇಕ್ಟೆರ್‍ಗಳಲ್ಲಿ	ಭೂ ಕಂದಾಯ 1982-83	ಭೂ ಕಂದಾಯ 1982-83	ಭೂ ಕಂದಾಯ 1982-83
ಹಾವೇರಿ	ಹಾವೇರಿ	088	079985	1,29,066	1,27,373	1,28,066
	ರಾಣಿಬೆನ್ನೂರು	106	090475	0,65,515	0,67,436	1,15,603
	ಹಿರೇಕೆರೂರ	127	080694	2,67,227	0,56,622	1,21,488
	ಬ್ಯಾಡಗಿ	063	043656	1,14,154	0,30,586	1,20,051
	ಒಟ್ಟು	384	494810	5,75,962	2,84,017	4,85,208
ಸವಣೂರು	ಸವಣೂರು	C62	053901	1,18,985	1,32,375	2,45,765
	ಶಿಗ್ಗಾಂವ	093	058920	1,14,815	1,14,815	3,48,727
	ಶಿರಹಟ್ಟಿ	083	094913	2,07,193	1,16,517	1,62,062
	ಹಾನಗಲಿ	145	077225	4,47,987	3,32,696	1,54,714
	ಕುಂದಗೋಳ	057	064859	1,68,673	3,14,000	1,34,625
					12,222	22,212
	ಒಟ್ಟು	440	349818	10,57,653	10,10,403	9,45,893

ಮೇಲೆ ವಿವರಿಸಿದ ಅಂಕಿ ಸಂಖ್ಯೆಗಳಿಂದ ಕೆಲವು ಸಂಗತಿಗಳು ಸ್ಪಷ್ಟವಾಗಿ ಕಂಡು ಬರುತ್ತವೆ. ಜಿಲ್ಲಾ ಮುಖ್ಯ ಸ್ಥಳವಾಗಿರುವ ಧಾರವಾಡವು ಉಪವಿಭಾಗದ ಮುಖ್ಯ ಸ್ಥಳವೂ ಆಗಿರುತ್ತದೆ. ಹೀಗಾಗಿ ಧಾರವಾಡ ಉಪವಿಭಾಗವು ಜಿಲ್ಲೆಯಾಗುವ ಪ್ರಶ್ನೆ ಉದ್ಭವಿಸುವುದಿಲ್ಲ. ಗದಗ, ಹಾವೇರಿ ಹಾಗೂ ಸವಣೂರು ಉಪವಿಭಾಗಗಳು ಜಿಲ್ಲೆಯ ಸ್ಥಾನಕ್ಕಾಗಿ ತಮ್ಮ ಬೇಡಿಕೆ ಮುಂಡಿಸುತ್ತವೆ. ಗದಗ ಉಪವಿಭಾಗವು ನಾಲ್ಕು ತಾಲ್ಲೂಕುಗಳನ್ನು 229 ಹಳ್ಳಿಗಳನ್ನು, 3,70,802 ಹೇಕ್ಟೇರುಗಳಷ್ಟು ಭೂ ಪ್ರದೇಶವನ್ನು ಹೊಂದಿದ್ದು 82 ರಿಂದ 85ರ ವರೆಗಿನ ಮೂರು ವರ್ಷಗಳ ಅವಧಿಯಲ್ಲಿ 24,46,165 ರೂಪಾಯಿಗಳಷ್ಟು ಭೂಕಂದಾಯವನ್ನು ರಾಜ್ಯ ಬೊಕ್ಕಸಕ್ಕೆ ನೀಡಿದೆ. ಹಾವೇರಿ ಉಪವಿಭಾಗವು 4 ತಾಲ್ಲೂಕುಗಳನ್ನು, 384 ಹಳ್ಳಿಗಳನ್ನು, 2.94,810 ಹೇಕ್ಟೆರುಗಳಷ್ಟು ಭೂಪ್ರದೇಶವನ್ನು ಹೊಂದಿದ್ದು 82 ರಿಂದ 85ರ ವರೆಗಿನ ಮೂರು ವರ್ಷಗಳ ಅವಧಿಯಲ್ಲಿ 13,43,187 ರೂಪಾಯಿಗಳಷ್ಟು ಭೂ ಕಂದಾಯವನ್ನು ರಾಜ್ಯ ಬೊಕ್ಕಸಕ್ಕೆ ನೀಡಿದೆ. ಆದರೆ ಸವಣೂರ ಉಪವಿಭಾಗವು 5 ತಾಲ್ಲೂಕುಗಳನ್ನು, 440 ಹಳ್ಳಿಗಳನ್ನು, 3,49,818 ಹೆಕ್ಟೆರುಗಳಷ್ಟು ಭೂ ಪ್ರದೇಶವನ್ನು ಹೊಂದಿದ್ದು 30,13.949 ರೂಪಾಯಿಗಳಷ್ಟು ಭೂಕಂದಾಯವನ್ನು 82 ರಿಂದ 85ರ ವರೆಗಿನ ಮೂರು ವರ್ಷ ಅವಧಿಯಲ್ಲಿ ರಾಜ್ಯ ಬೊಕ್ಕಸಕ್ಕೆ ನೀಡಿದೆ. ಪ್ರದೇಶ ಹಾಗೂ ಜನಸಂಖ್ಯಾ ದೃಷ್ಟಿಯಿಂದ ಗಮನಿಸಿದರೆ ಗದಗ ಹಾಗೂ ಹಾವೇರಿ ಉಪವಿಭಾಗಗಳು ಕೊಂಚಮಟ್ಟಿಗೆ ದೊಡ್ಡವೆನಿಸಿದರೂ ತಾಲ್ಲೂಕುಗಳು, ಹಳ್ಳಿಗಳು, ಭೂಪ್ರದೇಶ ಹಾಗೂ ಭೂಕಂದಾಯ ಇವೆಲ್ಲವುಗಳ ದೃಷ್ಟಿಯಿಂದ ಸವಣೂರು ಉಪವಿಭಾಗವು ದೊಡ್ಡದಾಗಿರುತ್ತದೆ ಗದಗ ಹಾಗೂ ಹಾವೇರಿ ನಗರಗಳು ವಾಣಿಜ್ಯ ಹಾಗೂ ಉದ್ದಿಮೆಗಳ ದೃಷ್ಟಿಯಿಂದ ಬೆಳವಣಿಗೆ ಹೊಂದಿರುವುದರ ಮೂಲಕ ಜನಸಂಖ್ಯೆಯಲ್ಲಿ ಹೆಚ್ಚಳ ಕಂಡು ಬರುವುದು ಸಹಜವಾಗಿರುತ್ತದೆ. ಆದರೆ ಸವಣೂರು ನಗರವು ವಾಣಿಜ್ಯೋದ್ದಿಮೆ ದೃಷ್ಟಿಯಿಂದ ಯಾವ ವಿಶೇಷ ಸೌಲಭ್ಯ ಪಡೆಯಲಿಲ್ಲ. ಹೀಗಾಗಿ ಅದು ಹಿಂದುಳಿಯಲು ಕಾರಣವಾಗಿರುತ್ತದೆ. ಆದರೆ, ಆಡಳಿತಾತ್ಮಕ ದೃಷ್ಟಿಯಿಂದ ವಿಚಾರಿಸಿದರೆ ಸವಣೂರು ಆಯಕಟ್ಟಿನ ಸ್ಥಳವಲ್ಲಿರುತ್ತದೆ. ಅದಕ್ಕೊಂದು ಐತಿಹಾಸಿಕ ಹಿನ್ನೆಲೆಯಿದೆ. ಮುಂಬಯಿ ಕರ್ನಾಟಕದಲ್ಲಿದ್ದ ಎಲ್ಲ ಸುಸ್ಥಾನಗಳಲ್ಲಿ ಸವಣೂರು ಸಂಸ್ಥಾನವು ಆಡಳಿತದಲ್ಲಿ ಉತ್ತಮ ಗುಣಮಟ್ಟವನ್ನು ಹೊಂದಿದ್ದ ಸಂಗತಿ ಎಲ್ಲರಿಗೂ ಗೊತ್ತಿರುವುದು. ಕೊನೆಯ ನವಾಬರಾದ ಮಜೀದಖಾನ ಅವರು 1912 ರಿಂದ 1948ರ ವರೆಗೆ ಅತ್ಯುತ್ತಮ ಆಡಳಿತಗಾರರೆಂದು ಪ್ರಖ್ಯಾತಿಯನ್ನು ಹೊಂದಿದ್ದರು. ಧಾರವಾಡದ ದಕ್ಷಿಣ ಭಾಗದಲ್ಲಿ ಅತ್ಯಂತ ಆಯಕಟ್ಟಿನ ಸ್ಥಳದಲ್ಲಿ ಸವಣೂರು ನೆಲೆಗೊಂಡಿದೆ. ಹೆದ್ದಾರಿಯ ಸೌಕರ್ಯ ಹಾಗೂ ವಾಣಿಜ್ಯೋದ್ದಿಮೆಗಳ ಸೌಲಭ್ಯಗಳನ್ನು ಹೊಂದಿದ ನಗರಗಳು ಬೆಳೆಯುವುದು ಸ್ವಾಭಾವಿಕ. ಆ ಸೌಕರ್ಯಗಳು ಸವಣೂರು ನಗರಕ್ಕಿರದಿದ್ದರೂ ಆಡಳಿತಾತ್ಮಕ ಅನುಕೂಲತೆಗಳನ್ನು ಅದು ಪಡೆದಿರುತ್ತದೆ. ಜಿಲ್ಲೆಯ ಕಾರ್ಯಾಲಯಗಳ ಸ್ಥಾಪನೆ

ಗಾಗಿ ಹಳೆಯ ಮಾಹಾಲಿ ಕಚೇರಿ ಹಾಗೂ ನವಾಬರ ಅರಮನೆ ಇವುಗಳಲ್ಲಿ ಸಾಕಷ್ಟು ಸ್ಥಳಾವಕಾಶವು ದೊರಕುತ್ತದೆ. ಈಗಾಗಲೇ ರಾಜ್ಯ ಸರಕಾರವು ಮಿನಿವಿಧಾನಸೌದ, ಕಟ್ಟಿಸಬೇಕೆಂಬ ಉದ್ದೇಶದಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದೆ. 18 ಸಾವಿರ 50 ಚದರ ಅಡಿ ವಿಸ್ತೀರ್ಣ ಹೊಂದಿದ ಕಟ್ಟಡವನ್ನು ಕಟ್ಟಿಸಲು ಉದ್ದೇಶಿಸಲಾಗಿದೆ. ಸುಮಾರು 16 ಲಕ್ಷ ರೂ.ಗಳಷ್ಟು ವೆಚ್ಚದಲ್ಲಿ ನಿರ್ಮಾಣ ಗೊಳ್ಳಲಿರುವ ಈ ಕಟ್ಟಡವು ಅನೇಕ ಕಚೇರಿಗಳ ಸಂಕೀರ್ಣವಾಗಲಿದೆ. ಇಷ್ಟರಲ್ಲಿಯೇ ಹತ್ತಿಯನ್ನು ಅರೆಯುವ ಹಾಗೂ ಅರಳೆಯನ್ನು ಒತ್ತುವ ಹಳೆಯ ಕಾರ್ಖಾನೆಯ ವಿಶಾಲವಾದ ಭೂಪ್ರದೇಶವನ್ನು ಸರ್ಕಾರವು ಸ್ವಾಧೀನಮಾಡಿಕೊಳ್ಳಲಿರುವುದು.

ಹುಂಡೇಕಾರ ಸಮಿತಿಯು ಈಗಾಗಲೇ ವಿಜಾಪೂರ ಜಿಲ್ಲೆಯನ್ನು ಒಡೆದು ಬಾಗಲಕೋಟೆಯನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ನಿರ್ಮಿಸಲೇಬೇಕೆಂಬ ಶಿಫಾರಸು ಗಳನ್ನು ಸಲ್ಲಿಸಿದೆ ಬಾಗಿಲುಕೋಟೆಗೆ ಸಮೀಪವಾಗಿರುವ ಗದುಗಿಗೆ ಮತ್ತೊಂದು ಜಿಲ್ಲೆಯನ್ನು ನಿರ್ಮಿಸುವುದು ಸಮಂಜಸವಾಗಲಾರದು.

ಆದುದರಿಂದ ಸವಣೂರ ಶಿಗ್ಗಾಂವ, ಶಿರಹಟ್ಟಿ, ಹಾನಗಲ್ಲ, ಕುಂದಗೋಳ ಹಾವೇರಿ, ರಾಣಿಬೆನ್ನೂರ ಹಾಗೂ ಬ್ಯಾಡಗಿ ಎಂಬ 8 ತಾಲ್ಲೂಕುಗಳಿಗೆ ಸವಣೂರು ಜಿಲ್ಲೆಯನ್ನು ನಿರ್ಮಿಸುವುದು ಸಮರ್ಪಕವೆನಿಸುತ್ತದೆ. ಆದರಂತೆಯೇ ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಧಾರವಾಡ, ಕಲಘಟಗಿ, ನವಲಗುಂದ, ಗದಗ, ರೋಣ, ಹಾಗೂ ಮುಂಡರಗಿ ಎಂಬ 8 ತಾಲ್ಲೂಕುಗಳನ್ನು ಒಳಗೊಳ್ಳಬೇಕು.

ಒಂದು ಜಿಲ್ಲೆಯು 8 ತಾಲ್ಲೂಕುಗಳಿಗಿಂತ ಹೆಚ್ಚು ಪ್ರದೇಶವನ್ನು ಹೊಂದಿರ ಬಾರದು ಎಂಬ ಅಭಿಪ್ರಾಯವನ್ನು ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆಯು ಹೊಂದಿರು ತ್ತದೆ. ಆದರೆ ಹುಂಡೇಕಾರ ಸಮಿತಿಯು 12 ತಾಲ್ಲೂಕುಗಳಷ್ಟು ಸಂಖ್ಯೆ ಸಮರ್ಪಕ ಎಂಬ ಅಭಿಪ್ರಾಯವನ್ನು ಹೊಂದಿರುತ್ತದೆ. ತಾಲ್ಲೂಕಿನ ಮುಖ್ಯಸ್ಥಳಗಳು ಜಿಲ್ಲೆಯ ಮುಖ್ಯಸ್ಥಳಕ್ಕೆ ಸಮೀಪವಾಗಿರಬೇಕು. ಧಾರವಾಡದಿಂದ ತಾಲ್ಲೂಕಿನ ಮುಖ್ಯಸ್ಥಳ ವಾದ ಹಿರೇಕೆರೂರ ಅತ್ಯಂತ ದೂರವಾಗಿರುತ್ತದೆ. ಆದುದರಿಂದ ಅದನ್ನು ಹೊಸದಾಗಿ ನಿರ್ಮಾಣಗೊಳ್ಳಲಿರುವ ದಾವಣಗೆರೆ ಜಿಲ್ಲೆಗೆ ವರ್ಗಾಯಿಸುವುದು ವಿಹಿತವೆನಿಸುತ್ತದೆ. ಭೌಗೋಲಿಕವಾಗಿ ಸಂಲಗ್ನವಾಗಿರುವ, ಆಡಳಿತಕಾರ್ಯಾನುಕೂಲತೆಯನ್ನು ಪಡೆದಿರುವ ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಹೊಂದಿರುವ ಎಲ್ಲ ಸ್ಥಳಗಳಿಗೆ ಪ್ರಮುಖಕೇಂದ್ರವಾಗಿರುವ ಸವಣೂರು ಜಿಲ್ಲೆಯಾಗಲು ಅತ್ಯಂತ ಆಯುಕಟ್ಟಿನ ಸ್ಥಳವಾಗಿರುತ್ತದೆ. ಜಿಲ್ಲಾ ನಿರ್ಮಾಣದಿಂದ ಒಂದು ಹಿಂದುಳಿದ ಭಾಗವು ಮುಂದುವರೆಯಲು ಅವಕಾಶಕಲ್ಪಿಸಿ ದಂತಾಗುತ್ತದೆ.

ನಿಂದೆಯನು ನುಡಿದರೂ ಸಂದ ಸಜ್ಜನ ಲೇಸು, ಹೊಂದಿಸಾಸಿರವ ಕೊಡುಕಿರ್ಸ ದುರ್ಜನರ ದಂದುಗವೇ ಬೇಡ.

—ಸರ್ವಜ್ಞ

ಬಂಗಾರದ ಸಂಸರ್ಗದಿಂದ ಗಾಜೂ ಮರಕತದ ಪ್ರಕಾಶವನ್ನು ಪಡೆಯುತ್ತದೆ. ಹಾಗೆಯೇ ಸಜ್ಜನರ ಸಹವಾಸದಿಂದ ಮೂರ್ಖನೂ ಪ್ರಾವೀಣ್ಯ ಪಡೆಯುತ್ತಾನೆ.

ಉತ್ಸಾಹವೇ ಬಲಿಷ್ಠವಾದುದು, ನ್ಯಾಯವಾದುದು, ಉತ್ಸಾಹಕ್ಕಿಂತ ಮಿಗಿಲಾದ ಬಲ ಇನ್ನೊಂದಿಲ್ಲ, ಉತ್ಸಾಹದಿಂದ ಆರಂಭ ಮಾಡಿದರೆ ಸಾಕು ಸಮಸ್ತ ಸಂಪತ್ತುಗಳೂ ಉಂಟಾಗುತ್ತವೆ.

—ರಾಮಾಯಣ

ಏಳಿಗೆಯನ್ನು ಇಚ್ಛಿಸುವ ವ್ಯಕ್ತಿ ನಿದ್ರೆ, ತೂಕಡಿಕೆ, ಭಯ, ಕ್ರೋಧ, ಆಲಸ್ಯ ಮತ್ತು ಸೋಮಾರಿತನ—ಈ ಆರು ದೋಷಗಳನ್ನು ದೂರ ಮಾಡಬೇಕು.

ಎಷ್ಟೇ ಬಲವಿದ್ದರೂ ಕೋಪವನ್ನು ಯಾರು ನಿಗ್ರಹಿಸುವುದಿಲ್ಲವೋ ಅವರ ಎಲ್ಲ ಶಕ್ತಿಸಂಪತ್ತುಗಳೂ ಕೃಷ್ಣಪಕ್ಷದ ಚಂದ್ರನ ಕಲೆಯಂತೆ ನಾಶವಾಗುವುದು.

—ಭಾರವಿ

ಮೂಲ: ಎಚ್. ಜಿ. ವೇಲ್ಸ್

ಅನು: ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಮುಂದುವರಿದುದು)

ರಾಷ್ಟ್ರಗಳ ಸಂಘದ ವೈಫಲ್ಯ

ರಾಷ್ಟ್ರಗಳ ಸಂಘ ಮೊದಲಾದಂದಿನಿಂದಲೂ ವಿಜಯಿಗಳ ಒಕ್ಕೂಟವೇ ಆಗಿತ್ತು. ವರ್ಸೈ ಕೌಲು ನಿರ್ಧರಿಸಿದ್ದ ಸರಹದ್ದುಗಳನ್ನು ಏನೂ ವ್ಯತ್ಯಾಸವಾಗದಂತೆ ಇಟ್ಟಿರುವುದೇ ಅದರ ಘೋಷಿತ ಉದ್ದೇಶವಾಗಿತ್ತು. ಆರ್ಥಿಕ ದುಷ್ಪರಿಣಾಮುಗಳ ಕಡೆ ಏನೂ ಗಮನ ಕೊಡದೆ ಕೇವಲ ದಂಡನೆ ವಿಧಿಸುವ ಮನೋಭಾವದಿಂದ ಈ ಸರಹದ್ದುಗಳನ್ನು ನಿರ್ಧರಿಸಿದ್ದರೆಂದು ಆಗಲೇ ನೋಡಿದ್ದೇವೆ. "ಯುದ್ಧ ಪರಿಹಾರ"ಕ್ಕಾಗಿ ಭಾರಿ ಮೊತ್ತದ ಹೊರೆಯನ್ನು ಸೋತ ರಾಷ್ಟ್ರಗಳ ಮೇಲೆ ಹೇರಲಾಯಿತು. ಫ್ರೆಂಚ್ ಮತ್ತು ಬ್ರಿಟಿಷ್ ವಿದೇಶಾಂಗ ಕಚೇರಿಗಳು ಸಿಕ್ಕಿದ್ದನ್ನು ದೋಚಿಕೊಳ್ಳುವ ತಮ್ಮ ಸಂಪ್ರದಾಯಕ್ಕೆ ಬೆಡಗಿನ ಮಾತುಗಳ ಬಣ್ಣ ಹಾಕಿದುವು. ಈ ಬಣ್ಣ ಅಂಥ ದಪ್ಪವಾಗೇನೂ ಇರಲಿಲ್ಲ. ಜರ್ಮನ್ ಸಾಮ್ರಾಜ್ಯದ ಸಮುದ್ರೋತ್ತರ ಪ್ರದೇಶಗಳು ಮತ್ತು ಚಿಂದಿಯಾಗಿ ಹೋಗಿದ್ದ ತುರ್ಕಿ ಸಾಮ್ರಾಜ್ಯದ ಅನೇಕ ಪ್ರದೇಶಗಳನ್ನು ಹಳೆಯ ಧಾಟಿಯಂತೆ ಇವು ನೇರವಾಗಿ ತಮ್ಮ ಸಾಮ್ರಾಜ್ಯಗಳಿಗೆ ಸೇರಿಸಿಕೊಳ್ಳಲಿಲ್ಲ ನಿಜ. ಆದರೆ ವಿಜೇತರಿಗೆ ಈ ಪ್ರದೇಶಗಳನ್ನು 'ಮ್ಯಾಂಡೇಟ್' ಮಾಡಿಕೊಡಲಾಯಿತು, ಅಂದರೆ ಅವರ 'ರಕ್ಷಣೆಗೆ' ಈ ಪ್ರದೇಶಗಳನ್ನು ಒಪ್ಪಿಸಿಕೊಡಲಾಯಿತು. 'ರಕ್ಷಣೆ' ಇದೆಂಥ ಒಳ್ಳೆಯ ಪದ! ರಾಷ್ಟ್ರಗಳ ಸಂಘ ಈ ಪ್ರದೇಶಗಳನ್ನು ತಾನು ತೆಗೆದುಕೊಂಡು ವಿಜೇತ ರಾಷ್ಟ್ರಗಳಿಗೆ ಒಪ್ಪಿಸಿಕೊಟ್ಟಿತು. ಮಿತ್ರ ರಾಷ್ಟ್ರಗಳಲ್ಲೂ ಹೀಗೆ ಕೊಳ್ಳೆ ಹಂಚಿಕೊಳ್ಳುವುದರಲ್ಲಿ ಅಂಥ ಸೌಜನ್ಯವೇನೂ ಕಾಣಲಿಲ್ಲ. ಕೊಳ್ಳೆಯ ಸಿಂಹಪಾಲು ಫ್ರಾನ್ಸ್ ಮತ್ತು ಬ್ರಿಟನ್ನಿಗೆ ದಕ್ಕಿತು. ಇಟಲಿ, ಗ್ರೀಸ್ ಮತ್ತು ಜಪಾನಿನ ಆಸೆ ಸರಿಯಾಗಿ ಪೂರೈಸಲಿಲ್ಲ. ಈ ಪರಿಸ್ಥಿತಿಯನ್ನು ಬ್ರಿಟನ್ ಮತ್ತಿತರ ಪ್ರಜಾಪ್ರಭುತ್ವಗಳಲ್ಲಿ ಅಲ್ಲಿಯ ಸಮಾಜವಾದಿ

ಗಳು, ಉದಾರವಾದಿಗಳು (Liberals) ನಿರ್ಭಿಡೆಯಿಂದ ಎದುರಿಸಲಿಲ್ಲ. ಇದರ ಪರಿಣಾಮವಾಗಿ ಪ್ರಪಂಚಾದ್ಯಂತ ಎರಡು ದಶಕಗಳ ಕಾಲ ಪ್ರಗತಿಗಾಮಿ ಶಕ್ತಿಗಳಿಗೆ ಜೋಮು ಹಿಡಿದಂತಾಯಿತು.

ಇದು ಹೇಗೆಂದರೆ ಬ್ರಿಟಿಷ್ ಮಕ್ಕಳಿಗೆ ಲೀಗ್ ಎಂದರೆ ಅಂತರ ರಾಷ್ಟ್ರೀಯ ನ್ಯಾಯದ ಮೂರ್ತರೂಪ, ಪ್ರಪಂಚ ಶಾಂತಿಗೆ ಇದು ಖಾತರಿಯಾದ ಸಾಧನ ಎಂದು ಕಲಿಸಿಕೊಡಲಾಗುತ್ತಿತ್ತು. ಹೀಗೆ ಹೇಳುವ ಪುಟ್ಟ ಪಠ್ಯಗ್ರಂಥಗಳನ್ನೇ ಪ್ರಕಟಿಸಿಯೂ ಆಯಿತು. ಪರ್ಸ್ಯಯ ಹಂಚಿಕೆಯಲ್ಲಿ ಸಾಕಷ್ಟು ಪಾಲು ಸಿಕ್ಕಿಲ್ಲದ ರಾಷ್ಟ್ರಗಳ ಮಕ್ಕಳಿಗೆ ಇಷ್ಟು ಸಮಾಧಾನಕರ—'ಮಾನಸಿಕ ಭೋಜನಗಳು' ದೊರೆಯಲಿಲ್ಲ ಹತ್ತೇವರ್ಷಗಳಲ್ಲಿ ವಿಜೇತ ರಾಷ್ಟ್ರಗಳ ಹೊರಗೆ–ಈ ರಾಷ್ಟ್ರಗಳ ಜನರನ್ನು ಈಗ ಜೆಪ್ಪುತಕ್ಕಡಿಗಳೆಂದು ಕರೆಯಬಹುದು–ಲಕ್ಷೋಪಲಕ್ಷ ಜರ್ಮನ್, ಹಂಗೇರಿಯನ್, ಇಟಾಲಿಯನ್ ಮತ್ತು ಜಪಾನೀ ಮಕ್ಕಳಿಗೆ ಮತ್ತು ಯುವ ಜನರಿಗೆ ಜಿನೀವಾ ವ್ಯವಸ್ಥೆಯನ್ನು ಹಿಂಸಾತ್ಮಕವಾಗಿಯಾದರೂ ಬದಲಾಯಿಸುವುದು ಅತ್ಯವಶ್ಯಕವೆಂದು ಬೋಧಿಸಲಾಯಿತು. ಯುವ ಜನತೆಯಲ್ಲಿ ಸಹಜವಾಗಿರುವ ಕಸುವು ಮತ್ತು ಭಾವನೆಗಳನ್ನು ಬೇಗ ಒಪ್ಪಿಕೊಳ್ಳುವ ಪ್ರವೃತ್ತಿಗಳಿಂದಾಗಿ ಈ ರಾಷ್ಟ್ರಗಳಲ್ಲಿ ತಮಗೆ ಅನ್ಯಾಯವಾಗಿದೆಯೆಂಬ ಅಸಮಾಧಾನದ ಪ್ರವಾಹ ವರ್ಷದಿಂದ ವರ್ಷಕ್ಕೆ ವೃದ್ಧಿಯಾಗುತ್ತಾ ಹೋಯಿತು. ಮತ್ತೊಂದು ಅಂತರ ರಾಷ್ಟ್ರೀಯ ಸ್ಫೋಟ ಆಗೇ ತೀರುವುದು ಎಂಬ ಅಂಶ ವಿದೇಶಾಂಗ ಕಚೇರಿಯ ತರಬೇತಿ ಪಡೆದ ಅಧಿಕಾರಿಗಳ ಹೊರತು ಮತ್ತೆಲ್ಲರಿಗೂ ಅರ್ಥವಾಗುತ್ತಿತ್ತು. ಆದರೆ ವಿವಿಧ ವಿದೇಶಾಂಗ ಕಚೇರಿಗಳು ಮಾತ್ರ ಮಹಾಯುದ್ಧದ ಸಮಯದಲ್ಲಿ ತಾವು ಕಿತ್ತುಕೊಂಡಿದ್ದ ಅನುಕೂಲತೆಗಳು ತಮಗೆ ಪ್ರಯೋಜನಕಾರಿಗಳೆಂದು ತಿಳಿದು ಭದ್ರವಾಗಿಟ್ಟುಕೊಂಡು ಕುಳಿತಿದ್ದುವು

ಈ ಸಂಘದ ಮೊದಲ ಸಮಿತಿ ಪ್ಯಾರಿಸ್ಸಿನಲ್ಲಿ 1920ರ ಜನವರಿ 10 ರಂದು ಸಂಧಿಸಿತು. ಆ ವೇಳೆ ಲಂಡನ್ ಹಾಗೂ ಬ್ರುಸೆಲ್ಸಿನಲ್ಲಿ ಅಂಥದೇ ಸಭೆಗಳು ನಡೆದ ನಂತರ ಕಡೆಗೆ ಆ ವರ್ಷ ಕಳೆಯುವಷ್ಟರಲ್ಲಿ ಇದರ ಕೇಂದ್ರ ಕಚೇರಿ ಜಿನೀವಾದಲ್ಲಿ ಸ್ಥಾಪಿತವಾಯಿತು. ಅಂದಿನಿಂದೀಚೆಗೆ ಈ ಸಭೆ ಯಾವಾಗಲೂ ಅಲ್ಲಿಯೇ ಸಂಧಿಸುತ್ತಿದೆ.

ಈ ಸಂಘ ಒಂದು ಸರಿಯಾದ ರೂಪ ಪಡೆಯುವುದಕ್ಕೆ ಮುಂಚೆಯೇ ವಿಲ್ಸನ್ ಸ್ಥಾಪಿಸಿದ ಈ ದೊಡ್ಡ ಹೆಸರಿನ ವ್ಯವಸ್ಥೆ ಅಂಥ ಪರಿಪೂರ್ಣವಾದದ್ದೇನೂ ಅಲ್ಲ ಎಂಬ ಸೂಚನೆಗಳು ಬಂದುವು. ಇದರ ಮುಂದಿನ ವರ್ಷದಲ್ಲಿ ಹಂಗೇರಿ, ಪೋಲೆಂಡ್, ಲಿಥುವೇನಿಯ ಸೈಬೀರಿಯ, ಫಿಯುಮೆ, ಟರ್ಕಿ, ಏಷ್ಯಮೈನರ್, ಸಿರಿಯಾ, ಮೊರಾಕೊ, ಬ್ರೆಜಿಲ್ ಮತ್ತು ಚೀನಗಳಲ್ಲಿ ಸಾಕಷ್ಟು ಘೋರವಾದ ಯುದ್ಧಗಳು ನಡೆದುವು. ಐರ್ಲೆಂಡಿನಲ್ಲಿ ಅಂತರ್ಯುದ್ಧ ನಡೆಯಿತು. ಆದರೂ ಇವುಗಳೆಲ್ಲ ಮಹಾ ಯುದ್ಧದ ಪರಿಣಾಮವಾಗಿ ಹರಡಿದ್ದ ದ್ವೇಷದ ಕಸವನ್ನು ಗುಡಿಸಿಹಾಕಿದ ಕಾರ್ಯಕ್ರಮಗಳೆಂದು ಭಾವಿಸಿಕೊಳ್ಳಬಹುದು.

ಗ್ರೀಕ್‌ದೇಶ ಟರ್ಕಿಯಮೇಲೆ ಸುವ್ಯವಸ್ಥಿತವಾಗಿ ದಾಳಿನಡೆಸಿತು. 1922ರ ಸೆಪ್ಟೆಂಬರಿನಲ್ಲಿ ಅಂಗೋರಾದ ಹೊರಗೆ ಈ ಸೈನ್ಯ ಪೂರ್ತಿ ಕುಸಿದುಹೋಯಿತು. ಏಷ್ಯಾಮೈನರ್ ಮತ್ತು ಥ್ರೇಸ್‌ಗಳಿಂದ ಗ್ರೀಕರೆಲ್ಲರನ್ನೂ ಟರ್ಕಿಯ ಕೆಮಾಲ್ ಪಾಷಾ ಹೊಡೆದೋಡಿಸಿದನು. ಸ್ಮೈರ್ನಾ ಪಟ್ಟಣವನ್ನು ಲೂಟಿಮಾಡಿ ಸುಟ್ಟು ಹಾಕಲಾಯಿತು. ಸಾವಿರಾರು ಜನ ಕಗ್ಗೊಲೆಗೀಡಾದರು. ಮಹಾಯುದ್ಧ ನಡೆಯುತ್ತಿರುವಾಗ ಕಾನ್‌ಸ್ಟಂಟಿನೋಪಲ್ಲನ್ನು ತ್ಸಾರನ ರಷ್ಯಕ್ಕೆ ಒಪ್ಪಿಸಿಕೊಡಬೇಕೆಂಬ ಒಪ್ಪಂದವಾಗಿತ್ತು. ಈ ತೊಡಕಿನಲ್ಲಿ ಸಿಕ್ಕಿಕೊಳ್ಳಲು ಸೋವಿಯತ್ ರಷ್ಯಾಗೆ ಇಷ್ಟವಿರಲಿಲ್ಲ. 1921 ರಲ್ಲಿ ಈ ಪ್ರಾಚೀನ ಸಾಮ್ರಾಜ್ಯ ಕೇಂದ್ರವನ್ನು ಇಂಗ್ಲಿಷ್ ಜನರಲ್ ವಿಲ್ಸನ ನೇತೃತ್ವದಲ್ಲಿ ಮಿತ್ರರಾಷ್ಟ್ರಗಳು ಆಕ್ರಮಿಸಿ ಕೊಂಡಿದ್ದುವು. ಗ್ರೀಕರು ಸೋತುಹೋದ ಬಳಿಕ ಸುದೀರ್ಘವಾದ ಸಮಾಲೋಚನೆಗಳ ನಂತರ ಇದನ್ನು ತುರ್ಕಿಗೆ ಲೋಸಾನ್ ಕೌಲಿನ ಪ್ರಕಾರ ಹಿಂತಿರುಗಿಸಲಾಯಿತು (1923). ಕೆಮಾಲನ ಮುಂದಾಳತ್ವದಲ್ಲಿ ತುರ್ಕಿಯಲ್ಲಿ ಕ್ಷಿಪ್ರಗತಿಯಲ್ಲಿ ಪಾಶ್ಚಾತ್ಯೀಕರಣ ನಡೆಯಿತು. ಹಳೆಸಂಪ್ರದಾಯದ ವಿಶಿಷ್ಟ ಕುರುಹುಗಳಾಗಿದ್ದ ಸುಲ್ತಾನ್‌ಗಿರಿ, ಫೆಜ್ ಟೋಪಿ, ಸ್ತ್ರೀಯರನ್ನು ಪ್ರತ್ಯೇಕವಾಗಿಡುವುದು ಇವುಗಳನ್ನು ರದ್ದುಮಾಡಲಾಯಿತು ತುರ್ಕಿ ಒಂದು ಪ್ರಜಾಪ್ರಭುತ್ವವಾಯಿತು. ಕಾನ್‌ಸ್ಟಾಂಟಿನೋಪಲ್ ತಿರುಗಿ ತುರ್ಕಿಯ ಕೈಸೇರಿದರೂ ಅಂಗೋರಾವೇ ಕೆಮಾಲನ ರಾಜಧಾನಿಯಾಗಿ ಉಳಿಯಿತು.

ವರ್ಸೈ ಕೌಲಿನ ನಂತರ ಕೆಲವು ವರ್ಷಗಳಕಾಲ ಜರ್ಮನಿ ತೀವ್ರ ಸಂಕಷ್ಟಕ್ಕೊಳಗಾಯಿತು. ಯುದ್ಧದಲ್ಲಿ ಸೋತವರು ತಪ್ಪೊಪ್ಪಿಕೊಳ್ಳಬೇಕೆಂದೂ ಗೆದ್ದವರಿಗೆ ಭಾರೀ ಪ್ರಮಾಣದಲ್ಲಿ ಪರಿಹಾರ ಕೊಡಬೇಕೆಂದೂ ಈ ಕೌಲು ವಿಧಿಸಿತ್ತು. ಈ ರಾಷ್ಟ್ರಗಳ ಇಡೀ ಜನತೆ ಒಂದು ಪೀಳಿಗೆಯಷ್ಟು ಕಾಲವಾದರೂ ಆರ್ಥಿಕ ಗುಲಾಮಗಿರಿಯಲ್ಲಿರಬೆಂಬುದೇ ಇದರ ಉದ್ದೇಶವಾಗಿದ್ದಂತಿತ್ತು. ಸೋತವರು ದುಡಿಯಬೇಕು, ಗೆದ್ದವರು ಉಣ್ಣಬೇಕು ಎಂಬಂತಿತ್ತು ಇದು. ಆದರೆ ಈ ವ್ಯವಸ್ಥೆಯಲ್ಲಿ ಒಂದು ತೊಡಕಿತ್ತು. ಈ ಭಾರೀ ಜುಲ್ಮಾನೆಹಣ ಸಂಪಾದಿಸಲು ಸೋತ ರಾಷ್ಟ್ರಗಳಿಗಿದ್ದುದು ಒಂದೇ ಮಾರ್ಗ, ರಫ್ತುವ್ಯಾಪಾರ. ಆದರೆ ಈ ರಾಷ್ಟ್ರಗಳು ದೊಡ್ಡ ಪ್ರಮಾಣದಲ್ಲಿ ಸರಕುಗಳನ್ನು ರಫ್ತುಮಾಡತೊಡಗಿದರೆ ಗೆದ್ದ ರಾಷ್ಟ್ರಗಳ ಉದ್ಯಮಗಳೆಲ್ಲ ಏರುಪೇರಾಗಿ ಹೋಗುತ್ತಿದ್ದುವು. ತಮ್ಮ ಕೈಗಾರಿಕಾ ಕೆಲಸಗಾರರ ಹಿತರಕ್ಷಣೆಗಾಗಿ ಈ ರಾಷ್ಟ್ರಗಳು ಆಮದು ಸುಂಕಗಳ 'ಕೋಟೆ' ಕಟ್ಟಿಕೊಂಡರು, ಜರ್ಮನರು ತಮ್ಮ ಮೇಲಿನ ಹೊಣೆ ಕಳೆದುಕೊಳ್ಳಲು ಶಕ್ತಿಮೀರಿ ಹಗಲಿರುಳೂ ದುಡಿಯಲೂ ಮನಸ್ಸು ಮಾಡಿದ್ದರೂ ಈ ಕೋಟೆಯನ್ನು ಭೇದಿಸಲು ಅವರಿಗೆ ಸಾಧ್ಯವಿರುತ್ತಿರಲಿಲ್ಲ. ಖರ್ಚಾಗದೆ ಉಳಿದ ಕೈಗಾರಿಕಾ ಉತ್ಪನ್ನಗಳು ಅವರೆದುರಿಗೇ ಬಿದ್ದಿರುತ್ತಿದ್ದುವು. ಹಣಸಲ್ಲಿಸುವುದೂ ಆಗುತ್ತಿರಲಿಲ್ಲ.

1920 ರಿಂದ 1930ರ ದಶಕದ ಯುರೋಪಿನ ಕತೆ ಹೀಗಿದೆ. ಘಾಸಿಗೊಂಡಿದ್ದ

ಜರ್ಮನಿ ಮತ್ತು ಆಸ್ಟ್ರಿಯಗಳ ಜನರು ಇಂಥ ಕಷ್ಟ ಸ್ಥಿತಿಯಲ್ಲೂ ಇದ್ದಿದ್ದರಲ್ಲಿ ಸಹನೀಯವೆನಿಸುವ ಸ್ಥಿತಿಗೇರಲು ದಯನೀಯ ರೀತಿಯಲ್ಲಿ ಮನಸ್ಸಿನಲ್ಲಿ ದ್ವೇಷ ತುಂಬಿದಂತೆಯೇ ಪ್ರಯತ್ನಿಸುತ್ತಿದ್ದುವು. ಈ ಜನರು ಜಯಿಸಲಸಾಧ್ಯವಾದ ತೊಡರುಗಳನ್ನು ಎದುರಿಸುತ್ತಿದ್ದರೆಂಬುದನ್ನು ಒಪ್ಪಿಕೊಳ್ಳುವುದಕ್ಕೂ ಇಂಗ್ಲೆಂಡು ಮತ್ತು ಫ್ರಾನ್ಸುಗಳು ಹಿಂತೆಗೆಯುತ್ತಿದ್ದುವು. ವರ್ಷಗಳು ಕಳೆದಂತೆ ಹೊಸ ಪೀಳಿಗೆಯ ಜರ್ಮನರು ಬೆಳೆಯುತ್ತಿದ್ದರು. ದ್ವೇಷ ಮತ್ತು ತೀವ್ರ ಅಸಮಾಧಾನ ಇವರಲ್ಲಿ ತುಂಬಿಕೊಂಡಿತು. ಈ ಅಸಮಾಧಾನ ಯಾವಾಗಲಾದರೂ ಸ್ಫೋಟವಾಗುವುದೊಂದೇ ಉಳಿದಿತ್ತು.

1918ರ ನವೆಂಬರಿನಲ್ಲಿ ಕೈಸರ್ ಹಾಲೆಂಡಿಗೆ ಓಡಿಹೋದನು ಅಲ್ಲಿಗೆ ಹಾಹೆನ್ ಜೋಲರ್ನ್ ವಂಶದ ಅಂತ್ಯವಾಯಿತು. ಪ್ರಜಾಪ್ರಭುತ್ವ ಸ್ಥಾಪಿಸಲು ಯತ್ನಗಳು ಮೊವಲಾದುವು. ಜರ್ಮನಿಯ ಆರ್ಥಿಕ ವ್ಯವಸ್ಥೆಯಲ್ಲಿ ವಿಪರೀತ ಏರುಪೇರಾಗಿ ಸಹಜವಾಗಿ ಅದು ಕರಾರಿಗೆ ತಕ್ಕಂತೆ ಹಣಕೊಡಲು ಸಾಧ್ಯವಾಗಲಿಲ್ಲ. ಪ್ವಾಂಕಾರೆಯ ಹಿಡಿತದಲ್ಲಿದ್ದ ಫ್ರಾನ್ಸ್ ನಿಷ್ಕರುಣೆಯಿಂದ ವರ್ಸೈ ಕೌಲಿನ ಅತ್ಯಂತ ನಿಷ್ಠುರ ನಿಯಮಗಳನ್ನು ವಿಧಿಸಿಯೇ ತೀರಬೇಕೆಂದು ದೃಢ ನಿಶ್ಚಯಮಾಡಿತ್ತು ಜರ್ಮನಿಯನ್ನು ಬಗ್ಗಿಸಿಡಬೇಕು; ಇದೇ ಆತನ ಜೀವನದ ಮಹದಾಕಾಂಕ್ಷೆಯೆನಿಸುತ್ತಿತ್ತು. ಜರ್ಮನ್ ಪ್ರದೇಶಗಳನ್ನು ಅಂಕೆಯಲ್ಲಿಡಲು ಅದೇ ಸಮಯದಲ್ಲಿ ವಿಜಯ ಶಾಲಿಗಳ ಸೈನ್ಯಗಳನ್ನು ಅಲ್ಲಿಡಲಾಯಿತು. ರುಹರ್ ಕಣಿವೆ ಪ್ರದೇಶಕ್ಕೆ ಸೆನೆಗಲ್ಲಿನಿಂದ ಕರೆಸಿದ ಕಪ್ಪು ಜನರ ಸೈನ್ಯ ತುಕಡಿಗಳನ್ನು ಕಳುಹಿಸಿದರು. ಜರ್ಮನಿಯಿಂದ ರ್‍ಹೈನಲ್ಯಾಂಡ್‌ನ್ನು ಬೇರ್ಪಡಿಸಿ ಅದನ್ನು ಗಣರಾಜ್ಯವೆಂದು ಕರೆದು ಅದನ್ನು ಫ್ರೆಂಚ್ ಮೇಲ್ವಿಚಾರಣೆಯಲ್ಲಿಡಲು ಪ್ರಯತ್ನಗಳು ನಡೆದುವು. ಹಲವಾರು ಕಡೆ ಕಮ್ಯೂನಿಸ್ಟ ದಂಗೆಗಳೂ ನಡೆದುವು. ಜನರಲ್ ಲುಡೇನ್ ಡಾರ್ಫ್‌ನ ನೇತೃತ್ವದಲ್ಲಿ ರಾಜಪ್ರಭುತ್ವವನ್ನು ಬೆಂಬಲಿಸುವ ಸರ್ವಾಧಿಕಾರಿ ಸರ್ಕಾರ ಒಂದೆರಡು ದಿನಗಳ ಮಟ್ಟಿಗೆ ಮ್ಯೂನಿಚ್‌ನಲ್ಲಿ ತಲೆಯೆತ್ತಿ ಬಳಿಕ ಮರೆಯಾಯಿತು. ಇಷ್ಟೆಲ್ಲ ಒತ್ತಡಗಳ ನಡುವೆ ಸಹಾ ಡಾ॥ ಸ್ಟ್ರೇಸ್‌ಮನ್ ಬರ್ಲಿನ್ನಿನಲ್ಲಿ ಅಧ್ಯಕ್ಷ ಎಬರ್ಟ್‌ನ ಕೆಳಗೆ ಭಾಗಶಃ ಆದರೂ ಉದಾರ ವಿಚಾರಗಳನ್ನುಳ್ಳ ಆಡಳಿತವನ್ನುಳಿಸಿಕೊಂಡು ಬರಲು ಕಷ್ಟಪಡುತ್ತಿದ್ದನು.

ಜರ್ಮನಿಯಲ್ಲಿನ ಈ ಎಲ್ಲ ಗೊಂದಲಗಳ ಮಧ್ಯೆ ಹೊಸದೊಂದು ಧ್ವನಿ ಕೇಳ ಬರಲಾರಭಿಸಿತು. ರೋಷಪೂರ್ಣ ಕರ್ಕಶ ಧ್ವನಿಯಾಗಿತ್ತು ಇದು. ವಿಲಿಯಮ್ ಗಟ್ಟಲೆ ಜರ್ಮನ್ನರ, ಅದರಲ್ಲೂ ದಿಗ್ಭ್ರಮೆ ಹೊಂದಿದ ದಿನದಿನಕ್ಕೆ ಹೆಚ್ಚುತ್ತಿದ್ದ ಯುದ್ಧಾನಂತರದ ಯುವಜನರ ಮನಸ್ಸಿನಲ್ಲಿದ್ದುದನ್ನು ಈ ಧ್ವನಿ ಬಿಚ್ಚಿಹೇಳುತ್ತಿತ್ತು. ಜರ್ಮನಿಗೆ ಎಲ್ಲರೂ ಮೋಸಮಾಡಿದ್ದಾರೆ, ದ್ರೋಹಬಗೆದಿದ್ದಾರೆ, ಇದೇ ಈ ಧ್ವನಿಯ ಪಲ್ಲವಿಯಾಗಿತ್ತು. ಎಷ್ಟೇ ಕಷ್ಟವಾದರೂ ಸರಿ, ಎಷ್ಟು ತ್ಯಾಗ ಮಾಡ

ಬೇಕಾಗಿದ್ದರೂ ಸರಿ 1914ರ ಹಿಂದಿದ್ದ ಹೆಮ್ಮೆಯ ಸ್ಥಾನಕ್ಕೆ, ಅಲ್ಲ ಇನ್ನೂ ಮೇಲಕ್ಕೆ ಜರ್ಮನಿಯನ್ನು ಏರಿಸಬೇಕು. ಜರ್ಮನಿ ಯುದ್ಧದಲ್ಲಿ ಸೋಲಲಿಲ್ಲ; ಜರ್ಮನಿ ಸೋಲುವುದೆಂದರೇನು, ಜರ್ಮನಿಯೊಳಗಿದ್ದ ಜನರೇ ದೇಶದ್ರೋಹ ಮಾಡಿದರು, ಅದರಲ್ಲೂ ಅಲ್ಲಿದ್ದ ಯಹೂದ್ಯರು, ಬುದ್ಧಿಜೀವಿಗಳು ಮತ್ತು ಕಮ್ಯೂನಿಸ್ಟರೇ ಈ ಕೆಲಸಮಾಡಿದ್ದು, ಜರ್ಮನ್ ಜನಾಂಗ ಪುನಃ ತನ್ನ ಪರಿಶುದ್ಧತೆಯನ್ನು ಗಳಿಸಬೇಕು. ಪುರಾತನ 'ಆರ್ಯನ್' ಟ್ಯೂಟನರ ಕಷ್ಟ ಸಹಿಷ್ಣು ಯೋಧಜೀವನಕ್ಕೆ ಹಿಂತಿರುಗ ಬೇಕು. ಹೀಗೆ ಘೋಷಿಸುತ್ತಿದ್ದ ವ್ಯಕ್ತಿ ಆಸ್ಟ್ರಿಯದ ಒಬ್ಬ ಚಿತ್ರಕಾರ, ಅಡಾಲ್ಫ್ ಹಿಟ್ಲರ್. ಜೀವನದಲ್ಲಿ ತೃಪ್ತಿಕರವಾದ ಭವಿಷ್ಯದ ಭರವಸೆಯೇ ಇಲ್ಲದಿದ್ದ ದಿನದಿನಕ್ಕೆ ಬೆಳೆಯುತ್ತಿದ್ದ ತರುಣ ವರ್ಗಕ್ಕೆ ಈ ಘೋಷಣೆಗಳು ಬಹು ಆಕರ್ಷಕವಾದವು. ಸದ್ಯದಲ್ಲಿಯೇ ಇದರ ಫಲವಾಗಿ ಒಂದು ಸಂಸ್ಥೆ ಹುಟ್ಟಿಬೆಳೆಯಿತು. ನ್ಯಾಷನಲ್ ಸೋಷಿಯಲಿಸ್ಟ್ ಪಾರ್ಟಿ ಎಂಬ ಒಂದು ಹೋರಾಟಪ್ರವೃತ್ತಿಯ ರಾಜಕೀಯ ಪಾರ್ಟಿಯಾಯಿತು.

ಯಹೂದ್ಯರ ಆರ್ಥಿಕ ಹಾಗೂ ಸಾಮಾಜಿಕ ಸ್ಪರ್ಧಾಮನೋಭಾವ ಮತ್ತು ರಾಷ್ಟ್ರೀಯತೆಯ ಬದಲು ಅಂತರರಾಷ್ಟ್ರೀಯ ಮನೋಭಾವವನ್ನಿಟ್ಟುಕೊಂಡು ತಮ್ಮದೇ ವೈಶಿಷ್ಟ್ಯಗಳನ್ನು ಪಟ್ಟುಹಿಡಿದು ಉಳಿಸಿಕೊಂಡು ಬರುತ್ತಿದ್ದುದು ಉಳಿದವರಿಗೆ ಕಿರಿಕಿರಿಯುಂಟುಮಾಡುತ್ತಿದ್ದುದಲ್ಲದೇ ಅವರೇ ಬೇರೆಯಾಗಿರುವಂತೆ ಮಾಡಿತ್ತು. ಅಲ್ಲದೆ ಉಳಿದ ಜನರಿಗೆ ಅವರಲ್ಲಿ ದ್ವೇಷಹುಟ್ಟಿ ಅವರನ್ನು ದೋಚ ಬೇಕೆಂದೂ ಎನ್ನಿಸುತ್ತಿತ್ತು. ದೋಷಪೂರ್ಣವಾದ ಸರ್ವಾಧಿಕಾರಿ ಆಡಳಿತ ಯಾವಾಗಲೂ ದೇಶಭಕ್ತಿಯ ಸೋಗಿನಲ್ಲಿ ಯಹೂದ್ಯರು ಮತ್ತು ಕಮ್ಯೂನಿಷ್ಟರ ಮೇಲೆ ದಾಳಿ ನಡೆಸುವುದರಿಂದ ಮೊದಲಾಗುತ್ತದೆ. 1932 ರಲ್ಲಿ ಹಿಟ್ಲರ್ ಜರ್ಮನ್ ಸಾಮ್ರಾಜ್ಯದ ಛಾನ್ಸೆಲರ್ ಆದನು. ಪರಮೋಚ್ಚ ಅಧಿಕಾರ ಅವನಿಗೆ ಕೈಯಳತೆ ಯಲ್ಲೇ ಇತ್ತು.

ಇಟಲಿಯಲ್ಲೂ ಇಂಥವೇ ವಿದ್ಯಮಾನಗಳು ನಡೆಯುತ್ತಿದ್ದು ಅವುಗಳಿಗೂ ಜರ್ಮನಿಯುವಕ್ಕೂ ಹೋಲಿಕೆ ವ್ಯತ್ಯಾಸಗಳೆರಡೂ ಇದ್ದುವು. (ಉದಾಹರಣೆಗೆ ಇಟಲಿಯಲ್ಲಿ ಯಾಹೂದ್ಯ ದ್ವೇಷವೇ ಪ್ರಧಾನವಾಗಿರಲಿಲ್ಲ.) ಈ ಎರಡೂ ಚಳುವಳಿ ಗಳೂ ಬೆಳೆಯುತ್ತಾ ಹೋದಂತೆ ಒಂದರಮೇಲೊಂದು ಹೆಚ್ಚು ಹೆಚ್ಚು ಪ್ರಭಾವ ಬೀರಿದುವು. ಮೂಲದಲ್ಲಿ ಇವೆರಡೂ ಸ್ವತಂತ್ರವಾಗಿ ಹುಟ್ಟಿದುವೇ. ಬೆನಿತೋ ಮುಸ್ಸೋಲನಿ ಇಟಲಿಯ ಮುಖಂಡ. ಹಿಟ್ಲರನ ಮತ್ತು ಇವನ ಸಾರ್ವಜನಿಕ ಜೀವನದ ಮೊದಲ ಹಂತಗಳಲ್ಲಿ ಇವರಿಗೆ ಒಬ್ಬರ ವಿಷಯ ಮತ್ತೊಬ್ಬರಿಗೆ ಗೊತ್ತಿದ್ದುದು ಬಹು ಸ್ವಲ್ಪ. ಮುಂದೆ ತಮಗಿದ್ದ ಸಾಮ್ಯಗಳು ತಿಳಿದುಬಂದಾಗ ಇಬ್ಬರಿಗೂ ಸ್ವಲ್ಪ ಆಶ್ಚರ್ಯವೇ ಆಯಿತು. ಇವರಿಬ್ಬರೂ ಅಂದಿನ ಸಾಮಾಜಿಕ ಬೆಳವಣಿಗೆಗಳ ಸಹಜಫಲಗಳು. ಅಂದರೆ ಹೀಗೆ ಆರ್ಥಿಕ ಇಕ್ಕಟ್ಟಿಗೆ ಸಿಕ್ಕಿದ ಎಲ್ಲ

ದೇಶಗಳಲ್ಲೂ ಜೀವನಕ್ಕೆ ಒಂದು ಗುರಿಯಿಲ್ಲದ ದಂಗೆಯೇಳುವ ಮನಸ್ಸುಳ್ಳ ಮಧ್ಯಮ ವರ್ಗದ ತರುಣರ ಒಂದು ಸ್ತರವಿರುತ್ತದೆ. ಇಂಥ ಸ್ತರವನ್ನು ಸಂಘಟಿಸಿ ಅದಕ್ಕೆ ಕೂಗಲು ಒಂದು ಬಾಯಿಕೊಟ್ಟವನು ಇವನು.

ಮುಸ್ಸೋಲಿನಿ ಮೊದಲು ಕ್ರಾಂತಿಕಾರಿ ಸಮಾಜವಾದಿಯಾಗಿದ್ದನು. "ಅವಾಂತಿ" ಎಂಬ ಸಮಾಜವಾದಿ ಪತ್ರಿಕೆಯ ಸಂಪಾದಕನೂ ಆಗಿದ್ದ ಈತ ಯುದ್ಧಕ್ಕೆ ಮೊದಲಿನ ಕಾಲದಲ್ಲೇ ಧೈರ್ಯಶಾಲಿಯೂ ಕಸುವುಳ್ಳವನೂ ಆದ ಮುಂದಾಳುವೆಂದು ಹೆಸರು ಪಡೆದಿದ್ದನು. ಹೋರಾಟದಲ್ಲಿ ಇಟಲಿಯು ಮಿತ್ರರಾಷ್ಟ್ರಗಳೊಂದಿಗೆ ಸೇರಿಕೊಳ್ಳಬೇಕೇ ಇಲ್ಲವೇ ಎನ್ನುವಲ್ಲಿ ವಾಮಸಂಘದ ಮಿತ್ರರನೇಕರೊಂದಿಗೆ ಭಿನ್ನಾಭಿಪ್ರಾಯ ಬಂದು ಅವರ ಸ್ನೇಹ ಬಿಟ್ಟುಹೋಯಿತು. ಈತ "ಅವಾಂತಿ"ಯ ಸಂಪಾದಕ ಸ್ಥಾನಕ್ಕೆ ರಾಜಿನಾಮೆಕೊಟ್ಟು ತನ್ನ ಅಭಿಪ್ರಾಯಗಳನ್ನು ತಿಳಿಸಲು ಇಲ್ ಪೊಪೊಲೋಡಿ ಇತಾಲಿಯಾ ಎಂಬ ಪತ್ರಿಕೆಯನ್ನು ಹೊರಡಿಸ ತೊಡಗಿದನು. ಯುದ್ಧದ ಸೈನ್ಯ ಕಾರ್ಯಾಚರಣೆಗಳಲ್ಲಿ ಇಟಲಿಗೆ ಅಂಥ ಪ್ರಖ್ಯಾತಿ ಸಿಕ್ಕಿರಲಿಲ್ಲ. ಯುದ್ಧವಾದ ಮೇಲೆ ಅಲ್ಲಿನ ಸಮಾಜದಲ್ಲಿ ಅವ್ಯವಸ್ಥೆಯಾಗಿತ್ತು. ಅಲ್ಲಲ್ಲೇ ಕಮ್ಯೂನಿಸ್ಟ ದಂಗೆಗಳೂ ನಡೆದಿದ್ದವು. ಸರ್ಕಾರ ದುರ್ಬಲವಾಗಿದ್ದು ಅದಕ್ಕೆ ನಿರ್ಧಾರ ಶಕ್ತಿ ಇರಲಿಲ್ಲ. ಅನೇಕ ವೀಕ್ಷಕರಿಗೆ ಅಲ್ಲಿ ಕಮ್ಯೂನಿಸ್ಟ್ ಕ್ರಾಂತಿ ಆಗುವುದೆನ್ನಿಸಿತ್ತು. ಮುಸ್ಸೋಲಿನಿಗೂ ದೇಶಪ್ರೇಮದ ಫಲವಾಗಿ ಸಂಕಟವಾಗುತ್ತಿತ್ತು. "ಕಪ್ಪು ಅಂಗಿಯವರು" ಫ್ಯಾಸಿಸ್ಟರು ಎಂಬ ಸದಸ್ಯರನ್ನುಳ್ಳ ಒಂದು ರಾಷ್ಟ್ರೀಯ ಚಳುವಳಿಯನ್ನು ಈತ ಸಂಘಟಿಸಿದನು. ಜನಸಾಮಾನ್ಯರ ಪಾತ್ರವಿರುವಂಥದಷ್ಟೇ ಅಲ್ಲದೆ ಆರ್ಥಿಕ ಕ್ಷೇತ್ರ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲೂ ನಿಯಂತ್ರಣವುಳ್ಳ ಸರಕಾರಕ್ಕಾಗಿ ಈ ಚಳುವಳಿ ಕೂಗೆಬ್ಬಿಸಿತು. ದೊಡ್ಡ ದೊಡ್ಡ ಉದ್ಯಮಗಳ ಒಡೆಯರು ಮತ್ತು ಹಣಕಾಸಿನ ವ್ಯವಹಾರಗಳಿಗೆ ಸಂಬಂಧಿಸಿದವರು ಇವನಿಗೆ ಸಾಕಷ್ಟು ಬೆಂಬಲಕೊಟ್ಟರು. "ಕೆಂಪು" ಕ್ರಾಂತಿಕಾರಿಗಳು ತಮ್ಮನ್ನು ಸುಲಿದುಬಿಡುತ್ತಾರೆಂದು ಇವರಿಗೆ ವಿಪರೀತ ದಿಗಿಲಿತ್ತು. ಅಲ್ಲದೆ ಈ ಸಾಹಸಿ ಮುಖಂಡ ಕೆಲಸಗಾರರ ಮುಷ್ಕರಗಳನ್ನು ಮುರಿದು ತಮಗೆ ಉಪಯುಕ್ತನಾದಮೇಲೆ ಅವನನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಬಲ್ಲೆವು ಎಂದು ಅವರು ಮೂರ್ಖರಂತೆ ನಂಬಿದರು. "ಕೆಂಪು" ಜನರಿಗೆ ಅವರು ಬಹುವಾಗಿ ಬೆದರಿದರು. "ಕಪ್ಪು" ಮನುಷ್ಯರನ್ನು ಅವರು ಸರಿಯಾಗಿ ಅಂದಾಜು ಮಾಡಲಿಲ್ಲ. ಆದರೆ ತನ್ನ ಸಾರ್ವಜನಿಕ ಜೀವನದ ಯಾವುದೇ ಹಂತದಲ್ಲೂ ಮುಸ್ಸೋಲಿನಿ ತಾನು ಖಾಸಗಿ ಬಂಡವಾಳದಾರರ ನೌಕರನೆಂದು ಕಾಣಿಸಿಕೊಳ್ಳುವ ಪ್ರವೃತ್ತಿ ತೋರಿಸಲಿಲ್ಲ. ಅವನ ಕಲ್ಪನೆಯ "ಸಮಗ್ರ ರಾಷ್ಟ್ರ"ದಲ್ಲಿ ಖಾಸಗಿ ಆರ್ಥಿಕ ಪ್ರಯೋಗಗಳ ಮೇಲೆ ಅತ್ಯಂತ ಕಟ್ಟುನಿಟ್ಟಿನ ನಿಯಂತ್ರಣ ಇರಬೇಕಾಗಿತ್ತು.

ಹಿಟ್ಲರನ ಚಳುವಳಿಗೆ ಕೆಲವು ವರ್ಷ ಮುಂಚೆಯೇ ಇವನ ಚಳುವಳಿ

ಬೆಳೆಯಿತು. ಜರ್ಮನಿಯಲ್ಲಿ ಮಧ್ಯಮ ವರ್ಗದ ತರುಣ ಪೀಳಿಗೆಯ ಜನರಲ್ಲಿ ಬಹುಭಾಗ ಯುದ್ಧದಲ್ಲಿ ಹತರಾಗಿದ್ದರು. ಇಟಲಿಯ ಪಟ್ಟಣಗಳಲ್ಲಿ ಹಾಗಾಗಿರಲಿಲ್ಲ. ಬಹುಶಃ ಇದೇ ಇಟಲಿಯಲ್ಲಿ ಚಳುವಳಿ ಬೆಳೆಯಲು ಕಾರಣವಿರಬೇಕು. ಕಪ್ಪು ಅಂಗಿಯವರಿಂದ ಲೂಟಿ ಹೊಡೆತ, ಬಡಿತ ಖೂನಿಗಳಿಂದ ಕೂಡಿದ ಭಯೋತ್ಪಾದಕ ಚಳುವಳಿ ಬೆಳೆದು "ವರ್ಗಕಲಹ ಮತಾಂಧರ" ಭಯೋತ್ಪಾದಕ ಚಟುವಟಿಕೆಗಳಿಗೆ ಎದುರು ಮದ್ದಾಗುವುದಷ್ಟೇ ಅಲ್ಲದೆ ಅವುಗಳನ್ನೂ ಮೀರಿಸಿತು. 1922 ರ ಅಕ್ಟೋಬರಿನಲ್ಲಿ "ರೋಂ ಚಲೋ" ಕಾರ್ಯಕ್ರಮ ನಡೆದು ಫ್ಯಾಸಿಸ್ಟರು ಯಾವ ಮುಚ್ಚುಮರೆಯಿಲ್ಲದೆ ಅಧಿಕಾರವನ್ನು ಕಿತ್ತುಕೊಂಡರು. ಇಲ್ಲಿಂದ ಮುಸ್ಸೋಲಿನಿ ಯಾವ ಅಡೆತಡೆಗಳಿಲ್ಲದೆ ಬೇಗ ಬೇಗನೆ ಮೇಲೇರಿದನು. ಸರ್ವಾಧಿಕಾರಬಲ ಹಿಟ್ಲರನಿಗಿಂತ ಹತ್ತು ವರ್ಷ ಮುಂಚೆಯೇ ಇವನ ಕೈಸೇರಿತು.

ಯೂರೋಪ್, ಚೈನಾ, ಜಪಾನ್‌ಗಳೆಲ್ಲದರಲ್ಲೂ ಇಂಥದೇ ಕಾರಣಗಳಿಂದಾಗಿ ಒಂದೇ ರೀತಿಯ ತಿಕ್ಕಾಟಗಳುಂಟಾಗಿ ಅವೆಲ್ಲ ಹೆಚ್ಚು ಕಡಿಮೆ ಒಂದೇ ರೀತಿಯ ಫಲ ಕೊಡುತ್ತಿದ್ದುವು. ತತ್ತ್ವಗಳಿಗೆ ಅತಿಪ್ರಾಮುಖ್ಯ ಕೊಟ್ಟು ಅವುಗಳಲ್ಲಿ ಯಾವ ಹೊಂದಾಣಿಕೆ ರಾಜಿಗಳಿಗೂ ಒಪ್ಪದ ಎಡಪಕ್ಷ (ವಾಮಪಂಥ)ಗಳವರು ಹಳೆಯ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆಗಳನ್ನು ಕೆಡಿಸುತ್ತಾ ತಮ್ಮಲ್ಲೇ ಕಚ್ಚಾಡುತ್ತಾ ಇದ್ದರು. ಇದರಿಂದ ಆಗಿದ್ದೇನೆಂದರೆ ಎಲ್ಲ ಕಡೆಯೂ ಮಿಲಿಟರಿ ಮುಂದಾಳುಗಳಿಗೆ ಸರ್ವಾಧಿಕಾರಿಗಳಿಗೆ ದರ್ಪಿಷ್ಠ ಮನುಷ್ಯರಿಗೆ ಮೇಲೇರುವ ದಾರಿ ಸುಗಮವಾಯಿತು. ವ್ಯಕ್ತಿಗಳ ಆಡಳಿತಗಳು ಪ್ರಾರಂಭವಾದುವು. ವಾಕ್ ಸ್ವಾತಂತ್ರ್ಯ ರಾಜಕೀಯ ಸ್ವಾತಂತ್ರ್ಯಗಳು ಎಷ್ಟರಮಟ್ಟಿಗೆ ತುಳಿಯಲ್ಪಟ್ಟುವೆಂದರೆ ವಾಮಪಂಥ ಸರ್ಕಾರಗಳಿದ್ದರೇ ಅದಕ್ಕಿಂತ ಉತ್ತಮವಾಗಿರುತ್ತಿತ್ತು. ಈ ಹೊಸ ಸರ್ಕಾರಗಳು ಯಾವ ಯಾವ ತತ್ತ್ವಗಳನ್ನು ಘೋಷಿಸುತ್ತಿದ್ದರೆಂಬುದು ಸ್ವಲ್ಪವೂ ಮುಖ್ಯವಾಗಿರಲಿಲ್ಲ. ಒಂದು ದೇಶದಲ್ಲಿ ಕಮ್ಯೂನಿಸಂ ಇದ್ದರೂ ಸರಿ, ಬೇರೆ ರೀತಿಯ ವ್ಯವಸ್ಥೆ ಇದ್ದರೂ ಸರಿ ಈ ಮುಂದಾಳುಗಳು ಏನು ಮಾಡುತ್ತಿದ್ದರೆಂಬುದೇ ಮುಖ್ಯ ವಾಗಿತ್ತು. ಈ ಸರ್ವಾಧಿಕಾರಿಗಳು ನ್ಯಾಯವಿರುದ್ಧ ಮಾರ್ಗಗಳಿಂದ ಮೇಲೇರುವಾಗ ಎಡಪಂಥದ ಸಹಾಯಪಡೆದರೋ ಬಲಪಂಥದ ಸಹಾಯಪಡೆದರೋ ಅವೆಲ್ಲ ಮುಖ್ಯ ವಾಗಿರಲೇ ಇಲ್ಲ. ಇವೆಲ್ಲದರ ಒಟ್ಟು ಫಲಿತಾಂಶ ಒಂದೇ ಆಯಿತು. ಇವರು ಇದ್ದಲ್ಲೆಲ್ಲ ವೈಜ್ಞಾನಿಕ ಕ್ರಿಯಾಶೀಲತೆ ಮತ್ತು ವಿಶ್ವಮಾನವೀಯತೆಯ ಆದರ್ಶಗಳು ಬಿದ್ದುಹೋದುವು. ಯೋಧವೃತ್ತಿಯೇ ಮುಖ್ಯವೆನ್ನುವ ರಾಷ್ಟ್ರೀಯತೆಯೇ ಪ್ರಧಾನ ವಾದ ರಾಷ್ಟ್ರಗಳು ಅವತಾರವೆತ್ತಿದುವು. ಸರ್ವಾಧಿಕಾರ ಇದ್ದ ರಾಷ್ಟ್ರಗಳಲ್ಲೆಲ್ಲ ರಷ್ಯಾ ಎಲ್ಲಕ್ಕಿಂತ ಹೆಚ್ಚಾಗಿ ಶಾಂತಿ ಬಯಸುತ್ತಿದ್ದು ತನ್ನ ಸರಹದ್ದುಗಳನ್ನು ವಿಸ್ತರಿಸುವ ಗೊಡವೆಗೆ ಹೋಗದೆ ತೃಪ್ತಿಯಿಂದಿತ್ತು ಮತ್ತು ಲೀಗ್ ಎಷ್ಟೇ ದುರ್ಬಲವಾಗಿದ್ದರೂ ಅದರೊಡನೆ ಸಹಕರಿಸಲು ಸಿದ್ಧವಾಗಿತ್ತು. ಕೆಟ್ಟದಾಗಿ ಕಟ್ಟಿದ್ದ

ಈ ಸಂಸ್ಥೆಯನ್ನು ಜರ್ಮನಿ, ಇಟಲಿ ಮತ್ತು ಜಪಾನುಗಳು ಹೆಚ್ಚು ಹೆಚ್ಚು ತಿರಸ್ಕಾರದಿಂದ ನೋಡತೊಡಗಿದುವು.

ಜಪಾನು ಆಗಲೇ ಶಸ್ತ್ರೀಕರಣ ನಡೆಸಿತ್ತು. ಯುದ್ಧದಲ್ಲಿ ಇದು ಗೆದ್ದ ರಾಷ್ಟ್ರವಾದುದರಿಂದ ಇಲ್ಲಿ ನಿಶ್ಶಸ್ತ್ರೀಕರಣ ಆಗಿರಲಿಲ್ಲ. ಅಲ್ಲಿನ ಅಶಾಂತ ಯುವಕರ ದೃಷ್ಟಿಯನ್ನು ಬೇರೆಕಡೆ ತಿರುಗಿಸಲು ಅಗಾಧ ಅವ್ಯವಸ್ಥೆಯಿದ್ದ ಚೀನದಮೇಲೆ ಜಪಾನು ದಾಳಿ ನಡೆಸಿತು. ಇದೇ ಉದ್ದೇಶದಿಂದ ಜರ್ಮನಿ ಇಟಲಿಗಳ ಸರಕಾರಗಳು ಅಲ್ಲಿಯ ತರುಣ ಪೀಳಿಗೆಗಳು ತಮ್ಮ ದೇಹಬಲ ಹೆಚ್ಚಿಸಿಕೊಳ್ಳುವುದು, ಶಿಸ್ತನ್ನು ಉತ್ತಮಗೊಳಿಸುವುದು ಇಂತಹ ಕಾರ್ಯಕ್ರಮಗಳಲ್ಲಿ ಆಸಕ್ತರಾಗುವಂತೆ ಮಾಡಲು ಶ್ರಮಿಸಿದುವು ಮತ್ತು ತಮ್ಮ ವಾಯುಪಡೆಯನ್ನು ಚೆನ್ನಾಗಿ ಬೆಳೆಸಿದುವು. ಜರ್ಮನಿಯ ಶಸ್ತ್ರೀಕರಣ ವರ್ಸೈಕರಾರಿಗೆ ವಿರುದ್ಧವಾಗಿತ್ತು. ಇಟಲಿಗೆ ಅಂಥ ನಿರ್ಬಂಧವೇನೂ ಇರಲಿಲ್ಲ. ಈ ಮೂರು ದೇಶಗಳ ಶಾಲೆಗಳಲ್ಲಿ ಹಾಗೂ ಪತ್ರಿಕಾ ಪ್ರಪಂಚದಲ್ಲಿ ಯೋಧ ಮನೋವೃತ್ತಿ ಮತ್ತು ಆಕ್ರಮಣ ಪ್ರವೃತ್ತಿಗಳನ್ನು ಒಂದೇ ಮನಸ್ಸಿನಿಂದ ಘೋಷಿಸಿಕೊಂಡು ಬರಲಾಯಿತು.

ಯುರೋಪಿನ ಕೆಲವು ಭಾಗಗಳಲ್ಲಿ ಲೀಗ್ ವಿಧಿಸಿದ ಸರಹದ್ದುಗಳು ಸರಿಯಾಗಿ ಜಾರಿಗೆ ಬರಲೇ ಇಲ್ಲ. ಲಿಥುವೇನಿಯಕ್ಕೆ ಕೊಟ್ಟಿದ್ದ ಎಲ್ನಗೋಸ್ಕರ ರಷ್ಯನರು, ಪೋಲರು ಮತ್ತು ಲಿಥುವೇನಿಯನರು ಹೊಡೆದಾಡಿದರು. ಕಡೆಗೆ ಅದು ಪೋಲರ ಕೈಯಲ್ಲಿ ಉಳಿದುಕೊಂಡಿತು. ಇದಕ್ಕೆ ಪರಿಹಾರವೆಂಬಂತೆ 1923 ರಲ್ಲಿ ಲಿಥುವೇನಿಯ ಲೀಗಿನ ಫ್ರೆಂಚ್ ಠಾಣ್ಯದ ವಶದಲ್ಲಿದ್ದ ಮೆಮೆಲ್ ಬಂದರು ಮತ್ತು ಊರನ್ನು ಕಿತ್ತುಕೊಂಡು ತನ್ನ ವಶದಲ್ಲೇ ಇಟ್ಟುಕೊಂಡಿತು.

ಹೀಗೆ ಲೀಗಿನ ವಿಧಿನಿಯಮಗಳನ್ನು ಉಲ್ಲಂಘಿಸುವ ಪ್ರವೃತ್ತಿ ಗ್ರೀಸ್–ಆಲ್ಬೇನಿಯಗಳ ಸರಹದ್ದು ನಿರ್ಣಯ ಸಂದರ್ಭದಲ್ಲಿಯೂ ಕಾಣಿಸಿಕೊಂಡಿತು. ಈ ಸರಹದ್ದನ್ನು ನಿರ್ಣಯಿಸಲು ವಿಧಿಸಿದ್ದ ನಿಯೋಗದಲ್ಲಿದ್ದ ಇಟ್ಯಾಲಿಯನ್ ಜನರಲ್ ಒಬ್ಬನನ್ನು ಗ್ರೀಸಿನ ತಂಡವೊಂದು ಕೊಲೆ ಮಾಡಿತು. ಬಳಿಕ ಇಟಲಿ ಪರವಾನಿಗೆ ಪತ್ರಕ್ಕೆ ಕಾಯದೆಯೇ ಕಾರ್ಫುವಿನಮೇಲೆ ಬಾಂಬುದಾಳಿ ನಡೆಸಿ ತನ್ನ ನಷ್ಟ ಭರ್ತಿ ಮಾಡಬೇಕೆಂದು ಕೇಳಿತು. ಇಷ್ಟೆಲ್ಲ ಆದಮೇಲೆ ಲೀಗು ಇಟಲಿಯ ಈ ಕೃತ್ಯಕ್ಕೆ ಸಮ್ಮತಿಕೊಟ್ಟು ಅದಕ್ಕೆ ನ್ಯಾಯದ ಬಣ್ಣ ಕೊಟ್ಟಿತು.

ಇಂಥ ಅಶಾಂತತೆಯ ಮತ್ತೊಂದು ಕೇಂದ್ರ ಫಿಯುಮೆ. ಇದು ಕ್ರೋಷಿಯಕ್ಕೆ ಸೇರಿದ್ದೆಂದು ವಿಧಿಸಲಾಗಿತ್ತು. 1919 ರಲ್ಲಿ ಇದರಮೇಲೆ ರಂಗುರಂಗಿನ ವ್ಯಕ್ತಿತ್ವದ ಡಿಲನ್ನಂಜಿಯೋ ಎಂಬ ಕವಿಯ ನೇತೃತ್ವದಲ್ಲಿ ಒಂದು ದುಂಡಾವರ್ತಿಯ ದಳ ಧಾಳಿ ಮಾಡಿತು. ಈ ಸ್ಥಳದ ಸ್ವಾಮ್ಯ ಹಲವಾರು ಬಾರಿ ಬದಲಾಗಿ 1924ರಲ್ಲಿ ಕಡೆಗೆ ಖಾಯಮ್ಮಾಗಿ ಇದು ಇಟಲಿಗೆ ಸೇರಿತು. ಇವೆಲ್ಲ ಸಣ್ಣ ಸಂಗತಿಗಳಾದರೂ ಲೀಗಿನ ಶಾಸನಗಳಮೇಲೆ ಇದ್ದ ಗೌರವ ಅದೆಷ್ಟು ಸತ್ವಹೀನವಾಗಿತ್ತು ಎಂಬುವಕ್ಕೆ ಮುನ್ನೆಚ್ಚರಿಕೆಯ ಸಂಕೇತಗಳಾಗಿದ್ದುವು.

ಲೀಗ್ ವಿಧಿಸಿದ ಪ್ರಪಂಚ ವ್ಯವಸ್ಥೆ ಅದೆಷ್ಟು ಅವಾಸ್ತವಿಕವಾಗಿತ್ತು ಎಂಬುದು ದೊಡ್ಡ ಪ್ರಮಾಣದಲ್ಲಿ ಮೊದಲು ತಿಳಿದುಬಂದಿದ್ದು ದೂರ ಪೂರ್ವದಲ್ಲಿ 400 ಮಿಲಿಯನ್ ಜನರಿದ್ದ ಸಮಾಜ ಚೀನ. ಅಲ್ಲಿ ಒಂದೇ ಪೀಳಿಗೆಯಲ್ಲಿ ಪುರಾತನವಾದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಹಂದರ ಕುಸಿದುಹೋಗಿತ್ತು. ಲೀಗನ್ನು ಸ್ಥಾಪಿಸಿ ನಡೆಸುತ್ತಿದ್ದ ಗಣ್ಯರಾದ ಪಾಶ್ಚಾತ್ಯ ರಾಜನೀತಿ ತಜ್ಞರಿಗೆ ಮತ್ತು ರಾಜಕೀಯ ವ್ಯಕ್ತಿಗಳಲ್ಲಿ ಒಬ್ಬರಿಗೂ ಸಹ ಚೀನಕ್ಕೇ ವಿಶಿಷ್ಟವಾದ ಸಮಸ್ಯೆಗಳ ಬಗ್ಗೆ ಏನೂ ತಿಳಿವಳಿಕೆ ಇದ್ದಂತೆ ಕಾಣುತ್ತಿರಲಿಲ್ಲ. ಇವರೆಲ್ಲ ಎಂದುಕೊಂಡಿದ್ದುದು ಚೀನವು ಫ್ರಾನ್ಸ್, ಬ್ರಿಟನ್, ಜರ್ಮನಿಗಳಂತೆ ಒಂದೇ ವ್ಯಕ್ತಿತ್ವವುಳ್ಳ ಒಗ್ಗಟ್ಟಿನ ನ್ಯಾಯಬದ್ಧ ಅಸ್ತಿತ್ವವೆಂದು. ಈ ದೇಶ ಯೂರೋಪಿನ ದೇಶಗಳಂತೆ ನ್ಯಾಯಾಲಯಗಳಲ್ಲಿ ವ್ಯವಹಾರ ನಡೆಸುವುದು, ಕರಾರು ಮಾಡಿಕೊಂಡು ಅದಕ್ಕೆ ಬದ್ಧವಾಗಿರುವುದು, ಸಾಲಕೊಡುವುದು ಕೊಳ್ಳುವುದು, ಶಿಕ್ಷೆಗೆ ಒಪ್ಪಿಕೊಳ್ಳುವುದು ಇಂಥ ವ್ಯವಹಾರಗಳಲ್ಲಿ ಪಾಲ್ಗೊಳ್ಳಲು ಶಕ್ತವೆಂದು ಅವರು ತಿಳಿದಿದ್ದರು. ಚೀನದ ಸಾರ್ವತ್ರಿಕ ಅವ್ಯವಸ್ಥೆಯ ನಡುವೆ ಸಹ ಕೆಲವರು ವಿದ್ಯಾವಂತ ಚೀನಿಯರು "ಚೀನೀ ರಾಷ್ಟ್ರ"ವೆಂಬ ಹೊಸ ರೀತಿಯ ಕಲ್ಪನೆಯನ್ನು ಬೆಳೆಸಿಕೊಳ್ಳಲು ಯತ್ನಿಸಿದರು. 1912ರ ಬಳಿಕ ಕೆಲವು ವರ್ಷಗಳಕಾಲ ಕೊಮಿನ್‌ಟಾಂಗ್ ಎಂಬ ಒಂದು ಸಂಸ್ಥೆ ಈ ದೇಶದಲ್ಲಿ ಆಧುನಿಕ ರೀತಿಯ ಸ್ವದೇಶ ಪ್ರೇಮವನ್ನು ತರಲು ಹೆಣಗಿತು. ಈ ವಿಶಾಲವಾದ ದೇಶದಲ್ಲಿ ಸಹಜವಾಗಿಯೇ ಅಭಿಪ್ರಾಯ ಭೇದಗಳೂ ವಿವಿಧ ಪ್ರದೇಶಗಳಲ್ಲಿ ಸ್ಥಳೀಯ ಅಭಿಮಾನಗಳೂ ಅಲ್ಲದೆ ದರೋಡೆಕಾರರು ಪ್ರಬಲಗೊಳ್ಳುವ ಸಾಧ್ಯತೆಗಳೂ ಇದ್ದುವು. ಇಷ್ಟೆಲ್ಲ ಸಾಲದೆಂಬಂತೆ ಒಂದು ಸಂಗತಿ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿತು. ಯುದ್ಧಕ್ಕೆ ಮುಂಚೆ ಷಾಂಟುಂಗ್ ಪ್ರಾಂತವನ್ನು ಜರ್ಮನಿ ವಶಪಡಿಸಿಕೊಂಡಿತ್ತು. ರಾಷ್ಟ್ರೀಯ ಮನೋಭಾವನೆಗಳಿಗೆ ಪುರಸ್ಕಾರ ಕೊಡಬೇಕೆಂದು ಲೀಗ್ ಹೇಳಿಕೊಳ್ಳುತ್ತಿದ್ದರೂ ಅದಕ್ಕೆ ವಿರುದ್ಧವಾಗಿ ಈ ಪ್ರಾಂತವನ್ನು ಜಪಾನಿಗೆ ಕೊಡಲಾಯಿತು. ಈ ಪ್ರಾಂತವನ್ನು ಮೊದಲು ಬಿಟ್ಟುಕೊಟ್ಟರೂ ತಿರುಗಿ ಅದನ್ನು ಆಕ್ರಮಿಸಿಕೊಳ್ಳಲಾಯಿತು. ಆಧುನೀಕರಣ ಮಾಡಬೇಕೆಂದಿದ್ದ ಸನ್-ಯಾತ್-ಸೆನ್, ಕ್ರೈಸ್ತ ಜನರಲ್ ಫೆಂಗ್, ಚಕ್ರವರ್ತಿಯ ಸಿಂಹಾಸನದ ಮೇಲೆ ಕಣ್ಣಿಟ್ಟಿದ್ದ ಮಂಗೋಲ್ ಸಂತತಿಯ ಚಾಂಗ್ ತ್ಸೊಲಿನ್ ಇಂಥ ಮುಖಂಡರ ಚಟುವಟಿಕೆಗಳು, ಪೀಕಿಂಗ್, ನ್ಯಾನ್‌ಕಿಂಗ್ ಮತ್ತು ಕ್ಯಾಂಟನ್ ನಗರಗಳ ನಡುವೆ ಸರಕಾರದ ಸ್ಥಳ ಪಲ್ಲಟಗಳು, ವಿದೇಶೀಯರ ವಿರುದ್ಧ ಸ್ಥಳದ ಜನರ ಕೆರಳುವಿಕೆ, ಈ ಎಲ್ಲ ಗೊಂದಲಗಳ ಮಧ್ಯೆ ಸೋವಿಯತ್ ರಷ್ಯ ಮತ್ತು ಜಪಾನಿನ ಹಸ್ತಕ್ಷೇಪಗಳು ಈ ಎಲ್ಲ ಆಗುಹೋಗುಗಳನ್ನು ಇಲ್ಲಿ ವಿವರವಾಗಿ ಹೇಳಲು ಸ್ಥಳ ಸಾಲದು. ಆದರೆ ಈ ದೇಶದಲ್ಲಿ ಜಪಾನ್ ಪ್ರಮುಖ್ಯ ಆಕ್ರಮಣಕಾರಿ ರಾಷ್ಟ್ರವಾಗಿತ್ತೆಂಬುದು, ಯುದ್ಧ ಪೂರ್ವದ ಸಾಮ್ರಾಜ್ಯವಾದಕ್ಕನುಸಾರವಾಗಿ ಪೂರ್ವ ಏಷ್ಯದಲ್ಲೇ ತಾನೇ ಮೇಲೇರಬೇಕೆಂಬುದೇ ಅದರ

ಉದ್ದೇಶವಾಗಿತ್ತೆಂಬುದೂ ಕ್ರಮೇಣ ಸ್ಪಷ್ಟವಾಗುತ್ತಾ ಬಂತು. 1932 ರಲ್ಲಿ ಮಂಚೂರಿಯವನ್ನು ಚೀನದಿಂದ ಬೇರೆಮಾಡಿ ಜಪಾನಿನ ನಿಯಂತ್ರಣದಲ್ಲಿರತಕ್ಕ ಸಂರಕ್ಷಿತ ರಾಜ್ಯವೆಂದು ವ್ಯವಸ್ಥೆ ಮಾಡಲಾಯಿತು.

ಇದೇ ಸಮಯದಲ್ಲಿ ವಿಮಾನಯಾನ ಒಂದೇ ಸಮನೆ ಅಭಿವೃದ್ಧಿಹೊಂದುತ್ತಲಿದ್ದು ಯುದ್ಧಗಳಲ್ಲಿ ಅದರ ಉಪಯೋಗದ ಸಾಧ್ಯತೆ ಹೆಚ್ಚುತ್ತಿತ್ತು. ಇದರಿಂದ ಪ್ರಪಂಚದ ಎಲ್ಲ ಕಡೆಗಳಲ್ಲೂ ಅಂತರರಾಷ್ಟ್ರೀಯ ಸಂಬಂಧಗಳು ಬದಲಾಗಿ ಮತ್ತೂ ಹದಗೆಡುತ್ತಿದ್ದುವು. ಹಳೆಯ ವಿದೇಶಾಂಗ ಕಚೇರಿಗಳಾವುವೂ ಹಳೆಯ ವಿಧಾನದ ಸಮುದ್ರಯುದ್ಧ ಮತ್ತು ಭೂಯುದ್ಧಗಳು ಈ ಹೊಸ ಸಾಧನಗಳಿಂದ ಬದಲಾಗುವುವೆಂಬುದನ್ನು ಒಪ್ಪಿಕೊಳ್ಳಲು ಸಿದ್ಧವಾಗಿರಲಿಲ್ಲ. ಜಲಾಂತರ್ಗತ ನೌಕೆ ಆಗಲೇ ಹಳೆ ಫ್ಯಾಷನ್ ಆಗಿತ್ತು. ತೀವ್ರವೇಗದ ಬಾಂಬರ್ ವಿಮಾನ ಅದರ ಸ್ಥಾನ ಪಡೆದಿತ್ತು. ಭೂ ಯುದ್ಧದಲ್ಲಿ ಒಂದು "ಸಂಗ್ರಾಮ ಮುಖ" ಸ್ಥಾಪನೆ, ಜಲಮಾರ್ಗಗಳ ಉಪಯುಕ್ತತೆ, ಇಂತಹ ಹಳೆ ಕಲ್ಪನೆಗಳಿಗೆ ಬೆಲೆ ಉಳಿದಿರಲಿಲ್ಲ. ಸೇಡು ತೀರಿಸಿಕೊಳ್ಳಬೇಕೆಂದಿದ್ದ ಹಾಗೂ ಆಕ್ರಮಣಕಾರಿ ಪ್ರವೃತ್ತಿಯುಳ್ಳ ರಾಷ್ಟ್ರಗಳು ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಬೇಗ ಬೇಗ ಗುಟ್ಟಾಗಿ ತಮ್ಮ ವಿಮಾನದಳವನ್ನು ಚೆನ್ನಾಗಿ ಬೆಳೆಸಿದರು. "ಹೆಡ್ಡತನದ ದಶಕ"ವೆನ್ನಬಹುದಾದ ಈ ಶತಮಾನದ ಮೂರನೆ ದಶಕದಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ಯುದ್ಧ ಸಿದ್ಧತೆಯಲ್ಲಿ ನಿರ್ವಿವಾದವಾಗಿ ಅತ್ಯುನ್ನತ ಸ್ಥಿತಿಯಲ್ಲಿದ್ದುವು. ಅದೇ "ದಿಗಿಲಿನ ದಶಕ"ವೆನ್ನಬಹುದಾದ ನಾಲ್ಕನೆ ದಶಕದಲ್ಲಿ ವಾಯುದಳದಲ್ಲಿ ತಾವು ಹಿಂದೆ ಬಿದ್ದೆವೆಂಬುದು ಈ ರಾಜ್ಯಗಳಿಗೆ ಹಠಾತ್ತಾನೆ ತಿಳಿದುಬಂದಿತು. ಹಿಟ್ಲರ್ ಮತ್ತು ಗೋರಿಂಗರ ನೇತೃತ್ವದ ಹೊಸ ಜರ್ಮನಿ ಮತ್ತು ಫ್ಯಾಸಿಸ್ಟ್ ಇಟಲಿ ದಿಟ್ಟತನ ತೋರತೊಡಗಿದುವು. ಪಾಶ್ಚಾತ್ಯ ರಾಷ್ಟ್ರಗಳನ್ನು ಹೆಚ್ಚಾದ ಆತ್ಮವಿಶ್ವಾಸದಿಂದ ಎದುರಿಸಿದುವು. ಪಾಶ್ಚಾತ್ಯ ರಾಷ್ಟ್ರಗಳ ಗಮನ ಅತ್ತಕಡೆ ಹರಿದುದನ್ನು ಕಂಡ ಜಪಾನ್ ಅದರ ಲಾಭ ಪಡೆದುಕೊಂಡಿತು. ಅಲ್ಲಿಯ ಯೋಧ ಜನಾಂಗ ಚೀನದಲ್ಲಿ ಮತ್ತೂ ಆಕ್ರಮಣ ನಡೆಸಿತು. ಮೊದಲೇ ಮಂಚೂರಿಯವನ್ನು ವಶಪಡಿಸಿಕೊಂಡಿದ್ದ ಜಪಾನ್ ಸೈನ್ಯ 1932 ರ ಕೊನೆಗೆ ಜೆಹೋಲ್ ಪ್ರಾಂತವನ್ನು ಆಕ್ರಮಿಸಿತು. 1933 ರಲ್ಲಿ ಇವರು ಚೀನದ ದೊಡ್ಡ ಗೋಡೆಯನ್ನು ತಲುಪಿದರು.

ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ ಈ ಯಾವ ರಾಷ್ಟ್ರಕ್ಕೂ ಯುದ್ಧ ಬೇಕಿರಲಿಲ್ಲ. ಈ ಎಲ್ಲ ರಾಷ್ಟ್ರಗಳಲ್ಲೂ ಒಂದಲ್ಲ ಒಂದು ರೀತಿಯ ಹಣಕಾಸಿನ ಸಂಬಂಧದ ಮತ್ತು ಪದಾರ್ಥ ಸಂಪತ್ತಿನ ಅವ್ಯವಸ್ಥೆ ಹಾಗೂ ಒತ್ತಡಗಳಿದ್ದುವು. ಜಪಾನ್, ಜರ್ಮನಿ ಮತ್ತು ಇಟಲಿ, ಈ ಮೂರು ಆಕ್ರಮಣ ಶೀಲರಾಷ್ಟ್ರಗಳು ಅರ್ಧ ಬೂಟಾಟಿಕೆ ಮತ್ತು ಅರ್ಧ ನಿಜವಾದ ಬೆದರಿಕೆ ಹಾಕಿ ವರ್ಸೈಕೋಲು ಮತ್ತು ಸಂಯುಕ್ತ ರಾಷ್ಟ್ರ ಸಂಘವನ್ನು ಅಭ್ಯೈರಾಗಿ ಹಾಳುಮಾಡಲು ಮೊದಲಿಟ್ಟುವು.

1934ರ ಕೊನೆಗೆ ಇಟಲಿ ಮತ್ತು ಅಬಿಸೀನಿಯಗಳ ಮಧ್ಯೆ ತೀವ್ರತೊಂದರೆ ಪ್ರಾರಂಭವಾಗಿ ಶರತ್ಕಾಲದ ಹೊತ್ತಿಗೆ ಇಟಲಿ ಅಬಿಸೀನಿಯದ ಮೇಲೆ ದಂಡೆತ್ತಿ ಹೋಯಿತು. ನಿಷ್ಕರುಣೆಯಿಂದ ವಿಷಾನಿಲ ಮತ್ತು ಬೆಂಕಿ ಬಾಂಬುಗಳನ್ನು ಪ್ರಯೋಗಿಸಿ 1936ರ ಮೇ ತಿಂಗಳಲ್ಲಿ ಅಬಿಸೀನಿಯವನ್ನು ಇಟಲಿಗೆದ್ದಿತು. ಆದರೆ ಈ ರಾಜ್ಯದಲ್ಲಿ ನೆಲೆನಿಂತು ಅಲ್ಲಿಯ ಸಂಪತ್ತನ್ನು ಉಪಯೋಗಿಸಿಕೊಳ್ಳುವುದು ಅಷ್ಟು ಸುಲಭವಾಗಲಿಲ್ಲ.

ಈ ಸಮಯದಲ್ಲೇ ಸ್ಪೇನಿನಲ್ಲಿದ್ದ ಪ್ರಜಾಪ್ರಭುತ್ವವಾದಿ ಸರ್ಕಾರ ಅಲ್ಲಿನ ಕ್ಯಾಟಲೋನಿಯನ್ ರಾಷ್ಟ್ರವಾದಿಗಳು ಮತ್ತು ತೀವ್ರಗಾಮಿ ಕಮ್ಯೂನಿಸ್ಟರೊಂದಿಗೆ ಬಹುಕಾಲ ಹೋರಾಡಿ ಸುಸ್ತಾಗಿತ್ತು. ಮೊರಾಕೊವಿನ ಸೈನ್ಯಗಳನ್ನು ತೆಗೆದುಕೊಂಡು ಬಂದು ಜನರಲ್‌ಫ್ರಾಂಕೊ ಈ ಸರ್ಕಾರದ ಮೇಲೆ ದಂಗೆಯೆದ್ದನು. ಜರ್ಮನಿ ಇಟಲಿಗಳು ಇದಕ್ಕೆ ಗುಟ್ಟಾಗಿ ಬೆಂಬಲವಿತ್ತಿದ್ದರು. ಈ ದಂಗೆಗೆ ಜನರ ಪ್ರೋತ್ಸಾಹ ಸಿಗಲಿಲ್ಲ. ಸ್ಪೇನಿನ ಜನ ಮ್ಯಾಡ್ರಿಡ್ ಸರ್ಕಾರವನ್ನು ಬೆಂಬಲಿಸಿದರು. ಈ ಪರ್ಯಾಯ ದ್ವೀಪದಲ್ಲಿ ಎರಡು ವರ್ಷಗಳಕಾಲ ಘೋರವಾದ ಯುದ್ಧನಡೆಯಿತು. ಬರುಬರುತ್ತಾ ಜರ್ಮನಿ ಇಟಲಿಗಳು ಇದರಲ್ಲಿ ಬಹಿರಂಗವಾಗಿಯೇ ಪಾಲ್ಗೊಂಡವು. ಆಕ್ರಮಣಕಾರರು ನಿರ್ದಯೆಯಿಂದ ಊರು ಕೇರಿಗಳ ಮೇಲೆ ಬಾಂಬು ಹಾಕಿದರು. ಈ ಹೊಸ ರೀತಿಯ ಯುದ್ಧದಲ್ಲಿ ಸತ್ತಷ್ಟು ಹೆಂಗಸರು ಮಕ್ಕಳು ಇದಕ್ಕೆ ಮುಂಚೆ ಯಾವ ಯುದ್ಧದಲ್ಲೂ ಯಾವಾಗಲೂ ಸತ್ತಿರಲಿಲ್ಲ. ಇಷ್ಟಾದರೂ ಇಲ್ಲಿ ಮೊದಲಿನಿಂದ ಕಡೆವರೆಗೆ ಇಲ್ಲಿ ಯುದ್ಧ ಘೋಷಣೆ ಆಗಲೇ ಇಲ್ಲ. ಕಾನೂನಿನ ಪ್ರಕಾರ ಜರ್ಮನಿ ಇಟಲಿಗಳಿಗೂ ಸ್ಪೇನಿಗೂ ನಡುವೆ ಇದ್ದ ಶಾಂತ ಪರಿಸ್ಥಿತಿಯೇ—ಜಪಾನು ಚೀನದೊಡನೆ ಶಾಂತಿಯಿಂದ ಇದ್ದಿತು.

1938ರ ವಸಂತದಲ್ಲಿ ಇದ್ದಕ್ಕಿದ್ದಂತೆ ಹಿಟ್ಲರ್ ಆಸ್ಟ್ರಿಯಾದ ಮೇಲೆ ದಂಡೆತ್ತಿ ಹೋಗಿ ಅದನ್ನು ಜರ್ಮನಿಗೆ ಸೇರಿಸಿಕೊಂಡನು. ವರ್ಸೈ ಕೌಲು ವಿಧಿಸಿದ್ದ ನಿಷೇಧವನ್ನು ನೇರವಾಗಿ ತಿರಸ್ಕರಿಸಿದಂತೆ ಆಯಿತು. ಆಸ್ಟ್ರಿಯ ದೇಶದೊಳಗಾಗಲೀ ಹೊರಗಾಗಲೀ ಇದಕ್ಕೆ ಪರಿಣಾಮಕಾರಿ ಪ್ರತಿರೋಧ ಬರಲೇಇಲ್ಲ. ಪ್ರಪಂಚ ವ್ಯವಹಾರಗಳಲ್ಲಿ ಹಿಟ್ಲರ್ ಬರಬರುತ್ತಾ ಪ್ರಧಾನ ವ್ಯಕ್ತಿಯಾದನು. (ಮುಸ್ಸೋಲಿನಿ ಇವನ ಪ್ರತಿಯೊಂದು ಹೆಜ್ಜೆಯನ್ನೂ ಗಮನಿಸುತ್ತಿದ್ದ ಮಿತ್ರನಾಗಿದ್ದನು). ನಾಜಿ ಜರ್ಮನಿ ಎಲ್ಲಕ್ಕಿಂತ ಮೇಲುಗೈ ಪಡೆಯುತ್ತಿರುವ ರಾಜ್ಯವಾಯಿತು. 'ಪ್ರಜಾ ತಂತ್ರವಾದಿ' ರಾಜ್ಯಗಳು ವಿಮಾನ ಯುದ್ಧಕ್ಕೆ ಭಯಪಟ್ಟು—ಬಹುಶಃ ಅವು ಇಷ್ಟೊಂದು ಭಯಪಡಬೇಕಾಗಿರಲಿಲ್ಲ—ನಿಷ್ಕ್ರಿಯವಾಗಿ ಕುಳಿತವು. 1914–18ರ ಯುದ್ಧಕ್ಕೆ ಮುಂಚೆ ಅಗಾಧ ಪ್ರಮಾಣದಲ್ಲಿ ಆಯುಧ ಸಂಗ್ರಹವಾಗಿತ್ತಷ್ಟೆ. ಅದಕ್ಕಿಂತ ಹೆಚ್ಚು ವೆಚ್ಚದ ರಾಷ್ಟ್ರಗಳ ಶಕ್ತಿಕುಂದಿಸುವ ಆಯುಧ ಸಂಗ್ರಹ ಪೈಪೋಟಿ ಈಗ ಪ್ರಾರಂಭವಾಯಿತು.

ಆದಿನಗಳಲ್ಲಿ ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸ್‌ಗಳು ಅಂತರರಾಷ್ಟ್ರೀಯ

ಚದುರಂಗದಾಟದಲ್ಲಿ ಒಂದು ಸರಳ ದೃಢಕಾರ್ಯ ನೀತಿಯನ್ನು ಜಾರಿಗೆ ತರಲಿಲ್ಲ. ಈ ದೇಶಗಳಿಗೆ ದುರಭಿಮಾನವಿರಲಿ ಆತ್ಮ ವಿಶ್ವಾಸ ಕೂಡ ಉಳಿದಿರಲಿಲ್ಲ. ಹೀಗೇಕಾಯಿತೆಂದು ಅರ್ಥಮಾಡಿಕೊಳ್ಳಬೇಕಾಗಿದ್ದಲ್ಲಿ ಆ ಕಾಲದ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕು. ಆಗ ಎಲ್ಲ ಕಡೆಯೂ ಆರ್ಥಿಕ ಪರಿಸ್ಥಿತಿ ಬದಲಾಗುತ್ತಿತ್ತು. ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಇದ್ದುದರಿಂದ ಎಲ್ಲಕಡೆ ಜಡತ್ವ ಉಂಟಾಗಿತ್ತು. ಮೊದಲು ಪ್ರಾಬಲ್ಯ ಪಡೆದಿದ್ದ ಈ ಮೂರು ರಾಷ್ಟ್ರಗಳಿಗೂ ಇದು ಅಂಟಿಕೊಂಡಿತ್ತು. ಉತ್ಪಾದನಾ ವಿಧಾನಗಳಲ್ಲಿ ದೊಡ್ಡ ಕ್ರಾಂತಿಯಾಗುತ್ತಿತ್ತು. ಸಾಮಾನು, ಸಂಪತ್ತುಗಳ ಹಂಚಿಕೆಯಲ್ಲೂ ಅವ್ಯವಸ್ಥೆ ಆಗುತ್ತಿತ್ತು. ಹೀಗಾಗಿ ಮುಂಚೆ ಇದ್ದಂತಹ ಖಾಯಂ ನೌಕರಿಗಳಿರುತ್ತಿರಲಿಲ್ಲ. ಹಿರಿಯ ಪೀಳಿಗೆಯ ಕೆಲಸಗಾರ ವರ್ಗದ ಸ್ಥಾನದಲ್ಲಿ ಅತೃಪ್ತರಾದ ಚಡಪಡಿಸುತ್ತಿರುವ ನಿರುದ್ಯೋಗಿಗಳಾದ ಕಿರಿಯ ಪೀಳಿಗೆ ತಲೆಯೆತ್ತುತ್ತಿತ್ತು. ಈ ಒತ್ತಡಗಳ ಫಲವಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ತಯಾರಾದ ಸಾಮಾನುಗಳು ಖರ್ಚಾಗದೆ ಇರುವಂತಾಯಿತು. ಯುದ್ಧ ಕಾಲದಲ್ಲಿ ಬಳಿಕ ಯುದ್ಧಾನಂತರದ ಅತಿ ಆತ್ಮವಿಶ್ವಾಸದ ಕಾಲದಲ್ಲಿ ಜನರು ಅತಿಯಾಗಿ ಉದ್ಯಮಗಳಲ್ಲಿ ಹಣ ಹೂಡಿದ್ದರು. ಈಗ ಕಷ್ಟಕಾಲದಲ್ಲಿ ಬಂಡವಾಳ ಪತ್ರಗಳನ್ನು ಜನ ಮಾರತೊಡಗಿದುದರಿಂದ ಒಂದು ಆರ್ಥಿಕ ಬಿಕ್ಕಟ್ಟುಂಟಾಯಿತು. ಅಮೇರಿಕದ ಅನೇಕ ಬ್ಯಾಂಕುಗಳಿಗೆ ಆರ್ಥಿಕವಾಗಿ ಅಂಕೆ ಅಂಕುಶಗಳಿರಲಿಲ್ಲ. ಈ ಅತಿ ಸ್ವಾತಂತ್ರ್ಯದ ಫಲವಾಗಿ ಈ ಬ್ಯಾಂಕುಗಳು ಕಷ್ಟದಲ್ಲಿ ಬಿದ್ದುವು. 1931–32ರಲ್ಲಿ ದೇಶಾದ್ಯಂತ ಕಳವಳ ಉಂಟಾಯಿತು. ಆಗ ಫ್ರಾಂಕ್ಲಿನ್ ರೂಸ್‌ವೆಲ್ಟ್‌ನಂತಹ ನಾಯಕ ದೊರಕಿದ್ದು ಈ ದೇಶದ ಅದೃಷ್ಟ, ಆ ದೇಶದಲ್ಲಿ ವ್ಯಕ್ತಿ ಸ್ವಾತಂತ್ರ್ಯವಾದ ಅತಿಯಾಗಿ ಬೇರೂರಿತ್ತು. ಇದರಿಂದ ಹಣ ಕೆಲವರ ಬಳಿ ಅತಿಯಾಗಿ ಸಂಗ್ರಹವಾಗಿ ಸಂಪನ್ಮೂಲಗಳು ಸರಿಯಾಗಿ ಉಪಯೋಗವಾಗುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ರೂಸ್‌ವೆಲ್ಟ್ ಬ್ಯಾಂಕುಗಳಮೇಲೆ ಹಿಂದೆಂದೂ ಇಲ್ಲದಿದ್ದಷ್ಟು ನಿಯಂತ್ರಣ ತಂದು ಆ ದೇಶವನ್ನು ವ್ಯಕ್ತಿ ಸ್ವಾತಂತ್ರ್ಯವಾದದಿಂದ ಆಧುನಿಕ ನಿಯೋಜಿತ ಆರ್ಥಿಕ ವ್ಯವಸ್ಥೆಯತ್ತ ನಡೆಸಿದನು. ಹೊಸ ವ್ಯವಸ್ಥೆಗೆ 'ನ್ಯೂಡೀಲ್' ಎಂಬ ಹೆಸರಾಯಿತು. ಈ ಹೊಸ ವ್ಯವಸ್ಥೆಯಲ್ಲಿ ನಡೆಯಬೇಕಾಗಿದ್ದ ಸಾಮಾಜೀಕರಣಕ್ಕಾಗಿ ತರಬೇತು ಪಡೆದ ವಿದ್ಯಾವಂತರಿರುವ ನೌಕರವರ್ಗ ಬೇಕಾಗಿತ್ತು. ಅಷ್ಟು ಜನ ಆಗ ಸಿಗುವಂತಿರಲಿಲ್ಲ. ಅಲ್ಲದೆ ಮೊದಲಿನಿಂದಲೂ ಅಧ್ಯಕ್ಷ ರೂಸ್‌ವೆಲ್ಟರಿಗೆ ಕೆಲವು ವಿಷಯ ತೊಡಕನ್ನುಂಟುಮಾಡಿದುವು. ಈತನ ಅತಿಯಾದ ಸ್ನೇಹಪರ ಸ್ವಭಾವ ಇವುಗಳಲ್ಲೊಂದು. ಈತನ ಮಂತ್ರಿಗಳಲ್ಲಿದ್ದ ಅಭಿಪ್ರಾಯ ಭೇದಗಳು, ಅವರ ನೀತಿಗಳು ದೌರ್ಬಲ್ಯಗಳು, ಸುಪ್ರೀಮ್ ಕೋರ್ಟಿನಿಂದ ಹಿಡಿದು ಕೆಳಗಿನವರೆಗೆ ಅಮೆರಿಕದ ನ್ಯಾಯವ್ಯವಸ್ಥೆಯಲ್ಲಿದ್ದ ವೈಯಕ್ತಿಕ ಉದ್ಯಮಗಳ ಬಗೆಗಿನ ಅತೀವ ಒಲವು ಇಂಥ ಇತರ ಸಂಗತಿಗಳು 1937–38ರಲ್ಲಿ ಯುರೋಪಿನಲ್ಲಿ ಯುದ್ಧ ಪ್ರಾರಂಭವಾಗುವ

ಸಾಧ್ಯತೆಗಳು ಮಾಡುತ್ತಿದ್ದಾಗ ಅಮೆರಿಕ ಇನ್ನೂ ಸಹ ಪುನರ್ನಿರ್ಮಾಣದ ಭಾರೀ ಪ್ರಯೋಗದ ಪ್ರಸವ ವೇದನೆಯನ್ನು ಅನುಭವಿಸುತ್ತಿತ್ತು. ಬ್ರಿಟಿಷ್ ಸಾಮ್ರಾಜ್ಯಕ್ಕೆ ತೀವ್ರ ಅಪಾಯ ಬಂದರೆ ತನ್ನ ಪೂರ್ವ ಮತ್ತು ಪಶ್ಚಿಮ ಕರಾವಳಿಗೂ ಅಪಾಯ ಒದಗುವ ಸಾಧ್ಯತೆ ಇರುವುದೆಂದು ಈ ದೇಶ ಗ್ರಹಿಸಿತು. ಹೆಚ್ಚು ಹೆಚ್ಚು ವೇಗದ ದೊಡ್ಡ ದೊಡ್ಡ ಗಾತ್ರದ ವಿಮಾನಗಳು ತಯಾರಾಗುತ್ತಿದ್ದಂತೆ ವಾಯುಮಾರ್ಗದಿಂದ ವಿಪತ್ತು ಒದಗುವ ಭಯ ಇನ್ನೂ ಹೆಚ್ಚಾಯಿತು. ಇಷ್ಟೇ ಅಲ್ಲದೆ ಯುದ್ಧಕ್ಕಾಗಿ ಸಿದ್ಧತೆ ನಡೆಸಿದರೆ ತಕ್ಷಣ ನಿರುದ್ಯೋಗದ ತೊಂದರೆ ಶಮನವಾಗುವುದೆಂದೆನ್ನಿಸಿತು. ಪ್ರಪಂಚದ ಇತರ ವ್ಯವಹಾರಗಳಿಂದ ತಾನೇ ಪ್ರತ್ಯೇಕವಾಗಿ ಕಾಲಕಳೆದ ಕನಸಿಗೆ ಅಂಟಿಕೊಂಡಿದ್ದಂತೆಯೇ ಈ ದೇಶ ಬ್ರಿಟನ್ ಮತ್ತು ಫ್ರಾನ್ಸುಗಳು ಅಷ್ಟುಹೊತ್ತಿಗಾಗಲೇ ಮಾಡುತ್ತಿದ್ದಂತೆ ಬೃಹತ್ಪ್ರಮಾಣದ ಆಯುಧ ತಯಾರಿಕೆ ಪೈಪೋಟಿಯಲ್ಲಿ ತೊಡಗಿತು.

ಬ್ರಿಟನ್ನಿನಲ್ಲಿ ಆರ್ಥಿಕ ತಾಪತ್ರಯಗಳು ಕೂಡಿಹಾಕಿ ಕೊಳ್ಳುತ್ತಹೋದುವು. ಸ್ವತಂತ್ರರೂ ಅತಿ ಪ್ರಬಲರೂ ಆದ ಐಶ್ವರ್ಯವಂತರ ಎದುರಾಗಿ ಜನಪ್ರಿಯ ಪ್ರತಿಭಟನೆ ಅಲ್ಲಿ ಅಮೆರಿಕಕ್ಕಿಂತ ಮೊದಲೇ ನಡೆದಿತ್ತು. ಭಾರಿ ಆದಾಯ ತೆರಿಗೆ, ಆಸ್ತಿವಿಭಾಗದ ಮೊದಲು ಕೊಡಬೇಕಾದ ವಾರಸುತೆರಿಗೆ ಮತ್ತು ನಿರುದ್ಯೋಗಿಗಳಿಗೆ ಜೀವನಾಧಾರವಾಗಿ ಮಾಸಾಶನ ಹಂಚುವುದು ಈ ಕ್ರಮಗಳು ಅಲ್ಲಿ ಜಾರಿಗೆ ಬಂದಿದ್ದುವು. ಹೀಗೆ ಕ್ರಾಂತಿ ಜನಕ ಒತ್ತಡಗಳನ್ನು ತಪ್ಪಿಸಿಕೊಳ್ಳಲಾಗಿತ್ತು.

ಅಲ್ಲಿನ ನಿರುದ್ಯೋಗಿ ಯುವಕರು ನಿಷ್ಪ್ರಯೋಜಕರಾಗಿ ಕಾಲಕಳೆಯುತ್ತಿದ್ದರು. ಸಮಾಜಕ್ಕೆ ಇವರು ಹೊರೆಯಾಗಿದ್ದುದು ಇರಲಿ, ತಮ್ಮ ಜೀವನವೇ ಇವರಿಗೆ ಹೊರೆಯಾಗಿತ್ತು. ಇವರ ಆರೋಗ್ಯ, ಶಿಸ್ತುಪಾಲನೆ, ವಿದ್ಯಾಭ್ಯಾಸದ ಮುಂದುವರಿಕೆಗಾಗಲೀ, ನಿರುತ್ಸಾಹದಿಂದ ನಿರಾಶರಾಗಿದ್ದ ಈ ತರುಣರನ್ನು ಯಾವುದಾದರೂ ಕಾರ್ಯಕ್ಕೆ ಉಪಯೋಗಿಸಿ ಕೊಳ್ಳುವುದಕ್ಕಾಗಲೀ, ಸರಿಯಾದ ಪ್ರಯತ್ನ ನಡೆಯಲಿಲ್ಲ. ಬ್ರಿಟನ್ನಿನ ಉದ್ಯಮಗಳು ಹಾಗೂ ಸಂಪನ್ಮೂಲಗಳನ್ನು ಸಮಾಜಕ್ಕೊಳಪಡಿಸುವುದು ಅಲ್ಲಿ ಸಾಧ್ಯವಾಗಲಿಲ್ಲ. ಏಕೆಂದರೆ ರಾಜಕೀಯ ಕ್ಷೇತ್ರದಲ್ಲಿ ಖಾಸಗಿ ಸಂಪತ್ತು ಖಾಸಗಿ ಉದ್ಯಮ ಮತ್ತು ಹಣಕಾಸಿನ ಆಡಳಿತಗಳ ಪ್ರಭಾವ ಸಾಕಷ್ಟು ಬಲವಾಗಿತ್ತು. 1937ರ ಹೊತ್ತಿಗೆ ಈ ದೇಶವೂ ಯುದ್ಧ ಸಂಭಾವ್ಯತೆಯನ್ನು ಅರಿತು ಎಚ್ಚೆತ್ತಿತ್ತು. ಮನಸ್ಸಿಲ್ಲದಿದ್ದರೂ ಯುದ್ಧದ ಅವಶ್ಯಕತೆಗಳಿಗಾಗಿ ಉಳಿದೆಲ್ಲವನ್ನೂ ಗೌಣವಾಗಿ ಎಣಿಸುವಂಥ ದಾರಿಗೆ ಪ್ರಪಂಚದ ಉಳಿದ ಭಾಗಗಳೊಡನೆ ಎಳೆಯಲ್ಪಡುತ್ತಿತ್ತು.

ರಾಷ್ಟ್ರೀಯ ಭಾವನೆಯುಳ್ಳ ಸರ್ವತಂತ್ರ ಸ್ವತಂತ್ರ ರಾಷ್ಟ್ರಗಳಿರುವವರೆಗೆ, ಜಾತಿ ಕುಲಗಳ ಕುರಿತು ಸುಳ್ಳುಸಂಗತಿಗಳು, ಸಂಸ್ಕೃತಿ ಮತ್ತು ರಾಷ್ಟ್ರೀಯತೆಗಳಿಗೆ ಸಂಬಂಧಿಸಿದಂತೆ ಪೂರ್ವಗ್ರಹಗಳ ಬೋಧನೆ ಸುವ್ಯವಸ್ಥಿತವಾಗಿ ನಡೆಯುತ್ತಿರುವವರೆಗೆ, ಸಂಪ

ನ್ಮೂಲಗಳನ್ನು ಕ್ರಿಯಾತ್ಮಕವಾಗಿ ಪ್ರಯೋಜನವಾಗದಂತೆ ವೈಯಕ್ತಿಕ ಲಾಭಕ್ಕಾಗಿ ಹಿಡಿದಿಟ್ಟುಕೊಳ್ಳುವುದು ವಸ್ತುಗಳ ಒಡೆತನಕ್ಕಾಗಿ ಆರ್ಥಿಕ ಕ್ಷೇತ್ರದಲ್ಲಿ ಚದುರಂಗ ನಡೆಯುತ್ತಿರುವವರೆಗೆ ಇಂದಿನ ಅಸ್ಥಿರತೆ ಹೆಚ್ಚುತ್ತಲೇ ಹೋಗುತ್ತದೆ. ಯುದ್ಧಗಳು ಹೆಚ್ಚು ಹೆಚ್ಚು ವಿನಾಶಕಾರಿಗಳಾಗುತ್ತಹೋದಂತೆ ಅವುಗಳನ್ನು ನಡೆಸಲು ಅವಶ್ಯಕವಾದ ವಿಧೇಯತೆ ಗುಲಾಮಗಿರಿ, ಭಯ ಮತ್ತು ರಾಗ ದ್ವೇಷಗಳಿಗೆ ಮಾನವ ಜೀವನ ಮತ್ತು ಚಿಂತನೆ ಮುಡಿಪಾಗಿ ಹೋಗುತ್ತದೆ. ಈ ಅಂಶ ಬರಬರುತ್ತಾ ವಿವೇಕಿಗಳಾದ ಮನುಷ್ಯರಿಗೆ ಚೆನ್ನಾಗಿ ಅರ್ಥವಾಗುತ್ತಿದೆ. ಜಗಳ ಕಾಯಬೇಕೆಂಬ ಒಂದು ರೀತಿಯ ಉನ್ಮಾದ ಮನು ಕುಲದ ಎದುರುನಿಂತಿದೆ. ಹೀಗೇ ಇದ್ದರೆ ನಾವು ಹಂತಹಂತವಾಗಿ ಕೆಳಮಟ್ಟಕ್ಕಿಳಿಯುತ್ತಾ ಹೋಗುತ್ತೇವೆ. ಸದಾಕಾದಾಡುತ್ತಿರಬೇಕೆಂಬ ಕ್ರೂರ ಭ್ರಷ್ಟ ಪ್ರವೃತ್ತಿಗೆ ಬಿದ್ದುಬಿಡುತ್ತೇವೆ. ಅಂಥ ಜೀವನದಲ್ಲಿ ನೋವು, ದ್ವೇಷ ಮತ್ತು ಕೀಳುಮಟ್ಟದ ಕಾಮ ಇವುಗಳನ್ನು ಬಿಟ್ಟರೆ ಬೇರೆ ಆಸಕ್ತಿಗಳಿರುವುದಿಲ್ಲ. ಕಷ್ಟಸಹಿಷ್ಣುತೆಯನ್ನು ಬಿಟ್ಟರೆ ಬೇರೆ ಯಾವ ಸದ್ಗುಣಗಳೂ ಇರುವುದಿಲ್ಲ.

ಆದರೆ ಮುಂದೇನಾಗಬಹುದು ಎನ್ನುವುದನ್ನು ಗೊತ್ತು ಹಚ್ಚುವುದು ಅವುಗಳಿಗೆ ಪರಿಹಾರಕ್ರಮಗಳನ್ನು ಕಂಡುಹಿಡಿಯುವುದಕ್ಕಿಂತ ಸುಲಭ. ನಮ್ಮ ಸಂಕಷ್ಟಗಳನ್ನು ಗುರುತಿಸಿ ಅದಕ್ಕೆ ತಕ್ಕಂತೆ ಹೊಂದಿಕೊಳ್ಳುವುದಕ್ಕಾಗಿ ಜೀವನ ವಿಧಾನಗಳನ್ನು ರೂಪಿಸುವುದಕ್ಕಾಗಿ ಇದುವರೆಗೆ ಸಮಾಜ ಶಾಸ್ತ್ರಜ್ಞರು ಮತ್ತು ಅರ್ಥಶಾಸ್ತ್ರಜ್ಞರು ನಡೆಸಿರುವ ಚಿಂತನೆಗಳೆಲ್ಲ ತಿರಸ್ಕಾರಕ್ಕೂ ಅರ್ಹವಾಗಿಲ್ಲ. ನಿಷ್ಪ್ರಯೋಜಕವಾದ ಸಮ್ಮೇಳನಗಳು, ಗೋಷ್ಠಿಗಳು ಎಷ್ಟೋ ನಡೆದುಹೋಗಿವೆ. ಒಂದಕ್ಕೊಂದು ಸಂಬಂಧವಿಲ್ಲದ ಹಳಸಲು ಘೋಷಣೆಗಳು, ಸತ್ಯ ಅಸತ್ಯಗಳು ಬೆರೆತಮಾತುಗಳು ಲೆಕ್ಕವಿಲ್ಲದಷ್ಟು ಹೊರಬಂದಿವೆ. ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬ ಮಾತು ಎಲ್ಲೆಲ್ಲೂ ಕೇಳಬರುತ್ತಿದೆಯೋ ಹೊರತು ತ್ಯಾಗಕ್ಕೆ ಯಾರು ಸಿದ್ಧರಿಲ್ಲ. "ಶಾಂತಿ" ಎಂಬ ಯಾವುದೋ ಒಂದು ಗುರಿಗಾಗಿ ಎಲ್ಲರೂ ಹಾತೊರೆಯುತ್ತಿದ್ದಾರೆಯೇ ಹೊರತು ವಿವೇಚನೆಯುಳ್ಳ, ಕಸವುಳ್ಳ ಕ್ರಿಯಾತ್ಮಕ ಜೀವನಕ್ಕಾಗಿ ಯಾವ ಗಂಭೀರ ಪ್ರಯತ್ನವೂ ಇಲ್ಲ. ಶಾಂತಿವಾದಗಳಲ್ಲಿ ಬಹುತೇಕ ವೈಗಳ್ಳತನದ ಹಿಂಜರಿಕೆಯೇ ಇರುತ್ತದೆ. ಎಂದಾದರೊಂದುದಿನ ಪ್ರಪಂಚದ ಎಲ್ಲ ಕಡೆ ಅಧಿಕಾರವುಳ್ಳ ಸರಿಯಾದ ಒಂದು ಶಾಂತಿ ಸಂಸ್ಥೆಯನ್ನು ಸ್ಥಾಪಿಸಿ ನಡೆಸಿಕೊಂಡು ಬರುವಷ್ಟು ಶಕ್ತಿ ಸಂಗ್ರಹವಾಯಿತೆಂದುಕೊಳ್ಳೋಣ. ಸುಲಭವಾದ ಸತ್ಯಾಗ್ರಹ ಮಾರ್ಗದಿಂದ ಖಂಡಿತವಾಗಿಯೂ ಈ ಗುರಿ ಮುಟ್ಟಲು ಸಾಧ್ಯವಿಲ್ಲ. ರಾಜ್ಯಗಳನ್ನು ಗೆದ್ದು ಅಧೀನ ಮಾಡಿಕೊಳ್ಳುವುದರಿಂದ 'ರೋಮಿನ ಶಾಂತಿ' ಸಾಧ್ಯವಾಯಿತು. ಪ್ರಪಂಚ ಶಾಂತಿಗೂ ಅಂಥದೇ ನಿಶ್ಚಿತತೆ ಮತ್ತು ಅವಿಧೇಯರೊಡನೆ ದೃಢವಾಗಿ ನಡೆದು ಕೊಳ್ಳುವ ನಿರ್ಧಾರಬೇಕು.

ಅಧ್ಯಾಯ ೬೯ ಎರಡನೆ ಮಹಾಯುದ್ಧ

ಡಿ. ಆರ್. ಸರ್ವಮಂಗಳ

ಪಠ್ಯಕ್ರಮ ವಿಕಾಸದಲ್ಲಿ ಶೈಕ್ಷಣಿಕ ಧ್ಯೇಯಗಳ ಪಾತ್ರ

ಶಿಕ್ಷಣದ ಇತಿಹಾಸವನ್ನು ವೀಕ್ಷಿಸಿದರೆ ಪಠ್ಯವಸ್ತುವಿನ ಸ್ವರೂಪದಲ್ಲಿ ಮೂಲ ಭೂತವಾಗಿರುವ ಕೆಲವು ತತ್ವಗಳನ್ನೂ ಕಾಲಕ್ರಮದಲ್ಲಿ ಅವುಗಳಲ್ಲಿ ಆಗಿರತಕ್ಕ ಬದಲಾವಣೆಗಳನ್ನೂ ಗಮನಿಸಬಹುದು.

ಪಾಶ್ಚಾತ್ಯ ಶಿಕ್ಷಣದ ಇತಿಹಾಸದಲ್ಲಿ ಗ್ರೀಕರ ಶಿಕ್ಷಣ ತತ್ತ್ವಗಳಿಗೆ ಬಹಳ ಪ್ರಾಶಸ್ತ್ಯವಿದೆ. ಅವರು ರೂಢಿಸಿಕೊಂಡ ಸಪ್ತ ಉದಾರ ಪಠ್ಯವಸ್ತುಗಳು ಪ್ರಸಿದ್ಧ ವಾಗಿವೆ. ಅವರ ಪಠ್ಯತ್ರಯ (ವ್ಯಾಕರಣ, ಅಲಂಕಾರಶಾಸ್ತ್ರ ಮತ್ತು ತರ್ಕಶಾಸ್ತ್ರ) ಮತ್ತು ಪಠ್ಯಚತುಷ್ಟಯ (ಗಣಿತಶಾಸ್ತ್ರ, ರೇಖಾಶಾಸ್ತ್ರ, ಖಗೋಳಶಾಸ್ತ್ರ ಮತ್ತು ಸಂಗೀತ) ಅನೇಕ ಶತಮಾನಗಳ ಕಾಲ ಶಿಕ್ಷಣ ರಂಗದಲ್ಲಿ ಪ್ರಭಾವ ಬೀರಿದವು.

ಮಧ್ಯಯುಗದಲ್ಲಿ ಕ್ರೈಸ್ತಮತ ಬೋಧನೆಯೇ ಅತ್ಯಂತ ಮುಖ್ಯ ಗುರಿಯಾಗಿದ್ದ ಶಿಕ್ಷಣ ಕ್ರಮದಲ್ಲಿ ಬೈಬಲ್ ಬೋಧನೆ, ನೀತಿ ಬೋಧನೆಗೆ ಪ್ರಾಧಾನ್ಯ ದೊರಕಿತಾದರೂ ಗ್ರೀಕರ ಪಠ್ಯಕ್ರಮ ಪೂರ್ತಿಯಾಗಿ ತಿರಸ್ಕೃತವಾಗಲಿಲ್ಲ.

ಹದಿನೈದು ಹದಿನಾರನೆಯ ಶತಮಾನಗಳಲ್ಲಿ ಪ್ರಾರಂಭವಾದ ವಿದ್ಯಾಪುನರುಜ್ಜೀವನ ಕಾಲದಲ್ಲಿ ಪುನಃ ಗ್ರೀಕ್ ಮತ್ತು ರೋಮನ್ ಸಾಹಿತ್ಯಗಳಿಗೆ ಮನ್ನಣೆ ದೊರಕಿತು ಇದರೊಂದಿಗೆ ಮಾನವಿಕ ಶಾಸ್ತ್ರಗಳ ಮಹತ್ವ ಪ್ರಾರಂಭವಾಯಿತು. ಮುಂದೆ ಈ ಮಾನವಿಕ ಶಾಸ್ತ್ರಗಳಿಗೂ ಮತ್ತು ವಿಜ್ಞಾನ ಶಾಸ್ತ್ರಗಳಿಗೂ ಶಾಲಾ ಶಿಕ್ಷಣದಲ್ಲಿ ಅಗ್ರಸ್ಥಾನಕ್ಕಾಗಿ ಸತತ ಹೋರಾಟವೇ ನಡೆಯಿತು. ಇಪ್ಪತ್ತನೇ ಶತಮಾನದ ಹೊತ್ತಿಗೆ ಶಿಕ್ಷಣ ಪ್ರಪಂಚದಲ್ಲಿ ವಿಜ್ಞಾನ ಶಾಸ್ತ್ರಗಳ ಸ್ಥಾನ ಭದ್ರವಾಯಿತು.

ರಾಷ್ಟ್ರೀಯತೆ ಮತ್ತು ಪ್ರಜಾಸತ್ತೆಗಳ ಪ್ರಾಬಲ್ಯ ಹೆಚ್ಚಿದಂತೆ ಹೊಸ ಹೊಸ ಮಾನವಿಕ ಶಾಸ್ತ್ರಗಳಾದ ಸಮಾಜಶಾಸ್ತ್ರ, ಆಧುನಿಕ ಭಾಷಾಶಾಸ್ತ್ರ, ಚರಿತ್ರೆ, ಭೂಗೋಳಶಾಸ್ತ್ರ ಮುಂತಾದವುಗಳ ಬೋಧನೆ ಶಾಲಾ ಕಾಲೇಜುಗಳಲ್ಲಿ ಆರಂಭವಾಗ ತೊಡಗಿತು.

ಶಾಲಾ ಶಿಕ್ಷಣದ ಪಠ್ಯವಸ್ತುವಿನ ಶ್ರೇಣಿಗೆ ಸೇರಿ ಗೌರವ ಸಂಪಾದಿಸಿಕೊಂಡಿರುವ ಇತರ ಪಠ್ಯವಸ್ತುಗಳೆಂದರೆ ಶಾರೀರಿಕ ಶಿಕ್ಷಣ, ಔದ್ಯೋಗಿಕ ಶಿಕ್ಷಣ ಮತ್ತು ಲಲಿತ ಕಲೆಗಳ ಶಿಕ್ಷಣ. ಇವುಗಳ ಜೊತೆಗೆ ಆಧುನಿಕ ಶಿಕ್ಷಣ ಪ್ರಪಂಚದಲ್ಲಿ ಪಠ್ಯೇತರ ಚಟುವಟಿಕೆಯು ಕೂಡ ಶಿಕ್ಷಣದ ಪಠ್ಯವಸ್ತುವಿನ ಭಾಗವಾಗಿದೆ.

ಪ್ರಾಚೀನ ಹಿಂದೂ, ಬೌದ್ಧ, ಇಸ್ಲಾಂ ಶಿಕ್ಷಣ ವ್ಯವಸ್ಥೆಯಲ್ಲಿ ಧಾರ್ಮಿಕ ಶಾಸ್ತ್ರಗಳ ಅಧ್ಯಯನವೇ ಪ್ರಧಾನವಾದ ಸ್ಥಾನವನ್ನು ಗಳಿಸಿತ್ತು. ವ್ಯಾವಹಾರಿಕ, ಔದ್ಯೋಗಿಕ, ಕೌಶಲ್ಯಗಳು ಲಲಿತಕಲೆ ಮುಂತಾದುವುಗಳ ಶಿಕ್ಷಣದ ಅಗತ್ಯ ಕೆಲವೇ ಮಂದಿಗಳಿಗೆ ಮಾತ್ರ ಬೇಕಾಗಿತ್ತು.

ಭಾರತದ ಶಿಕ್ಷಣದಲ್ಲಿ ಆಧುನಿಕತೆಯ ಪ್ರಭಾವ ಕಂಡದ್ದು ಬ್ರಿಟಿಷರ ಕಾಲದಲ್ಲಿ. ವಿಜ್ಞಾನ, ಸಮಾಜ ಪಾಠಗಳು, ಮಾತೃಭಾಷೆ, ಆಂಗ್ಲಭಾಷೆ, ಮಾನವಿಕ ವಿಷಯಗಳು ಮುಂತಾದವು ಇಂದು ಪಠ್ಯಕ್ರಮದ ಪ್ರಮುಖ ಅಂಶಗಳಾಗಿವೆ.

ಪಠ್ಯವಸ್ತುವಿನ ನಿರ್ಮಾಣದಲ್ಲಿ ಅತಿ ಪ್ರಮುಖವಾದ ಹಂತವೆಂದರೆ ಶಿಕ್ಷಣದ ಉದ್ದೇಶಗಳ ನಿರೂಪಣೆ.

ಉದ್ದೇಶಗಳನ್ನು ರೂಪಿಸುವಾಗ ಅವುಗಳಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸಬೇಕು.

1. ಸಮುದಾಯ—ಸಮುದಾಯದ ಅಗತ್ಯ, ಸಮಸ್ಯೆ, ಮೌಲ್ಯಗಳು ಇವು ಉದ್ದೇಶಗಳ ಮೇಲೆ ಪ್ರಭಾವ ಬೀರುವುವು.
2. ವಿದ್ಯಾರ್ಥಿ—ವಿದ್ಯಾರ್ಥಿಗಳ ಬೆಳವಣಿಗೆಯ ರೀತಿಗೆ ಅನುಗುಣವಾಗಿ ಸೂಕ್ತ ಉದ್ದೇಶಗಳ ಆಯ್ಕೆ.
3. ವಿಷಯ—ಶಾಲಾ ಕಾರ್ಯಕ್ರಮದಲ್ಲಿ ಅಳವಡಿಸಿರುವ ವಿವಿಧ ವಿಷಯಗಳ ಅಧ್ಯಯನವು ಅವಶ್ಯಕ. ಏಕೆಂದರೆ ಯಾವ ಬೌದ್ಧಿಕ ಕೌಶಲ್ಯಗಳು ಮತ್ತು ಗ್ರಹಿಕೆಗಳು ಮೂಲಭೂತವಾದವುಗಳು ಎಂದು ತಿಳಿಯಲು ಸಹಾಯಕವಾಗುತ್ತದೆ.
4. ಬೋಧನೆ—ಕಲಿಕೆಯ ಪ್ರಕ್ರಿಯೆಯು ಸಮರ್ಥವಾಗುವಂತೆ ಶೈಕ್ಷಣಿಕ ಉದ್ದೇಶಗಳು ರೂಪಿತವಾಗಬೇಕು. ವ್ಯಕ್ತಿಯ ವರ್ತನೆಯಲ್ಲಿ ಬದಲಾವಣೆಯನ್ನು ಉಂಟುಮಾಡುವುದೇ ಶಿಕ್ಷಣ. ಯಾವ ರೀತಿಯ ವರ್ತನಾ ಬದಲಾವಣೆಯನ್ನುಂಟುಮಾಡಬೇಕೆಂಬುದನ್ನು ಸೂಚಿಸುವಂತೆ ಉದ್ದೇಶಗಳು ರೂಪಿತವಾಗಬೇಕು.

ಶೈಕ್ಷಣಿಕ ಫಲಿತಗಳನ್ನು ವಿವಿಧ ಹಂತಗಳಾಗಿ ವಿಂಗಡಿಸಬಹುದು.

1. ಶಿಕ್ಷಣದ ವಿಶಾಲ ಧ್ಯೇಯ :—ಶಿಕ್ಷಣ ಕೆಲವು ವಿಶಾಲ ಧ್ಯೇಯಗಳನ್ನು ಒಳಗೊಂಡಿರಬೇಕು. ಉದಾಹರಣೆಗೆ: ಶಿಕ್ಷಣವು ಸಂಸ್ಕೃತಿಯನ್ನು ವರ್ಗಾಯಿಸುವುದು,

ಸಮಾಜದ ಪುನರ್‌ನಿರ್ಮಾಣ, ವ್ಯಕ್ತಿಯ ಸಮಗ್ರ ಬೆಳವಣಿಗೆ, ಪೌರಜವಾಬ್ದಾರಿ ಇತ್ಯಾದಿಗಳು. ಮೇಲಿನ ಹೇಳಿಕೆಗಳು ಸಮಾಜದಲ್ಲಿ ವ್ಯಕ್ತಿಯ ಜೀವಂತ ಚಟುವಟಿಕೆಗಳಿಗೆ ಸಂಬಂಧಿಸಿರುವುದನ್ನು ಶೈಕ್ಷಣಿಕ ಚಟುವಟಿಕೆಗಳು ಗತಿಶೀಲಾತ್ಮಕವಾಗಿರುವುದನ್ನು ಬಿಂಬಿಸುತ್ತವೆ.

ಶೈಕ್ಷಣಿಕ ಧ್ಯೇಯಗಳು ಎಷ್ಟರಮಟ್ಟಿಗೆ ಮಾನವನ ಸಾರ್ವತ್ರಿಕ ಅವಶ್ಯಕತೆಗಳನ್ನು ಅಥವಾ ಬೇಡಿಕೆಗಳಿಗೆ ಸಂಬಂಧಿಸಿರುತ್ತದೆಯೋ ಅಷ್ಟರಮಟ್ಟಿಗೆ ಶಿಕ್ಷಣವು ಕ್ರಿಯಾತ್ಮಕವೂ ಹಾಗೂ ಗತಿಶೀಲಾತ್ಮಕವೂ ಆಗಿರುತ್ತದೆ. ಈ ವ್ಯಾಪಕ ಧ್ಯೇಯಗಳನ್ನು ವ್ಯಕ್ತಿಯ ಜ್ಞಾನಕೌಶಲ್ಯ, ತಂತ್ರ, ಮನೋಭಾವ ಮುಂತಾದುವುಗಳ ಗಳಿಕೆಯ ಮುಖಾಂತರ ಸಾಧಿಸಬಹುದು. ನಂತರ ಇದು ನಿರ್ದಿಷ್ಟ ಗುರಿಗಳನ್ನು ಸೂಚಿಸುತ್ತದೆ. ಇವುಗಳ ಫಲಿತವನ್ನು ನಿರ್ದಿಷ್ಟ ಶೈಕ್ಷಣಿಕ ಧ್ಯೇಯವೆನ್ನಬಹುದು.

2. ಶಿಕ್ಷಣದ ನಿರ್ದಿಷ್ಟ ಉದ್ದೇಶಗಳಲ್ಲಿ (ಧ್ಯೇಯಗಳು) ಎರಡು ವಿಧಗಳಿವೆ.

(i) ಶಾಲಾ ಧ್ಯೇಯಗಳು—ಶಾಲೆಯ ಆಶೋತ್ತರಗಳನ್ನು ಸಾಧಿಸಲು ವಿಹಿತವೆನಿಸುವ ಶಿಕ್ಷಣದ ಫಲಗಳು. ಉದಾಹರಣೆಗೆ ವಿಮರ್ಶಾತ್ಮಕ ಚಿಂತನೆಯ ಬೆಳವಣಿಗೆ.

(ii) ತರಗತಿಯ ಧ್ಯೇಯಗಳು—ಇವು ಹೆಚ್ಚು ನಿರ್ದಿಷ್ಟವಾದವುಗಳು. ಯಾವುದೇ ಒಂದು ಬೋಧನ ಘಟಕವನ್ನು ವಿಷಯ ಕ್ಷೇತ್ರ ಮೊದಲಾದವುಗಳಲ್ಲಿ ಸಾಧನೆಯಾಗಬೇಕೆಂದು ನಿಖರವಾದ ರೂಪದಲ್ಲಿ ನಿಶ್ಚಯಿಸಿಕೊಂಡಿರುವ ಅಂಶಗಳು. ಆದುದರಿಂದ ನಿರ್ದಿಷ್ಟ ಉದ್ದೇಶಗಳು ವಿಷಯಗಳ ಮತ್ತು ಕಲಿಕಾನುಭವಗಳ ಆಯ್ಕೆಗೆ ಮಾರ್ಗದರ್ಶನ ನೀಡುವುದು. ಇವು ಏನನ್ನು ಮತ್ತು ಹೇಗೆ ಬೋಧಿಸಬೇಕು ಎಂಬುದನ್ನು ತಿಳಿಸುತ್ತವೆ. ಸಾಧನೆಗಳ ಮೌಲ್ಯಮಾಪನಕ್ಕೂ ಸಹಾಯವಾಗುತ್ತದೆ. ಆದ್ದರಿಂದ ಶೈಕ್ಷಣಿಕ ಧ್ಯೇಯಗಳನ್ನು ಅತ್ಯಂತ ಜಾಗರೂಕತೆಯಿಂದ ನಿರೂಪಿಸಬೇಕು.

ಕೆಲವು ಉದ್ದೇಶಗಳು ಕ್ರಿಯೆಯಿಂದ ನಿರ್ದೇಶಿತವಾಗಿರುತ್ತವೆ. ಇನ್ನುಳಿದವು ಉದ್ದೇಶಗಳ ಮೂಲ ಹಾಗೂ ಮಟ್ಟಗಳ ಕಠಿಣತೆಯ ಪರಿಶೀಲನೆಯಿಂದ ಉದ್ಭವಿಸುತ್ತವೆ. ಅವುಗಳು

(1) ಉದ್ದೇಶ ನಿರೂಪಣೆ ನಿರೀಕ್ಷಿತ ವರ್ತನೆಯ ಮಿತಿಗಳನ್ನು ವಿವರಿಸಬೇಕು.

(2) ಯಾವ ಬಗೆಯ ವರ್ತನೆಗಳು ನಿರೀಕ್ಷಿಸಲ್ಪಟ್ಟಿವೆ ಅಥವಾ ಈ ವರ್ತನೆಗಳು ಯಾವುದಕ್ಕೆ ಸಂಬಂಧಿಸಿವೆ ಎಂಬುದರ ಬಗ್ಗೆ ಅನುಮಾನಕ್ಕೆ ಆಸ್ಪದವಿಲ್ಲದಂತೆ. ಸಂಕೀರ್ಣ ಉದ್ದೇಶಗಳು ವಿಶ್ಲೇಷಣಾತ್ಮಕವಾಗಿಯೂ ನಿರ್ದಿಷ್ಟವಾಗಿಯೂ ನಿರೂಪಿಸಲ್ಪಡಬೇಕು.

ಉದಾಹರಣೆಗೆ:

(i) ವೈಚಾರಿಕತೆಯ ಕ್ರಮವನ್ನು ಬೆಳೆಸುವಾಗ

(ii) ಸೌಂದರ್ಯವನ್ನು ಮೆಚ್ಚುವಿಕೆ

(iii) ಸತ್ಯ ನಿಷ್ಠತೆ ಬೆಳೆಸುವುದು

(iv) ಜವಾಬ್ದಾರಿಯುತ ಪೌರನಿಗೆ ಬೇಕಾದ ಮೂಲಭೂತವಾದ ಜ್ಞಾನ ಮತ್ತು ಅಭಿವ್ಯಕ್ತಿ.

ಇವು ಅಸ್ಪಷ್ಟವಾಗಿವೆ ಮತ್ತು ವಿಶಾಲವಾಗಿವೆ. ಆದರೂ ಇಂತಹ ಕೆಲವು ಉದ್ದೇಶಗಳನ್ನು ಸಾಧಿಸಬಹುದು. ಆದರೆ ಸಾಧಿಸಿದ ಮಟ್ಟವನ್ನು ಅಳೆಯುವ ಸಾಧನವಿಲ್ಲ. ಆದುದರಿಂದ ಸ್ಪಷ್ಟ ಆಲೋಚನೆಯಂತಹ ಸಂಕೀರ್ಣ ಉದ್ದೇಶವನ್ನು ಹಲವಾರು ವಿಭಾಗಗಳಾಗಿ ಮಾಡಬಹುದು.

(i) ನಿರ್ದಿಷ್ಟ ಸಂಗತಿಗಳಿಂದ ತೀರ್ಮಾನಕ್ಕೆ ಬರುವ ಸಾಮರ್ಥ್ಯ
(ii) ತತ್ವಗಳನ್ನು ಅನುಷ್ಠಾನಕ್ಕೆ ತರುವುದು
(iii) ಪ್ರಾಕಲ್ಪನೆಗಳನ್ನು ನಿರೂಪಿಸುವಲ್ಲಿ ತಾರ್ಕಿಕ ಕ್ರಮವನ್ನು ಅನುಸರಿಸುವುದು
(iv) ಸಾಧಾರಣೀಕರಿಸುವುದು

ಎರಡನೆಯದಾಗಿ, ಒಮ್ಮೆ ನಿರೂಪಿಸಿದ ಉದ್ದೇಶಗಳನ್ನು ಅದು ಎಲ್ಲ ಸಂದರ್ಭಗಳಲ್ಲಿ ಅದೇ ಅರ್ಥವನ್ನು ಕೊಡತಕ್ಕದಾಗಿರಬೇಕು. ಅಂದರೆ ಒಂದೇ ಉದ್ದೇಶವು ಹಲವಾರು ಅಭಿಪ್ರಾಯಗಳಿಗೆ ದಾರಿ ಮಾಡಿಕೊಡಬಾರದು.

ಆದುದರಿಂದ ಸಂಕೀರ್ಣ ಉದ್ದೇಶಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ವಿಶ್ಲೇಷಿಸಬೇಕು ಮತ್ತು ಅವುಗಳನ್ನು ಹಲವಾರು ಸರಳ ಉದ್ದೇಶಗಳನ್ನಾಗಿ ವಿಭಾಗ ಮಾಡಬೇಕು. ಇಂತಹ ಪ್ರತಿಯೊಂದು ಉದ್ದೇಶಗಳು ಪಠ್ಯವಸ್ತುವನ್ನು ಬೋಧನೆ ಮಾಡುವವರಿಗೂ ಮತ್ತು ಕಲಿಯುವವರಿಗೂ ಅರ್ಥವಾಗುವಂತಹ ರೀತಿಯಲ್ಲಿರಬೇಕು ಮತ್ತು ಏನನ್ನು ಸಾಧಿಸಬೇಕು ಎಂಬುದು ಗೊತ್ತಿರಬೇಕು.

3. ಭಿನ್ನ ವರ್ತನೆಗಳನ್ನು ರೂಢಿಸಿಕೊಳ್ಳಲು ಅಗತ್ಯವಾದ ಕಲಿಕೆಯ ಅನುಭವಗಳಲ್ಲಿ ಸ್ಪಷ್ಟತೆ ಇರುವಂತೆ ಉದ್ದೇಶಗಳನ್ನು ರೂಪಿಸಬೇಕು.

ಒಂದು ನಿರ್ದಿಷ್ಟ ವರ್ತನೆಯನ್ನು ರೂಪಿಸಲು ಇರುವ ಸೂಕ್ತವಾದ ಕಲಿಕೆಯ ಸನ್ನಿವೇಶಗಳನ್ನು ಮತ್ತೊಂದು ವರ್ತನೆಗಾಗಿ ಅನೇಕ ವೇಳೆ ತಪ್ಪಾಗಿ ತಿಳಿಯುವುದುಂಟು. ಆಸಕ್ತಿಯನ್ನು ಕೆರಳಿಸಲು ಯೋಜಿಸಲ್ಪಟ್ಟ ಕಲಿಕೆಯ ಅನುಭವವು ಅಭಿರುಚಿಯಲ್ಲಿ ಬದಲಾವಣೆಯನ್ನು ಉಂಟುಮಾಡದೆ ಇರಬಹುದು. ಮತ್ತೆ ಒಂದು ಕಲಿಕೆಯ ಪ್ರಕ್ರಿಯೆಯ ಕಾಲದಲ್ಲಿಯೇ ಇತರ ಅನೇಕ ಬಗೆಯ ವರ್ತನೆಗಳು ಉಂಟಾಗುತ್ತವೆ ಎಂಬುದನ್ನು ಮರೆಯಬಾರದು. ಈ ಕ್ರಿಯೆಗಳಲ್ಲಿ ಒಂದನ್ನು ಮತ್ತೊಂದರಿಂದ ವಿಶ್ಲೇಷಿಸಿ, ಪ್ರತ್ಯೇಕಿಸಬಹುದಾದರೂ ಇದು ಸಾಧುವಲ್ಲ.

ನಾವು ಉಪಯೋಗಿಸುವ ಹಲವಾರು ಬೋಧನಾ ವಿಧಾನಗಳು ಮತ್ತು ತಂತ್ರಗಳನ್ನು, ವಿವಿಧ ವಿಷಯಗಳಿಗೂ, ವಿದ್ಯಾರ್ಥಿಗಳಿಗೂ, ಮತ್ತು ಅವರು ಪಠ್ಯವಸ್ತುವಿನ ಬೋಧನೆಯಿಂದ ಏನನ್ನು ನಿರೀಕ್ಷಿಸುತ್ತಾರೊ ಅವುಗಳಿಗೆ ತಕ್ಕಂತೆ ಮಾರ್ಪಡಿಸಬೇಕು.

ಉದಾಹರಣೆಗೆ ನಾವು ಉಪಯೋಗಿಸುವ ಬೋಧನಾ ಕ್ರಮಗಳು ಪ್ರಾಥಮಿಕ ಹಂತದಿಂದ ಪ್ರೌಢಶಾಲಾ ಹಂತಕ್ಕೆ ವಿಭಿನ್ನವಾಗಿರುತ್ತದೆ. ಅದೇ ರೀತಿ ವಿಶ್ವವಿದ್ಯಾನಿಲಯದ ಹಂತದಲ್ಲಿಯೂ ವ್ಯತ್ಯಾಸವನ್ನು ಕಾಣಬಹುದು. ಇದೇ ರೀತಿಯಲ್ಲಿ ಗಣಿತವನ್ನು ಬೋಧಿಸುವ ಕ್ರಮಕ್ಕೂ ಇತಿಹಾಸವನ್ನು ಬೋಧಿಸುವ ಕ್ರಮಕ್ಕೂ ವ್ಯತ್ಯಾಸವಿರುತ್ತದೆ.

ಆದುದರಿಂದ ಇಲ್ಲಿ ನಾವು ವಿವಿಧ ಕಲಿಕೆಯ ಸನ್ನಿವೇಶಗಳನ್ನು ರೂಪಿಸಲು ಸೂಕ್ತವಾದ ವಿವಿಧ ಬೋಧನಾ ವಿಧಾನಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು.

(i) ವಿವಿಧ ಸನ್ನಿವೇಶಗಳಿಗೆ ಅಥವಾ ವಿದ್ಯಾರ್ಥಿಗಳ ಶಿಕ್ಷಣ ಮಟ್ಟಕ್ಕೆ ತಕ್ಕಂತೆ

(ii) ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ

(iii) ನಾವು ಯಾವ ನಿರ್ದಿಷ್ಟ ವರ್ತನೆಗಳನ್ನು ರೂಪಿಸಬೇಕು ಎಂಬುದಕ್ಕೆ.

4. ಉದ್ದೇಶಗಳು ವಿಶ್ವಾಸಾರ್ಹವಾದುವುಗಳಾಗಿರಬೇಕು. ಅವು ಸಾಗುವ ಮಾರ್ಗವಾಗಿರಬೇಕೇ ವಿನಹ ಅಂತಿಮ ಗುರಿಯಾಗಿರಬಾರದು.

ಅವುಗಳನ್ನು ದೀರ್ಘಕಾಲದ ಬೆಳವಣಿಗೆಯ ವಿಭಿನ್ನ ಸಂದರ್ಭಗಳಲ್ಲಿ ನಿರಂತರತೆ (Continuity) ಅಂಶಗಳ ರೂಪದಲ್ಲಿ ಭಾವಿಸಬೇಕು. ಆದರೆ ಇದನ್ನು ಯಾವುದೇ ಒಂದು ವಿಷಯ ವರ್ಗ ಅಥವಾ ಚಟುವಟಿಕೆಗೆ ಸೀಮಿತಗೊಳಿಸಬಾರದು.

5. ಉದ್ದೇಶಗಳು ವಾಸ್ತವಿಕವಾಗಿರಬೇಕು. ಅವುಗಳಿಗೆ ಬೇಕಾದ ಪಠ್ಯವಸ್ತು ಹಾಗೂ ತರಗತಿಯ ಅನುಭವಗಳನ್ನು ಜಾರಿಗೆ ತರುವಂತಹವುಗಳಾಗಿರಬೇಕು.

ಆದರ್ಶ ಬೋಧನೆ ಹಾಗು ನಡವಳಿಕೆಗಳ ನಡುವಿನ ಅಂತರ ಅತೀ ಕನಿಷ್ಠವಾಗಿರಬೇಕು.

6. ಶಾಲೆಯು ಯಾವ ಉದ್ದೇಶಗಳಿಗಾಗಿ ಇದೆಯೋ ಆ ಎಲ್ಲಾ ಬಗೆಯ ಪರಿಣಾಮಗಳನ್ನು ಒಳಗೊಳ್ಳುವಂತೆ ಉದ್ದೇಶಗಳ ವ್ಯಾಪ್ತಿಯು ವಿಶಾಲವಾಗಿರಬೇಕು.

ಪ್ರಜಾತಂತ್ರಕ್ಕೆ ವಿಧೇಯತೆ, ಸತ್ಯನಿಷ್ಠೆ, ಜವಾಬ್ದಾರಿ, ಸಹನೆ, ಮುಕ್ತ ಮನಸ್ಸು ಮುಂತಾದ ಉದ್ದೇಶಗಳ ಬಗೆಗೆ ಇಂದು ಕೇವಲ ಔಪಚಾರಿಕ ಸಹಾನುಭೂತಿಯನ್ನು ತೋರಿಸುವ ಪ್ರವೃತ್ತಿ ಇದೆ. ವಾಸ್ತವವಾಗಿ ಪಠ್ಯವಸ್ತು, ವಿಷಯ, ಕಾಲ ಹಾಗೂ ಶ್ರಮಗಳು ವಿಷಯ ಸಂಗ್ರಹಣೆಗೆ ಮತ್ತು ವಿದ್ಯುತ್ ಕುಶಲತೆಗಳಿಗಾಗಿಯೇ ಮೀಸಲಾಗಿವೆ. ಸುಲಭವಾಗಿ ಅರ್ಥವಾಗುವ ಮತ್ತು ಬೋಧಿಸಲು ಸರಳವಾಗಿರುವ ಉದ್ದೇಶಗಳು ಮಾತ್ರ ತಮ್ಮ ಹೆಚ್ಚಿನ ಸಮಯವನ್ನು ಸೆಳೆಯುತ್ತವೆ. ಆದರೆ ಅಭಿವ್ಯಕ್ತಿ ಹಾಗೂ ಭಾವನೆಗಳಿಗೆ ಸಂಬಂಧಿಸಿದ ಉದ್ದೇಶಗಳತ್ತ ಸಾಕಷ್ಟು ಗಮನ ಹರಿಯುತ್ತಿಲ್ಲ.

ಶಿಕ್ಷಣದ ಉದ್ದೇಶಗಳು ಒಂದು ಜನತೆಯ ಸಂಸ್ಕೃತಿಯಿಂದ ಜನಿತವಾಗಬೇಕು. ಒಂದು ಸಂಸ್ಕೃತಿಯ ಭಾವನೆಗಳು ಧ್ಯೇಯಗಳು, ಆಲೋಚನಾಕ್ರಮ, ಮೌಲ್ಯಗಳು, ಕೌಶಲ್ಯ ಮನೋಭಾವಗಳು, ಸಂಸ್ಥೆಗಳು ಇತ್ಯಾದಿ ಮಾನವ ನಿರ್ಮಿತ ಅಂಶಗಳು ಶಾಲೆಯ ಜೀವನದಲ್ಲಿ ಪ್ರತಿಬಿಂಬಿತವಾಗಬೇಕು.

ಈ ಸಾಧ್ಯತೆ ಸರಳರೀತಿಯ ಸಮಾಜದಲ್ಲಿ ಬಹಳ ಸುಲಭ. ಆದರೆ ಸಂಮಿಶ್ರ ಅಥವಾ ಸಂಕೀರ್ಣ ಸಮಾಜಗಳಲ್ಲಿ ಯಾವ ಭಾವನೆಗಳನ್ನು ಮೌಲ್ಯಗಳನ್ನು, ಧ್ಯೇಯ ಗಳನ್ನು, ಮನೋಭಾವಗಳನ್ನು ಶಾಲಾ ಶಿಕ್ಷಣ ಕ್ರಮ ಬೆಳೆಸಲು ಪ್ರಯತ್ನಿಸಬೇಕು? ಸಮಾಜದಲ್ಲಿ ಪರಸ್ಪರ ವಿರುದ್ಧ ಮತ್ತು ವಾದಗ್ರಸ್ತ ಭಾವನೆಗಳು ಪ್ರಬಲವಾಗಿದ್ದಾಗ ಶಾಲಾಶಿಕ್ಷಣವು ತನ್ನ ಮೂಲೋದ್ದೇಶಗಳನ್ನು ಕೆಲವು ನಿರ್ಣಾಯಕ ತತ್ವಗಳ ಆಧಾರದ ಮೇಲೆ ರೂಪಿಸಿಕೊಳ್ಳಬೇಕು.

1. ಸಾಮಾಜಿಕ ಯಥೋಚಿತತೆ: ಇದು ಮೊದಲನೆಯ ನಿರ್ಣಾಯಕ ತತ್ವ. ಶಿಕ್ಷಣದ ಉದ್ದೇಶಗಳನ್ನು ಈ ಸಾಮಾಜಿಕ ಯಥೋಚಿತತೆ ಎಂಬ ಒರೆಗಲ್ಲಿಗೆ ಒಳಪಡಿಸ ಬೇಕು. ಬೆಳೆಯುತ್ತಿರುವ ಪ್ರಗತಿಪರವಾದ ಸಮಾಜದಲ್ಲಿ ಯಾವ ಧ್ಯೇಯ ಭಾವನೆ ಗಳೂ ಶಾಶ್ವತವಲ್ಲ. ಅದರಲ್ಲಿಯೂ ಅಸಾಧ್ಯ ರೀತಿಯಲ್ಲಿ ಬದಲಾಗುತ್ತಿರುವ ಆಧುನಿಕ ಸಮಾಜದಲ್ಲಿ ನಿನ್ನೆಯ ಆದರ್ಶ, ಧ್ಯೇಯ ಧೋರಣೆ ಇಂದಿಗೆ ಸಾಲದು. ಇವತ್ತಿನ ಸಮಸ್ಯೆಗಳಿಗೆ ನಿನ್ನೆಯ ಉತ್ತರ ಅಷ್ಟು ಪ್ರಯೋಜನಕಾರಿಯಲ್ಲ. ಉದಾ: 16, 17ನೇ ಶತಮಾನದಲ್ಲಿ ಧಾರ್ಮಿಕ ಶಿಕ್ಷಣಕ್ಕೆ ನೀಡುತ್ತಿದ್ದ ಪ್ರೋತ್ಸಾಹ (16ನೇ ಮತ್ತು 17ನೇ ಶತಮಾನಗಳಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದರು. ಆದರೆ 18ನೇ ಮತ್ತು 19ನೇ ಶತಮಾನಗಳಲ್ಲಿ ಉದಾರ ಶಿಕ್ಷಣದತ್ತ ಜನರ ಒಲವು ತಿರುಗಿತು. ಕಾಲಕ್ರಮೇಣ 20ನೇ ಶತಮಾನದಲ್ಲಿ ವೈಜ್ಞಾನಿಕ, ತಾಂತ್ರಿಕ ಶಿಕ್ಷಣವು ಈ ಸ್ಥಾನವನ್ನು ಆಕ್ರಮಿಸಿತು).

2. ಮಾನವನ ಮೂಲಭೂತ ಆವಶ್ಯಕತೆಗಳನ್ನು ಪೂರೈಸಲು ಸಹಾಯಕ ವಾಗಿರಬೇಕು ಎಂಬುದು ಎರಡನೆಯ ನಿರ್ಧಾರಕ ತತ್ವ. ಉತ್ತಮ ಶಿಕ್ಷಣ ಮಾನವನ ಅವಶ್ಯಕತೆಗಳ ಪೂರೈಕೆಗೆ ಸಹಕಾರಿಯಾಗಿರಬೇಕು. ಯಾವ ಅವಶ್ಯಕತೆಗಳು ಮಾನವನ ಬಾಳ್ವೆಗೆ ಅಗತ್ಯ ಎಂಬುದನ್ನು ಶಿಕ್ಷಣವು ತತ್ವಶಾಸ್ತ್ರ, ಸಮಾಜಶಾಸ್ತ್ರ, ಜೀವಶಾಸ್ತ್ರ ಮತ್ತು ಮನಶ್ಶಾಸ್ತ್ರಗಳ ಸಹಾಯದಿಂದ ನಿರ್ಧರಿಸಬೇಕು.

ಮಾನವನ ಆವಶ್ಯಕತೆಗಳನ್ನು ಪ್ರಾಥಮಿಕ ಅಥವಾ ಮೂಲಭೂತ ಆವಶ್ಯ ಕತೆಗಳು ಮತ್ತು ಆನುಷಂಗಿಕ ಆವಶ್ಯಕತೆಗಳು ಎಂಬುದಾಗಿ ವಿಂಗಡಿಸಬಹುದು. ಮಾನವನ ಜೀವನಕ್ಕೆ ಅತ್ಯಂತ ಅಗತ್ಯವಾದವುಗಳನ್ನು ಮೂಲಭೂತ ಆವಶ್ಯಕತೆಗಳು ಎನ್ನುತ್ತಾರೆ. ಉದಾ–ಆಹಾರ, ವಸತಿ, ಬಟ್ಟೆಗಳು ಇತ್ಯಾದಿ. ಆನುಷಂಗಿಕ ಆವಶ್ಯ ಕತೆಗಳು ಎಂದರೆ ಮೂಲಭೂತ ಆವಶ್ಯಕತೆಗಳನ್ನು ಹೊಂದಲು ಸಹಾಯಕವಾಗು

ವಂತಹವುಗಳು ಉದಾ-ಆಹಾರ ಮೂಲಭೂತ ಆವಶ್ಯಕತೆ. ಆಹಾರವನ್ನು ಹೊಂದಲು ಭೂಮಿಯನ್ನು ಹೊಂದಿರಬೇಕು, ವ್ಯವಸಾಯಕ್ಕೆ ಸಲಕರಣೆಗಳು, ಕಾರ್ಮಿಕ ವರ್ಗ, ಗೊಬ್ಬರ ಹಾಗೂ ಕೃಷಿ ವಿಜ್ಞಾನದ ಇತ್ತೀಚಿನ ಸಾಧನೆಗಳು ಇತ್ಯಾದಿ ಆವಶ್ಯಕ. ಈ ಆವಶ್ಯಕತೆಗಳನ್ನು ಹೊಂದಲು ಮಾನವನು ಹಣವನ್ನು ಸಂಪಾದಿಸಬೇಕು. ಇವೆಲ್ಲವೂ ಆನುಷಂಗಿಕ ಬೇಡಿಕೆಗಳಾಗಬಹುದು. ಆದರೂ ಈ ಆನುಷಂಗಿಕ ಆವಶ್ಯಕತೆಗಳು ಮೂಲ ಆವಶ್ಯಕತೆಗಳಿಗಿಂತ ಯಾವ ರೀತಿಯಲ್ಲೂ ಕಡಮೆಯಿಲ್ಲ.

3. ಪ್ರಜಾಸತ್ತಾತ್ಮಕ ಧ್ಯೇಯಗಳನ್ನು ಒಳಗೊಂಡಿರಬೇಕು ಎಂಬುದು ಮೂರನೇ ತತ್ವ. ಯಾವುದೇ ಸಮಾಜಕ್ಕಾದರೂ ಆದರದೆ ಆದ ಸಂಸ್ಕೃತಿ ಹಾಗೂ ರಾಜಕೀಯ ತತ್ವವಿರುತ್ತದೆ. ಶಿಕ್ಷಣ ಮತ್ತು ಅದರ ಧ್ಯೇಯಗಳು ಈ ಮೂಲ ತತ್ವವನ್ನು ಪ್ರೋತ್ಸಾಹಿಸುವಂತಿರಬೇಕು ಹಾಗೂ ಪ್ರತಿಬಿಂಬಿಸುವಂತಿರಬೇಕು. ಉದಾ-ನಮ್ಮ ಸಮಾಜ ಪ್ರಜಾಪ್ರಭುತ್ವದ ಬುನಾದಿಯ ಮೇಲೆ ನಿಂತಿದೆ. ಶಿಕ್ಷಣವು ಯಾವ ಧ್ಯೇಯ ಗುರಿಗಳನ್ನು ಅನುಸರಿಸಿದರೂ, ಕಾರ್ಯಕ್ರಮಗಳನ್ನು ಕೈಗೊಂಡರೂ ಈ ಮಹಾತತ್ವಕ್ಕೆ ಅನುಗುಣವಾಗಿರಬೇಕೆ ವಿನಹ ವಿರೋಧವಾಗಿರಬಾರದು.

4. ಉದ್ದೇಶಗಳು ಒಂದಕ್ಕೊಂದು ಸಂಬಂಧವನ್ನು ಹೊಂದಿರಬೇಕೇ ವಿನಃ ವಿರೋಧವನ್ನು ಹೊಂದಿರಬಾರದು ಎಂಬುದು ನಾಲ್ಕನೆಯ ತತ್ವ. ವಿವಿಧ ಶೈಕ್ಷಣಿಕ ಉದ್ದೇಶಗಳು ಒಂದಕ್ಕೊಂದು ಸಂಬಂಧ ಪಡೆದಿರಬೇಕು. ಅಂದರೆ ಉದ್ದೇಶಗಳಲ್ಲಿ ಪರಸ್ಪರ ತಾರ್ಕಿಕ ಸಮಂಜಸತೆಯಿರಬೇಕು.

ಉದಾ :-ಪಠ್ಯವಸ್ತುವಿನ ಒಂದು ಭಾಗದಲ್ಲಿ ಕಾರ್ಮಿಕ ವರ್ಗ ಮತ್ತು ಆಡಳಿತ ವರ್ಗಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಬೋಧಿಸುವುದು; ಮತ್ತೊಂದು ಕಡೆ ಕಾರ್ಮಿಕ ವರ್ಗದ ಶೋಷಣೆ ಅವುಗಳಿಗೆ ಅನುಗುಣವಾದಂಥಹ ಮಾರ್ಗಗಳು ಮುಂತಾದುವುಗಳನ್ನು ತಿಳಿಸುವುದು.

ಧ್ಯೇಯಗಳನ್ನು ನಿರ್ಧರಿಸಿ ಪಠ್ಯವಸ್ತುವನ್ನು ರೂಪಿಸುವಾಗ ಸಾಧ್ಯವಾದಷ್ಟು ಮಟ್ಟಿಗೆ ಉದ್ದೇಶಗಳ ನಡುವೆ ಸಂಬಂಧವಿರಬೇಕು. ಇಲ್ಲವಾದಲ್ಲಿ ತಟಸ್ಥ ಧೋರಣೆಯನ್ನಾದರೂ ತಳೆಯಬೇಕು. ಸಾಧ್ಯವಾಗದಿದ್ದಲ್ಲಿ ಭಿನ್ನಾಭಿಪ್ರಾಯಗಳನ್ನು ಅತ್ಯಂತ ಕಡಿಮೆಗೊಳಿಸಬೇಕು.

5. ಕೊನೆಯದಾಗಿ ಪ್ರತಿಯೊಂದು ಶೈಕ್ಷಣಿಕ ಧ್ಯೇಯವೂ ಮಾನವನ ವರ್ತನೆಗಳ ರೂಪದಲ್ಲಿ ನಿರೂಪಿಸಲ್ಪಡಬೇಕು.

ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಧ್ಯೇಯಗಳಿವೆ. ಈ ಧ್ಯೇಯಗಳು ನಮ್ಯತೆಯಿಂದಿರಬೇಕು. ಅಂದರೆ ಅವುಗಳು ಆಚರಿಸಲು ಯೋಗ್ಯವಾದಂತಹ ವರ್ತನೆಗಳಾಗಿರಬೇಕು.

ಉದಾ :-ಪೌರ ಜವಾಬ್ದಾರಿಯನ್ನು ಬೆಳೆಸುವುದು.

ಪೌರ ಜವಾಬ್ದಾರಿ ಎಂದರೇನು ? ಈ ಅರ್ಹತೆಯನ್ನು ಹೊಂದಲು ಬೇಕಾದಂತಹ ಸ್ಪಷ್ಟವಾದ ವರ್ತನೆಗಳೇನು ? ಎಂದು ತಿಳಿಯದಿದ್ದರೆ ಈ ಧ್ಯೇಯವು ಅರ್ಥಪೂರ್ಣ ವಾಗದು. ಅಂದರೆ

(i) ವ್ಯಕ್ತಿಯು ತನ್ನ ಮತಚಲಾವಣೆಯನ್ನು ಮಾಡಬೇಕು.
(ii) ಪ್ರತಿನಿತ್ಯವೂ ರಾಜಕೀಯ ವರ್ತಮಾನಗಳನ್ನು ಓದುತ್ತಿರಬೇಕು.
(iii) ತನ್ನ ಹಕ್ಕು ಹಾಗೂ ಕರ್ತವ್ಯಗಳನ್ನು ಚಲಾಯಿಸಬೇಕು.

ವ್ಯಕ್ತಿಯು ಮೇಲಿನ ಎಲ್ಲಾ ಷರತ್ತುಗಳನ್ನು ಪಾಲಿಸಿದರೆ ಅವನು ತನ್ನ ಪೌರ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವನು ಎಂದು ಹೇಳಬಹುದು. ಆಗ ಆ ಧ್ಯೇಯವು ವಿಶ್ವಸನೀಯವಾಗುತ್ತದೆ.

ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಉದಾತ್ತ ಧ್ಯೇಯಗಳಿರುತ್ತವೆ. ಎಷ್ಟೋ ವೇಳೆ ಆ ಧ್ಯೇಯಗಳನ್ನು ಕಾರ್ಯಾಚರಣೆಗೆ ತರಲು ಸಾಧ್ಯವಾಗುವುದಿಲ್ಲ. ಅವುಗಳು ಅಸ್ಪಷ್ಟವಾಗಿದ್ದಲ್ಲಿ ನಮಗೆ ಯಾವ ರೀತಿಯ ಪ್ರಯೋಜನವೂ ಆಗುವುದಿಲ್ಲ. ಆದುದ ರಿಂದ ಪ್ರತಿಯೊಂದು ಧ್ಯೇಯವನ್ನು ನಿರ್ದಿಷ್ಟವಾದ, ನಿಖರವಾದ ರೀತಿಯಲ್ಲಿ ಅವಲೋಕಿಸಬಹುದಾದ ವರ್ತನೆಗಳ ರೂಪದಲ್ಲಿ ನಿರೂಪಿಸಬೇಕು.

ಡಾ. ಕೃ. ಪೊದುವಾಳ್

ಅಂತರರಾಷ್ಟ್ರೀಯ ಕಾರ್ಮಿಕ ಸಂಘ —ಒಂದು ಚಿಂತನೆ

ಸಂಕ್ಷಿಪ್ತ ಹಿನ್ನೆಲೆ :

'ಬಡತನ ಎಲ್ಲಿಯೇ ಇರಲಿ ಅದು ಎಲ್ಲೆಡೆಯ ಶ್ರೇಯಸ್ಸಿಗೆ ಅಪಾಯ', ಎಂಬುದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಬುನಾದಿ ಸೂತ್ರ. ಜಾಗತಿಕ ಸಮರದ ಸಾಮಾಜಿಕ–ಆರ್ಥಿಕ ದುರವಸ್ಥೆ, ಕಸಿಯಾದ ಕಾರ್ಮಿಕ ಚಳುವಳಿ ಆಧರಿಂತ ಪ್ರಪ್ರಥಮ ಕಾರ್ಮಿಕ ಕೇಂದ್ರಸರಕಾರ ಹಾಗೂ ಪ್ರಚಲಿತ ಜಾಗೃತಿಗಳಿಂದ ಜನಿಸಿದ ಶಿಶು, ಅಂತರರಾಷ್ಟ್ರೀಯ ಕಾರ್ಮಿಕ ಸಂಘ (I.L.O.). ತಲೆದೋರಿದ ದ್ವಿತೀಯ ಮಹಾಯುದ್ಧದಿಂದಾಗಿ ಬಾಲಗ್ರಹಕ್ಕೆ ತುತ್ತಾದ ಅಂ.ಕಾ.ಸಂ., ಪುನಶ್ಚೇತನ ಪಡೆದು ಇದೀಗ ತನ್ನ 71ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಅನೇಕ ಘನ ಧ್ಯೇಯೋದ್ದೇಶಗಳನ್ನಾಧರಿಸಿ ಕಾರ್ಮಿಕ ಹಿತ ಸಾಧಿಸಲೆತ್ನಿಸುವ ಅಂ.ಕಾ.ಸಂ., ಎದುರು ಅನೇಕ ಸಮಸ್ಯೆಗಳಿವೆ,

ಮಾಲಿಕ–ಕಾರ್ಮಿಕ ಸಂಬಂಧ :

ಪ್ರಗತಿಸ್ತರ ಸಾಧಿಸಲು ಕೈಗಾರಿಕಾ ಸಾಮರಸ್ಯ ಹೇಗೆ ಅವಶ್ಯಕವೋ ಹಾಗೆಯೇ ಕೈಗಾರಿಕಾ ಸಾಮರಸ್ಯಕ್ಕೆ ಉತ್ತಮ ಮಾಲಿಕ–ಕಾರ್ಮಿಕ ಸಂಬಂಧ ಅತ್ಯಗತ್ಯ.

ಕ್ರಿಯಾತ್ಮಕ ಮೂರು ಅಂಗಗಳಿಂದ ಕೂಡಿ ಅನೇಕಾನೇಕ ತಜ್ಞ ಸಮಿತಿಗಳನ್ನು ತನ್ನ ಕಾರ್ಯಸಮುಚ್ಛಯದಲ್ಲಿ ಸಮಾವೇಶಮಾಡಿಕೊಂಡಿರುವ ಅಂ.ಕಾ.ಸಂ., ತನ್ನ 118 ಸದಸ್ಯ ರಾಷ್ಟ್ರಗಳ ಕಾರ್ಮಿಕ ಶಾಸನಗಳನ್ನು ಬಹುತೇಕ ರೂಪಿಸಿದೆ, ಎನ್ನಬಹುದು. ಕಾರ್ಮಿಕ ವಿಪ್ಲವಗಳನ್ನು ಬುಡದಲ್ಲಿಯೇ ಚಿವುಟಿಹಾಕಲು ಕಾರಣವಾಗುವ ಏಕೈಕ ಸಾಧನವಾದ ಉತ್ತಮ ಮಾಲಿಕ–ಕಾರ್ಮಿಕ ಸಂಬಂಧವನ್ನು ಪೂಜಿಸುವ–ಬೆಳೆಸುವ ಯಶಸ್ವೀ ವೇದಿಕೆಯನ್ನು ಅಂ.ಕಾ ಸಂ. ಹುಟ್ಟುಹಾಕಿದೆಯೆನ್ನಬಹುದು.

ಪ್ರಗತಿಪರ ರಾಷ್ಟ್ರಕ್ಕೆ ಸಬಲ, ಕ್ರಿಯಾತ್ಮಕ ಹಾಗೂ ಕಾರ್ಯಪಟು ಕಾರ್ಮಿಕ ವ್ಯೂಹ ಬೆನ್ನೆಲುಬು. ಸಿಹಿ–ಕಹಿ, ಮಾಲಿಕ–ಕಾರ್ಮಿಕ ಸಂಬಂಧ ದೇಹದಲ್ಲಿ ಹರಿಯುವ ರಕ್ತದಂತೆ.

ಸಮಸ್ಯೆಗಳ ಹಿಂದು-ಮುಂದು :

ಕೆಲವು ನಿರ್ದಿಷ್ಟ ಸಮಸ್ಯೆಗಳ ಗಂಭೀರ ಹಿನ್ನೆಲೆಯಲ್ಲಿ ILO ಪಾತ್ರ ಗುರುತಿಸುವುದು ಕಾರ್ಮಿಕ ದಿನದಂದು ಪ್ರಶಸ್ತವೆಂದೆನಿಸುತ್ತದೆ.

ರೂಢಿತ ನಿಯಮಗಳು ಮತ್ತು ಶಿಫಾರಸ್ಸುಗಳು :

ಇವುಗಳ ಮುಖಾಂತರ ಕನಿಷ್ಟ ಕಾರ್ಮಿಕ ಪರಿಮಾಣಗಳನ್ನು ನಿಯಂತ್ರಿಸುತ್ತಿದ್ದ ಅಂ.ಕಾ.ಸಂಘವು ದ್ವಿತೀಯ ಮಹಾಯುದ್ಧದ ನಂತರ, ಸ್ವತಂತ್ರಗೊಂಡ ದೇಶಗಳ ಕೈಗಾರೀಕರಣಕ್ಕೆ ಬೇಕಾದ ಮೂಲಭೂತ ಸವಲತ್ತುಗಳ ಬೆಳವಣಿಗೆಗೆ ಒತ್ತಾಸೆ ನೀಡಿತು. ಝೆಕೋಸ್ಲೋವಾಕಿಯಾ, ಈಜಿಪ್ಟ್ ಮತ್ತು ಭಾರತಗಳಿಗೆ ಸಣ್ಣ ಪ್ರಮಾಣದ ತಾಂತ್ರಿಕ ಜ್ಞಾನವನ್ನು ಬಳುವಳಿಯಾಗಿತ್ತಿತು.

ಮಾನವ ಸಂಪನ್ಮೂಲ ರಚನೆ ಹಾಗೂ ಉದ್ಯಮ ತರಬೇತಿಯಲ್ಲಿ ಅಂ. ಕಾ. ಸಂಘವು ದಾಪುಗಾಲಿಕ್ಕಿತು. ಯುರೋಪು, ರಷಿಯಾ, ಲ್ಯಾಟಿನ್ ಅಮೆರಿಕಾ ಹಾಗೂ ಮಧ್ಯಪೂರ್ವ ದೇಶಗಳಿಗೆ ಪೂರ್ಣ ಉದ್ಯೋಗ ಸೃಜನೆ ಹಾಗೂ ಜೀವನಮಟ್ಟ ಸುಧಾರಣೆಗಾಗಿ ಮುತ್ಸದ್ದಿ ನೆರವು ನೀಡಿತು. 'ಏಶಿಯಾ ಮಾನವಶಕ್ತಿ ಯೋಜನೆ' ಯಡಿಯಲ್ಲಿ ತಜ್ಞ ಸೇವೆ ಅನೇಕ ದೇಶಗಳಿಗೀಗ ಲಭ್ಯ.

ವಿಶ್ವ ಉದ್ಯೋಗ ಯೋಜನೆಯಡಿಯಲ್ಲಿ ಅಭಿವೃದ್ಧಿಪರ ರಾಷ್ಟ್ರಗಳಲ್ಲಿ ತಾಂಡವವಾಡುವ ನಿರುದ್ಯೋಗವನ್ನು ಹತ್ತಿಕ್ಕಲು ಕ್ರಿಯಾತ್ಮಕ ಉದ್ಯೋಗ ಸೃಜನೆಯ ರೂಪರೇಶೆಗಳನ್ನು ಅಂ.ಕಾ.ಸಂಘವು ಕೈಗೊಂಡಿತು.

1970ರಲ್ಲಿ ಕೊಲಂಬಿಯಾವು ಅಂ.ಕಾ. ಸಂಘದಿಂದ ಪ್ರಪ್ರಥಮ ಉದ್ಯೋಗ ತಳಹದಿ ಸಂಹಿತೆಯನ್ನು ಪಡೆದುಕೊಂಡುದು ಸ್ಮರಣೀಯ.

ವಲಸೆ ಕೆಲಸಗಾರರು ಆತಿಥೇಯ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯಲ್ಲಿ ಕ್ರಿಯಾತ್ಮಕ ಪಾತ್ರ ವಹಿಸುತ್ತಿದ್ದಾರೆ ಎಂಬುದು ನಿಜ. ಆದರೆ ದೇಶಗಳ ತಾರತಮ್ಯ ನೀತಿ ಅವರ ಪಾಲಿಗೆ ತುತ್ತಾಗಿದೆ. 1971ರಲ್ಲಿ ಅಂ.ಕಾ. ಸಂಘವು ಕೈಗೊಂಡ ನಿರ್ಣಯ ಈ ದಿಶೆಯಲ್ಲಿ ಗಮನೀಯ : ಸಮಾನತೆ ತರುವಲ್ಲಿ ಹಾಗೂ ತಾರತಮ್ಯ ನೀಗುವುದರಲ್ಲಿ ಇದರ ಪಾತ್ರ ಮಹತ್ತರವಾದುದು.

ಮಹಿಳಾ ಕೆಲಸಗಾರರಿಗೆ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಪೂರ್ಣ ಅವಕಾಶಗಳನ್ನು ನೀಡುವುದರಲ್ಲಿ, ಕೆಲಸ ಆಯ್ಕೆಯಲ್ಲಿ ಉತ್ತಮ ನಿಬಂಧನೆಗಳನ್ನು ರಚಿಸುವುದರಲ್ಲಿ, ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದರಲ್ಲಿ, ಅಪಾಯಕಾರಿ ಕೆಲಸಗಳಲ್ಲಿ ಕಾನೂನು ನೆರವಿನ ಹಸ್ತ ನೀಡುವುದರಲ್ಲಿ ಹಾಗೂ ಪುರುಷರಂತೆಯೇ 'ಕಾರ್ಮಿಕ ಸಂಘ' ಹಕ್ಕು ನೀಡಿಕೆಯಲ್ಲಿ ಅಂ.ಕಾ. ಸಂಘವು ಗಣನಾತ್ಮಕ ಧೋರಣೆಯನ್ನು ತಳೆದಿದೆ.

ರೂಢನಿಯಮ 89, ರಾತ್ರೀ ವೇಳೆಯ ಕೆಲಸಗಳಿಗೆ ಸ್ತ್ರೀ ಕಾರ್ಮಿಕರನ್ನು ಹೊರತು

ಪಡಿಸುತ್ತದೆ. ಒಂದು ಅಧ್ಯಯನ ರೀತ್ಯ $\frac{2}{3}$ ರಷ್ಟು ರಾತ್ರಿ ಶ್ರಮಿಕರು ನಿದ್ರೆ ರಹಿತೆಯಿಂದ ಬಳಲುವರೆಂದು ತಿಳಿದುಬಂದಿದೆ. ಅವರು ನಿದ್ರಾರೋಗಗಳಿಗೆ ಸದಾ ದಾಸರು.

ಸಾಮಾಜಿಕ ಭದ್ರತೆ :

ಇಂದಿನ ಕೈಗಾರಿಕಾ ಕೆಲಸಗಾರರಿಗೆ ಆರ್ಥಿಕ ಜೀವನದಲ್ಲಿ ಸಾಮಾನ್ಯವಾಗಿ ಅನಿರೀಕ್ಷಿತವಾಗಿ ಸಂಭವಿಸುವ ಅನಾಹುತಗಳಿಗೆ ಭದ್ರತಾ ನೀಡಿಕೆ ಬಹು ಮುಖ್ಯ. ಆರೋಗ್ಯ, ಹೆರಿಗೆ; ಉದ್ಯೋಗದಲ್ಲಾಗುವ ದೈಹಿಕ ನೋವು—ಮುಂತಗಳಿಗೆ ಸಾಮಾಜಿಕ ಭದ್ರತೆ ಅತೀ ಮುಖ್ಯ. ಅಂ.ಕಾ. ಸಂಘವು ಈ ದಿಶೆಯಲ್ಲಿ ಮುಂದುವರಿದು ಸಾಮಾಜಿಕಾಭದ್ರತಾ ನಿಯಮಗಳು ವ್ಯವಸಾಯ ಹಾಗೂ ತೋಟಗಾರಿಕಾ ಕ್ಷೇತ್ರಗಳ ಕೆಲಸಗಾರರಿಗೂ ಅನ್ವಯಿಸುವ ಧ್ಯೇಯವಿಟ್ಟುಕೊಂಡಿರುವುದು ಕಾರ್ಮಿಕ ಪುರೋಗತಿಗೊಂದು ಮೈಲಿಗಲ್ಲು.

ಮೂಲಭೂತ ಹಕ್ಕುಗಳು :

'ಸಂಘ' ಸ್ಥಾಪನೆ ಸ್ವಾತಂತ್ರ್ಯ ಅಂ.ಕಾ. ಸಂಘವು ರೂಢಿಗೆ ತಂದ ನಡವಳಿಕೆ. ಆದರೆ ಭಾರತದಲ್ಲಿ ಸದ್ರಿ ಹಕ್ಕನ್ನು ಸಾರ್ವಜನಿಕ ರಂಗಕ್ಕೆ ಅನ್ವಯಿಸಿದರೆ, ಕಾರ್ಮಿಕರನ್ನು ಅವರ ಬೇಜವಾಬ್ದಾರಿಗೆ ಹೊಣೆಗಾರಿಕೆ ಮಾಡುವ ಪ್ರಶ್ನೆ ಹುಟ್ಟಿನಲ್ಲಿಯೇ ಸಾಯುತ್ತದೆ. ಭಾರತದ ಘಟನಾ ವಿಧಿಯು ಪ್ರಸಕ್ತ ಹಕ್ಕನ್ನು ಮೊಟಕುಗೊಳಿಸುವ/ನಿಷೇಧಿಸುವ ಅಧಿಕಾರ ಪ್ರಾಂತ್ಯಸರ್ಕಾರಗಳ ಅಧೀನದಲ್ಲಿರಿಸಿದೆ.

ಸಾಮಾಜಿಕ ಚೌಕಾಶಿಗಾಗಿ ಅಂ.ಕಾ. ಸಂಘವು ಒತ್ತಾಸೆ ನೀಡುತ್ತ ಬಂದಿದೆ. ಆದರೆ ಭಾರತದ ಪ್ರಚಲಿತ ಚೌಕಟ್ಟಿನಲ್ಲಿ ನ್ಯಾಯಾಲಯಗಳ ಭದ್ರ ಮುಷ್ಟಿಯಲ್ಲಿ ಉದ್ಯೋಗ ಮತ್ತು ಅದಕ್ಕೆ ಸಂಬಂಧಿಸಿದ ವೇತನ ಅಂಶಗಳು ಸಿಕ್ಕಿಹಾಕಿಕೊಂಡಿರುವುದರಿಂದ ಸಾಮಾಜಿಕ ಚೌಕಾಶಿ ಜರ್ಜರಿತ. ಪ್ರಜಾಪ್ರಭುತ್ವದ ಜೀವನಾಡಿಯೇ ಸಾಮಾಜಿಕ ಚೌಕಾಶಿಯೆನ್ನಬಹುದು. ಒಂದು ರೀತಿಯಲ್ಲಿ ಅಂ.ಕಾ. ಸಂಘವು ಈ ವಿಷಯದಲ್ಲಿ ನಿರುಪಾಯವಾಗಿದೆ.

ಬಲವಂತವಾಗಿ ಕಾರ್ಮಿಕರನ್ನು ಉಪಯೋಗಿಸುವುದು :

ಭಾರತದ ಘಟನಾವಿಧಿಯ ಪ್ರಕಾರ ನಿಷಿದ್ಧ (ಘಟನೆ 23). ILO ಇದರ ಪ್ರೋತ್ಸಾಹಕ. ಪುರಾತನ ಪಾಶವೀತನ, ಹಿಂಸೆ, ಸಂಬಳಕೊಡದೆ ಸತಾಯಿಸುವುದು, ಜೀತದಾಳುತನ—ಬಹುತೇಕ ಅದೃಶ್ಯವಾಗಿದೆ ಎನ್ನಬಹುದು. ILO ಪ್ರಕಾರಕ್ಕೆ ಪ್ರಚಾರಕ್ಕೆ, ಅನುಷ್ಠಾನಕ್ಕೆ ತಂದ ನಿಯಮಾವಳಿಗಳು ಇದಕ್ಕೆ ಕಾರಣ.

ಕಾರ್ಮಿಕ ಶಿಕ್ಷಣದ ಮೂಲಕ ಕಾರ್ಮಿಕ ಜಾಗೃತಿ ಹಾಗೂ ಉತ್ಪಾದಕತೆ ಆರ್ಥಿಕಗೊಳಿಸುವುದು, ILO ಶೃತಿ. ಆಗ ಉತ್ಪಾದಕತೆಗೂ ವೇತನಕ್ಕೂ ನೇರ ಕೊಂಡಿ ಸಾಧ್ಯ. ಆಗ ಮಾತ್ರ ಆರ್ಥಿಕಾಭಿವೃದ್ಧಿಗೆ ಕಾರ್ಮಿಕ ಶಕ್ತಿ ಬೀಜಮಂತ್ರವಾಗಬಲ್ಲದು.

ಆಡಳಿತೆಯಲ್ಲಿ ಕಾರ್ಮಿಕರ ಪಾತ್ರ :

ನಿರ್ಣಯತೆಗೆದುಕೊಳ್ಳುವುದರಲ್ಲಿ ಕಾರ್ಮಿಕ ಪಾಲುಗೊಂಡಾಗ ಅವನ ಜವಾಬ್ದಾರಿ ಇಮ್ಮಡಿ ಮುಮ್ಮಡಿಗೊಳ್ಳುತ್ತದೆ. ತನ್ನ ಉದ್ಯೋಗ ಘಟಕದ ಶ್ರೇಯಸ್ಸಿಗೆ ಅವನ ಪಾಲು ನಿಖರವಾಗುವುದರಿಂದ, ಅವನ ಗುರಿ-ದಾರಿಗಳು ಸ್ಪಷ್ಟ ಗೊಳ್ಳುತ್ತವೆ. ಪ್ರಸಕ್ತ ದಿಶೆಯಲ್ಲಿ ಭಾರತದಲ್ಲಿ ಕೆಲವು ಪ್ರಯತ್ನಗಳು ಸಾಗುತ್ತಿವೆ. 21–4–90ರ ಭಾರತದ ಕಾರ್ಮಿಕ ಸಮಾವೇಶದಲ್ಲಿ ಪ್ರಸಕ್ತ ವಿಷಯವು ಚರ್ಚೆ ಗೊಳ್ಳಲಿವೆ.

ಕೊನೇ ಮಾತು :

ಅಂ. ಕಾ. ಸಂಘವು ವಿಶ್ವ ಕಾರ್ಮಿಕ ಶಾಸನ, ವಿಶ್ವ ಸಮಾಜವಾದಿ ಚಳುವಳಿ, ವಿಶ್ವ ಕಾರ್ಮಿಕ ಸಂಘ ಚಳುವಳಿ ಹಾಗೂ ಕಾರ್ಮಿಕ ರಕ್ಷಣೆಯ ಕಾರ್ಯಸಮುಚ್ಛಯದಲ್ಲಿ ತೊಡಗಿಸಿಕೊಂಡಿದೆ.

ಯುದ್ಧದ ಆಕರ್ಷಣಾಶಕ್ತಿ ಪ್ರಬಲ ಶಾಂತಿಯ ಶಕ್ತಿಯು ನಿರ್ಮಲ ಮತ್ತು ನಿಧಾನವಾಗಿ ಪ್ರಭಾವ ಬೀರುವಂಥದ್ದು. ಯುದ್ಧಭೀತಿ ನಿವಾರಿಸಿ ಶಾಂತಿಯನ್ನು ಕಾಪಾಡುವುದರಲ್ಲಿ ಬೃಹತ್ ಪಾತ್ರವಹಿಸುವ ವಿಶ್ವಸಂಸ್ಥೆಯ ಪ್ರಪ್ರಥಮ ಶಿಶುವಾದ ಅಂ.ಕಾ. ಸಂಘವು ಇಂದಿನ ಸಂಕ್ರಮಣ ಯುಗದ ಕಾರ್ಮಿಕ ಪ್ರಗತಿಸಾಧನೆಯತ್ತ ಕೆಲವು ದಿಟ್ಟಹೆಜ್ಜೆಯನ್ನಿಡುತ್ತಿರುವುದು ಶ್ಲಾಘನೀಯ.

ಡಾ. ಟಿ. ಬಿ. ಬಸವರಾಜ್

ಶ್ರೀ ರಾಮಕೃಷ್ಣ, ವಿವೇಕಾನಂದ ಮತ್ತು ಕಾರ್ಲ್‌ಮಾರ್ಕ್ಸ್‌ರ ತಾತ್ತ್ವಿಕ ಹಿನ್ನೆಲೆಯಲ್ಲಿ ಧರ್ಮವನ್ನು ಕುರಿತ ಆಧುನಿಕ ವಿಮರ್ಶೆ

ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರು 'ಧರ್ಮ' ಎಂಬ ಶಬ್ದಕ್ಕೇ ಹೊಸ ಆಯಾಮವನ್ನು ಕೊಟ್ಟವರು. ಕೆಟ್ಟ ರೂಢಿ-ಪರಂಪರೆಗಳನ್ನೇ ಧರ್ಮವೆಂದು ಸಾರುತ್ತಿದ್ದ ಜನರ ನಡುವೆ, ನೈಜಧರ್ಮದ ಅರಿವನ್ನು ಮೂಡಿಸಿ, ಧರ್ಮದ ಅಂತಃಸ್ಸತ್ವವನ್ನು ತಮ್ಮ ಇಡೀ ಬದುಕಿನಲ್ಲಿಯೇ ಅನುಷ್ಠಾನಗೊಳಿಸಿ ತೋರಿಸಿಕೊಟ್ಟವರು. ಅಂತೆಯೇ ಧರ್ಮವನ್ನು ಕುರಿತು ಆಧುನಿಕ ಕಾಲದಲ್ಲಿ ಒಡಮೂಡಿರುವ ವಿಮರ್ಶೆಗಳಲ್ಲಿ ಮಾರ್ಕ್ಸ್‌ರ ವಿಮರ್ಶೆ ಪ್ರಮುಖವಾದದ್ದು. ಇದು ಇಡೀ ಜಗತ್ತಿನ ಗಮನಸೆಳೆದು ಧರ್ಮದ ಬಗೆಗೆ ಮತ್ತೆ ವಿಶೇಷ ರೀತಿಯಲ್ಲಿ ಜಿಜ್ಞಾಸೆ ನಡೆಸಲು ಕಾರಣವಾಗಿದ್ದಲ್ಲದೆ, ತನ್ನದೇ ಆದ ಅಭಿವ್ಯಕ್ತಿಯಿಂದ ವಿಶಿಷ್ಟ ಸ್ಥಾನಗಳಿಸಿಕೊಂಡಿದೆ ಎಂದು ಹೇಳಬಹುದು.

ಮಾರ್ಕ್ಸ್‌ರು ಧರ್ಮವನ್ನು ಮಾನವಕುಲದ ಅಫೀಮು ಎಂದೇ ಕರೆಯುತ್ತಾರೆ. ಸ್ವಾಮಿ ವಿವೇಕಾನಂದರೂ ಸಹ ಕೆಲವೆಡೆ ಧರ್ಮದ ಬಗೆಗೆ ವ್ಯಾಖ್ಯಾನ ನೀಡುತ್ತಾ, 'ಇಂತಹ ಜನಗಳ ಮಟ್ಟಿಗೆ ಧರ್ಮ ಒಂದು ಬಗೆಯ ಅಫೀಮು ಸೇವನೆ'[1] ಎಂದೇ ಅಭಿಪ್ರಾಯಪಟ್ಟಿದ್ದಾರೆ. ಧರ್ಮವು ಜನರಲ್ಲಿ ಒಂದು ರೀತಿಯ 'ಮತ್ತು' ತರಿಸುವ ಅಂಶ ಎಂಬುದನ್ನು ವಿವೇಕಾನಂದರೂ ಸಹ ಮನಗಂಡಿದ್ದರು ಎನ್ನುವುದು ಗಮನಾರ್ಹ. ಆದರೆ ಇವು ಯಾವುವೂ ಅವರೊಬ್ಬ ಆಧ್ಯಾತ್ಮಿಕ ವ್ಯಕ್ತಿಯಾಗಲು ಅಡ್ಡಿಯಾಗಲಿಲ್ಲ ಎಂಬ ಅಂಶ ನೈಜಧರ್ಮದ ಬಗೆಗೆ ನಮ್ಮಲ್ಲಿ ಆಸಕ್ತಿಯನ್ನು ಹೆಚ್ಚಿಸಬಲ್ಲದು.

ಕಾರ್ಲ್‌ಮಾರ್ಕ್ಸ್‌ರು ಧರ್ಮದ ಬಗೆಗೆ ವಿಮರ್ಶಿಸುತ್ತಾ 'ಧಾರ್ಮಿಕ ತೊಳಲಿಕೆಯು ಏಕಕಾಲದಲ್ಲಿ ನೈಜತೊಳಲಿಕೆ ಹಾಗೂ ಅದರ ವಿರುದ್ಧವಾಗಿ ಪ್ರತಿಭಟನೆ

---

1. ಕಲೆಕ್ಟೆಡ್‌ವರ್ಕ್ಸ್, ಸಂಪುಟ 3—ಪುಟ 63

ಗಳ ವ್ಯಕ್ತರೂಪವಾಗಿದೆ. ಧರ್ಮದಿಂದ ಹಿಂಸೆಗೊಳಗಾದ ವ್ಯಕ್ತಿಯ ಆಕ್ರಂದನ, ಹೃದಯಹೀನ ಜಗತ್ತಿನ ಹೃದಯ ಹಾಗೂ ಚೈತನ್ಯರಹಿತ ಸನ್ನಿವೇಶವು ಘೋರ ವಾಗಿದೆ. ಅದು ಜನತೆಯ ಅಫೀಮು'1 ಎಂದೇ ಸ್ಪಷ್ಟಪಡಿಸುತ್ತಾರೆ. ಮಾರ್ಕ್ಸ್‌ರ ಪ್ರಕಾರ ಜನತೆಯು ನೈಜಶಾಂತಿ, ಸಂತೃಪ್ತಿಪಡೆಯಲು ಭ್ರಾಮಕ ಸಂತುಷ್ಟಿಯೇ ಆಗಿರುವ 'ಧರ್ಮ'ವನ್ನು ಕಿತ್ತೊಗೆಯಬೇಕಾದುದು ಅನಿವಾರ್ಯ. ಒಂದು ಸಂದರ್ಭದ ಬಗೆಗೆ ಭ್ರಮೆಯನ್ನು ತೊಡೆದುಹಾಕಬೇಕು ಎಂಬ ಬೇಡಿಕೆ, ಭ್ರಮೆಯು ಅಗತ್ಯ ವಾಗಿರುವ ಆ ಸಂದರ್ಭವನ್ನೂ ಸಹ ತ್ಯಜಿಸಬೇಕು ಎಂಬ ಬೇಡಿಕೆಯೂ ಹೌದು. ಇದು ಮಾರ್ಕ್ಸ್‌ರ ದೃಷ್ಟಿ. ಈ ಕಾರಣದಿಂದಲೇ ಧರ್ಮವನ್ನು ಕುರಿತ ಖಂಡನೆ ಧರ್ಮದ ಕೆಟ್ಟ ಪರಿಣಾಮವಾದ ಶೋಷಣೆಯನ್ನು ಕುರಿತ ಖಂಡನೆಯೂ ಸಹ ಆಗಿದೆ ಎಂದು ಅವರು ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾರೆ.

ಮೂಲತಃ ಮಾರ್ಕ್ಸ್ ಮತ್ತು ಎಂಜೆಲ್ಸ್‌ರು ಧರ್ಮದ ಬಗೆಗಿನ ತಮ್ಮ ನಿಲುವನ್ನು ಹೆಗೆಲ್, ಆತನ ಪ್ರತಿವಾದಿ ಫಾಯರ್‌ಬಾಕ್ ಮತ್ತು ಹದಿನೆಂಟನೆಯ ಶತಮಾನದ ಭೌತವಾದಿಗಳಿಂದ ಪಡೆದುಕೊಂಡವರು. ಧರ್ಮವನ್ನು ಕುರಿತ ಇವರ ಚಿಂತನೆಯಲ್ಲಿ ಎರಡು ಮುಖ್ಯ ಎಳೆಗಳು ಮೂಲಭೂತವಾಗಿವೆ. ಮೊದಲನೆಯ ದೆಂದರೆ, ಧರ್ಮವು ಕೇವಲ ಒಂದು ಭ್ರಮೆ. ಅದೊಂದು ಅತ್ಯಂತ ಅವೈಜ್ಞಾನಿಕ, ಅವಾಸ್ತವ, ಮತ್ತು ಆಧಾರರಹಿತ ಪ್ರಕಲ್ಪನೆ. ಹಿಂಸೆಗೆ ಒಳಗಾದವರು ಮತ್ತು ದುಃಖಿಗಳಿಗೆ ಸಾಂತ್ವನ ಒದಗಿಸಲು ಅರಸಲಾಗಿದೆ; ಎರಡನೆಯ ಭಾವನೆ ಎಂದರೆ ವೈಜ್ಞಾನಿಕ ಅರಿವಿನ ಔನ್ನತ್ಯದಿಂದ ಮಾನವನ ಮೂಲಭೂತ ಸಮಸ್ಯೆಗಳು ನಿವಾರಣೆ ಗೊಂಡು, ಆತ್ಮವಿಶ್ವಾಸದ ಜೊತೆಯಲ್ಲಿ ಮಾನವನು ತನ್ನ ಸಾಮರ್ಥ್ಯವನ್ನು ಹೆಚ್ಚಿಸಿ ಕೊಳ್ಳುತ್ತಾ ನಡೆದಂತೆ ಧರ್ಮವೆಂಬ ಹುಸಿ, ಮತ್ತಿನಭೂತ ಹಂತ ಹಂತವಾಗಿ ಕುಬ್ಜಗೊಳ್ಳುತ್ತಾ, ಅಂತಿಮವಾಗಿ ಅನಾವಶ್ಯಕವೇ ಆಗುತ್ತದೆ.

ಆದರೆ, ಶ್ರೀ ರಾಮಕೃಷ್ಣರ ಧರ್ಮ ಸಂದೇಶದಿಂದ ಸ್ಫೂರ್ತಿಗೊಂಡ ವಿವೇಕಾ ನಂದರು ಈ ಮೇಲಿನ ವಾದಗಳನ್ನು ಒಪ್ಪುವುದಿಲ್ಲ. ಅವರ ಪ್ರಕಾರ, ಧರ್ಮದಲ್ಲಿ ಅಂಧವಿಶ್ವಾಸ, ಅವೈಜ್ಞಾನಿಕತೆ, ವಿವೇಚನೆಯಿಲ್ಲದ ದೃಷ್ಟಿಕೋನಗಳಿವೆ ಎನ್ನುವುದು ನಿಜ. ಯಾವುದೇ ಧರ್ಮವು ಅಂಧ ವಿಶ್ವಾಸಗಳ ಬುನಾದಿಯಮೇಲೆ ರಚನೆಗೊಂಡು, ಅವೈಜ್ಞಾನಿಕತೆಯ ನಿಲುವನ್ನೇ ತಳೆದಾಗ ಪ್ರಗತಿಪರವೆನಿಸುವ ಮಾನವನಿಗೆ ಯಾವ ರೀತಿಯಿಂದಲೂ ಸಹಕಾರಿ ಎನಿಸದು. ಆಧುನಿಕ ಮನುಷ್ಯ ಹೊರಗಡೆ ಏನೇ ಹೇಳಿದರೂ ಅಂತರ್ಯದಲ್ಲಿ ಸತ್ಯವನ್ನು ಅರಿತಿದ್ದಾನೆ. ಅರ್ಥಾತ್ 'ಇದು ನಂಬಿಕೆಗೆ ಅನರ್ಹವೆಂಬ ಸತ್ಯ ಅವನಿಗೆ ಗೊತ್ತು. ಕೆಲವು ಪುಸ್ತಕಗಳಲ್ಲಿ ಮಾತ್ರವೇ ತನ್ನಂತಹ ಅನೇಕರು ಇದರಲ್ಲಿ ನಂಬಿಕೆ ತಳೆದಿದ್ದಾರೆ ಅಥವಾ ತಾಳುತ್ತಾರೆ ಎಂಬ ಕಾರಣಕ್ಕಾಗಿ ತಾನೂ

1. ಕಾರ್ಲ್‌ಮಾರ್ಕ್ಸ್ ಅಂಡ್ ಎಫ್. ಎಂಜೆಲ್ಸ್ :- ಆನ್ ರಿಲಿಜಿಯನ್'—ಪುಟ 42

ನಂಬಿಕೆ ಇಡುವುದು ದುಃಸ್ಸಾಧ್ಯ[1] ಎಂಬುದನ್ನು ಆಧುನಿಕ ಮಾನವ ತಿಳಿದಿದ್ದಾನೆ ಎಂದೇ ವಿವೇಕಾನಂದರು ಖಚಿತ ಧ್ವನಿಯಲ್ಲಿ ಸಾರುತ್ತಾರೆ. ಅವರು ಮುಂದುವರಿಯುತ್ತಾ— ಇತರ ವಿಜ್ಞಾನಗಳು ಕಾರಣಗಳನ್ನು ಕಂಡುಹಿಡಿದು ತನ್ನನ್ನು ಸಮರ್ಥಿಸಿಕೊಳ್ಳುವಂತೆ, ಧರ್ಮವೂ ಕೂಡ ತನ್ನನ್ನು ಸಮರ್ಥಿಸಿಕೊಳ್ಳಬೇಕೇ? ಬಾಹ್ಯ ಅರಿವನ್ನಾಗಲೀ ಅಥವಾ ಸಾಮಾನ್ಯವಾಗಿ ವಿಜ್ಞಾನಗಳು ಅನುಸರಿಸಬೇಕಾದ ಅನ್ವೇಷಣಾಕ್ರಮವನ್ನೇ ಧರ್ಮ ವಿಜ್ಞಾನದಲ್ಲಿಯೂ ತುಂಬಬೇಕೇ? ಹಾಗಿದ್ದರೆ ಅದು ಹೆಚ್ಚು ಸಹಜ ಹಾಗೂ ಆರೋಗ್ಯಪೂರ್ಣವಾದುದು, ಇದರ ಅನುಷ್ಠಾನ ಎಷ್ಟು ಬೇಗನೆ ಸಾಧ್ಯವೋ ಅಷ್ಟು ಬೇಗ ಉತ್ತಮ ಫಲಿತಾಂಶ ಪಡೆಯಬಹುದೆಂದು ಅಭಿಪ್ರಾಯಪಡುತ್ತಾರೆ. ವಿವೇಕಾನಂದರ ಅಭಿಪ್ರಾಯದಲ್ಲಿ, ವಿಜ್ಞಾನದ ಪ್ರಗತಿಯಿಂದ ಒಂದು ವೇಳೆ ಧರ್ಮವೊಂದು ನಾಶವಾದರೆ ಅದರ ಅರ್ಥವೇನು ಗೊತ್ತೇ? ಅದು ನಿಜವಾಗಿಯೂ ಧರ್ಮವೇ ಆಗಿರಲಿಲ್ಲವೆನ್ನುವುದು. ಅಂತಹ ಧರ್ಮವು ಬೇಗನಾಶವಾದಷ್ಟೂ ಉತ್ತಮ ಎನ್ನುತ್ತಾ ವಿವೇಕಾನಂದರು 'ರಸಾಯನಶಾಸ್ತ್ರ ಮತ್ತು ಇತರ ಪ್ರಾಕೃತಿಕ ವಿಜ್ಞಾನಗಳು ಭೌತ ಜಗತ್ತಿನ ನಿಜಾಂಶಗಳಿಗೆ ಸಂಬಂಧಪಟ್ಟಿರುವುದು. ರಸಾಯನ ಶಾಸ್ತ್ರದ ತಿಳವಳಿಕೆ ಯುಂಟಾಗಲು ಪ್ರಕೃತಿಯ ಹೊತ್ತಿಗೆಯನ್ನೇ ನಾವು ಆಶ್ರಯಿಸಬೇಕು. ಆದರೆ ಧರ್ಮದ ಅನುಭವಕ್ಕೆ ಆಶ್ರಯಿಸಬೇಕಾದದ್ದು ನಮ್ಮ ಸ್ವಂತ ಮನಸ್ಸು ಮತ್ತು ಹೃದಯ[2]ವೆಂಬ ಅಂಶವನ್ನು ಮರೆಯಬಾರದೆಂದು ವಿವೇಕಾನಂದರು ಎಚ್ಚರಿಸುತ್ತಾರೆ. ಹೀಗೆ ಶ್ರೀ ರಾಮಕೃಷ್ಣರ ತಾತ್ತ್ವಿಕ ಸತ್ಯಗಳನ್ನು ತಾರ್ಕಿಕವಾಗಿ, ವಸ್ತುನಿಷ್ಠವಾಗಿ ನಮ್ಮ ಮುಂದಿಡುವ ಸ್ವಾಮಿ ವಿವೇಕಾನಂದರ ಅಭಿಪ್ರಾಯಗಳನ್ನು ಮೆಲುಕು ಹಾಕುತ್ತಾ ಹೋದಂತೆ ಅವರ ಗುರುವರ್ಯ ಶ್ರೀ ರಾಮಕೃಷ್ಣರ ಅಭಿಪ್ರಾಯಗಳ ಕಡೆ ಗಮನ ಹರಿಸುವುದು ಸೂಕ್ತವೆನಿಸುತ್ತದೆ.

ಧರ್ಮದ ಬಗೆಗೆ ಶ್ರೀ ರಾಮಕೃಷ್ಣರು ತಳೆಯುವ ನಿಲುವು ಅತ್ಯಂತ ಸ್ಫುಟವಾಗಿ, ನೇರವಾಗಿ ನಮ್ಮನ್ನು ತಾಕುತ್ತದೆ. ಅವರ ಅಭಿಪ್ರಾಯಗಳು ಯಾವುದೇ ಶುಷ್ಕ ವಿಚಾರ, ಭಿನ್ನಾಭಿಪ್ರಾಯಗಳ ಗೋಜಲಾಗಿರದೆ, ಅತ್ಯಂತ ಖಚಿತತೆಯನ್ನು ಪಡೆದು ಕೊಂಡಿದೆ. ಧರ್ಮದ ಬಗೆಗೆ ಮಾತನಾಡುವ ಮೊದಲೇ ಅವರು ಹೇಳಿಬಿಡುತ್ತಾರೆ, 'ಮೊದಲು ನಾವು ಎಲ್ಲಾ ಬಗೆಯ ಅಸಂಗತ ವಿಷಯಗಳಿಂದ ದೂರಾಗಬೇಕು' ಎಂದು. ಅರ್ಥಾತ್ ಕ್ಷಣಿಕ ವಿಷಯಾಸಕ್ತ ಜೀವನ ವಿಚಾರಗಳಿಂದ ಮುಕ್ತರಾದಾಗಲೇ ನಮಗೆ ಚಿತ್ತಶಾಂತಿ ದೊರೆಯಲು ಸಾಧ್ಯ ಎನ್ನುವ ಅವರು ಎಲ್ಲಾ ಬಗೆಯ ಕಪಟತನ ವನ್ನು ಖಂಡಿಸುತ್ತಾರೆ. ಮನಸ್ಸು ನಿರ್ಮಲವಾಗಿ, ಹೃದಯ ಪರಿಶುದ್ಧವಾಗಿರ ಬೇಕೆಂದು ಬಯಸುವ ಅವರು ಮೊದಲು ಹೃದಯ ಮಂದಿರವನ್ನು ಚೊಕ್ಕಟಮಾಡ ಬೇಕು, ಬಳಿಕ ವಿಗ್ರಹವನ್ನು ಪ್ರತಿಷ್ಠಾಪನೆಮಾಡಿ ಪೂಜೆಗೆ ವ್ಯವಸ್ಥೆ ಮಾಡಬೇಕು.

1. ಕಲೆಕ್ಟೆಡ್‌ವರ್ಕ್ಸ್—ಸಂಪುಟ 6—ಪುಟ 81
2 ಕಲೆಕ್ಟೆಡ್‌ವರ್ಕ್ಸ್—ಸಂಪುಟ 6—ಪುಟ 81

ಏನೆಂದರೆ, ಏನೂ ಮಾಡಿಲ್ಲ ಸುಮ್ಮನೆ ಬ್ಲೋ! ಬ್ಲೋ! ಅಂತ ಶಂಖ ಊದಿದರೆ ಏನಾದಹಾಗಾಯಿತು[1] ಎಂದು ಅರ್ಥಗರ್ಭಿತವಾಗಿ ಹೇಳಿ ಧರ್ಮದ ಬಗೆಗಿನ ಢಂಬಾಚಾರಗಳನ್ನು ಖಂಡಿಸುತ್ತಾರೆ.

ಧರ್ಮದ ತಿರುಳನ್ನು ಅನುಭವ ಹೊಂದದೆ ಬಾಯಲ್ಲಿ ಅದರ ಬಗೆಗೆ ಬೋಧನೆ ನೀಡುವವರನ್ನು ಶ್ರೀ ರಾಮಕೃಷ್ಣರು ತರಾಟೆಗೆ ತೆಗೆದುಕೊಳ್ಳುತ್ತಾರೆ. ಅವರು ಹೇಳುವಂತೆ ಮೊದಲು ಧರ್ಮದ ವಿಷಯದಲ್ಲಿ ನಮ್ಮ ಹೃದಯಗಳು 'ಮುಕ್ತ'ವಾಗಬೇಕು. ಮುಕ್ತ ಮನಸ್ಸಿನ ನೈಜ ವಿಚಾರಪರತೆಯಿಂದ ಧರ್ಮದ ಅಂತಃಸ್ಸತ್ವ ತಿಳಿಯಲು ಪ್ರಯತ್ನಿಸಬೇಕು. ಕೆಲವು ಗ್ರಂಥಾಧ್ಯಯನಗಳೇ ಆಗಲಿ, ಧಾರ್ಮಿಕ ಶುಷ್ಕ ಆಚರಣೆಗಳೇ ಆಗಲೀ, ಢಂಬಾಚಾರದ ಪ್ರವಚನಗಳೇ ಆಗಲೀ ಧರ್ಮವೆನಿಸಲಾರದು ಎಂದು ಅವರು ಅಭಿಪ್ರಾಯಪಡುತ್ತಾರೆ.

ಶ್ರೀ ರಾಮಕೃಷ್ಣರ ಪ್ರಕಾರ ಧರ್ಮವು ನಮ್ಮ ಅಂತಃಸ್ಸತ್ವದಲ್ಲಿಯೇ ಇದೆ. ಕ್ಷುಲ್ಲಕ ವಿಚಾರಗಳೆಂಬ ಧೂಳಿನಿಂದ ಮುಚ್ಚಿರುವ ಅದನ್ನು ನೈಜಜ್ಞಾನದಿಂದ ಹೊಳೆಯುವಂತೆ ಮಾಡಬೇಕಾಗಿದೆ. ನಮಗೆ ಅದರ ನೈಜಸ್ವರೂಪದ ಅನುಭವವಾಗಬೇಕಾಗಿದೆ. ಧರ್ಮದ ದಾರಿ ಹಲವು ಎನ್ನುವ ಶ್ರೀ ರಾಮಕೃಷ್ಣರು 'ಮಾರ್ಗಗಳು ಅನೇಕ, ಹಾಗೆಯೇ ಮತಗಳೂ ಸಹ. ಇವೆಲ್ಲವೂ ಒಂದೇ ದಿಕ್ಕಿನತ್ತ ಹೊರಟಿವೆ ಎಂಬ ಅಂಶವೇ ಮುಖ್ಯವೆನ್ನುತ್ತಾ ನಮ್ಮಗಳ ನೈಜ ಸ್ವರೂಪವನ್ನು ಅರಿಯಲೆತ್ನಿಸುವ ಪ್ರಯತ್ನದ ಬೆಳಕು ಅತ್ಯಗತ್ಯ. ಆ ಬೆಳಕು ಪೂರ್ಣತೆ ಪಡೆದಾಗ ನಮಗೆ ಧರ್ಮದ ಅನುಭವ ಸಾಧ್ಯವಾಗುತ್ತದೆ ಎಂದೇ ಅಭಿಪ್ರಾಯಪಡುತ್ತಾರೆ. ಧರ್ಮದ ಅನುಭವ ಸಾಧ್ಯವಾದಾಗ ಎಲ್ಲಾ ರೀತಿಯ ಅಸ್ಪಷ್ಟತೆಗಳಿಂದಲೂ ದೂರಾಗಿ, ಜ್ಞಾನವು ತೆರೆದಿಟ್ಟ ಪುಸ್ತಕಕ್ಕಿಂತಲೂ ಹೆಚ್ಚು ನಿಖರವಾಗುತ್ತದೆ ಎಂದೇ ಶ್ರೀ ರಾಮಕೃಷ್ಣರು ಹೇಳುತ್ತಾರೆ.

ಧರ್ಮದ ಅರಿವಿಗೆ ತರ್ಕವಾಗಲೀ, ಪುಸ್ತಕ ವಿದ್ಯೆಯಾಗಲೀ ಸಹಾಯಕ್ಕೆ ಬರಲಾರದು. ಅಲ್ಲಿಗೆ ಅಗತ್ಯವಾದ ಅಂಶವೊಂದಿದೆ, ಅದು ಪರಿಶುದ್ಧ ಹೃದಯ ಮತ್ತು ಮನಸ್ಸು. ತಾರ್ಕಿಕತೆಯ ವಿಷಯಗಳು ಹೆಚ್ಚು ಎಂದರೆ ನಮ್ಮನ್ನು ಐಹಿಕತೆಯಲ್ಲಿರುವಾಗ ಎಚ್ಚರವಹಿಸಲು ಅಥವಾ ನಮ್ಮನ್ನು ನಾವೇ ಪರಾಮರ್ಶಿಸುವುದಕ್ಕೆ ಸಹಾಯಕವಾಗಬಹುದು ಅಷ್ಟೆ. ಆದರೆ ನೈಜಧರ್ಮವನ್ನು, ಅದರ ತಿರುಳನ್ನು ಅರಿಯಲು ಇವು ಸಹಾಯಕವಾಗಲಾರವು. ಧರ್ಮದ ಅರಿವಿಗೆ ಈ ಹಿಂದೆಯೇ ಹೇಳಿದಂತೆ ಪರಿಶುದ್ಧ ಹೃದಯ ಮತ್ತು ಮನಸ್ಸುಗಳ ಜೊತೆಯಲ್ಲಿ ಶ್ರದ್ಧೆಯ ಪ್ರಯತ್ನವೂ ಸೇರಿತೆಂದರೆ ಧರ್ಮದ ಅನುಭವ ನಿಶ್ಚಿತ, ಆಗ ಧರ್ಮದ ಆನಂದ ಪಡೆಯಬಹುದು ಎಂದು ಶ್ರೀ ರಾಮಕೃಷ್ಣರು ನುಡಿಯುತ್ತಾರೆ.

ಧಾರ್ಮಿಕ ಪ್ರವೃತ್ತಿಯ ನೈಜಲಕ್ಷಣವೆಂದರೆ ಭಗವಂತನ ಕುರಿತು ಚಿಂತನೆ. ಅವನನ್ನು ಕುರಿತು ಯೋಚಿಸುವುದರ ಜ್ಞಾನ ಮಾನವನಿಗೆ ಇತ್ತು ಎಂದರೆ ಆತ

1. 'ಮ'—ಶ್ರೀ ರಾಮಕೃಷ್ಣ ವಚನವೇದ (ಪೂರ್ವಾರ್ಧ) ಪುಟ 84

ಜೀವನ್ಮುಕ್ತನೆನಿಸುತ್ತಾನೆ. ಇವುಗಳ ಒಟ್ಟಾರೆ ಅರ್ಥವೇನೆಂದರೆ ಮಾನವನ ಧಾರ್ಮಿಕ ನೆಲೆಯಲ್ಲಿನ ಭಾವ, ಆತನ ಎಲ್ಲಾ ಆಲೋಚನೆಗಳೂ, ಸಂವಾದಗಳೂ ಒಟ್ಟು ಸಾರ್ವತ್ರಿಕರೂಪ ಪಡೆದುಕೊಂಡಿರಬೇಕು, ಅಲ್ಲಿ ಸಂಕುಚಿತತೆಗೆ ಅವಕಾಶವಿರಕೂಡದು. ಜಾಗತಿಕಹಿತ, ಮಾನವಕುಲದ ಔನ್ನತ್ಯದ ದೃಷ್ಟಿಗಳು ತುಂಬಿರಬೇಕು. ಎಲ್ಲಾ ನದಿಗಳ ನೀರು ಹರಿದು ಸಮುದ್ರವನ್ನು ಸೇರಿಕೊಳ್ಳುವಂತೆ, ಮಾನವನು ಮಾನವನನ್ನು ಕುರಿತ ಚಿಂತನೆಗಳೆಲ್ಲಾ 'ಧರ್ಮ' ಎನ್ನುವ ಸಾಗರದಲ್ಲಿ ಒಂದಾಗಬೇಕಾದ ಅಗತ್ಯವನ್ನು ಶ್ರೀ ರಾಮಕೃಷ್ಣರು ಒತ್ತಿ ಹೇಳುತ್ತಾರೆ. ಅವರ ಪ್ರಕಾರ ಅದೇ ಮಾನವತಾ ಧರ್ಮ. ಅದು ಸದಾ ಒಂದೇ, ಅಲ್ಲಿ ಭಿನ್ನಾಭಿಪ್ರಾಯಗಳಿಗೆ ಎಡೆಯಿಲ್ಲ ಎಂದೆನ್ನುತ್ತಾರೆ. ಸತ್ಯ ಹೀಗಿರುವಾಗ ಅಲ್ಲಿ ಅದು ವಿಜ್ಞಾನವೇ? ಅದು ಶಾಸ್ತ್ರವೇ? ಅದು ಜಗತ್ತಿನಿಂದ ಹೊರತಾದುದೇ ಎಂಬ ಅನುಮಾನಗಳು ಸರ್ವದಾ ಅರ್ಥ ಕಳೆದುಕೊಳ್ಳುತ್ತವೆ–ಎಂದೇ ಶ್ರೀ ರಾಮಕೃಷ್ಣರು ನಂಬುತ್ತಾರೆ.

ಶ್ರೀ ರಾಮಕೃಷ್ಣರಾದರೋ ಅನುಭವ ಪ್ರಧಾನವಾದಿಗಳು, ಸತ್ಯದ ಪೂರ್ಣತೆಯ ಅರಿವಾಗಲು ಅನುಭವ ಅತ್ಯಂತ ಪರಿಣಾಮಕಾರಿ ಎಂದು ಕಂಡುಕೊಂಡಿದ್ದವರು. ಉಳಿದುದರ ಬಗ್ಗೆ ಅವರು ಹೆಚ್ಚು ಪ್ರಾಮುಖ್ಯತೆ ನೀಡಿದವರಲ್ಲ. ಆದರೆ ಅವರ ಶಿಷ್ಯರಾದ ವಿವೇಕಾನಂದರು ಇದೇ ಮಾರ್ಗದಲ್ಲಿ ನಡೆದರೂ ಅತ್ಯಂತ ವಿಚಾರಪರರೂ, ಶಾಸ್ತ್ರ, ತರ್ಕಗಳ ಕರತಲಾಮಲಕ ಮಾಡಿಕೊಂಡಿದ್ದವರು. ಶಾಸ್ತ್ರ, ತರ್ಕ, ಸಂವಾದಗಳು ಬುದ್ಧಿಯನ್ನು ಹರಿತಗೊಳಿಸುತ್ತವೆ ಎಂದು ನಂಬಿದ್ದವರು. ಅಂತೆಯೇ ಅವರಿಗೆ ತರ್ಕ, ವಿಜ್ಞಾನ, ಶಾಸ್ತ್ರಗಳೆಲ್ಲವೂ ಬೇಕಾಗಿತ್ತು. ಧರ್ಮದ ಯಾವುದೇ ವಿಷಯದ ಬಗೆಗೆ ಅವರು ತರ್ಕಮಾಡಲು ಸಿದ್ಧವಾಗುತ್ತಿದ್ದರು. ಶ್ರೀ ರಾಮಕೃಷ್ಣರ ಆದರ್ಶಗಳನ್ನು ಅವರು ಅನುಷ್ಠಾನಗೊಳಿಸುವಲ್ಲಿ ಇವನ್ನೆಲ್ಲಾ ಬಳಸಿಕೊಂಡರು. ಶ್ರೀ ರಾಮಕೃಷ್ಣರ ಅನುಭವ ಸತ್ಯಗಳನ್ನು ಹೇಗೆ ತರ್ಕಗಳ ಮೂಲಕ ಇಡುತ್ತಿದ್ದರು ಎನ್ನುವುದರ ಬಗೆಗೆ ಈಗ ಸಂಕ್ಷಿಪ್ತವಾಗಿ ವಿಶ್ಲೇಷಿಸಬಹುದು. ಇಲ್ಲಿ ಗಮನಾರ್ಹ ಸಂಗತಿ ಎಂದರೆ ಶ್ರೀ ರಾಮಕೃಷ್ಣರ ಪೂರ್ಣದೃಷ್ಟಿಯ ಸಮರ್ಥನೆಗೆ ವಿವೇಕಾನಂದರು ವ್ಯಕ್ತರೂಪವಾಗಿದ್ದರು ಎನ್ನುವುದು.

ವಿವೇಕಾನಂದರು ತಮ್ಮ ಗುರುದೇವನ ಸತ್ಯದ ಪೂರ್ಣದೃಷ್ಟಿಯನ್ನು ಜನರಿಗೆ ಬಿಂಬಿಸುವ ನಿಟ್ಟಿನಲ್ಲಿ ಅದರ ಮೆಟ್ಟಿಲುಗಳನ್ನೂ ಜಿಜ್ಞಾಸೆಗೆ ಒಳಪಡಿಸುತ್ತಾರೆ. ಅವರು ಈ ಹಿನ್ನೆಲೆಯಲ್ಲಿ ಧರ್ಮ ಹಾಗೂ ವಿಜ್ಞಾನದ ಬಗ್ಗೆ ಹೇಳುತ್ತಾ ಪ್ರಸ್ತುತ ಸುದ್ದಿಯಲ್ಲಿರುವ, ಭೌತವಿಜ್ಞಾನಗಳು ಮುಂದುವರಿದಂತೆ ಧರ್ಮವು ದುರ್ಬಲಗೊಳ್ಳುತ್ತಾ ನಡೆಯುತ್ತದೆ ಎಂಬ ಅಂಶವನ್ನು ನಿರಾಕರಿಸುತ್ತಾರೆ. ಈ ಬಗೆಗೆ ಅವರು ವಿಜ್ಞಾನವು ವಾಲುತ್ತಿರುವ ದಿಕ್ಕಿನ ಬಗೆಗೆ ನಿಮಗೆ ಅರಿವಿದೆಯೇ? ಎಂದು ಮಾರ್ಮಿಕವಾಗಿ ಪ್ರಶ್ನಿಸುತ್ತಾರೆ. ಮನಸ್ಸಿನ ಅಧ್ಯಯನದಿಂದ ಆಧ್ಯಾತ್ಮ ತತ್ವ ಹಾಗೂ ತರ್ಕಗಳಿಂದ ಹಿಂದೂ ರಾಷ್ಟ್ರವು ಪ್ರಾರಂಭಿಸಿತು. ಐರೋಪ್ಯರಾಷ್ಟ್ರಗಳು ಬಾಹ್ಯ ಪ್ರಕೃತಿ

ಯಿಂದ ತೊಡಗಿ ಈಗ ಅವರೂ ಅದೇ ನಿರ್ಧಾರಗಳನ್ನು ತಲುಪುತ್ತಿದ್ದಾರೆ ಎಂದೇ ಅವರು ಹೇಳುತ್ತಾರೆ.

ನಾವು ಮನಸ್ಸಿನ ಮೂಲಕ ಅನ್ವೇಷಣೆಗೆ ತೊಡಗಿ ಅಂತಿಮವಾಗಿ ಆ ಒಂದು ಏಕತೆಯನ್ನು, ಆ ಒಂದು ಸರ್ವವ್ಯಾಪ್ತಿಯನ್ನು, ಎಲ್ಲದರ ಅಂತರಾಳದ ಆತ್ಮವನ್ನು ಸಾರಸರ್ವಸ್ವವನ್ನು, ಎಲ್ಲದರ ಅಸ್ತಿತ್ವವನ್ನು ಕೊನೆಗೆ ಕಂಡುಕೊಳ್ಳುತ್ತೇವೆ. ಭೌತ ವಿಜ್ಞಾನಗಳ ಮೂಲಕವೂ ಅದೇ ಏಕತೆಯನ್ನು ತಲುಪುತ್ತೇವೆ ಎಂದು ಸ್ಪಷ್ಟಪಡಿಸುತ್ತಾ ವಿಜ್ಞಾನ ಹಾಗೂ ಧರ್ಮ (ಅಧ್ಯಾತ್ಮ) ಪರಸ್ಪರ ಪೂರಕವಾಗಿವೆ ಎಂದೇ ವಿವೇಕಾನಂದರು ವಾದಿಸುತ್ತಾರೆ. ಗತಕಾಲದಲ್ಲಿ ಅವುಗಳ ಪಾತ್ರಗಳು ಯಾವ ರೀತಿಯಲ್ಲೇ ಇದ್ದರೂ ಭವಿಷ್ಯಕಾಲದಲ್ಲಿ ವಿಜ್ಞಾನ ಮತ್ತು ಧರ್ಮಗಳು ಪರಸ್ಪರ ಕೈ ಕಲುಕಲಿವೆ. ಇದು ಸಕಲ ಜನರಿಗೆ, ಸರ್ವಕಾಲಕ್ಕೆ, ಎಂದು ವಿಜ್ಞಾನ ಮತ್ತು ಧರ್ಮದ ಸಂಬಂಧದ ಬಗೆಗೆ ದೃಢವಿಶ್ವಾಸತಾಳುವ ವಿವೇಕಾನಂದರು ತಮ್ಮ ಗುರುದೇವನ ಪೂರ್ಣದೃಷ್ಟಿಯ ಹಿನ್ನೆಲೆಯುಲ್ಲಿ ವಿಶ್ಲೇಷಿಸುತ್ತಾ ಇದ. ಸಾಧನೀಯವಾಗಿರುವಂತೆ, ಅವಶ್ಯಕವೂ ಹೌದು ಎಂದೆನ್ನುತ್ತಾರೆ

ಶ್ರೀ ರಾಮಕೃಷ್ಣ ಪರಮಹಂಸರಿಗೆ, ಈಗಾಗಲೇ ಹೇಳಿರುವಂತೆ, 'ಇದು ವಿಜ್ಞಾನ', 'ಇದು ಧರ್ಮ' ಎನ್ನುವ ಭೇದಭಾವಗಳು ಇರಲಿಲ್ಲ. ಅವರಿಗಿದ್ದುದು ಒಂದೇ ದೃಷ್ಟಿ, ಅದು ಸತ್ಯದ ಪೂರ್ಣದೃಷ್ಟಿ; ಅದನ್ನು ಅನುಭವದ ನೆಲೆಯಲ್ಲಿ ಅನುಭವಿಸುವುದು, ಅನುಷ್ಠಾನಗೊಳಿಸುವುದು, ಇವುಗಳೇ ಅವರ ಗುರಿಯಾಗಿದ್ದವು. ಆದರೆ ವಿಷಯ ಜಿಜ್ಞಾಸೆಯ ಅಭಿಪ್ರಾಯಗಳನ್ನು, ವ್ಯಕ್ತಿ ವೈಶಿಷ್ಟ್ಯವನ್ನು ಅವರು ಒಪ್ಪಿಕೊಳ್ಳುತ್ತಿದ್ದರು. ಅವುಗಳು ಸತ್ಯವನ್ನರಿಯುವಲ್ಲಿ, ವೈವಿಧ್ಯತೆಗೆ ಸಹಕಾರಿ ಎಂದೆನ್ನುತ್ತಿದ್ದರೂ ಬದುಕು ಹಾಗೂ ಅದರ ನೈಜ ಅರ್ಥದೊಂದಿಗೆ ಬೆಸೆದುಕೊಂಡಿರುವ ಏಕತೆಯ ಸಂಬಂಧವನ್ನು ಕಾಣಲು ಅನುಭವವೇ ಸರ್ವಶ್ರೇಷ್ಠ ಎಂಬ ನಿಲುವು ಅವರದು. ಆದರೆ ಅವರು ಯಾವುದೇ ಬಗೆಯ ವಿಜ್ಞಾನದ ದೃಷ್ಟಿಯನ್ನೇ ಆಗಲಿ, ಮತದ ದೃಷ್ಟಿಯನ್ನೇ ಆಗಲಿ ನಿರಾಕರಿಸುತ್ತಿರಲಿಲ್ಲ. ಅವರು ಹೇಳುತ್ತಿದ್ದರು 'ಯಾವ ಧರ್ಮವೇ ಆಗಲಿ, ಯಾವ ಮತವೇ ಆಗಲೀ ಎಲ್ಲವೂ ಆ ಒಬ್ಬ ಭಗವಂತನನ್ನೇ ಕರೆಯುವಂತೆ ತಮ್ಮ ತಮ್ಮ ಅನುಯಾಯಿಗಳನ್ನು ಪ್ರೇರೇಪಿಸುತ್ತವೆ. ಆದುದರಿಂದ ನೈಜವಾದ-ನ್ಯಾಯುವಾದ ಯಾವ ಧರ್ಮವನ್ನೇ ಆಗಲೀ, ಮತವನ್ನೇ ಆಗಲೀ ಅಶ್ರದ್ಧೆಯಿಂದ ನೋಡಕೂಡದು, ದ್ವೇಷಿಸಕೂಡದು. ಇರುವ ಆ ಒಬ್ಬ ಭಗವಂತನನ್ನು ವೇದಗಳು ಸಚ್ಚಿದಾನಂದ ಬ್ರಹ್ಮವೆಂದೂ, ಭಾಗವತಾದಿ ಪುರಾಣಗಳೂ ಸಚ್ಚಿದಾನಂದ ಕೃಷ್ಣನೆಂದೂ, ತಂತ್ರಶಾಸ್ತ್ರ ಸಚ್ಚಿದಾನಂದ ಶಿವ ಎಂದೂ ಕರೆಯುತ್ತವೆ. ನಿಜವಾಗಿ ಇರುವವನು ಕೇವಲ ಆ ಸಚ್ಚಿದಾನಂದನೊಬ್ಬನೆ'[1] ಎಂದು ನೈಜಧರ್ಮ ಸ್ವರೂಪ ಕುರಿತು ಹೇಳುತ್ತಾ ಅಂತಿಮ ಸತ್ಯದಕಡೆಗೆ ಬರುತ್ತಾರೆ. ಅಸ್ತಿತ್ವದಲ್ಲಿರ

1. 'ವ'—ಶ್ರೀ ರಾಮಕೃಷ್ಣವಚನದ–ಪುಟ 235 (ಪೂರ್ವಾರ್ಧ)

ಬಹುವಾದ ಧರ್ಮದ ಎಲ್ಲಾ ಬಗೆಯ ಪ್ರಕಾರಗಳೂ, ಅವುಗಳ ಆಚರಣೆಗಳು ಅಂತಿಮ ಸತ್ಯವನ್ನು, ಏಕತೆಯನ್ನು ಅರಿಯಲು ಸಹಾಯಕವಾಗಬೇಕೆಂಬುದೇ ಶ್ರೀ ರಾಮಕೃಷ್ಣರ ಆಶಯವಾಗಿದೆ ಎಂದು ಹೇಳಬಹುದು.

ಶ್ರೀ ರಾಮಕೃಷ್ಣರು ನೈಜಧಾರ್ಮಿಕ ಪ್ರವೃತ್ತಿಯು ನಮ್ಮಗಳ ಅಂತಸ್ಸತ್ವದಲ್ಲಿಯೇ ಇದೆ ಎಂದು ಹೇಳುತ್ತಾ, ಮಾನವನ ಎಲ್ಲಾ ಭಾವನೆಗಳಲ್ಲಿ ಪರಮಶ್ರೇಷ್ಠವಾದುದು 'ಧರ್ಮ' ಎಂದೇ ಅಭಿಪ್ರಾಯಪಡುತ್ತಾರೆ. ಈ ಹಿನ್ನೆಲೆಯಲ್ಲಿಯೇ ಧರ್ಮದಲ್ಲಿ ಹರಿದಷ್ಟು ರಕ್ತದಕೋಡಿ ಬೇರಾವ ಕ್ಷೇತ್ರದಲ್ಲಿ ಹರಿದಿಲ್ಲವೆಂದೇ ಹೇಳಬೇಕು. ಧರ್ಮದ ಏಕತೆಯ ಸತ್ಯವನ್ನು ಮನಗಾಣದೆ ಹೋದರೆ, ಧರ್ಮವು ಮಾನವನನ್ನು ಅತ್ಯಂತ ಕ್ರೂರಿಯನ್ನಾಗಿಸಿಬಿಡುವಷ್ಟು ಪ್ರಭಾವಶಾಲಿಯಾಗಿದೆ. ಈ ಬಗೆಯ ಕ್ರೂರತ್ವವು ಧರ್ಮದ ಢಂಬಾಚಾರಗಳಿಂದಲೇ ಉಗಮಗೊಳ್ಳುತ್ತದೆ. ಶ್ರೀ ರಾಮಕೃಷ್ಣರು ಪ್ರತಿಪಾದಿಸುವಂತೆ, ಮಾನವನ ಆಂತರಿಕ ನೈಜ ಸ್ವಭಾವದಲ್ಲಿ ಚಿತ್ತಶಾಂತಿ ಅತ್ಯಗತ್ಯ. ಧಾರ್ಮಿಕ ನೆಲೆಯಲ್ಲಿ ಇದು ಆವಶ್ಯಕ ಅಂಶ, ಇದು ಚಿತ್ತಶುದ್ಧಿಯ ನಂತರ ಬರುವಂಥಾದ್ದು. ಒಳ್ಳೆಯ ಭಾವನೆಗಳನ್ನು ನಿರ್ಮಲ ಹೃದಯ ಮತ್ತು ಮನಸ್ಸುಗಳಲ್ಲಿ ಅನುಭವಿಸಿ ಅದನ್ನು ವ್ಯಕ್ತಗೊಳಿಸಿರುವ ಶ್ರೀ ರಾಮಕೃಷ್ಣರು ಇತರರಲ್ಲೂ ಆ ಬಗೆಯ ಮನೋಭಾವವನ್ನೇ ಕಾಣುವ ಆಶಯ ವ್ಯಕ್ತಪಡಿಸುತ್ತಾರೆ. ಮತಭ್ರಾಂತಿಯ ಬಗೆಗೆ ಖಂಡನೆಯನ್ನು ತೋರುವ ಶ್ರೀ ರಾಮಕೃಷ್ಣರು, ಅದು ಎಲ್ಲಾ ಬಗೆಯ ಮಾನವನ ಹೀನ ಸ್ವಭಾವಗಳನ್ನು ಜಾಗೃತಗೊಳಿಸುತ್ತದೆ ಅಷ್ಟೇ ಎಂದು ವ್ಯಂಗ್ಯವಾಡುತ್ತಾರೆ.

ಧರ್ಮವು ವಿಶ್ವವ್ಯಾಪಕತ್ವವನ್ನು ಹೊಂದಿರಬೇಕು. ಧರ್ಮದ ಅರ್ಥವೇ ಎಲ್ಲಾ ಒಳ್ಳೆಯದನ್ನು, ಸತ್ಯವನ್ನು ಎತ್ತಿಹಿಡಿಯುವುದು, ಸಂರಕ್ಷಿಸುವುದು ಎನ್ನುವುದು ಸರಿಯಷ್ಟೇ ಧರ್ಮದ ಸಮಾನ ಶಬ್ದವಾದ, ಆಂಗ್ಲಭಾಷೆಯ ರಿಲಿಜಿಯನ್ ಎಂಬ ಶಬ್ದವೂ ಸಹ 'ಒಟ್ಟುಗೂಡಿಸು' ಎಂಬ ಅರ್ಥವನ್ನೇ ಪಡೆದಿರುವುದರ ಹಿನ್ನೆಲೆಯಲ್ಲಿ ಧರ್ಮದ ಸತ್ಯಗಳು ಸಾರ್ವತ್ರಿಕ ಸತ್ಯಗಳಾಗಿರಬೇಕು, ಎನ್ನುವ ಶ್ರೀ ರಾಮಕೃಷ್ಣರು, ಸಾರ್ವತ್ರಿಕ ಸತ್ಯಗಳು ಕ್ಷಣಾರ್ಧದಲ್ಲಿಯೇ ಸಿಕ್ಕಿಬಿಡುವುದಿಲ್ಲ, ಅದಕ್ಕೆ ಸಾಧನೆಬೇಕು. ಇಂತಹ ಸಾಧನಾಕಾಲದಲ್ಲಿ ಸರ್ವಬಗೆಯ ಅಭಿಪ್ರಾಯಗಳನ್ನೂ ಪರಿಗಣಿಸಬೇಕು. 'ಮೊತ್ತಮೊದಲು ಕೇಳಬೇಕು, ಮೊತ್ತಮೊದಲು ಒಂದುಸಲ ವಿಚಾರಮಾಡಿ ತಿಳಿಯಬೇಕು, ಬಳಿಕ ಸತ್ಯದ ಅನುಭವ ಹೊಂದಬೇಕು' ಎಂದೆನ್ನುತ್ತಾ ಅವರು, ಧಾರ್ಮಿಕ ಸತ್ಯದ ಬಗೆಗಿನ ಅರಿವಿನ ಅನುಭವವು ಗಾಢವಾಗುತ್ತಾ ಬಂದಹಾಗೆ ಎಲ್ಲಾ ಬಗೆಯ ಐಹಿಕ ವಿಚಾರ, ಭಿನ್ನಾಭಿಪ್ರಾಯಗಳು ಶಾಂತವಾಗಿಬಿಡುತ್ತವೆ ಎನ್ನುತ್ತಾರೆ.

ವಿಶ್ವಧರ್ಮದ ಅನುಭವ ನಮಗುಂಟಾಗಬೇಕು ಎಂದರೆ, ಇರುವ ಅನೇಕ ಮಾರ್ಗಗಳಲ್ಲಿ ನಮ್ಮ ಆಂತರಿಕ ಸ್ವಭಾವಕ್ಕನುಗುಣವಾದ ಮಾರ್ಗವೊಂದನ್ನು ಹಿಡಿಯಬಹುದೆಂದು ಬೋಧಿಸುವ ಶ್ರೀರಾಮಕೃಷ್ಣರು ಜ್ಞಾನಮಾರ್ಗದ ಮೂಲಕವೋ,

ಕರ್ಮಮಾರ್ಗದ ಮೂಲಕವೋ ಅಥವಾ ಭಕ್ತಿಮಾರ್ಗದ ಮೂಲಕವೋ ಸಾಗಬಹುದು. ಆದರೆ ನಮ್ಮ ಧಾರ್ಮಿಕ ಮನೋಭಾವದ ಅಭಿಪ್ರಾಯಗಳು ಅದರ ಅನುಷ್ಠಾನದಲ್ಲಿ ಸಮಾಜದ ಪ್ರಗತಿಗೆ ಕೊಡಲಿಪೆಟ್ಟಾಗಬಾರದೆಂದು ಎಚ್ಚರಿಸುತ್ತಾ ಅನುಭವ ಸತ್ಯದ ಅನುಷ್ಠಾನತೆಯಲ್ಲಿ ಮೌಲ್ಯಗಳಿಗೆ ಧಕ್ಕೆಯಾಗದಂತೆ ಜಾಗರೂಕತೆ ವಹಿಸಬೇಕೆಂದು ಕರೆನೀಡುತ್ತಾರೆ. ಅವರ ಪ್ರಕಾರ ಕಂಡುಕೊಂಡಂತೆ ಹೇಳುವುದು, ಹೇಳಿದಂತೆ ನಡೆದುತೋರುವುದೇ ನಿಜವಾದ ಧರ್ಮ ಎನಿಸಿಕೊಳ್ಳುತ್ತದೆ. ಇಂತಹ ಪರಿಪೂರ್ಣ ಭಾವನೆಯಲ್ಲಿ ಯಾವುದೇ ಭೇದವಿರಲಾರದು. ಜಗತ್ತಿನ ಅಂತಿಮ ತತ್ತ್ವ, ಸತ್ಯವಾದ 'ಬ್ರಹ್ಮ'ಕ್ಕೆ ಯಾವ ಭೇದವೂ ಇಲ್ಲ. ಅದು ಏಕೈಕ ಎಂಬುದನ್ನು ಮರೆಯಬಾರದೆನ್ನುತ್ತಾರೆ ಮುಖ್ಯವಾಗಿ ನಮ್ಮಗಳ ವ್ಯಕ್ತಿತ್ವ ವಿಕಾಸಗೊಳ್ಳಬೇಕು ಎಂದು ಬಯಸುವ ಅವರು ಕಮಲವು ಅರಳಿದರೆ ಮಧುವನ್ನು ಹುಡುಕಿಕೊಂಡು ದುಂಬಿಗಳು ತಾವಾಗಿ ಬರುತ್ತವೆ. ಈ ರೀತಿಯಲ್ಲಿಯೇ ನಮ್ಮಗಳ ಸ್ವಭಾವ ಕಮಲ ಅರಳಿದರೆ ಅರ್ಥಪೂರ್ಣ ಪ್ರತಿಫಲ ತಾನಾಗಿಯೇ ಬರುತ್ತದೆ, ಜ್ಞಾನವು ತಾನಾಗಿಯೇ ತುಂಬಿಕೊಳ್ಳುತ್ತದೆ. ಇಂತಹ ವೈಶಿಷ್ಟ್ಯವುಳ್ಳ ವ್ಯಕ್ತಿಯ ಅಸ್ತಿತ್ವಕ್ಕೆ ಅವನಾಡುವ ಪ್ರತಿಮಾತಿಗೂ ಅರ್ಥ ಇರುತ್ತದೆ, ಸಾರ್ಥಕತೆ ದಕ್ಕುತ್ತದೆ ಎಂದು ವ್ಯಾಖ್ಯಾನಿಸುತ್ತಾರೆ.

ಶ್ರೀರಾಮಕೃಷ್ಣರ ಅಭಿಪ್ರಾಯದ ಬೆಳಕಿನಲ್ಲಿ ಸ್ವಾಮಿ ವಿವೇಕಾನಂದರು ಮನುಷ್ಯ ರಚನೆಯಲ್ಲೇ ಧಾರ್ಮಿಕ ಚಿಂತನೆ ಅಡಗಿದೆ ಎಂಬ ನಂಬಿಕೆ ತಾಳುತ್ತಾರೆ. ಈ ಕಾರಣದಿಂದಲೇ ಮಾನವನು ಬದುಕಿರುವವರೆಗೆ, ಯೋಚಿಸುತ್ತಿರುವವರೆಗೆ ಧರ್ಮವನ್ನು ಬಿಡುವುದು ಸಾಧ್ಯವಿಲ್ಲವೆಂದು ಹೇಳುವ ವಿವೇಕಾನಂದರು ಸಾಮಾನ್ಯವಾಗಿ ಮಾನವ ಧರ್ಮವು ಭೀತಿಯಿಂದಲೇ ಪ್ರಾರಂಭವಾಗುವುದು ಎನ್ನುತ್ತಾರೆ. 'ಪ್ರಭುವಿನ ಭೀತಿಯೇ ವಿವೇಕದ ಪ್ರಾರಂಭ, ಉನ್ನತ ಭಾವನೆಗಳು ಅನಂತರ ಮೂಡುತ್ತವೆ. ಪರಿಪೂರ್ಣ ಪ್ರೇಮವು ಭೀತಿಯನ್ನು ಹೊರದೂಡುತ್ತದೆ'[1] ಎಂಬ ನಂಬಿಕೆ ಅವರದು. 'ಮರಣ' ಎನ್ನುವುದು ಇರುವವರೆಗೆ ಈ ಪ್ರಶ್ನೆ ಮತ್ತೆ ಮತ್ತೆ ತಲೆ ಎತ್ತುತ್ತದೆ. ನಾವು ಸತ್ಯಗಳಲ್ಲೆಲ್ಲಾ ಸತ್ಯವೆಂದು, ವಾಸ್ತವಾಂಶಗಳಲ್ಲೆಲ್ಲಾ ಅತಿ ವಾಸ್ತವವೆಂದು ಅಂಟಿಕೊಂಡಿರುವ ಎಲ್ಲಾ ವಸ್ತುಗಳಿಗೂ ಮರಣವೇ ಕೊನೆಯೇ? ಎಂಬ ಅರ್ಥಪೂರ್ಣ ಪ್ರಶ್ನೆಗಳು ಅಂತಿಮ ಸತ್ಯವನ್ನು ಸಾಧಿಸುವಲ್ಲಿ ಸಹಕಾರಿಯಾಗುತ್ತವೆ ಎಂಬ ಆಶಯ ವ್ಯಕ್ತಪಡಿಸುತ್ತಾರೆ.

ಮಾರ್ಕ್ಸ್ ಮತ್ತು ಎಂಜೆಲ್ಸ್ ಇಬ್ಬರೂ ಧರ್ಮವನ್ನು ವಿರೋಧಿಸಿದ ಹಿನ್ನೆಲೆ ಆಧಾರಗಳ ಕಡೆ ನಾವು ಗಮನ ಹರಿಸುವುದಾದರೆ, ಮೊದಲನೆಯದಾಗಿ ಧರ್ಮವು ವಿಜ್ಞಾನಕ್ಕೆ ವಿರೋಧವಾದುದು. ಅದು ವಿಜ್ಞಾನದ ಪ್ರಗತಿಗೆ ಆತಂಕವೇ ಹೌದು

1. ಕಲೆಕ್ಟೆಡ್ ವರ್ಕ್ಸ್—ಸಂಪುಟ 3—ಪುಟ 25.

ಎಂದು ಮಾರ್ಕ್ಸ್ ಗಟ್ಟಿಯಾಗಿ ನಂಬಿಕೆ ತಾಳಿದ್ದರಿಂದಲೇ ಧರ್ಮವನ್ನು ಅವರು ತೀವ್ರವಾಗಿ ವಿರೋಧಿಸಿದರು. ಈ ಬಗ್ಗೆ ವಿವರ ನೀಡುತ್ತಾ ಅವರು ಹೀಗೆ ವಿಚಾರ ಮಂಡಿಸುತ್ತಾರೆ: "ಧರ್ಮದ ಇತಿಹಾಸ ವೈಜ್ಞಾನಿಕ ಚಿಂತನದ ಮುನ್ನಡೆಗೆ ವಿರುದ್ಧವಾದ ಹೋರಾಟದ ಇತಿಹಾಸವಾಗಿದೆ. ಚರ್ಚು, ಮಹಾನ್ ವಿಜ್ಞಾನಿಗಳನ್ನು ಅಂಧದ್ವೇಷದಿಂದ ಚಿತ್ರಹಿಂಸೆಗೆ ಒಳಪಡಿಸಿ, ಅಗ್ನಿಕುಂಡದಲ್ಲಿ ಸುಟ್ಟು, ಅವರ ಕೃತಿಗಳನ್ನು ಬಹಿಷ್ಕರಿಸಿ ಇಲ್ಲವೇ ನಾಶಮಾಡಿ, ಉಪದ್ರವಗೊಳಿಸಿ ಪಾಷಂಡ ವಿಚಾರಣೆಯನ್ನು ತನ್ನ ಸಾಧನವನ್ನಾಗಿ ಪಡೆದಿದ್ದ ಕ್ಯಾಥೊಲಿಕ್ ಚರ್ಚು ಈ ವಿಚಾರದಲ್ಲಿ ವಿಶಿಷ್ಟ ಛಲವಂತಿಕೆಯಿಂದ ವರ್ತಿಸಿತು. ಶತಮಾನಗಳ ಕಾಲ ಚರ್ಚು ಅತ್ಯಂತ ಪ್ರತಿಗಾಮಿ ಪಾತ್ರ ನಿರ್ವಹಿಸುತ್ತ, ಜಗತ್ತನ್ನು ಕುರಿತ ವೈಜ್ಞಾನಿಕ ಭಾವನೆಗಳ ವಿರುದ್ಧವಾಗಿ ಪ್ರಜಾಪ್ರಭುತ್ವವಾದಿ ಹಾಗೂ ಸಮಾಜವಾದಿ ಆಂದೋಲನಗಳ ವಿರುದ್ಧವಾಗಿ, ನಿರ್ದಯೆಯಿಂದ ನಿಂತು ಹೋರಾಡಿದೆ"....[1]

ಈ ಮೇಲೆ ವಿವರಿಸಿದ ಗುಣಗಳನ್ನು ಧರ್ಮದಲ್ಲಿ ಕಂಡುಕೊಂಡಿದ್ದರಿಂದಲೇ ವಿಜ್ಞಾನದ ವಿರೋಧಿ ಎಂದು ಮಾರ್ಕ್ಸ್‌ರು ಧರ್ಮವನ್ನು ಖಂಡನೆಮಾಡಲು ಸಾಧ್ಯವಾದುದು. ಆದರೆ ಭಾರತದಲ್ಲಿ ಧರ್ಮವು ವಿಜ್ಞಾನದ ಜೊತೆಯಲ್ಲಿ ಸ್ವಲ್ಪಮಟ್ಟಿಗೆ ನಡೆದುಕೊಂಡೇ ಬಂದಿದೆ ಎಂದು ಹೇಳಬಹುದು. ಎರಡನ್ನೂ 'ವಿದ್ಯೆ' ಎಂಬ ಮೂಲಧಾತುವಿನಿಂದಲೇ ಹೆಸರಿಸಿ, ಅವುಗಳ ನಡುವೆ ಇರಬಹುದಾದ ಸೂಕ್ಷ್ಮ ಭೇಧಗಳನ್ನು ಸೂಚಿಸಲು ಪರಾವಿದ್ಯೆ ಮತ್ತು ಅಪರಾವಿದ್ಯೆ ಎಂದು ವಿಂಗಡಿಸಲಾಗಿದೆ. ಮತಧರ್ಮ ಮತ್ತು ವಿಜ್ಞಾನಗಳು ಮೂಲತಃ ಅವುಗಳ ಸಹಜ ಸ್ವಭಾವಗಳಿಂದಲೇ ಒಂದಕ್ಕೊಂದು ಭಿನ್ನವೆನಿಸಿ, ಪರಸ್ಪರ ವಿರೋಧವಾಗಿವೆ ಎಂದೇ ಹೆಚ್ಚಿನ ಜನರ ಸಾಮಾನ್ಯ ಭಾವನೆ. ಇವುಗಳಲ್ಲಿ ಒಂದಕ್ಕೇ ಅಂಟಿಕೊಂಡು, ಮನಸ್ಸು ಕ್ರಿಯಾಶೀಲವಾಗದೆ, ಅರ್ಥಪೂರ್ಣ ಆಲೋಚನೆ ಅಸಾಧ್ಯವಾದಾಗ ದುರಂತ ಪ್ರಾರಂಭವಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಧರ್ಮದ ಹೆಸರಿನಲ್ಲಿ ಮೌಢ ಆಲೋಚನೆಗಳು ಜನರ ಮನಸ್ಸಿನಲ್ಲಿ ಬೇರೂರಿ ವಿಜ್ಞಾನದ ಸಂಶೋಧನಾ ದೃಷ್ಟಿಯನ್ನೂ, ವಿಜ್ಞಾನಿಗಳನ್ನೂ ಘೋರವಾಗಿ ಹಿಂಸಿಸಲಾಯಿತು. ಇದರ ಹಿನ್ನೆಲೆಯಲ್ಲಿ ಆಧ್ಯಾತ್ಮ ಸಾಧನೆಗೆ ಹೆಜ್ಜೆ ಇಡುವುದು ಎಂದರೆ ಜಗತ್ತಿನ ಸರ್ವ ಚಟುವಟಿಕೆಗಳನ್ನೂ ನಿಲ್ಲಿಸಿ, ನಿರ್ಲಕ್ಷಿಸಬೇಕು. ಪ್ರಾಪಂಚಿಕ ಬದುಕಿನಲ್ಲಿ ಅರ್ಥಪೂರ್ಣ ವಿಚಾರಗಳೇ ಇಲ್ಲ. ಪ್ರಾಪಂಚಿಕ ಸ್ವಭಾವ ಬಯಸುವ ಎಲ್ಲ ಬಗೆಯ ವಿಚಾರಗಳು ತಿರಸ್ಕಾರಕ್ಕೆ ಯೋಗ್ಯವಾದವು ಎಂದೇ ಕೆಟ್ಟದಾಗಿ ನಂಬಿ ನಡೆಯುವುದಾಗಿತ್ತು. ಅಲ್ಲಿ ಪ್ರಾಪಂಚಿಕ ಜಗತ್ತಿಗೆ ಯಾವ ಸ್ಥಾನವೂ ಇರುವುದು ಸಾಧ್ಯವಿರಲಿಲ್ಲ.

ಈ ಮೇಲಿನ ಅರ್ಥಹೀನ ಮನಸ್ಸಿನ ಪ್ರತೀಕಕ್ಕೆ ಪ್ರತಿಕ್ರಿಯೆಯಾಗಿ ಮುಂದೆ

---

1. ಕೆ. ಮಾರ್ಕ್ಸ್ ಅಂಡ್ ಎಫ್. ಎಂಜೆಲ್ಸ್—ಆನ್ ರಿಲಿಜಿಯನ್,—ಪೀಠಿಕೆ—ಪುಟ 9.

ಆಧ್ಯಾತ್ಮದ ಘೋರತೆಯನ್ನು ವಿರೋಧಿಸಲು ಉಗಮಗೊಂಡ ವಿರೋಧಿಗಳು ಮತ್ತೊಂದು ಅತಿಯನ್ನು ಅಪ್ಪಿಕೊಂಡರು. ಅರ್ಥಾತ್ ಇವರು ಸಂಪೂರ್ಣವಾಗಿ ಆಧ್ಯಾತ್ಮಿಕತೆಯನ್ನೇ ಹುಚ್ಚು ವಿಪರ್ಯಾಸವೆಂದೇ ಸಾರುತ್ತಾ, ಅವುಗಳಿಗೆ ಮನ ಹರಿಸುವುದು ವ್ಯರ್ಥವೆಂದೇ ಹೇಳುತ್ತಾ ಪ್ರಾಪಂಚಿಕ ಭೋಗ ಬದುಕಿನ ಅತಿಯನ್ನು ಮುಟ್ಟಿದರು ಎಂದೇ ಹೇಳಬೇಕು. ಅವರ ದೃಷ್ಟಿಯಲ್ಲಿ ಪ್ರಾಪಂಚಿಕ ಬದುಕು ಮಾತ್ರ ಸರಿಯಾದುದು ಹಾಗೂ ಸಂಗತವಾದುದಾಗಿತ್ತು. ಹೀಗೆ ಆಲೋಚನೆಗಳು ಬೆಳೆದಂತೆಲ್ಲಾ ಪರ, ವಿರೋಧದ ಅಲೆಗಳು ಭಾವಾತಿರೇಕದಲ್ಲಿ ಪರಸ್ಪರ 'ಅತಿ'ಯನ್ನು ಮುಟ್ಟುವುದು ಸಾಮಾನ್ಯ. ಈ ಹಿನ್ನೆಲೆಯಲ್ಲಿ ಪೂರ್ವದಲ್ಲಿ ವಿಜ್ಞಾನ ಮತ್ತು ಧರ್ಮಗಳ ಮಧ್ಯ ಸಂಘರ್ಷ ನಡೆದುಕೊಂಡೇ ಬಂದಿರುವುದನ್ನು ನಾವು ಕಾಣಬಹುದು. ಒಂದು ಕಾಲಕ್ಕೆ ಧರ್ಮದ ಅನುಯಾಯಿಗಳಿಗೆ ಹೇಗೆ ಉನ್ನತಸ್ಥಾನ ಕೊಡ ಮಾಡುತ್ತಿತ್ತೋ ಅದೇ ರೀತಿಯಲ್ಲಿ ವಿಜ್ಞಾನಿಗಳನ್ನು ಕ್ರೂರವಾಗಿ ಹಿಂಸಿಸುತ್ತಿದ್ದರು. ವಿಜ್ಞಾನಿಗಳು ಧರ್ಮದ ವಿರೋಧಿಗಳೆಂದೂ, ಸೈತಾನನ ಕೈಯಾಳುಗಳೆಂದೂ ಗಟ್ಟಿಯಾಗಿ ನಂಬಿದ್ದರು. ಆ ಕಾಲದ ಮತಧರ್ಮಗಳ ಕುರಿತ ಶಾಸ್ತ್ರ ಸಾಹಿತ್ಯಗಳಲ್ಲಿ ಈ ರೀತಿಯ ಹೇಳಿಕೆಗಳು ಅತ್ಯಂತ ಸಹಜವಾಗಿವೆ :—

"ಹಿಂದೂಧರ್ಮ ಗ್ರಂಥಗಳನ್ನು ಕುರಿತು ಹೇಳುವುದಾದರೆ—ಇಲ್ಲಿಯ ಪ್ರಸಂಗವೇ ಬೇರೆ. ನಮ್ಮಲ್ಲಿ ಒಂದು ಮಹತ್ತರವಾದ, ವಿಶಿಷ್ಟ ಸಂಗತಿ ಎಂದರೆ, ಹಿಂದೂಧರ್ಮ ಗ್ರಂಥಗಳು ಮುಕ್ತಿಯ ಮಾರ್ಗವನ್ನು ತೋರುತ್ತವೆಂದೋ, ಮುಕ್ತಿಯನ್ನು ದೊರಕಿಸಿ ಕೊಡುತ್ತವೆ ಎಂದೋ ಹೇಳುವುದರ ಜೊತೆಗೆ ಭೌತಿಕ ವಿಚಾರಗಳಿಗೆ, ಪ್ರಾಪಂಚಿಕ ಜೀವನದ ನಾನಾ ಮುಖಗಳಿಗೆ ತಮ್ಮ ಗಮನ ಹರಿಸಿ ಆ ವಿಚಾರಗಳನ್ನು ಬೋಧನೆ ಮಾಡುತ್ತವೆ. ನಾನಾ ವಿಜ್ಞಾನಗಳನ್ನು ಕುರಿತು ಸಹ ಅವಶ್ಯ ಮಾರ್ಗದರ್ಶನ ನೀಡುತ್ತವೆ. ಪ್ರಾಪಂಚಿಕ ಎಂದು ಕರೆಯಬಹುದಾದ ಅರಿವು ಧರ್ಮ ಗ್ರಂಥಗಳಾದ ವೇದಗಳ ಅವಿಭಾಜ್ಯ ಅಂಗಗಳಾಗಿವೆ ಎನ್ನುವುದು ಕಂಡುಬರುತ್ತದೆ. ಋಗ್ವೇದದ ಅಂಗವಾಗಿ ಆಯುರ್ವೇದವಿದೆ. ಧನುರ್ವೇದ ಅಥವಾ ಬಿಲ್ಗಾರಿಕೆ ಮತ್ತು ಸಂಬಂಧಪಟ್ಟ ವಿಜ್ಞಾನಗಳು ಯಜುರ್ವೇದದ ಅಂಗ. ಸಾಮವೇದದಲ್ಲಿ ನಾವು ಗಂಧರ್ವವೇದ ಎಂದು ಕರೆಯುವ ಸಂಗೀತ ಮತ್ತಿತರ ಲಲಿತಕಲೆಗಳ ಶಾಸ್ತ್ರ ಹಾಗೂ ಕಲೆಗಾರಿಕೆ ಸೇರಿವೆ. ಸ್ಥಾಪತ್ಯವೇದವು ಅಥರ್ವವೇದದ ಅಂಗ. ಸ್ಥಾಪತ್ಯವೇದ ಎನ್ನುವುದು ಗಣಿತ ಹಾಗೂ ಶಿಲ್ಪನಿರ್ಮಾಣಶಾಸ್ತ್ರ ಮತ್ತಿಂತಹ ಸಕಲ ಗಣಿತಾಂಗಗಳೂ ಸೇರಿರುವ ವಿಜ್ಞಾನಗಳ ಸಂಯೋಜನೆಗೆ ಬಳಸುವ ಸಂಸ್ಕೃತ ಪದ. ಇವು ನಾಲ್ಕು ಉಪವೇದ ಗಳು ಮಾರ್ಕ್ಸ್‌ರ ಅಭಿಪ್ರಾಯದಲ್ಲಿ ಧರ್ಮದ ಮೂಲಗಳನ್ನು ಮಾನವನ ಮುನ್ನಡೆಯ ಮೊದಲ ಹಂತಗಳಲ್ಲಿ ಆದಿ ಮಾನವನು ಪ್ರಕೃತಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಅಸಹಾಯಕನಾಗಿರುವುದರಲ್ಲೇ ಕಾಣಬಹುದು. ಮುಂದೆ ವರ್ಗ ಸಮಾಜವು ರೂಪ ತಳೆದಾಗ ದುಡಿಯುವ ಜನಕೋಟಿಯ ಮೇಲಿನ ಸಾಮಾಜಿಕ

ದಬ್ಬಾಳಿಕೆ ಮತ್ತು ಶೋಷಕರ ವಿರುದ್ಧ ಹೋರಾಟದಲ್ಲಿ ಅವರ ಸ್ಪಷ್ಟ ಅಸಹಾಯಕತೆಗಳು ಧರ್ಮಕ್ಕೆ ಜನ್ಮವಿತ್ತು, ಪೋಷಿಸಿ ಈ ಲೋಕದ ತೊಳಲಿಕೆಗಳಿಗೆ ಪ್ರತಿಫಲವಾಗಿ ಮರಣಾನಂತರ ಉತ್ತಮ ಜೀವನವಿದೆ ಎಂಬ ನಂಬಿಕೆಗೆ ಎಡೆಮಾಡಿಕೊಟ್ಟವು"[1].

ಮಾರ್ಕ್ಸ್‌ರು ಧರ್ಮವನ್ನು ಖಂಡಿಸಲು ಪ್ರಬಲ ಕಾರಣಗಳಲ್ಲೊಂದು ಎಂದರೆ ಅವರಿಗೆ ಅರಿವಿದ್ದ ಧರ್ಮಗಳು ಅನುಕ್ರಮ ಶ್ರೇಣಿಗಳಲ್ಲಿ ವ್ಯವಸ್ಥಿತವಾಗಿ, ಸರ್ವರ, ಹಿತವನ್ನು ಕಡೆಗಾಣಿಸಲ್ಪಟ್ಟಿದ್ದುದು. ಈ ಬಗೆಯ 'ಬದ್ಧ' ಧರ್ಮಗಳು ತನ್ನ ಅನುಯಾಯಿಗಳಿಂದ ಪ್ರಶ್ನಿಸುವ ಅಥವಾ ವೈಚಾರಿಕ ನಿಲುವನ್ನು ಸ್ಥಾಪಿಸುವ ಹಕ್ಕನ್ನೇ ಕಸಿದುಕೊಂಡಿರುತ್ತವೆ. ಇಂಥಲ್ಲಿ ಪುರೋಹಿತರ ಕೆಟ್ಟ ಪ್ರಭಾವ ಅಪಾರ. ಪುರೋಹಿತರು ದೇವರಿಗೂ ಭಕ್ತನಿಗೂ ಮಧ್ಯೆ ಗಂಟುಬಿದ್ದು, ಮಧ್ಯವರ್ತಿಗಳಾಗಿ ಶೋಷಣೆಮಾಡಲು ಅವಕಾಶಗಳನ್ನು ವಿಪುಲವಾಗಿ ನಿರ್ಮಿಸಿಕೊಂಡಿರುತ್ತಾರೆ. ಈ ಬಗೆಯ ಪುರೋಹಿತಶಾಹಿ ವ್ಯವಸ್ಥೆಯನ್ನೇ ಮಾರ್ಕ್ಸ್‌ರು 'ಧರ್ಮ'ವೆಂದು ಭಾವಿಸಿದ್ದು ಅವರಿಟ್ಟ ತಪ್ಪುಹೆಜ್ಜೆ. ಪುರೋಹಿತಗಾಹಿ ಹಾಗೂ ಧರ್ಮದ ಸಾರವನ್ನು ಬೇರ್ಪಡಿಸುವಲ್ಲಿ ವಿಫಲ ಹೊಂದುವಿಕೆಯೇ ಅವರು ಧರ್ಮವನ್ನು ಖಂಡಿಸಲು ಕಾರಣವಾಯ್ತು. ನೈಜಧರ್ಮದ ಸಾಕ್ಷಾತ್ಕಾರವಾಗಿದ್ದ ವಿವೇಕಾನಂದರಿಗೆ ಪುರೋಹಿತಗಾಹಿ ಹಾಗೂ ಧರ್ಮದ ಸಾರ ನಡುವಿನ ವ್ಯತ್ಯಾಸ ಚೆನ್ನಾಗಿ ತಿಳಿದಿತ್ತು. ಎಂದೇ, ಅವರು ಹೇಳುತ್ತಿದ್ದರು ಎಂದಿಗೂ ಪುರೋಹಿತಗಾಹಿತನ ನೈಜಧರ್ಮದಲ್ಲಿ ನೆಲೆಕಾಣಲು ಸಾಧ್ಯವೇ ಇಲ್ಲ. ಅದು ಪೂರ್ಣವಾಗಿ ನೈಜಧರ್ಮಕ್ಕೆ ವಿರುದ್ಧವಾದುದು. ಪುರೋಹಿತಗಾಹಿಯು ಸ್ವಭಾವತಃ ಕ್ರೂರ ಮತ್ತು ಹೃದಯಹೀನವಾದುದು. ಪುರೋಹಿತಗಾಹಿಯು ಎಲ್ಲಿ ಪ್ರಬಲವಾಗಿದೆಯೋ ಅಲ್ಲಿ ಧರ್ಮ ಕೆಳಕ್ಕಿಳಿದಿದೆ ಎಂದೇ ಅರ್ಥ. ಅರ್ಥಹೀನ ವಿಷಯಾಸಕ್ತ ಭೋಗ ಭಾವನೆಯಿಂದ ಜನರು ಪಾರಾದರೆಂದರೆ ಧರ್ಮವು ಖಂಡಿತಾ ಕೈಗೂಡುತ್ತದೆ. ಅಲ್ಲಿಯವರೆಗೆ ಧರ್ಮವೆನ್ನುವುದು ಇಲ್ಲ ಎನ್ನುತ್ತಾ ಅದ್ವೈತದ ಅನುಷ್ಠಾನಕಾರ್ಯವೊಂದೇ ಎಲ್ಲಾ ಬಗೆಯ ಅರ್ಥಹೀನತೆಯನ್ನೂ ಮುರಿದಿಕ್ಕಬಲ್ಲುದು ಎಂದು ಸಾರುತ್ತಾರೆ. ಕೆಲವು ವಿಮರ್ಶಕರು ಮಾರ್ಕ್ಸ್‌ರ ವಿಚಾರಧಾರೆಯು ಗೊಂದಲಮಯವೆಂದೇ ಹೇಳುತ್ತಾರೆ. ಏಕೆಂದರೆ ಇವರ ಪ್ರಕಾರ ಪುರೋಹಿತಗಾಹಿ ಹಾಗೂ ನೈಜಧರ್ಮ—ಇವೆರಡೂ ಪರಸ್ಪರ ವಿರುದ್ಧವೆನ್ನುವ ವಿವೇಕಾನಂದರ ನಿಲುವು ಅತ್ಯಂತ ಸಮಂಜಸವಾದುದು. ಕೇವಲ ವಿಜ್ಞಾನವೇ ಎಲ್ಲ ಎಂಬ ಸೈದ್ಧಾಂತಿಕ ಭಾವನೆಗಿಂತ ವಿಜ್ಞಾನ ಹಾಗೂ ಆಧ್ಯಾತ್ಮ ಪರಸ್ಪರ ಹೇಗೆ ಪೂರಕವಾಗಿವೆ ಎಂದು ತೋರಿಸಿಕೊಡುವ ವಿವೇಕಾನಂದರು ಅವರಿಗೆ ಪ್ರಿಯವಾಗುತ್ತಾರೆ. ಆದರೆ ಮಾರ್ಕ್ಸ್‌ರು ಪುರೋಹಿತಗಾಹಿ ಹಾಗೂ ನೈಜಧರ್ಮ—ಇವೆರಡನ್ನೂ ಬೆರಸಿ ಕೆಸರು ಮಾಡಿದ್ದಾರೆ ಅಷ್ಟೇ ಎಂದೇ ಅಭಿಪ್ರಾಯ ಮಂಡಿಸುತ್ತಾರೆ.

---

1. ಭಾರತೀಕೃಷ್ಣತೀರ್ಥ : ಭವಾನ್ಸ್ ಜರ್ನಲ್—ಮೇ–1984.

ಒಟ್ಟಾರೆ ಧರ್ಮದ ವಿಮರ್ಶೆಯ ಇತಿಹಾಸದಲ್ಲಿ ಮಾರ್ಕ್ಸ್ ಹಾಗೂ ವಿವೇಕಾನಂದರಿಬ್ಬರಿಗೂ ವಿಶಿಷ್ಟ ಸ್ಥಾನವಿದೆ ಇಬ್ಬರದೂ ವಿಭಿನ್ನ ದೃಷ್ಟಿಯಾದರೂ ಅಂತಿಮ ಉದ್ದೇಶ ಮಾನವ ಉದ್ಧಾರ ಎಂಬುದು ಗಮನಾರ್ಹ. ಇಬ್ಬರ ವೈಶಿಷ್ಟ್ಯವೆಂದರೆ—ಮಾರ್ಕ್ಸ್‌ರು ಧರ್ಮವನ್ನು ಕುರಿತ ವಿಮರ್ಶೆಯನ್ನು ಅನೇಕ ಗ್ರಂಥಗಳ ಅಧ್ಯಯನ, ತಾರ್ಕಿಕವಾದ ಶೋಧನಾದೃಷ್ಟಿ ಹಾಗೂ ಅವುಗಳನ್ನು ಕುರಿತ ಅರಿವು ಇತ್ಯಾದಿಗಳ ಸಹಾಯದಿಂದ ತಮ್ಮ ಇತಿಹಾಸದ ವಿಶ್ಲೇಷಣೆಗೆ ಅನುಗುಣವಾಗಿ ವಿಶ್ಲೇಷಿಸಿದರು. ಆದರೆ ವಿವೇಕಾನಂದರ ದೃಷ್ಟಿ ಕೇವಲ ಶುಷ್ಕಗ್ರಂಥಾಧ್ಯಯನಗಳ ಫಲವಲ್ಲ. ಶ್ರೀ ರಾಮಕೃಷ್ಣ ಪರಮಹಂಸರಂತಹ 'ಸತ್ಯ' ಸಾಕ್ಷಾತ್ಕಾರವನ್ನು ಅನುಭವದಲ್ಲಿ ಸಾಧ್ಯಮಾಡಿಕೊಂಡಿದ್ದ ಪ್ರಾಜ್ಞ ಸಂತನಿಂದ ಬಂದ ಪೂರ್ಣ ಫಲದೃಷ್ಟಿ. ಈ ದೃಷ್ಟಿಯೇ ಅವರು ಧರ್ಮದ ಕವಚ ಧರಿಸಿದ ಪವಾಡ, ಅಂಧಶ್ರದ್ಧೆ, ಜಾತಿ ಪದ್ಧತಿಗಳ ಹರಿಕಾರರನ್ನು ತರಾಟೆಗೆ ತೆಗೆದುಕೊಳ್ಳಲು ಕಾರಣವಾದದ್ದು. ಭಾರತ ಭೂಮಿಯಲ್ಲಿ ಧರ್ಮ ಕುರಿತ ಸತ್ಯಗಳು ಎಂದೂ ರಹಸ್ಯವಿದ್ಯೆಯಲ್ಲ. ಹಾಗೆ ಹೇಳುವ, ಬೋಧಿಸುವ ಮಾನವತಾದ್ರೋಹಿಗಳ ಬಗೆಗೆ ಎಚ್ಚರದಿಂದಿರಿ ಎಂದು ಅವರು ಸಿಂಹನಾದಗೈಯ್ಯಲು ಬುನಾದಿಯಾದದ್ದು. 'ಮನುಷ್ಯಕುಲಂ ತಾನೊಂದೆವಲಂ' ಎಂದ ಕವಿವರ್ಯ ಬನವಾಸಿ ಪಂಪನ ಮಾತನ್ನು ಯಥಾವತ್ತಾಗಿ ಹೃದಯದಲ್ಲಿ ತುಂಬಿಕೊಂಡಿದ್ದ ರಾಮಕೃಷ್ಣ, ವಿವೇಕಾನಂದರು, ಮಾರ್ಕ್ಸ್‌ರ ಸೈದ್ಧಾಂತಿಕ ದೃಷ್ಟಿಯನ್ನೂ ಮೀರಿ ನಿಲ್ಲುತ್ತಾರೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು.

ಡಾ. ಎ. ವಿ. ನರಸಿಂಹಮೂರ್ತಿ

ಕರ್ನಾಟಕದ ಪ್ರಾಚೀನ ಟಂಕಶಾಲೆಗಳು

ಸಾವಿರಾರು ಸಂಖ್ಯೆಯಲ್ಲಿ ಪ್ರಾಚೀನ ನಾಣ್ಯಗಳು ಕರ್ನಾಟಕದಲ್ಲಿ ದೊರಕಿದ್ದರೂ ಅವುಗಳು ತಯಾರಾದ ಟಂಕಶಾಲೆಗಳ ವಿಷಯ ನಮಗೆ ಅಷ್ಟಾಗಿ ತಿಳಿದುಬಂದಿಲ್ಲ. ಕರ್ನಾಟಕದ ಬಹುತೇಕ ನಾಣ್ಯಗಳ ಮೇಲೆ ಟಂಕಶಾಲೆಯ ಹೆಸರು ಲಿಖಿತವಾಗಿಲ್ಲ. ಹೀಗಾಗಿ ಶಾಸನಗಳಲ್ಲಿ ಕಂಡು ಬರುವ ಉಲ್ಲೇಖಗಳನ್ನೇ ಆಧಾರವಾಗಿಟ್ಟುಕೊಂಡರೆ, ಕರ್ನಾಟಕದಲ್ಲಿ ಕೆಲಸಮಾಡುತ್ತಿದ್ದ ಟಂಕಶಾಲೆಗಳ ವಿಷಯ ತಿಳಿದು ಬರುತ್ತದೆ. ಇಂತಹ ಟಂಕಶಾಲೆಗಳನ್ನು ಪರಿಚಯಿಸುವುದೇ ಈ ಲೇಖನದ ಮುಖ್ಯ ಉದ್ದೇಶ.

ಕರ್ನಾಟಕದಲ್ಲಿ ದೊರಕಿರುವ ಅತ್ಯಂತ ಪ್ರಾಚೀನ ನಾಣ್ಯಗಳೆಂದರೆ ಪಂಚ್ ಮಾರ್ಕಿನ ನಾಣ್ಯಗಳು. ಇದುವರೆವಿಗೂ ಕರ್ನಾಟಕದಲ್ಲಿ ದೊರಕಿರುವ ಪಂಚ್ ಮಾರ್ಕ್ ನಾಣ್ಯಗಳನ್ನು ಗಮನಿಸಿದರೆ, ಅವು ಇಲ್ಲಿ ತಯಾರಾದವುಗಳಲ್ಲವೆಂದೂ, ಬಹುಶಃ ಮೌರ್ಯರ ಕಾಲದಲ್ಲಿ ಉತ್ತರ ಭಾರತದಲ್ಲಿ ಚಲಾವಣೆಯಲ್ಲಿದ್ದ ಈ ನಾಣ್ಯಗಳೇ ಕರ್ನಾಟಕದಲ್ಲಿಯೂ ಬಳಕೆಯಲ್ಲಿದ್ದಿತು ಎಂಬ ವಿಷಯ ವ್ಯಕ್ತಪಟ್ಟಿದೆ. ಬನವಾಸಿಯ ಉತ್ಖನನ, ವಡಗಾಂವ್ ಮಾಧವಪುರದ ಉತ್ಖನನಗಳಲ್ಲಿಯೂ, ಚಿಕ್ಕ ಸಿಂದೊಡಗಿಯಲ್ಲಿ ದೊರೆತಿರುವ ನಾಣ್ಯ ರಾಶಿಯ ಪಂಚ್‌ಮಾರ್ಕ್ ನಾಣ್ಯಗಳು, ಈ ರೀತಿಗೆ ಸೇರಿದವುಗಳಾಗಿದ್ದು, ಉತ್ತರ ಭಾರತದಿಂದ ಇಲ್ಲಿಗೆ ಬಂದವುಗಳು ಎಂಬುದು ಖಚಿತವಾಗಿದೆ. ಆದುದರಿಂದ ಕ್ರಿ.ಶ. ಆದಿಭಾಗದಲ್ಲಿ ಕರ್ನಾಟಕದಲ್ಲಿ ಟಂಕಶಾಲೆಗಳಿದ್ದವೆಂಬುದಕ್ಕೆ ಯಾವ ಆಧಾರವೂ ಇಲ್ಲ. ಶಾತವಾಹನರ ನಾಣ್ಯಗಳು ವಿಶೇಷವಾಗಿ ಕರ್ನಾಟಕದ ಹೊರಗಡೆಯೇ ದೊರಕಿವೆ. ಆದರಲ್ಲಿಯೂ ಮಹಾರಾಷ್ಟ್ರ ಮತ್ತು ಆಂಧ್ರಗಳಲ್ಲಿ ಅವು ತಯಾರಾಗುತ್ತಿದ್ದವು ಎಂಬುದು ವಿದ್ವಾಂಸರ ಮತ. ಆದರೆ ಶಾತವಾಹನರ ಅಧೀನರೇ ಆಗಿದ್ದು ಚಿತ್ರದುರ್ಗದಲ್ಲಿ ಆಳುತ್ತಿದ್ದ ಚುಟುಕುಲಾನಂದ, ಮುಡಾನಂದ ಎಂಬ ರಾಜರ ನಾಣ್ಯಗಳು ಕರ್ನಾಟಕದಲ್ಲಿ ಹೇರಳವಾಗಿ ದೊರೆತಿವೆ. ಈ ಸೀಸದ ನಾಣ್ಯಗಳು ಶಾತವಾಹನರ ನಾಣ್ಯಗಳನ್ನೇ ಬಹಳವಾಗಿ ಹೋಲುತ್ತವೆ. ಆದರೆ ಚಂದ್ರವಳ್ಳಿ–ಚಿತ್ರದುರ್ಗ–ಬನವಾಸಿ ಮುಂತಾದ ಸ್ಥಳಗಳಲ್ಲಿ ವಿಪುಲವಾಗಿ

ದೊರೆಯುವ ಈ ನಾಣ್ಯಗಳು ಇಲ್ಲಿಯೇ ತಯಾರಾದವುಗಳು ಎಂದು ಊಹಿಸಬಹುದು. ಹಾಗಾದರೆ ಇವು ಚುಟುರಾಜರ ಆಳ್ವಿಕೆಯಲ್ಲಿ ಇಲ್ಲಿಯೇ ತಯಾರಾದ ನಾಣ್ಯಗಳು ಎಂದು ಭಾವಿಸಬಹುದು.

ಬನವಾಸಿಯಲ್ಲಿ ಆಳಿದ ಕದಂಬರು ಪದ್ಮಟಂಕವೆನ್ನುವ ಚಿನ್ನದ ನಾಣ್ಯಗಳನ್ನು ಬಳಕೆಗೆ ತಂದರು ಎನ್ನುವ ವಿಷಯ ವಿದ್ವಾಂಸರಿಂದ ಮನ್ನಣೆ ಪಡೆದಿದೆ. ಆದರೆ ಬನವಾಸಿಯಲ್ಲಾಗಲೀ ಅಥವಾ ಅದರ ಸುತ್ತಮುತ್ತಲ ಪ್ರದೇಶದಲ್ಲಿಯಾಗಲೀ ಕದಂಬರ ನಾಣ್ಯಗಳು ತಯಾರಾಗುತ್ತಿದ್ದುವೆಂಬುದಕ್ಕೆ ಯಾವ ಆಧಾರಗಳೂ ದೊರಕಿಲ್ಲ. ಆದರೆ ಬನವಾಸಿಯಲ್ಲಿ ಪಾಟಿಕಲ್ಲಿನಲ್ಲಿ ಮಾಡಿದ ರೋಮನ್ ನಾಣ್ಯದ ಅಚ್ಚು ದೊರಕಿರುವುದು ಗಮನಾರ್ಹವಾದ ಸಂಗತಿ.[1] ಅಗಸ್ಟಸ್ ಅಥವಾ ಟೈಬೀರಿಯಸ್ ರಾಜರ, ಆಸನದಲ್ಲಿ ಕುಳಿತಿರುವ ರಾಣಿಯ ಚಿತ್ರವಿರುವ ಈ ನಾಣ್ಯದ ಹಿಮ್ಮುಖದ ಅಚ್ಚು ಬನವಾಸಿಯಲ್ಲಿ ಕ್ರಿ. ಶ. ಒಂದು ಅಥವಾ ಎರಡನೆಯ ಶತಮಾನದ ಸುಮಾರಿನಲ್ಲಿ ಬಳಕೆಯಾಗುತ್ತಿದ್ದಿತೆಂದು ತಿಳಿಯುತ್ತದೆ. ಈ ನಾಣ್ಯದ ಉದ್ದೇಶವೇನೇ ಇರಲಿ, ಬನವಾಸಿಯಲ್ಲಿ ಟಂಕಶಾಲೆಯಿದ್ದುದಕ್ಕೇ ಇದು ಆಧಾರವನ್ನು ಒದಗಿಸುತ್ತದೆ. ಆದುದರಿಂದ ಕರ್ನಾಟಕದ ಅತ್ಯಂತ ಪ್ರಾಚೀನ ಟಂಕಶಾಲೆಯು ಬನವಾಸಿಯಲ್ಲಿದ್ದಿತು ಎಂಬುದು ಖಚಿತವಾಗುತ್ತದೆ.

ಅನಂತರ ಟಂಕಶಾಲೆಗಳ ವಿಷಯ ನಮಗೆ ದೊರಕುವುದು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ. ಹತ್ತಾರು ಶಾಸನಗಳು ಲೊಕ್ಕಿಗುಂಡಿ ಎಂಬಲ್ಲಿದ್ದ ಟಂಕಶಾಲೆಯ ಬಗೆಗೆ ಮಾಹಿತಿಯನ್ನು ಒದಗಿಸುತ್ತವೆ ನಾಣ್ಯಗಳನ್ನು ಅವುಗಳು ಅಚ್ಚಾದ ಟಂಕಸಾಲೆಯ ಹೆಸರಿನಿಂದ ಗುರುತಿಸುವ ಪದ್ಧತಿಯೂ ಈ ಕಾಲದಲ್ಲಿ ಪ್ರಾರಂಭವಾಯಿತು. ಲೊಕ್ಕಿಗುಂಡಿಯಲ್ಲಿ ಅಚ್ಚಾದ ನಾಣ್ಯಗಳನ್ನು ಲೊಕ್ಕಿಗುಂಡಿ ಗದ್ಯಾಣ, ಲೊಕ್ಕಿ ಗದ್ಯಾಣ, ಲೊಕ್ಕಿಯಚ್ಚಿನ ಪೊನ್, ಲೊಕ್ಕಿ ಶ್ರಾಹೇಯ ಗದ್ಯಾಣ. ಲೊಕ್ಕಿ ಪೊನ್ ಮುಂತಾದ ಹೆಸರುಗಳಿಂದ ಗುರುತಿಸುತ್ತಿದ್ದರು. ಕೆಲವು ಶಾಸನಗಳಲ್ಲಿ ಗದ್ಯಾಣವನ್ನು ಉಲ್ಲೇಖಿಸುವಾಗ ಲೊಕ್ಕಿಗದ್ಯಾಣ ಎಂಬ ಹೆಸರನ್ನು ಬಳಸಿರುವುದನ್ನು ಗಮನಿಸಿದರೆ, ಈ ಗದ್ಯಾಣಗಳು ಇತರ ನಾಣ್ಯಗಳಿಗಿಂತ ಶ್ರೇಷ್ಠವಾಗಿದ್ದಿರಬಹುದು ಎನ್ನುವ ಊಹೆಗೆ ದಾರಿ ಮಾಡಿಕೊಡುತ್ತವೆ ಚಾಲುಕ್ಯ ನಾಲ್ಕನೆಯ ಸೋಮೇಶ್ವರನ ಕಾಲದ ಶಾಸನವೊಂದರಲ್ಲಿ, ಲೊಕ್ಕಿಗುಂಡಿಯಲ್ಲಿ ಬಳಸಲಾಗುತ್ತಿದ್ದ ಅಚ್ಚು, ಅಚ್ಚಿನ ಕಾಣಿ, ಅಣೆ, ಅಚ್ಚಿನಮೊಳೆ ಮುಂತಾದ ತಾಂತ್ರಿಕ ಪದಗಳು ಕಂಡುಬರುತ್ತವೆ.[2] ಇವೆಲ್ಲವುಗಳಿಂದ, ಲೊಕ್ಕಿಗುಂಡಿಯಲ್ಲಿ ಮುಖ್ಯವಾದ ಟಂಕಶಾಲೆಯು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಕೆಲಸಮಾಡುತ್ತಿದ್ದಿತು ಎಂಬುದು ತಿಳಿದುಬರುತ್ತದೆ.

ಇದೇ ಕಾಲದ ಮತ್ತೊಂದು ಟಂಕಶಾಲೆಯು ಸೂಡಿ ಎಂಬಲ್ಲಿದ್ದಿತು. ಇಲ್ಲಿ ಕಮ್ಮಟೇಶ್ವರನ ದೇವಾಲಯವೂ ಇದ್ದಿತು. ಈ ಟಂಕಶಾಲೆಯಲ್ಲಿ ಕೆಲಸಮಾಡುತ್ತಿದ್ದ ಕಾರ್ಮಿಕರು ಈ ದೇವಾಲಯಕ್ಕೆ ವಿಶೇಷ ಗೌರವವನ್ನು ಕೊಡುತ್ತಿದ್ದರು. ಈ ಟಂಕ

ಶಾಲೆಯ ಮುಖ್ಯಾಧಿಕಾರಿಯಾಗಿದ್ದ ಉತ್ತವೋಜನು ಚಾಲುಕ್ಯ ತ್ರಿಭುವನಮಲ್ಲನ ರಾಜ್ಯದಲ್ಲಿ ಟಂಕಶಾಲೆಯ ಅಧಿಕಾರಿಯೂ ಆಗಿದ್ದನು[3]. ರಾಜನು ಈ ಕಮ್ಮಟೇಶ್ವರ ದೇವಾಲಯಕ್ಕೆ ಕೊಟ್ಟ ದತ್ತಿಗಳನ್ನು ಇಲ್ಲಿನ ಶಾಸನವು ಉಲ್ಲೇಖಿಸುತ್ತದೆ. ಉತ್ತವೋಜನಿಗೆ ಉಂಡಿಗೆ ಎಂದರೆ ರಾಜನ ಮುದ್ರೆಯನ್ನು ಮತ್ತು ಕಮ್ಮಟದ ಆಣಿ ಎಂದರೆ ನಾಣ್ಯವನ್ನು ಮಾಡುವ ಅಚ್ಚನ್ನು ಹೊಂದಿರುವ ವಿಶೇಷ ಅಧಿಕಾರವೂ ಇದ್ದಿತು. ಬಹುಶಃ ನಾಣ್ಯಗಳನ್ನು ಅಚ್ಚುಮಾಡುವಾಗ ಉತ್ತವೋಜನು ಈ ಮುದ್ರೆ ಮತ್ತು ಅಚ್ಚನ್ನು ಟಂಕಶಾಲೆಗೆ ಒದಗಿಸುತ್ತಿದ್ದನು. ಇದೇ ರಾಜ ತ್ರಿಭುವನಮಲ್ಲನ ಕುಡಿತಿನಿ ಶಾಸನದಲ್ಲಿ ಕಂಡುಬರುವ ನವಿಲಚ್ಚಿನ ಪೊನ್ ಎನ್ನುವುದು ಗಮನಾರ್ಹ ವಾದುದು.[4] ಈ ಶಾಸನದ ಪ್ರಕಾರ ಸಾವಿವೋಜನು ಲೊಕ್ಕಿಪೊನ್‌ಗಳನ್ನು ನವಿಲಚ್ಚಿನ ಪೊನ್‌ಗಳಾಗಿ ಪರಿವರ್ತಿಸಲು ರಾಜನಿಗೆ ಹನ್ನೆರಡು ಗದ್ಯಾಣಗಳನ್ನು ಕೊಡಬೇಕಾಗಿದ್ದಿತು. ಆದುದರಿಂದ ನವಿಲಚ್ಚಿನ ಪೊನ್ ಎಂಬುದು ನವಿಲೆ ಎಂಬ ಊರಿನ ಟಂಕಶಾಲೆಯಲ್ಲಿ ತಯಾರಾದ ನಾಣ್ಯವಿರಬೇಕೆಂಬ ಊಹೆಯನ್ನು ಪುಷ್ಟೀ ಕರಿಸುತ್ತದೆ. ಏಕೆಂದರೆ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನವಿಲನ್ನು ಹೊಂದಿರುವ ಯಾವ ನಾಣ್ಯವೂ ಅಚ್ಚಾಗುತ್ತಿರಲಿಲ್ಲ. ಆದುದರಿಂದ ಇಲ್ಲಿನ ನವಿಲ್ ಎನ್ನುವ ಪದಕ್ಕೆ ಊರಿನ ಹೆಸರು ಸಂಬಂಧಿಸಿರಬೇಕೆಂದು ಊಹಿಸಲು ಅವಕಾಶವಿದೆ.

ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಧಾರವಾಡ ಜಿಲ್ಲೆಯ ನರಗುಂದದಲ್ಲಿ ಒಂದು ಟಂಕಶಾಲೆಯಿದ್ದಿತೆಂದು ಮೂರನೆಯ ತೈಲನ ಶಾಸನದಿಂದ ತಿಳಿದುಬರುತ್ತದೆ.[5] ನರಗುಂದ ಗ್ರಾಮದ ಒಂದು ಭಾಗವಾದ ಹೇಮಗೇರಿಯಲ್ಲಿದ್ದ ಟಂಕಶಾಲೆಗೆ ಕುಪ್ಪಟಿ ಯೋಚಿಸೆಟ್ಟಿ ಎಂಬ ಟಂಕಾಧಿಕಾರಿಯಿದ್ದನು. ಈತನು ಲೋಹಶಾಸ್ತ್ರದಲ್ಲಿ ನಿಷ್ಣಾತ ನಾಗಿದ್ದುದಲ್ಲದೆ, ನಂಬಿಕಸ್ತನೂ ಆಗಿದ್ದನು. ಆದುದರಿಂದ ತೈಲನು ಇವನಿಗೆ ಹೇಮ ಕುಪ್ಪಟ್ಟ ಎಂಬ ಬಿರುದನ್ನೂ ಕೊಟ್ಟನು. ಇಲ್ಲಿ ಚಿನ್ನದ ನಾಣ್ಯಗಳು ತಯಾರಾಗು ತ್ತಿದ್ದವು. ಆದುದರಿಂದ ಈ ಜಾಗಕ್ಕೆ ಹೇಮಗೇರಿ ಎಂಬ ಹೆಸರು ಬಂದಿತು.

ಹೊಯ್ಸಳ ಮತ್ತು ಸೇವುಣರ ಕಾಲಗಳಲ್ಲಿ, ಲೊಕ್ಕಿಗದ್ಯಾಣಗಳ ಉಲ್ಲೇಖ ಪದೇ ಪದೇ ಬರುತ್ತದೆ. ಆದುದರಿಂದ ಚಾಲುಕ್ಯರ ಕಾಲದಲ್ಲಿ ಪ್ರಾರಂಭಿಸಲಾದ ಟಂಕಶಾಲೆಯೂ ಇವರ ಕಾಲದಲ್ಲಿಯೂ ಮುಂದುವರಿಯಿತು ಎಂದು ತಿಳಿದುಬರುತ್ತದೆ. ಆದರೆ ಇತರ ಯಾವ ಟಂಕಶಾಲೆಗಳ ಹೆಸರುಗಳೂ ಕಾಣಬರುವುದಿಲ್ಲ. ಶಾಸನ ವೊಂದರಲ್ಲಿ ಕಾಣಸಿಗುವ ಅಂಬಿಲಿ ಗದ್ಯಾಣ ಎನ್ನುವುದು ಅಂಬಿಲಿ ಎಂಬ ಊರಿನಲ್ಲಿ ಅಚ್ಚಾದ ಗದ್ಯಾಣವಿರಬೇಕೆಂದು ಊಹಿಸಲು ಅವಕಾಶವಿದೆ.[6] ಹಾಗಾದರೆ ಅಂಬಿಲಿ ಯಲ್ಲಿ ಸೇವುಣರ ಟಂಕಶಾಲೆಯಿದ್ದಿತೆಂದು ಹೇಳಬೇಕಾಗುತ್ತದೆ. ಮತ್ತೊಂದು ಸೇವುಣರ ಶಾಸನದಲ್ಲಿ ಟಂಕೆ ಎಂಬ ಪದವು ಇತರ ತೆರಿಗೆಗಳ ಜೊತೆಯಲ್ಲಿ ಕಂಡು ಬರುತ್ತದೆ.[7] ಆದುದರಿಂದ ಟಂಕೆ ಎನ್ನುವುದೂ ಒಂದು ತೆರಿಗೆಯಿರಬೇಕೆಂದು ತೀರ್ಮಾನಿಸಲಾಗಿದೆ. ಹಾಗಾದರೆ ನಾಣ್ಯಗಳನ್ನು ಅಚ್ಚುಮಾಡುವವರು ಆದಂರೆ,

ವರ್ತಕರ ಶ್ರೇಣಿಗಳು ಹಾಗೂ ಸಾಮಂತರು, ನಾಣ್ಯಗಳನ್ನು ಅಚ್ಚುಮಾಡುವ ಸಮಯದಲ್ಲಿ ರಾಜನಿಗೆ ಕೊಡಬೇಕಾದ ತೇರಿಗೆಯಿದಿರಬೇಕೆಂದು ತಿಳಿಯಬೇಕು.

ವಿಜಯನಗರ ಕಾಲದಲ್ಲಿ ಟಂಕಶಾಲೆಗಳ ಮೇಲೆ ವಿಶೇಷ ಹತೋಟಿಯನ್ನು ಹಾಕಲಾಗಿದ್ದಿತು. ಅಚ್ಚಿನ ಅಧಿಕಾರಿಗಳು ಶಾಸನಗಳಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತಾರೆ. ಇವರು ತೂಕ ಮತ್ತು ಶುದ್ಧತೆಯ ವಿಷಯದಲ್ಲಿ ನಾಣ್ಯಗಳನ್ನು ಪರೀಕ್ಷಿಸುತ್ತಿದ್ದರು. ನಾಣ್ಯಗಳನ್ನು ಅನೇಕ ಟಂಕಶಾಲೆಗಳಲ್ಲಿ ಮುದ್ರಿಸುತ್ತಿದ್ದರೆಂದು ಯಾತ್ರಿಕ ಬಾರ್ಬೋಸ ಹೇಳುತ್ತಾನಾದರೂ, ಅವುಗಳ ವಿವರಗಳನ್ನು ಕೊಟ್ಟಿಲ್ಲ. ಜೊತೆಗೆ ಅಧಿರಾಜರೂ ಹಾಗೂ ದಂಡಾಧೀಶರೂ ನಾಣ್ಯಗಳನ್ನು ಮುದ್ರಿಸುವ ಹಕ್ಕನ್ನು ಹೊಂದಿದ್ದರಿಂದ, ರಾಜ್ಯದ ಅನೇಕ ಕಡೆಗಳಲ್ಲಿ ನಾಣ್ಯಗಳು ಮುದ್ರಿತವಾಗುತ್ತಿದ್ದವು ಎನ್ನುವುದು ಖಚಿತವಾದ ಸಂಗತಿ. ಅನೇಕ ಶಾಸನಗಳಲ್ಲಿ ಮಂಗಳೂರು ಗದ್ಯಾಣ ಮತ್ತು ಬಾರಕೂರು ಗದ್ಯಾಣಗಳು, ಉಲ್ಲೇಖಿತವಾಗಿವೆ.[8] ಇದರಿಂದ ಮಂಗಳೂರು ಮತ್ತು ಬಾರಕೂರುಗಳಲ್ಲಿ ಟಂಕಶಾಲೆಗಳಿದ್ದವು ಎಂಬುದು ಗೊತ್ತಾಗುತ್ತದೆ. ಇವೆರಡೂ ತುಳುನಾಡಿನ ಪ್ರಮುಖ ನಗರಗಳಾಗಿದ್ದು ಉಪರಾಜಧಾನಿಗಳಾಗಿದ್ದವು; ಆಳುಪರು ವಿಜಯನಗರದ ಅರಸರ ಸಾಮಂತರಾಗಿದ್ದರು.

ಹಂಪೆಯಲ್ಲಿ ಪ್ರಮುಖವಾದ ಟಂಕಶಾಲೆಯಿದ್ದಿತೆಂದು ನಂಬಲಾಗಿದೆ; ಹಂಪೆಯ ಕೆಲವು ಜಾಗಗಳನ್ನು ಇಂದಿಗೂ ಟಂಕಶಾಲೆಯ ಸ್ಥಳ ಎಂದೇ ಗುರುತಿಸುತ್ತಾರೆ. ಆದರೆ ಇತ್ತೀಚೆಗೆ ಆ ಸ್ಥಳಗಳಲ್ಲಿ ಉತ್ಖನನಗಳು ನಡೆದಾಗ, ಅಲ್ಲಿ ಟಂಕಶಾಲೆಯ ಯಾವ ಕುರುಹೂ ಅಲ್ಲಿ ಕಾಣಬರಲಿಲ್ಲ. ಆದುದರಿಂದ ಹಂಪೆಯ ಟಂಕಶಾಲೆಯು ಬೇರೊಂದು ಸ್ಥಳದಲ್ಲಿದ್ದಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ.

ವಿಜಯನಗರದ ಕೆಲವು ನಾಣ್ಯಗಳ ಮೇಲೆ ನೆ, ಮ, ತಾ ಎಂಬ ಅಕ್ಷರಗಳಿರುವುದು ಕಂಡು ಬಂದಿದೆ.[9] ಇವುಗಳು ಕ್ರಮವಾಗಿ ನೆಲ್ಲೂರು, ಮಧುರೈ ಹಾಗೂ ತಾಡಪತ್ರಿಗಳಲ್ಲಿದ್ದ ಟಂಕಶಾಲೆಗಳನ್ನು ಉಲ್ಲೇಖಿಸುತ್ತವೆ ಎಂದು ಕೆಲವರು ಭಾವಿಸುತ್ತಾರೆ. ಗುತ್ತಿಯ ಹೊನ್ನು ಎನ್ನುವ ನಾಣ್ಯವನ್ನು ಮಹಾನವಮಿ ಚೌಪದ ಎಂಬ ಗ್ರಂಥದಲ್ಲಿ ಕಾಣುತ್ತೇವೆ. ಆದುದರಿಂದ ಗುತ್ತಿಯಲ್ಲಿ ಮುದ್ರಿಸಲಾದ ಹೊನ್ನುಗಳನ್ನು ಆ ರೀತಿ ಕರೆಯುತ್ತಿದ್ದರೆಂದು ಭಾವಿಸುವುದಾದರೆ, ಗುತ್ತಿಯಲ್ಲಿ ಟಂಕಶಾಲೆಯಿದ್ದುದು ಖಚಿತವಾಗುತ್ತದೆ. ಅದೇ ರೀತಿಯಲ್ಲಿ 'ತಿರುಪತಿ ಹಣ' ಎನ್ನುವ ಉಲ್ಲೇಖದ ಮೇಲೆ, ತಿರುಪತಿಯಲ್ಲಿ ಒಂದು ಟಂಕಶಾಲೆಯಿದ್ದಿತು ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಬಹಮನಿ ಸಾಮ್ರಾಜ್ಯದ ಇತಿಹಾಸಕ್ಕೆ ಬಂದರೆ, ಟಂಕಶಾಲೆಗಳ ವಿಷಯದಲ್ಲಿ ಹೆಚ್ಚಿನ ಮಾಹಿತಿಗಳು ದೊರೆಯುತ್ತವೆ. ಸಾಮಾನ್ಯವಾಗಿ ಇತರ ನಾಣ್ಯಗಳ ಮೇಲೆ ಟಂಕಶಾಲೆಯ ಹೆಸರುಗಳು ಮುದ್ರಿತವಾಗಿರುತ್ತವೆ[10] ಕೊನೆಯ ಪಕ್ಷ, ಮೂರು ಟಂಕಶಾಲೆಗಳು ಇವರ ಕಾಲದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಅವುಗಳು

ಅಹಸನಾಬಾದ್ (ಗುಲ್ಬರ್ಗ) ಮುಹಮ್ಮದಾಬಾದ್ (ಬೀದರ್) ಮತ್ತು ಫತಾಬಾದ್ (ದೌಲತಾಬಾದ್). ಈ ಮೂರು ಟಂಕಶಾಲೆಗಳ ಹೆಸರುಗಳು ಅವರ ನಾಣ್ಯಗಳ ಮೇಲೆ ಕಂಡು ಬರುವುದರಿಂದ, ಇವುಗಳ ವಿಷಯದಲ್ಲಿ ಖಚಿತತೆ ಇದೆ.

ವಿಜಯನಗರದ ಪತನಾನಂತರ ಕರ್ನಾಟಕವು ನಾಯಕರ ಮತ್ತು ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟಿದ್ದಿತು. ಇದರಲ್ಲಿ ಮುಖ್ಯರಾದವರು ಕೆಳದಿಯ ನಾಯಕರು, ಚಿತ್ರದುರ್ಗದ ಪಾಳೆಯಗಾರರು ಹಾಗೂ ಮೈಸೂರಿನ ಒಡೆಯರ್ ಮನೆತನದ ಅರಸರು. ಕೆಳದಿಯ ಅರಸರ ನಾಣ್ಯಗಳು ಕೆಳದಿಯಲ್ಲಿ ಮುದ್ರಿತವಾಗುತ್ತಿದ್ದವು. ಆ ಕಾಲದಲ್ಲಿ ಬಳಕೆಯಲ್ಲಿದ್ದ ಒಂದು ನಾಣ್ಯವನ್ನು ಮುದ್ರಿಸುವ ಸಾಧನವು ದೊರಕಿದೆ. ಅದನ್ನು ಟಂಕಸಾಲೆಯ ಕಲ್ಲು ಎಂದು ಕರೆಯುತ್ತಾರೆ. ಅದರ ಮೇಲೆ ಕಾಲವೂ ನಮೂದಿಸಲ್ಪಟ್ಟಿದೆ. ಅದರ ಪ್ರಕಾರ 30, ಆಗಸ್ಟ್ 1726ರಲ್ಲಿ ಅದನ್ನು ತಯಾರಿಸಲಾಯಿತು. ಅದರ ಮೇಲಿರುವ ಬರವಣಿಗೆಯ ಪ್ರಕಾರ ಅದನ್ನು ಸುಬ್ಬಾಚಾರಿ ಎಂಬುವವನು ಒಂದು ರೂಪಾಯಿಯ ಬೆಳ್ಳಿ ನಾಣ್ಯಗಳನ್ನು ತಯಾರುಮಾಡಲು ಮಾಡಿದನು ಎಂದು ಗೊತ್ತಾಗುತ್ತದೆ. ಚಿತ್ರದುರ್ಗದಲ್ಲಿದ್ದ ಟಂಕಸಾಲೆಯಲ್ಲಿ ಪಾಳೆಯಗಾರರ ದುರ್ಗಿಪಗೊಂಡ ಮತ್ತು ದುರ್ಗಿ ಹಣಗಳೆಂಬ ನಾಣ್ಯಗಳು ಅಚ್ಚಾಗುತ್ತಿದ್ದವು. ಕೆಂಪೇಗೌಡನ ಕಾಲದಲ್ಲಿ ಯಲಹಂಕದಲ್ಲಿದ್ದ ಟಂಕಸಾಲೆಯಲ್ಲಿ ಹಣವೆಂಬ ನಾಣ್ಯ ಮುದ್ರಿತವಾಗುತ್ತಿದ್ದಿತು. ಹಾಗೆಯೇ ಚಿಕ್ಕಬಳ್ಳಾಪುರ ಹಾಗೂ ದೊಡ್ಡಬಳ್ಳಾಪುರಗಳಲ್ಲಿ ಪಾಳೆಯಗಾರರ ಟಂಕಶಾಲೆಗಳಿದ್ದವು. ಗೇರುಸೊಪ್ಪೆ, ಸವಣೂರುಗಳಲ್ಲಿಯೂ ಪಾಳೆಯಗಾರರ ನಾಣ್ಯಗಳು ಮುದ್ರಿತವಾಗುತ್ತಿದ್ದವು.

ಹೈದರನ ಕಾಲದಲ್ಲಿ ಶ್ರೀರಂಗಪಟ್ಟಣ, ಬೆಳ್ಳಾರಿ ಮತ್ತು ನಗರಗಳಲ್ಲಿ ಟಂಕಶಾಲೆಗಳಿದ್ದವು. ಶ್ರೀರಂಗಪಟ್ಟಣವನ್ನು ಪಟ್ಟನ್ ಎಂದೂ, ಬೆಳ್ಳಾರಿಯನ್ನು ಬಲ್ಹಾರಿ ಎಂದೂ ಅವನ ತಾಮ್ರ ನಾಣ್ಯಗಳಮೇಲೆ ಬರೆಯಲಾಗಿದೆ. ಶಿವಮೊಗ್ಗದ ಸಮೀಪದಲ್ಲಿ ನಗರ್ ಎಂಬಲ್ಲಿ ಮತ್ತೊಂದು ಟಂಕಶಾಲೆ ಇದ್ದಿತು. ಇತ್ತೀಚೆಗೆ ಹೈದರನ ಒಂದು ತಾಮ್ರದ ನಾಣ್ಯದ ಮೇಲೆ 'ಜರಬ್ ಇ ಸತಾರ' ಎನ್ನುವ ಬರವಣಿಗೆಯು ಕಾಣಬಂದಿದೆ. ಇದರ ಆಧಾರದ ಮೇಲೆ ಮಹಾರಾಷ್ಟ್ರದ ಸತಾರದಲ್ಲಿ ಹೈದರನು ಒಂದು ಟಂಕಸಾಲೆಯನ್ನು ಸ್ಥಾಪಿಸಿದನೆಂದು ಭಾವಿಸಲಾಗಿದೆ. ಆದರೆ ಹೈದರನ ಆಳ್ವಿಕೆಗೆ ಮಹಾರಾಷ್ಟ್ರದ ಸತಾರ ಸೇರಿರಲಿಲ್ಲವಾದುದರಿಂದ ಇದು ಕೃತಕ ನಾಣ್ಯವೆಂದು, ಇದರ ಮಾಹಿತಿ ನಂಬಲು ಅರ್ಹವಲ್ಲವೆಂದು ಮತ್ತೆ ಕೆಲವು ವಿದ್ವಾಂಸರು ವಾದಿಸಿದ್ದಾರೆ. ಒಟ್ಟಿನಲ್ಲಿ ಸತಾರ ಟಂಕಸಾಲೆಯ ಬಗೆಗೆ ಖಚಿತತೆಯಿಲ್ಲ.

ಟೀಪುವಿನ ಕಾಲಕ್ಕೆ ಬಂದರೆ ಅನೇಕ ಹೊಸ ಟಂಕಶಾಲೆಗಳ ಹೆಸರುಗಳು ನಮಗೆ ತಿಳಿಯಬರುತ್ತವೆ. ಇವು ಟಂಕಶಾಲೆಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪಿಸಿ, ಅವುಗಳಿಗೆ ಆಕರ್ಷಣೀಯವಾದ ಹೆಸರುಗಳನ್ನು ಕೊಟ್ಟನು.[11] ಕೊನೆಯಪಕ್ಷ ಅವನ ಕಾಲದಲ್ಲಿ ಹದಿಮೂರು ಟಂಕಶಾಲೆಗಳು ಕೆಲಸಮಾಡುತ್ತಿದ್ದವೆಂದು ತಿಳಿದುಬಂದಿದೆ.

ಪಟ್ಟನ್ ಅಥವಾ ಶ್ರೀರಂಗಪಟ್ಟಣ ಅವನ ಅತಿ ಮುಖ್ಯವಾದ ಟಂಕಸಾಲೆ. ಇಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಮುದ್ರಿತವಾಗುತ್ತಿದ್ದವು. ಇವು ಸಾಮಾನ್ಯವಾಗಿ ಎಲ್ಲ ವಿವಿಧ ಶ್ರೇಣಿಗಳಲ್ಲೂ ಇವೆ. ಇಲ್ಲಿ ಮುದ್ರಿತವಾದ ನಾಣ್ಯಗಳು ನೋಡಲು ಸುಂದರವಾಗಿದ್ದು, ತಪ್ಪುಗಳು ಬಲು ಕಡಿಮೆ. ಅವನ ಆಡಳಿತದ ಮೊದಲನೆಯ ವರ್ಷದಿಂದ ಆರಂಭವಾಗಿ, ಅವನ ಕೊನೆಯ ವರ್ಷವನ್ನು ಬಿಟ್ಟು, ಮಿಕ್ಕ ಎಲ್ಲ ವರ್ಷಗಳಲ್ಲಿಯೂ ಶ್ರೀರಂಗಪಟ್ಟಣದ ಟಂಕಶಾಲೆಯಲ್ಲಿ ನಾಣ್ಯಗಳು ಅಚ್ಚಾಗುತ್ತಿದ್ದವು. ಮೈಸೂರಿನ ಒಂದು ಭಾಗವಾದ ನಜರ್‌ಬಾದಿನಲ್ಲಿ ಮತ್ತೊಂದು ಟಂಕಶಾಲೆಯಿದ್ದಿತು. ತಾಮ್ರದ ಅರ್ಧ ಪೈಸಾ ಹಾಗೂ ಕಾಲು ಪೈಸಾ ನಾಣ್ಯಗಳು ಇಲ್ಲಿ ಮುದ್ರಿತವಾಗುತ್ತಿದ್ದವು. ಬಿದನೂರ್ ಅಥವಾ ನಗರದಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಅವನ ಆಳ್ವಿಕೆಯ ಪೂರ್ತಿ ಮುದ್ರಿತವಾಗುತ್ತಿದ್ದವು. ಬೆಂಗಳೂರಿನಲ್ಲಿ ಇನ್ನೊಂದು ಟಂಕಶಾಲೆಯು ಇದ್ದಿತು. ಇಲ್ಲಿ ತಾಮ್ರದ ಒಂದು ಪೈಸಾ, ಅರ್ಧ ಪೈಸಾ, ಕಾಲು ಪೈಸಾ, ಎಂಟನೆಯ ಒಂದು ಪೈಸಾ ನಾಣ್ಯಗಳು ಅವನ ಆಳ್ವಿಕೆಯ ನಾಲ್ಕರಿಂದ ಒಂಭತ್ತನೆಯ ವರ್ಷಗಳಲ್ಲಿ ಮಾತ್ರ ಮುದ್ರಿತವಾಗುತ್ತಿದ್ದವು. ಹಿಜಿರಾ 1219 ರಲ್ಲಿ ಈ ಟಂಕಸಾಲೆಯನ್ನು ಮುಚ್ಚಲಾಯಿತು. ಚಿತ್ರದುರ್ಗದ ಟಂಕಸಾಲೆಗೆ ಫರುಕ್–ಯಬ್–ಹಿಸಾರ್ ಎಂಬ ಹೆಸರಿದ್ದಿತು. ಇಲ್ಲಿ ನಾಣ್ಯಗಳು ಹಿಜಿರಾ 1215 ರಿಂದ 1219 ರ ವರೆಗೆ ಮುದ್ರಿತವಾಗುತ್ತಿದ್ದವು. ಧಾರವಾಡದಲ್ಲಿದ್ದ ಟಂಕಶಾಲೆಗೆ ಖುರ್ಷಿದ್ ಸವದ್ ಎಂಬ ಹೆಸರಿದ್ದಿತು. ಇಲ್ಲಿ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ತಯಾರಾಗುತ್ತಿದ್ದವು. ಫೈಜ್ ಹಿಸಾರ್ ಎಂಬುದು ಗುತ್ತಿಯಲ್ಲಿದ್ದ ಟಂಕಸಾಲೆಯ ಹೆಸರು. ಇಲ್ಲಿ ತಾಮ್ರದ ನಾಣ್ಯಗಳು ಮಾತ್ರ ಮುದ್ರಿತವಾಗುತ್ತಿದ್ದವು. ಈ ನಾಣ್ಯಗಳಲ್ಲಿ ತಪ್ಪುಗಳು ಬಹಳ ವಿಶೇಷವಾಗಿ ಕಂಡು ಬರುತ್ತವೆ. ತಮಿಳುನಾಡಿನ ದಿಂಡಿಗಲ್‌ನಲ್ಲಿದ್ದ ಟಂಕಶಾಲೆಯನ್ನು ಖಲಿಕಾಬಾದ್ ಎಂದು ಕರೆಯಲಾಗುತ್ತಿದ್ದಿತು. ಇಲ್ಲಿ ಚಿನ್ನದ ಪಣ, ತಾಮ್ರದ ಒಂದು ಪೈಸಾ, ಮತ್ತು ಕಾಲುಪೈಸಾ ನಾಣ್ಯಗಳು ಹಿಜಿರಾ 1215 ರಿಂದ 1218 ರವರೆಗೆ ಮುದ್ರಿತ ವಾಗುತ್ತಿದ್ದವು. ಆಂಧ್ರಪ್ರದೇಶದ ಕಡಪ ಜಿಲ್ಲೆಯ ಗುರ್ರಂಕೊಂಡದಲ್ಲಿದ್ದ ಟಂಕ ಶಾಲೆಗೆ ಜಫಾರಾಬಾದ್ ಎಂದು ಹೆಸರು. ಇಲ್ಲಿ ತಾಮ್ರದ ನಾಣ್ಯಗಳು ಮುದ್ರಿತ ವಾಗುತ್ತಿದ್ದವು. ತಮಿಳುನಾಡಿನ ಸತ್ಯಮಂಗಲದಲ್ಲಿ ಇನ್ನೊಂದು ಟಂಕಶಾಲೆಯಿದ್ದಿತು. ಅದರ ಹೆಸರು ಸಲಾಮಾಬಾದ್ ಇಲ್ಲಿಯೂ ತಾಮ್ರದ ನಾಣ್ಯಗಳು ಮಾತ್ರ ಮುದ್ರಿತ ವಾಗುತ್ತಿದ್ದವು. ಕಲ್ಲಿಕೋಟೆಯ ಸಮೀಪದ ಟಂಕಶಾಲೆಯನ್ನು ಫರೂಕ್ ಎಂದು ಕರೆಯುತ್ತಿದ್ದರು. ಇಲ್ಲಿ ಚಿನ್ನದ ಪಣ, ತಾಮ್ರದ ಎರಡು ಪೈಸೆ ನಾಣ್ಯ, ಕಾಲು ಪೈಸಾ ನಾಣ್ಯಗಳು ಹಿಜಿರಾ 1216 ರಿಂದ 1218 ರವರೆಗೆ ಮುದ್ರಿತವಾಗುತ್ತಿದ್ದವು. ಕಲ್ಲಿಕೋಟೆಯ ಟಂಕಶಾಲೆಯಲ್ಲಿ ಎಲ್ಲ ನಾಣ್ಯಗಳೂ ಮುದ್ರಿತವಾಗುತ್ತಿದ್ದವು. ಹೊಳೆಹೊನ್ನೂರಿನಲ್ಲಿ ಮತ್ತೊಂದು ಟಂಕಶಾಲೆಯಿದ್ದಿತು. ಅದಕ್ಕೆ ಬೇನಜೀರ್

ಎಂದು ಹೆಸರು. ಈ ರೀತಿ ಟೀಪುಸುಲ್ತಾನನು ತನ್ನ ರಾಜ್ಯದ ವಿವಿಧ ಭಾಗಗಳಲ್ಲಿ ಟಂಕಶಾಲೆಗಳನ್ನು ಸ್ಥಾಪಿಸಿ ವಿವಿಧ ರೀತಿಯ ನಾಣ್ಯಗಳನ್ನು ಮುದ್ರಿಸಿದನು.

ಮೈಸೂರಿನ ಒಡೆಯರ್ ಮನೆತನದ ಅರಸುಗಳಲ್ಲಿ ಮೊಟ್ಟಮೊದಲು ಟಂಕಶಾಲೆಯನ್ನು ಸ್ಥಾಪಿಸಿದವನು ಕಂಠೀರವ ನರಸರಾಜ ಒಡೆಯರ್.[12] ಈತನು ಶ್ರೀರಂಗಪಟ್ಟಣದಲ್ಲಿ ಟಂಕಶಾಲೆಯನ್ನು ವ್ಯವಸ್ಥೆಗೊಳಿಸಿದನು ಮೂರನೆಯ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಇದರ ಜೊತೆಗೆ ಮೈಸೂರಿನಲ್ಲಿ ಟಂಕಶಾಲೆಯನ್ನು ಆರಂಭಿಸಲಾಯಿತು. ಇದು 1833 ರವರೆಗೆ ಕೆಲಸ ಮಾಡುತ್ತಿದ್ದಿತು. ಅದೇ ವರ್ಷ ಬೆಂಗಳೂರಿನಲ್ಲಿ ಒಂದು ಟಂಕಶಾಲೆಯನ್ನು ಪ್ರಾರಂಭಿಸಲಾಯಿತು. 1843 ರಲ್ಲಿ ಬೆಂಗಳೂರಿನ ಟಂಕಶಾಲೆಯನ್ನು ಮುಚ್ಚಲಾಯಿತು. ಆನಂತರ ಮೈಸೂರು ಒಡೆಯರ ನಾಣ್ಯಗಳು ಮುದ್ರಿತವಾಗುವುದು ನಿಂತುಹೋದವು.

ಟಿಪ್ಪಣಿಗಳು

1. J.N.S.I. ಸಂ. XLVI, ಪು. 45
2. S.I.I. ಸಂ. XV, ಶಾಸನ 167
3. ಅದೇ, ಸಂ. XI, ii, ಶಾಸನ 153
4. ಅದೇ, ಶಾಸನ 164
5. ಅದೇ, ಸಂ. XVIII, ಶಾಸನ 160
6. Sources of the Medieval History of Deccan, ಸಂ. 2, ಪು. 62
7. ಎ. ಇಂ. ಸಂ. 21, ಪು. 12
8. S.I.I, VII, ಶಾಸನ 223
9. ರಮೇಶನ್: ವಿಜಯನಗರ ನಾಣ್ಯಗಳು: ಪು. 51
10. J.N.S.I. ಸಂ. VII, ಪು. 46
11. ಎ. ವಿ. ನರಸಿಂಹಮೂರ್ತಿ: ಕಾಯಿನ್ಸ್ ಆಫ್ ಕರ್ನಾಟಕ, ಪು, 219
12. ಅದೇ, ಪು. 235

ಯಾರಲ್ಲಿ ವಿದ್ಯೆ, ಜ್ಞಾನ, ನಡತೆ, ಗುಣ—ಯಾವುದೂ ಇಲ್ಲವೋ ಅವರು ಮನುಷ್ಯ ರೂಪದ ಮೃಗಗಳು.

—ಭರ್ತೃಹರಿ

ಹಿರಿಯ ನಾನೆನಬೇಡ, ಗುರುವ ನಿಂದಿಸಬೇಡ, ಬರೆವವರ ಕೂಡ ಹಗೆಬೇಡ, ಬಂಗಾರದೆರವು ಬೇಡೆಂದ.

—ಸರ್ವಜ್ಞ

ಮನಸ್ಸಿದ್ದಂತೆ ನುಡಿ, ನುಡಿದಂತೆ ನಡೆ ಹೀಗೆ ಸತ್ಪುರುಷರ ಮನಸ್ಸು, ಮಾತು, ಕೆಲಸಗಳಲ್ಲಿ ಏಕರೂಪತೆ ಇರುತ್ತದೆ.

—ವಿಕ್ರಮ ಚರಿತ

ಮಹಾತ್ಮರಿಗೆ ಅವರ ಸತ್ವದಿಂದಲೇ ಕ್ರಿಯಾಸಿದ್ಧಿಯಾಗುತ್ತದೆಯೇ ವಿನಾ ಸಾಧನ ಸಲಕರಣೆಗಳಿಂದಲ್ಲ.

ಡಾ. ಜಿ. ಪುರುಷೋತ್ತಮ

ಓದುವ ತೊಂದರೆ, ಏನು? ಹೇಗೆ?

ಪ್ರತಿಯೊಂದು ತರಗತಿಯಲ್ಲೂ ಓದಲು ಕಷ್ಟಪಡುವ ಮಕ್ಕಳು ಇದ್ದೇ ಇರುತ್ತಾರೆ. ಮಗು ಓದಲು ಪಡುವ ಕಷ್ಟವನ್ನು ವಿಶ್ಲೇಷಿಸಿದಾಗ ಹಲವು ಬಗೆಯ ಸಂಕೀರ್ಣ ತೊಂದರೆಗಳು ಕಂಡುಬರುವವು. ಓದುವ ಗತಿ, ಕಾಗುಣಿತದ ಅರಿವು, ಅಕ್ಷರಗಳನ್ನು ಗೋಜಿಲ್ಲದೆ ಗುರುತಿಸುವುದು, ಅಕ್ಷರಗಳನ್ನು ಒಟ್ಟಿಗೆ ಸೇರಿಸಿ ಪದಗಳನ್ನು ಓದುವುದು, ಓದಿದ್ದನ್ನು ಅರ್ಥಮಾಡಿಕೊಳ್ಳುವುದು, ಇವೆಲ್ಲವೂ ಸರಿಯಾಗಿ ಬಂದರೆ ಓದು ಸಲೀಸಾಗಿ ಮಗು 'ಓದುಗ' ಅನ್ನಿಸಿಕೊಳ್ಳುತ್ತದೆ. 20 ಮಕ್ಕಳ ಓದುವಿಕೆಯನ್ನು ಅಭ್ಯಾಸಮಾಡಿ ಅವರಿಗೆ ಇದ್ದ ತೊಂದರೆಗಳು ಯಾವುವು ಎಂದು ಇಲ್ಲಿ ವಿವರಿಸಿದೆ.

ಚೆನ್ನಾಗಿ ಓದು ಬರುವಮಗು–ಚೆನ್ನಾಗಿ ಓದು ಬರದ ಮಗು, ಈ ಪದ ಗುಂಪುಗಳ ಅರ್ಥ ಸ್ವಯಂವೇದ್ಯ. ಸಾಮಾನ್ಯವಾಗಿ ಇವುಗಳ ಅರ್ಥದ ಮೂಲಕ್ಕೆ ನಾವು ಹೋಗುವುದು ಅಪರೂಪ. ಮಗುವು ಸರಿಯಾಗಿ ಓದಲು ಕಲಿತಿಲ್ಲವೆಂದಾಗ ಅದನ್ನು ಹಲವು ರೀತಿಯಲ್ಲಿ ಅರ್ಥೈಸಲು ಸಾಧ್ಯವಿದೆ. ಮಗುವಿಗೆ ಅಕ್ಷರಗಳ ಪರಿಚಯ ಸರಿಯಾಗಿ ಇಲ್ಲದಿರಬಹುದು; ಕಾಗುಣಿತ ಸರಿಯಾಗಿ ಬರದಿರಬಹುದು; ಬರಿಯ ಊಹೆಯ ಮೇರೆಗೆ ಮಾತ್ರ ಓದುತ್ತಿರಬಹುದು; ಬಹಳ ನಿಧಾನವಾಗಿ ಓದುತ್ತಿರಬಹುದು; ಹಾಗೂ ಚೆನ್ನಾಗಿ ಓದು ಬಾರದೆ ಅರ್ಥಮಾಡಿಕೊಳ್ಳುವುದು ಕೂಡ ಕಷ್ಟವಾಗಿರಬಹುದು. ಸಾಮಾನ್ಯವಾಗಿ ಓದಲು–ಹೇಳಲು–ಕಲಿತು ಅರ್ಥಮಾಡಿಕೊಳ್ಳಲು ಸಾಧ್ಯವಾಗದೆ ಇರುವ ಸಂಭವಗಳು ಬಹಳವಾಗಿ ಕಡಿಮೆ.

ಓದಿನ ಬಗ್ಗೆ, ಓದು ಕಲಿಯುವಿಕೆಯ ಬಗ್ಗೆ (ಮುಖ್ಯವಾಗಿ ಇಂಗ್ಲಿಷಿನಲ್ಲಿ) ಬಹಳಷ್ಟು ಸಂಶೋಧನೆ ನಡೆದಿದೆ. ಓದಿನ ಸ್ವರೂಪದ ಬಗ್ಗೆ ಹೆಚ್ಚು ಮಾಹಿತಿ ದೊರೆಯಲಾರಂಭಿಸಿದೆ. ಜೊತೆಗೇ ಓದನ್ನು ಹೇಗೆ ಕಲಿಸಬೇಕೆಂಬ ವಿಚಾರದಲ್ಲಿ ವಾದಪ್ರತಿವಾದಗಳು ಹುಟ್ಟಿ ಕಲಿಸುವುದರಲ್ಲಿ ವಿವಿಧ ವಿಧಾನಗಳನ್ನು ಅಳವಡಿಸಿಕೊಂಡದ್ದಾಗಿದೆ. ಓದನ್ನು ಇನ್ನೂ ಸುಲಭದ ಕೆಲಸವನ್ನಾಗಿ ಮಾಡಲು ಸಾಧ್ಯವೆ ಎಂಬ ಯೋಚನೆ ಇದ್ದೇ ಇದೆ. ಓದು ಯಾವಾಗಲೂ, ಎಲ್ಲ ಭಾಷೆಗಳಲ್ಲೂ, ಕೆಲವು

ಮಕ್ಕಳಿಗೆ ಕಷ್ಟದ ವಿಚಾರವಾಗಿ ಪರಿಣಮಿಸಿದೆ. ಓದು ಕಲಿಯಲು ಕಷ್ಟವಿರುವ ಮಕ್ಕಳು ಎಲ್ಲ ಕಡೆಯೂ ಸ್ವಲ್ಪಮಟ್ಟಿಗಾದರೂ ಇದ್ದೇ ಇರುತ್ತಾರೆ. ಸಾಮಾನ್ಯವಾಗಿ ಶೇಕಡಾ 5 ರಿಂದ 18 ರಷ್ಟು ಮಕ್ಕಳಿಗೆ ಓದು ಕಬ್ಬಿಣದ ಕಡಲೆಯಾಗುತ್ತದೆ. ಈ ಮಕ್ಕಳಿಗೆ ಬುದ್ಧಿಮತ್ತೆಯ ತೊಂದರೆಯಾಗಲಿ ಅಥವಾ ಭಾಷೆ ಮಾತಿಗೆ ಸಂಬಂಧಿಸಿದ ಯಾವುದೇ ತೊಂದರೆಯಾಗಲಿ ಇರದೆಯೂ ಬರಿಯ ಓದಿನ ತೊಂದರೆ ಇರುತ್ತದೆ. ಇವರನ್ನು ಕಲಿಯುವ ತೊಂದರೆ (Learning Disability) ಇರುವ ಮಕ್ಕಳೆಂದೇ, ಮುಂದುವರಿದ ದೇಶಗಳಲ್ಲಿ ಗುರುತಿಸುತ್ತಾರೆ. ಇಂಗ್ಲಿಷ್ ಭಾಷೆ ಓದು ಕಲಿಯಲು ಕೆಲವು ವಿಶೇಷ ತೊಡಕುಗಳನ್ನೊಡ್ಡುತ್ತದೆ. ಆ ತೊಡಕುಗಳು ಕನ್ನಡದಂಥ ಲಿಪಿ ಇರುವ ಕಡೆ ಇರಬಾರದು, ಓದು ಸುಲಭವಾಗಬೇಕೆಂದು ಹಲವರ ಅನಿಸಿಕೆ. ಆದರೆ ಶಾಲೆಗೆ ಹೋಗಿಯೂ ಓದು ಸರಿಯಾಗಿ ಕಲಿಯದೆ ಇರುವ ಮಕ್ಕಳನ್ನು ಎಣಿಸಿದರೆ ಮೊದಲ ಸ್ಥಾನ ಪ್ರಪಂಚದಲ್ಲಿ ನಮ್ಮ ದೇಶಕ್ಕೆ ಇದೆ. ಜಪಾನಿನಲ್ಲಿ ಮಾತ್ರ ಓದು ಕಲಿಯದೇ ಹೋಗುವ ಮಕ್ಕಳು ಬಹಳ ವಿರಳ, ಶೇಕಡ 99 ಜನರಿಗೆ ಅಲ್ಲಿ ಓದಿ ಬರೆಯಲು ಬರುತ್ತದೆ.

ಕೆಲವು ಮಕ್ಕಳಿಗೆ ಮಾತ್ರ ಏಕೆ ಓದು ಕಲಿಯುವ ತೊಂದರೆ ಇರುತ್ತದೆ ಎಂಬುದಕ್ಕೆ ಗೊತ್ತಿರುವ ಕಾರಣಗಳು ಹಲವು, ಗೊತ್ತಿಲ್ಲದೆ ಇರುವುವು ಹಲವಾರು ಇರುವ ಸಂಭವ ಹೆಚ್ಚು. ಈ ಮಕ್ಕಳಲ್ಲಿ ಕಲಿಯುವ ವಿಧಾನದಲ್ಲಿ ಗಮನ ಹರಿಸುವ ಶಕ್ತಿ ಇಲ್ಲದಿರಬಹುದು. ಉದಾಹರಣೆಗೆ ಅಕ್ಷರಗಳನ್ನು, ಕಾಗುಣಿತದ ವಿವರಗಳನ್ನು ಕಲಿಯುವಲ್ಲಿ ವ್ಯವಧಾನ ಹರಿಸದೆ ಇರಬಹುದು. ಸಾಕಷ್ಟು ಅಭ್ಯಾಸಮಾಡದೆ ಹೋಗಬಹುದು ಬರವಣಿಗೆಯನ್ನು ಅನುಕ್ರಮವಾಗಿ ಗ್ರಹಿಸುವ ಶಕ್ತಿ (Sequential processing) ಸಾಕಷ್ಟು ಇಲ್ಲದಿರಬಹುದು. ಅಕ್ಷರ ಕಲಿತಿದ್ದರೂ ಪದಗಳನ್ನು ಒಂದೇ ನೋಟಕ್ಕೆ ಗುರುತಿಸಲು ಬಾರದೆ ಹೋಗಬಹುದು. ಉದಾಹರಣೆಗೆ, ಒಂದೇ ನೋಟಕ್ಕೆ ಒಂದು ಚಿತ್ರವನ್ನು ನೋಡಿ ಗ್ರಹಿಸಲು ಸಾಧ್ಯವಾಗುವಂತೆ, ಏಕಕಾಲದಲ್ಲಿ ಒಂದು ಪದದ ಎಲ್ಲ ಅಕ್ಷರಗಳನ್ನು ಒಂದೇ ನೋಟಕ್ಕೆ ಗುರುತಿಸಲು (Simultaneous Processing) ಸಾಮಾನ್ಯ ಓದುಗನಿಗೆ ಸಾಧ್ಯ. ಒಂದು ಪದಕ್ಕಿಂತಲೂ ಹೆಚ್ಚು ವಿಷಯವನ್ನು ಗುರುತಿಸಲು ಸಾಮಾನ್ಯ ಓದುಗನಿಗೆ ಸಾಧ್ಯ. ಆದರೆ ಈ ತೊಂದರೆ ಇರುವ ಮಗುವಿಗೆ ಒಂದು ಪದವನ್ನು ಆ ರೀತಿ ಗುರುತಿಸಲು ಕಷ್ಟವಾಗಬಹುದು. ಅಕ್ಷರಗಳನ್ನು ಅನುಕ್ರಮವಾಗಿ ಗುರುತಿಸಿ ಅರ್ಥೈಸುವುದು ಮನುಷ್ಯನ ಮಿದುಳಿನ ಎಡಭಾಗದ ಕೆಲಸವೆಂದರೆ ಕಾಣಿಸುವಷ್ಟನ್ನು ಏಕಕಾಲದಲ್ಲಿ ಗುರುತಿಸುವುದು ಬಲ ಭಾಗದ ಕೆಲಸವೆಂದು ಈಗ ಚೆನ್ನಾಗಿ ತಿಳಿದಿರುವ ವಿಷಯ. ಸಾಂದರ್ಭಿಕವಾಗಿ, ಕಲಿಯುವ ತೊಂದರೆ ಇರುವ ಮಕ್ಕಳಿಗೆ ನರಮಂಡಲದಲ್ಲಿ, ತಿಳಿಯದಂಥಹ ಏನೋ ಸೂಕ್ಷ್ಮವಾದ ಏರುಪೇರು ಇರಬೇಕೆಂಬುದು ಒಂದು ವಾದ. ಇದರಲ್ಲಿ ಹುರುಳಿರಲಿ ಇಲ್ಲದಿರಲಿ ಇದಕ್ಕೆ ಬಲವಾದ ವಿರೋಧವಿದ್ದು ಈ ವಾದವನ್ನು ಇನ್ನೂ ಒಪ್ಪಿಲ್ಲ.


ಈ ವಾದಗಳಿಗಿಂತ ಮುಖ್ಯವಾಗಿ ಬೇಕಾದ್ದು, ಮಕ್ಕಳ ತೊಂದರೆಯನ್ನು ತಿಳಿದು ಅದಕ್ಕೆ ಸಾಧ್ಯವಾದ ಪರಿಹಾರವನ್ನು ಕಂಡುಹಿಡಿಯುವುದು. ತೊಂದರೆಯನ್ನು ವಿಶ್ಲೇಷಿಸುವುದು ಮೊದಲ ಕೆಲಸ. ನಂತರ ಅದರ ಉಪಶಮನ ಸಾಧ್ಯ. ಈ ತೊಂದರೆಯನ್ನು ವಿಶ್ಲೇಷಿಸುವುದಕ್ಕಾಗಿ ಮಾಡಿದ ಒಂದು ಅಧ್ಯಯನದ ಕೆಲವು ಭಾಗಗಳನ್ನು ಈ ಮುಂದೆ ಉದ್ಧರಿಸಿದೆ. ಚನ್ನಾಗಿ ಓದುವ ಹಾಗೂ ಓದದ ಮಕ್ಕಳಲ್ಲಿರುವ ಓದಿನ ವ್ಯತ್ಯಾಸಗಳನ್ನು ತಿಳಿಯುವುದು ಇದರ ಉದ್ದೇಶ. ಇದಕ್ಕಾಗಿ ಮೂರನೆಯ ತರಗತಿಯಲ್ಲಿ ಓದುತ್ತಿರುವ 20 ಮಕ್ಕಳನ್ನು ಕೂಲಂಕಶವಾಗಿ ಪರೀಕ್ಷಿಸಲಾಯಿತು. ಅವರಲ್ಲಿ 10 ಜನ ಆ ತರಗತಿಯಲ್ಲೇ ಅತ್ಯುತ್ತಮವಾಗಿ ಓದುವವರಾಗಿದ್ದರೆ ಉಳಿದವರು ಆ ಗುಂಪಿನಲ್ಲೇ ಕೆಳಗುಳಿದವರು. ಮಕ್ಕಳು ಒಬ್ಬೊಬ್ಬರಾಗಿ, ಕಾರ್ಡಿನ ಮೇಲೆ ಬರೆದ, ಅಕ್ಷರಗಳನ್ನು ಹಾಗೂ ಪದಗಳನ್ನು ಓದಿದರು. ಒಂದೊಂದು ಕಾರ್ಡನ್ನು ಅರ್ಧ ಸೆಕೆಂಡಿನಷ್ಟು ಮಾತ್ರ ತೋರಿಸಲಾಗುತ್ತಿತ್ತು. ಇದಲ್ಲದೆ ಈ ಕೆಳಕಂಡ ಕೆಲವು ವಿಶೇಷ ಪರೀಕ್ಷೆಗಳು ಕೊಡಲ್ಪಟ್ಟವು. ಇವು ಭಾಷೆಗೆ ಸಂಬಂಧಿಸಿದ ಪರೀಕ್ಷೆಗಳಲ್ಲ. Auditory Sequential Memory ಮತ್ತು Visual Sequential Memory ಇವುಗಳಲ್ಲಿ ಮಗು ಕೇಳಿಸಿಕೊಂಡಿದ್ದನ್ನು ಮತ್ತು ನೋಡಿದ್ದನ್ನು ಸರಿಯಾದ ಕ್ರಮದಲ್ಲಿ ಜ್ಞಾಪಕದಲ್ಲಿಟ್ಟುಕೊಳ್ಳುವನೋ ಹೇಗೆಂದು ಪರೀಕ್ಷಿಸಲಾಯಿತು. Ravens Progressive Matrices ನಲ್ಲಿ ಮಗು ಹಲವು ವಿನ್ಯಾಸಗಳನ್ನು ನೋಡಿ ತಾರ್ಕಿಕವಾಗಿ ಸರಿಯಾದ ಉತ್ತರ ತಿಳಿಸಬೇಕಿತ್ತು. Memory For Designs ನಲ್ಲಿ ತಾನು ನೋಡಿದ ವಿನ್ಯಾಸವನ್ನು ತಪ್ಪುಗಳಿಲ್ಲದೆ ಪೇಪರಿನ ಮೇಲೆ ಮೂಡಿಸಬೇಕಿತ್ತು. ಈ ಪರೀಕ್ಷೆಗಳು ಅನುಕ್ರಮವಾಗಿ ಗ್ರಹಿಸುವ ಶಕ್ತಿ (Sequential Processing) ಮತ್ತು ಏಕಕಾಲದಲ್ಲಿ ಗುರುತಿಸುವ ಶಕ್ತಿ (Simultaneous Processing) ಇವುಗಳ ಬಗ್ಗೆ ಪರೋಕ್ಷವಾಗಿಯಾದರೂ ತಿಳಿಸುತ್ತವೆಂದು ಭಾವನೆ.

ಈ ಪ್ರಯೋಗದಿಂದ ಬಂದ ಅಂಕಿ ಅಂಶಗಳನ್ನು ಉಪಯೋಗಿಸಿ (Analysis of Variance) ವಿಶ್ಲೇಷಣೆ ಮಾಡಿ ಮಕ್ಕಳ ಓದಿನಲ್ಲಿ ನಿಜವಾದ ವ್ಯತ್ಯಾಸಗಳಿವೆಯೋ ಹೇಗೆಂದು ತಿಳಿಯಲಾಯಿತು. ಅದೇ ರೀತಿ ಓದಿಗೂ ಇತರ ವಿಶೇಷ ಪರೀಕ್ಷೆಗಳ ಫಲಿತಾಂಶಕ್ಕೂ ಇರುವ ಸಂಬಂಧವನ್ನು ತಿಳಿಯಲಾಯಿತು. ಒಟ್ಟಿನಲ್ಲಿ ತಿಳಿಸುವುದಾದರೆ, ಚನ್ನಾಗಿ ಓದುವ ಮಕ್ಕಳಲ್ಲಿ ಅಕ್ಷರ ಸಂಯೋಜನೆಯ ಜ್ಞಾನ, ಪದಗಳನ್ನು ಅಕ್ಷರಗಳನ್ನು, ಪದಗಳನ್ನು ಕಂಡಕೂಡಲೆ ಗುರುತಿಸುವುದಕ್ಕೂ, ವಿನ್ಯಾಸಗಳನ್ನು ನೆನಪಿನಲ್ಲಿಡುವಂಥ ಶಕ್ತಿಗೂ ಸಂಬಂಧವಿರುವಂತೆ ತಿಳಿಯುತ್ತದೆ. ವಿವರಗಳು ಈ ಕೆಳಗಿನಂತಿವೆ.

ಫೋಟೋವಿನಿಂದ ಮುಖವನ್ನು, ಪಕ್ಕನೆ ಕಂಡಕೂಡಲೆ ಗುರುತಿಸುತ್ತೇವೆ. ಒಬ್ಬ ಓದುಗ ಕೂಡ ಒಂದು ಪದ ಓದಲು ಇದೇ ಶಕ್ತಿಯನ್ನು ಉಪಯೋಗಿಸುತ್ತಾನೆ. ಮಗು ಪದಗಳನ್ನು ಪಕ್ಕನೆ ಗುರುತಿಸಿ ಓದಲು ಕಲಿಯಲು ತನ್ನದೇ ಆದ ಸಮಯ

ತೆಗೆದುಕೊಳ್ಳುತ್ತಾನೆ. ಪ್ರಾಥಮಿಕ ಶಾಲೆಯಲ್ಲಿ ಆಗುವುದು ಸುಮಾರು ಮಟ್ಟಿಗೆ ಇದಕ್ಕೆ ಬೇಕಾಗುವ ಅಭ್ಯಾಸವೆಂದೇ ಹೇಳಬೇಕು. ಪ್ರಾಥಮಿಕ ಶಾಲೆಗೆ ಮೊದಲೇ ಓದು ನಿಲ್ಲಿಸಿದವರೂ ಓದಲು ತಡವರಿಸುವುದನ್ನು ಕಾಣಬಹುದು. ಸುಮಾರು ವಯಸ್ಸಾದವರೂ ಕೂಡ ಈ ರೀತಿ ಓದುವುದನ್ನು ಕಂಡಿದ್ದೇನೆ. ಈ ಪದಗಳನ್ನು ಗುರುತಿಸುವ ಶಕ್ತಿ ಮಗುವಿನ ಉಳಿದೆಲ್ಲ ವಿಕಸನ ಶಕ್ತಿಯಂತೆ ಒಂದು ವಯಸ್ಸಲ್ಲಿ ಬೆಳೆದು ನಿಲ್ಲುತ್ತದೆ. ಈ ಶಕ್ತಿಯ ಬೆಳವಣಿಗೆಗೆ ಬೇರೆ ರೀತಿಯ ಕಲಿಕೆ ಕೂಡ ಅವಶ್ಯವಾಗುತ್ತದೆ. ಅಕ್ಷರ ಸಂಯೋಜನಾ ಜ್ಞಾನ, ಅಕ್ಷರಗಳ ನಿರ್ವಿಕಾರರೂಪ (Invariant patterns) ಇವು ಸರಿಯಾಗಿ ಬೆಳೆದರೆ ಮಾತ್ರ ಗುರುತಿಸುವ ಶಕ್ತಿ ಓದಿನಲ್ಲಿ ಉಪಯೋಗಕ್ಕೆ ಬರುತ್ತದೆ. ಕನ್ನಡದಲ್ಲಿ, ಉದಾಹರಣೆಗೆ 'ಟ್ಕ' ಇವು ನಾವು ಬರೆಯುವ ರೀತಿ ಅಚ್ಚಿನಲ್ಲಿರುವ ರೂಪಕ್ಕಿಂತ ಬೇರೆಯೇ ಆದರೂ ಓದುವವರಿಗೆ ಅಡ್ಡಿ ಬರುವುದಿಲ್ಲ. ಅಥವಾ ಕೈಬರಹಗಳು ಯಾರದೇ ಆದರೂ ಅವನ್ನು ಓದುವ ಶಕ್ತಿ ಓದುಗನಿಗೆ ಇದ್ದೇ ಇರುತ್ತದೆ. ಅದಕ್ಕೆ ಕಾರಣ ಮೂಲಭೂತವಾದ, ವ್ಯತ್ಯಾಸವಾಗದ, ಅವರ ಮನಸ್ಸಿನಲ್ಲಿರುವ ಅಕ್ಷರಜ್ಞಾನ. ಈ ಶಕ್ತಿ ಓದಿಗೆ ಸೀಮಿತವಾದ ಶಕ್ತಿಯಲ್ಲ, ಪ್ರಪಂಚದ ವಸ್ತು ಪ್ರಾಣಿಗಳನ್ನು ಮಗು ನೋಡಿ ತಿಳಿದುಕೊಳ್ಳುವುದಕ್ಕೆ ಅತ್ಯವಶ್ಯಕವಾದದ್ದು. ಬೇರೆ ಬೇರೆ ರೀತಿಯ ಮರಗಳು, ಹಾವುಗಳಲ್ಲಿ ಎಷ್ಟನ್ನು ಗುರುತಿಸಲು ಸಾಮಾನ್ಯನಿಗೆ ಸಾಧ್ಯ. ಇವುಗಳನ್ನು ಕಲಿಯಬೇಕಾಗುತ್ತದೆ. ಕುರುಬನಿಗೆ ತಾನೆ ಎಲ್ಲ ಕುರಿಗಳನ್ನೂ ನೆನಪಿಡಲು ಸಾಧ್ಯ! ಆದರೆ ಕೆಲವರಲ್ಲಿ ಈ ಗುರುತಿಸುವ ಶಕ್ತಿ ಚನ್ನಾಗಿ ಬೆಳೆಯುತ್ತದೆ, ಸ್ವಲ್ಪವೇ ಆದ ಅನುಭವದಲ್ಲಿ ಚನ್ನಾಗಿ ಕಲಿಯುತ್ತಾರೆ. ಒಳ್ಳೆಯ ಓದುಗ ಮಕ್ಕಳಲ್ಲಿ ಈ ಶಕ್ತಿ (Automaticity) ಬೇಗ ಬೆಳೆಯುತ್ತದೆಂದು ಕಂಡು ಬಂದಿದೆ. ಈ ಪ್ರಯೋಗದಲ್ಲಿ ಕೂಡ ಚೆನ್ನಾಗಿ ಓದುವ ಮಕ್ಕಳು ಅನಿಸಿಕೊಂಡವರು ಅರ್ಧ ಸೆಕೆಂಡು ಮಾತ್ರ ತೋರಿಸಿದ ಅಕ್ಷರಗಳನ್ನು ಅಥವಾ ಪದಗಳನ್ನು ಸರಿಯಾಗಿ ಓದಿದರು. ಉಳಿದ ಮಕ್ಕಳು ಪಕ್ಕನೆ ಗುರುತಿಸಲಾರದೆ ಹೋದರು. ಮಕ್ಕಳಿಗೆ ತಾವು ಗುರುತಿಲಾರದೆ ಹೋಗದ ಅಕ್ಷರಗಳನ್ನು/ಪದಗಳನ್ನು ಮತ್ತೆ ಓದಲು ಕೊಟ್ಟಾಗ ಕೂಡ ಚೆನ್ನಾಗಿ ಓದುವವರು ಮಾತ್ರ ಅವುಗಳಲ್ಲಿ ಬಹಳಷ್ಟನ್ನು ಸರಿಯಾಗಿ ಓದಿದರು. ಚನ್ನಾಗಿ ಓದದ ಮಕ್ಕಳು ನಿಧಾನವಾಗಿ ಓದಿದರೂ ಅವುಗಳಲ್ಲಿ ಬಹಳಷ್ಟನ್ನು ಓದದೆ ತಪ್ಪಿದರು. ಮುಂದೆ ಇನ್ನೂ ಕೂಲಂಕಷವಾಗಿ ಪರೀಕ್ಷಿಸಿದಾಗ ಅವರಿಗೆ ಅಕ್ಷರಜ್ಞಾನ, ಅಕ್ಷರ ಸಂಯೋಜನೆ ಸರಿಯಾಗಿ ತಿಳಿದಿರಲಿಲ್ಲವೆಂದು ಕಂಡು ಬಂದಿತು. ಅಂದರೆ ಈ ಗುರುತಿಸುವ ಶಕ್ತಿಗೆ ಅವಶ್ಯವಾದ ಅಕ್ಷರಜ್ಞಾನ ಅವರಲ್ಲಿ ಇರಲಿಲ್ಲವೆಂದಾಯಿತು.

ಇಲ್ಲಿ ಬಳಸುವ ಅಕ್ಷರಜ್ಞಾನ/ಅಕ್ಷರ ಸಂಯೋಜನೆ ಇವುಗಳ ಅರ್ಥವ್ಯಾಪ್ತಿ ಬಹಳ. ಅಕ್ಷರ ಸಂಯೋಜನೆ ಎಂದರೆ, ಧ್ವನಿಮಾಗಳಂತೆ (phonemes) ಒಂದೊಂದು ಭಾಷೆಯಲ್ಲೂ ಒಂದು ಅಕ್ಷರದ ನಂತರ ಎಲ್ಲ ಅಕ್ಷರಗಳು ಬರಲು ಸಾಧ್ಯವಿಲ್ಲ.



ಚಿತ್ರ ೧. ವಿವಿಧ ಅಕ್ಷರ ಮತ್ತು ಪದಗಳನ್ನು ಓದುವಾಗ ಚೆನ್ನಾಗಿ ಓದದ (×) ಹಾಗೂ ಓದುವ (O) ಮಕ್ಕಳು ಮಾಡಿದ ತಪ್ಪುಗಳು

೧. ಒತ್ತಕ್ಷರಗಳು ೨. ಸರಳ ಅಕ್ಷರಗಳು ೩. ಒತ್ತಕ್ಷರಗಳಿದ್ದ ಪದಗಳು ೪. ಸರಳ ಅಕ್ಷರಗಳಿದ್ದ ಪದಗಳು ೫. ವಿವಿಧ ಕಾಗುಣಿತವಿದ್ದ ಪದಗಳು ೬. ವಿವಿಧ ವ್ಯಂಜನಾಕ್ಷರಗಳಿಂದಾದ ಅಕ್ಷರಗಳು ೭. ಬೇರೆ ಬೇರೆ ರೀತಿ ಬರೆಯಲು ಸಾಧ್ಯವಾದ ಪದಗಳು ೮. ಕಾಗುಣಿತಾಕ್ಷರಗಳಿಂದಾದ ಪದಗಳು ೯. ಬೇರೆ ಬೇರೆ ರೀತಿ ಬರೆಯಲು ಸಾಧ್ಯವಾದ ಅಕ್ಷರಗಳು ೧೦. ವಿವಿಧ ವ್ಯಂಜನಾಕ್ಷರಗಳಿಂದಾದ ಅಕ್ಷರಗಳ ಪದಗಳು ೧೧, ಮೂರು ವ್ಯಂಜನಾಕ್ಷರಗಳಿಂದಾದ ಅಕ್ಷರಗಳು ೧೨. ಮೂರು ವ್ಯಂಜನಾಕ್ಷರಗಳಿಂದಾದ ಅಕ್ಷರಗಳುಳ್ಳ ಪದಗಳು.

ಆದ್ದರಿಂದ ಅಕ್ಷರಗಳು ಇಂಥವೇ ಇರಬಹುದೆಂದು ಊಹಿಸಲು ಸಾಧ್ಯ. ಉದಾಹರಣೆಗೆ ಕನ್ನಡದಲ್ಲಿ 'ಙ,ಳ' ಮೊದಲು ಬರುವುದಿಲ್ಲ, 'ಅ,ಆ...' ಸ್ವರಾಕ್ಷರಗಳು ಮಧ್ಯದಲ್ಲಿ ಬರುವುದಿಲ್ಲ. ಇವು ಹೇಳಿಕೊಡದಿದ್ದರೂ ಓದುಗನಿಗಿರುವ ಜ್ಞಾನ. ಇಂಥ ಜ್ಞಾನ ಓದುಗನಿಗೆ ಎಷ್ಟು ಪರಿಚಯವೆಂದರೆ ಅವನು ಪದಗಳೊಳಗೆ ಸೂಕ್ಷ್ಮವಾಗಿ ನೋಡ ಬೇಕಾದ ಅವಶ್ಯಕತೆಯೇ ಬರುವುದಿಲ್ಲ. ಹೊಸ ಪದ ಆದಾಗ ಮಾತ್ರ ಅಲ್ಲಿಗೆ ಅವಧಾನ ಹರಿಸಬೇಕಾಗುತ್ತದೆ, ಇಲ್ಲದಿದ್ದರೆ ಬೇಡ. ಇದು ಪ್ರಾಯೋಗಿಕವಾಗಿಯೂ ಕೂಡ ನಿಜವೆಂದು ತಿಳಿದಿದೆ. ಒಳ್ಳೆಯ ಓದುಗ ಹುಡುಗರು ಸಂಕೀರ್ಣವಾದ ಅಕ್ಷರ ಗಳನ್ನು, ಈ ಅಧ್ಯಯನದಲ್ಲಿ, ಚೆನ್ನಾಗಿ ಓದಿದ್ದನ್ನು ಉಳಿದವರು ಓದದೆ ಹೋದದ್ದನ್ನು ನಾವು ಅರ್ಥಮಾಡಿ ಕೊಳ್ಳಬಹುದು. ಅಕ್ಷರ ಸಂಯೋಜನೆ ಹೆಚ್ಚು ಕ್ಲಿಷ್ಟವಾದಂತೆ ಓದಿನಲ್ಲಿ ಆಗುವ ತಪ್ಪುಗಳೂ ಹೆಚ್ಚುತ್ತಾ ಹೋದವು. ಚನ್ನಾಗಿ ಓದುವವರಿಗೂ ಆದ ಈ ಅನುಭವ ಓದಲು ಕಷ್ಟಪಡುವ ಮಕ್ಕಳಲ್ಲಿ ಹೆಚ್ಚೇ ಆಯಿತು (ಚಿತ್ರ ನೋಡಿ).

ಮೊದಲು ಹೇಳಿದಂತೆ ಕನ್ನಡ ಓದಲು, ಇಂಗ್ಲಿಷಿಗಿಂತ, ಸುಲಭವಾಗಬೇಕೆನ್ನು ವುದು ಒಂದು ಅನಿಸಿಕೆ. ಆದರೆ ಕನ್ನಡ ಬರವಣಿಗೆಯಲ್ಲೂ ಹಲವಾರು ಸಂಕೀರ್ಣತೆಗಳು ಇವೆ. ದೊಡ್ಡದಾದ ಅಕ್ಷರಗಣ; ತಲೆಕೊಟ್ಟು ಹೊಂದಿರುವ ಅಕ್ಷರಗಳು ಹಲವು; ಇಲ್ಲದವು ಕೆಲವು; ಒಂದೇ ರೀತಿ ಕಾಣುವ ದುಂಡಗಿನ ಅಕ್ಷರಗಳು; ಅಂಟಿಸಬೇಕಾದ ಕೊಂಬು, ದೀರ್ಘ ಇತ್ಯಾದಿಗಳು; ಅವುಗಳಲ್ಲಿರುವ ವಿಶಿಷ್ಟ ವ್ಯತ್ಯಾಸಗಳು, ವಿನಾಯಿತಿ ಗಳು; ಪ್ರತಿಯೊಂದು ಅಕ್ಷರಕ್ಕೂ ಕಲಿಯಬೇಕಾದ ಇನ್ನೊಂದು ಅಕ್ಷರ ಚಿಹ್ನೆ; ರಕಾರಕ್ಕೆ ಎರಡು ಅಕ್ಷರ ಚಿಹ್ನೆಗಳು; ಇವೆಲ್ಲವೂ ಪೂರ್ಣ ಕಲಿಯುವವರೆಗೂ ಓದುವಲ್ಲಿ ತಡೆಯೊಡ್ಡುತ್ತಲೇ ಇರುತ್ತವೆ. ಇವೆಲ್ಲವೂ ಚೆನ್ನಾಗಿ ತಿಳಿದಿದ್ದರೆ ಓದು ಕಷ್ಟವಾಗಲು ಕಾರಣವೇ ಇಲ್ಲ. ಇಲ್ಲಿ ಕಂಡುಬಂದಿದ್ದೆಂದರೆ ಚೆನ್ನಾಗಿ ಓದು ಬರದ ಮಕ್ಕಳು ಕನ್ನಡ ಅಕ್ಷರಗಳನ್ನು ಗುರುತಿಸುವಲ್ಲಿಯೇ ಗೊಂದಲಗೊಂಡು (Confusion) ಒಂದರ ಬದಲು ಇನ್ನೊಂದು ಹೇಳಿದರು. ಅಕ್ಷರ ಸಂಯೋಜನೆ ನಿಯಮಗಳನ್ನು ಒಳ್ಳೆಯ ಓದುಗರು ಬಹುಬೇಗ ಕೆಲವೇ ಅಭ್ಯಾಸಗಳಲ್ಲಿ ಕಲಿತುಬಿಡುತ್ತಾರೆ. ಆದರೂ ಇನ್ನೂ ಮೂರನೆಯ ತರಗತಿಯಲ್ಲಿದ್ದ ಮಕ್ಕಳು ಕೆಲವು ಸಂಯುಕ್ತಾಕ್ಷರಗಳನ್ನು ಓದುವುದರಲ್ಲಿ ಪೂರ್ಣತೆಯನ್ನು ಇನ್ನೂ ಸಾಧಿಸಿರಲಿಲ್ಲ.

ಹಿಂದುಮುಂದಾಗಿ ಓದುವುದು—ಓದು ಬಾರದುದರ ಚಿಹ್ನೆ ಎನ್ನುವ ಕಾಲ ವೊಂದಿತ್ತು, ಕೆಲವೇ ದಶಕಗಳ ಹಿಂದೆ (ಇಂಗ್ಲಿಷಿನಲ್ಲಿ) ಹಾಗು WAS ಅನ್ನು SAW ಎಂದು ಓದಿದರೆ ಅದು ಮಿದುಳಿನ ತೊಂದರೆಯ ಪ್ರಮಾಣವೇ ಎಂದು ಬಗೆದಿ ದ್ದರು. ಈ ರೀತಿ ಓದಿನ ತಪ್ಪುಗಳು ಕನ್ನಡದಲ್ಲಿ ಅಸಾಧ್ಯವೆಂದೇ ಹೇಳಬೇಕು. ರೋಮನ್ ಅಕ್ಷರಗಳನ್ನು ಬಲಗಡೆಯಿಂದ ತಿರುಗಿಸಿ ಓದಿದರೂ ಅಕ್ಷರ ಸಂಯೋಜನೆ ಸರಿಯಾಗಿ ಬರಲು ಸಾಧ್ಯ. ಆದರೆ ಅದು ಕನ್ನಡದಲ್ಲಿ ಆಗುವುದಿಲ್ಲ. ಒಂದು ಮಟ್ಟದಲ್ಲಿ ಮಾತ್ರ ಆ ತಪ್ಪುಗಳು ಸಾಧ್ಯ. ಅಂತಹ ಉದಾಹರಣೆಗಳು ಕಡಿಮೆಯೇ. ಓದಿದ

ಅಷ್ಟೂ ಜನರಲ್ಲಿ ಒಬ್ಬ ಹುಡುಗ 'ರಮಣ'ವನ್ನು 'ಮರಣ'ವೆಂದೂ ಮತ್ತೊಬ್ಬ 'ಲವ'ವನ್ನು 'ವಲ'ವೆಂದೂ ಓದಿದ್ದರು. ಇನ್ನೂ ಕೆಲವು ಕುತೂಹಲಕಾರಿಯಾದ ತಪ್ಪುಗಳು ಕಂಡುಬಂದವು. ಇಂಗ್ಲಿಷಿನಲ್ಲಿ P d b ಇವುಗಳ ಗೋಜಲು ಬಹಳ ಸಾಮಾನ್ಯ ಓದುವ ಮಕ್ಕಳಲ್ಲಿ. ಈ ರೀತಿಯ ತಪ್ಪುಗಳು ಕನ್ನಡ ಓದುವುದರಲ್ಲಿ ಬರಲಾರವೆಂದು ಅಂದುಕೊಂಡಿದ್ದೆವು. ಆದರೆ ಕೆಲವು ಮಕ್ಕಳು 'ಣ' ಕಾರವನ್ನು 'ಟ' ಎಂದು 'ಟ'ವನ್ನು 'ಣ' ಎಂದೂ ಹೇಳಿದ್ದುಂಟು. ಇದಲ್ಲದೆ 'ರ್ಮ'ವನ್ನು ಬೇರೆ ಬೇರೆ ರೀತಿ ಓದಿದ್ದು ಅನಿರೀಕ್ಷಿತ. ಇದನ್ನು ರವ್ಮ ಎಂದು ಓದಿದರು 'ೕ'ನ್ನು ತಿರುಗಿಸಿ ಓದಿಕೊಂಡು. ಹಾಗೆಯೇ 'ರ' ಕೈಬಿಟ್ಟು 'ಮ'ತ್ವ ಉಳಿಸಿ 'ೃ'ವನ್ನು ತಿರುಗಿಸಿ 'ಮತ' ಎಂದು ಓದಿದ್ದೂ ಉಂಟು. ಈ ರೀತಿಯ ತಪ್ಪುಗಳು ಅಗೌಣ, ಇಲ್ಲಿ ಅವನ್ನು ಕುತೂಹಲಕಾರಿ ಎಂದು ಮಾತ್ರ ಹೇಳಿದೆ. ಇಂಗ್ಲಿಷಲ್ಲಾದರೋ ಈ ರೀತಿ ತಪ್ಪಾಗಿ ಓದುವುದು ಎಷ್ಟೊಂದು ಹೆಚ್ಚೆಂದರೆ ಇವೇ ಸುಮಾರು 15% ಓದಿನ ತಪ್ಪುಗಳಾಗಿರುತ್ತವೆ.

ಒಟ್ಟಿನಲ್ಲಿ ಹೇಳುವುದಾದರೆ ಅಕ್ಷರ ಸಂಯೋಜನೆಯ ಜ್ಞಾನ, ಕಂಡದ್ದನ್ನು ಪಕ್ಕನೆ ಓದುವ ಶಕ್ತಿ ಇವು ಚೆನ್ನಾಗಿ ಓದುವ ಮಕ್ಕಳನ್ನು ಓದದ ಮಕ್ಕಳಿಂದ ಬೇರ್ಪಡಿಸುತ್ತವೆ. ಪಕ್ಕನೆ ಗುರುತಿಸಲು ಸಾಧ್ಯವಾಗಬೇಕಾದರೆ ಅಕ್ಷರ ಸಂಯೋಜನೆಯ ಜ್ಞಾನ ಚನ್ನಾಗಿರಬೇಕು. ಈ ಬೇಗನೆ ಗುರುತಿಸುವ ಶಕ್ತಿಗೆ ಸಾಕಷ್ಟು ಅಭ್ಯಾಸ ಅವಶ್ಯಕ. ಇಲ್ಲಿ ಹೆಸರಿಸಿದ ಬೇರೆ ಪರೀಕ್ಷೆಗಳು ನರಮಂಡಲದ ಚಟುವಟಿಕೆಯ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಅದರ ಬಗ್ಗೆ ಇಲ್ಲಿ ಹೆಚ್ಚಿನ ವಿವರಣೆ ನೀಡಿಲ್ಲ. ಸ್ಥೂಲವಾಗಿ ಹೇಳಲು, ಚನ್ನಾಗಿ ಓದುವ ಮಕ್ಕಳಲ್ಲಿ ಅನುಕ್ರಮವಾಗಿ ಓದುವುದೂ (Sequential processing) ಹಾಗೂ ಪಕ್ಕನೇ ಓದುವುದೂ (Automaticity) ಎರಡೂ ಚೆನ್ನಾಗಿ ಒದಗಿದ್ದ ಅಂಶಗಳು. ಇದಕ್ಕೇ ಅನ್ವಯಿಸುವಂತೆ ಮಾಡಿದ ಪರೀಕ್ಷೆಗಳಲ್ಲಿ ಅವರು ಓದಲು ಕಷ್ಟಪಡುತ್ತಿದ್ದ ಮಕ್ಕಳಿಗಿಂತ ಚೆನ್ನಾಗಿ ಮಾಡಿದ್ದರು.

ಆಕರ: G. Purushothama (1986)

A Framework for Testing Kannada Reading on the bases of Automaticity. Rules of Orthography and Sequential processing.

Doctoral thesis University of Rochester. Rochester N.Y.

ಡಾ. ಸಿ. ಎಸ್. ರಾಮಚಂದ್ರ

ಭಾಷಾವಿಜ್ಞಾನದಲ್ಲಿ ಕ್ಷೇತ್ರವಿಧಾನ ಮತ್ತು ತಂತ್ರಗಳು

ಈ ಪ್ರಬಂಧದ ಮುಖ್ಯ ಉದ್ದೇಶ ಭಾಷಾವಿಜ್ಞಾನದಲ್ಲಿ ಸಂಶೋಧಕ ಕ್ಷೇತ್ರ ಕಾರ್ಯ ನಡೆಸುವಾಗ ವಿವಿಧ ವಿಧಾನ ಹಾಗೂ ತಂತ್ರ ಬಳಕೆಯ ಅಗತ್ಯ, ಉಪಯೋಗಗಳ ಪುನರ್ವಿಮರ್ಶೆ; ಮಾಹಿತಿ ಸಂಗ್ರಹಣೆಯಲ್ಲಿ ಬಳಕೆಗೊಂಡ ಸರಳ ಅಲ್ಲದೆ ಸಂಕೀರ್ಣ ತಂತ್ರಗಳ ಪರಿಷ್ಕರಣ. ಇದರ ಜೊತೆಗೆ ಇಲ್ಲಿ ಮಾನವಶಾಸ್ತ್ರಜ್ಞನು ತಾನು ಕ್ಷೇತ್ರಕಾರ್ಯದಲ್ಲಿ ಅನುಸರಿಸಿದ ತಂತ್ರಗಳ; ಅವನ ಸೂಕ್ತ ದತ್ತಸಂಗ್ರಹಣೆಗೆ ನಿಖರವಾದ ಮಟ್ಟಗಳ; ಇತರ ಕ್ಷೇತ್ರ ಮತ್ತು ತಂತ್ರ ಮಾಹಿತಿಗಳ ಉಪಯೋಗ ಹಾಗೂ ಭಾಷಾ ದತ್ತಸಂಗ್ರಹಣೆಯ ಮತ್ತು ವಿಶ್ಲೇಷಣೆಯ ಸಂಕ್ಷಿಪ್ತ ವಿಧಾನಗಳನ್ನು ಸ್ಥೂಲವಾಗಿ ವಿವೇಚಿಸಲಾಗಿದೆ.

ಇತ್ತೀಚಿನ ಸೂಕ್ಷ್ಮ ಪರಿಶೋಧನೆಯಿಂದ ಮಾನವಶಾಸ್ತ್ರ ಸೃಷ್ಟಿಸಿರುವ ಅದ್ಭುತವನ್ನು ನಾವು ಒಂದು ಇಲ್ಲವೇ ಎರಡು ತಲೆಮಾರುಗಳ ಹಿನ್ನಲೆಯಲ್ಲಿ ನಡೆದ ಸಂಶೋಧನೆಗಳನ್ನು ಅವಲೋಕಿಸಿದಾಗ ಅವರು ಬಳಸಿದ ವಸ್ತು, ಉಡುಗೆ–ತೊಡುಗೆ, ಆಹಾರ ಮತ್ತು ಅವರ ಸಂಸ್ಕೃತಿಯ ಪರಿಚಯವಾಗುತ್ತದೆ. ಮಾನವನ ಸಾಂಸ್ಕೃತಿಕ ಬೆಳವಣಿಗೆಯನ್ನು ಸೂಕ್ತ ಮಾಹಿತಿಯೊಂದಿಗೆ ವಿವರಿಸುವ ಮಾನವಶಾಸ್ತ್ರ ಸದಾ ಮಾನವನ ಸಮಾಜ, ಸಂಸ್ಕೃತಿ ಹಾಗೂ ಭಾಷೆಯ ಅಗತ್ಯವನ್ನು ತಿಳಿಸುತ್ತದೆ. ಭಾಷಾ ಸಂಶೋಧಕ ಕೂಡ ಪೂರ್ಣ ಮಾನವಶಾಸ್ತ್ರಜ್ಞ. ಆತನ ಸಂಶೋಧನೆಯ ವ್ಯಾಪ್ತಿ ನಾಗರೀಕತೆಗಿಂತ ಭಾಷೆ ಮತ್ತು ಭಾಷೆ ವಿಕಾಸತೆಯದು. ಬಹಳ ವ್ಯಾಪಕ ದೃಷ್ಟಿ ಆತನದು. ಭೂಗರ್ಭ ಶಾಸ್ತ್ರಜ್ಞ, ಪರಿಸರ ಶಾಸ್ತ್ರಜ್ಞ, ಭಾಷಾಶಾಸ್ತ್ರಜ್ಞ, ಭೌತ ಮಾನವ ಶಾಸ್ತ್ರಜ್ಞ ಅಥವಾ ಇತರ ಸೂಕ್ಷ್ಮ ಪರಿಶೋಧಕರು ಸಂಸ್ಕೃತಿಯ ಅರಿವನ್ನು ಅಷ್ಟೊಂದು ಜಾಗೃತರಾಗಿ ಪರಿಗಣಿಸಿ ಸಂಶೋಧನೆಗೆ ನೆರವಾಗುವಂತೆ ಪ್ರಯತ್ನಿಸಿದಂತಿಲ್ಲ. ಇಂದು ಭಾಷಾ ವಿಜ್ಞಾನಿಗಳು ಭಾಷೆಯ ಅಧ್ಯಯನವನ್ನು ನಿರ್ವಹಿಸಬೇಕೆಂಬುದು ಆಗತ್ಯದ ಕೆಲಸವಾದರೂ ಪ್ರಾಚೀನ ಭಾಷೆಗಳು ಅಳಿಸಿಹೋಗುವ ಮೊದಲು ಶಾಸನ ರೂಪದಲ್ಲಿ ಉಳಿದುಕೊಂಡಿರುವ ಭಾಷೆಗಳನ್ನು ವಿಶ್ಲೇಷಣೆ

ಮಾಡುವುದು ಅಗತ್ಯದ ಕೆಲಸ. ಅದು ಅನಿವಾರ್ಯವೂ ಕೂಡ. ಭಾಷಾ ವಿಶ್ಲೇಷಣೆಗೆ ಮಾನವಶಾಸ್ತ್ರಜ್ಞರಿಂದ ಇಲ್ಲವೇ ವೃತ್ತಿಪರ ಭಾಷಾತಜ್ಞರಿಂದ ಈ ಹೊತ್ತು ಸಹಾಯವನ್ನು ಅಪೇಕ್ಷಿಸುವುದು ಅಪೇಕ್ಷಣೀಯ.

ಒಂದು ಪ್ರದೇಶದ ಭಾಷೆ ಇಲ್ಲವೇ ಉಪಭಾಷೆಗಳ ಅಧ್ಯಯನಕ್ಕೆ ಸಹಾಯವಾಗುವ ಮಾಹಿತಿಯನ್ನು, ಅವನ್ನು ಆಡುವ ಸ್ಥಳೀಯ ಸೂಚಕರಿಂದ ಸಂಶೋಧಕನು ಪಡೆಯುವ ವಿಧಿ ವಿಧಾನಗಳನ್ನು ಕ್ಷೇತ್ರವಿಧಾನ (Field Method) ಎಂದೂ, ಸೂಚಕರಿಂದ ಉದ್ದೇಶಿತ ಸಾಮಗ್ರಿಯನ್ನು ಸಂಗ್ರಹಿಸುವ ಕಾರ್ಯವನ್ನು ಕ್ಷೇತ್ರಕಾರ್ಯ (Field Work) ಎಂದೂ, ಕ್ಷೇತ್ರಕಾರ್ಯದಲ್ಲಿ ಸಾಮಗ್ರಿ ಸಂಗ್ರಹಕ್ಕಾಗಿ ನಿಯೋಜಿಸಿಕೊಳ್ಳಬಹುದಾದ ವ್ಯಕ್ತಿಯನ್ನು ಕ್ಷೇತ್ರಕಾರ್ಯಕರ್ತ (Field Worker) ಎಂದೂ, ಸಾಮಗ್ರಿ ಸಂಗ್ರಹಕ್ಕೆ ಅಗತ್ಯ ಮಾಹಿತಿಗಳನ್ನು ಒದಗಿಸುವ ವ್ಯಕ್ತಿಯನ್ನು ಸೂಚಕ (Informant) ಎಂದೂ, ಸಂಗ್ರಹಿತ ಭಾಷಿಕ ಮಾಹಿತಿಯ ಸಹಾಯದಿಂದ ಭಾಷೆ/ಉಪಭಾಷೆಯ ವೈಜ್ಞಾನಿಕ ಅಧ್ಯಯನವನ್ನು ಮುಂದುವರಿಸುವ ವ್ಯಕ್ತಿಯನ್ನು ಸಂಶೋಧಕ (Investigator) ಎಂದೂ, ಕ್ಷೇತ್ರಕಾರ್ಯದಲ್ಲಿ ಅನುಸರಿಸುವ ವೈಜ್ಞಾನಿಕ ವಿಧಿ ವಿಧಾನಗಳನ್ನು ಕ್ಷೇತ್ರಕಾರ್ಯಕ್ರಮಗಳು (Field Procedures) ಎಂದೂ, ಉದ್ದೇಶಿತ ಭಾಷಿಕ ಮಾಹಿತಿ ಸಂಗ್ರಹ ಕಾರ್ಯಕ್ಕೆ ನೆರವಾಗುವ ಮಾಹಿತಿಗಳ ಪಟ್ಟಿಯನ್ನು ಪ್ರಶ್ನಾವಳಿ (Questionnaire) ಎಂದೂ ಭಾಷಾವಿಜ್ಞಾನಿಗಳು ಕರೆದಿರುವರು.

ಕ್ಷೇತ್ರ ವಿಧಾನ ಮತ್ತು ತಂತ್ರಗಳು ಭಾಷಾಸಂಶೋಧಕನು ತಾನು ಕೈಗೊಳ್ಳುವ ಸಂಶೋಧನೆಯ ಉದ್ದೇಶಕ್ಕನುಗುಣವಾಗಿ ಬದಲಾಗುತ್ತದೆ. ಭಾಷಾ ವಿಜ್ಞಾನಿಯ ಕ್ಷೇತ್ರಕಾರ್ಯಕ್ಕೂ, ಚರಿತ್ರಕಾರ, ಮಾನವಶಾಸ್ತ್ರಜ್ಞ, ಭೂಗೋಳಶಾಸ್ತ್ರಜ್ಞರ ಕ್ಷೇತ್ರಕಾರ್ಯಕ್ಕೂ ತುಂಬಾ ಅಂತರವುಂಟು. ಹಾಗಾಗಿ ಕ್ಷೇತ್ರಕಾರ್ಯ ವಿಧಾನ ಮತ್ತು ತಂತ್ರಗಳು ಆಯಾ ಸಂಶೋಧಕರ ಕ್ಷೇತ್ರಕ್ಕೆ ಸೀಮಿತವಾಗುತ್ತದೆ. ಅಲ್ಲದೆ ಅವರು ಸಂಗ್ರಹಿಸಿದ ಮಾಹಿತಿಯು ಎಷ್ಟೋ ವೇಳೆ ಭಾಷಾ ವಿಜ್ಞಾನಿಯ ಅಧ್ಯಯನಕ್ಕೆ ನೆರವಾಗುವುದು. ಕ್ಷೇತ್ರಕಾರ್ಯದಲ್ಲಿ ಸಂಶೋಧಕ ಉದ್ದೇಶಿತ ಭಾಷಿಕ ದತ್ತವನ್ನು ಸಂಗ್ರಹಿಸಿಕೊಳ್ಳುವ ಮೊದಲು ಯಾವ ಭಾಷಾಕ್ಷೇತ್ರದ ಯಾವ ಭಾಷೆ/ಉಪಭಾಷೆಗಳ ಅಧ್ಯಯನ ನಡೆಸಲು ಉದ್ದೇಶಿಸಿರುವನೋ ಅಂತಹ ಪ್ರದೇಶದ ಭಾಷಿಕ ಕ್ಷೇತ್ರವನ್ನು ಸ್ವತಃ ಸಂಚರಿಸಿ ಯಾವ ಪ್ರದೇಶದ ಮಾತಿನಲ್ಲಿ ಹೆಚ್ಚಿನ ವೈವಿಧ್ಯ ಕಂಡುಬರುತ್ತದೆ ಎಂಬುದನ್ನು ವೀಕ್ಷಿಸಿ ಅಂತಹ ಭಾಷಿಕ ಸ್ಥಳಗಳನ್ನು ದತ್ತಸಂಗ್ರಹ ನೆಲೆಗಳಾಗಿ ನಿರ್ಧರಿಸಿಕೊಳ್ಳಬೇಕು ಸಂಶೋಧಕ ಉದ್ದೇಶಿತ ದತ್ತ ಸಂಗ್ರಹಕಾರ್ಯವನ್ನು ಪ್ರಾರಂಭಿಸುವ ಮೊದಲು ಅಗತ್ಯ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಪ್ರಶ್ನಾವಳಿ ತಯಾರಿಕೆ, ಕ್ಷೇತ್ರಕಾರ್ಯಕ್ಕೆ ಅಗತ್ಯವಾಗಿ ತೆಗೆದುಕೊಂಡು ಹೋಗುವ ಉಪಕರಣ ಮತ್ತು ಸಲಕರಣೆಗಳು, ಸ್ಥಳೀಯ ಸೂಚಕರ ಆಯ್ಕೆ ಇತ್ಯಾದಿಯ ಕಡೆ ಹೆಚ್ಚಿನ ಗಮನ ಹರಿಸಬೇಕಾದುದು ಬಹುಮುಖ್ಯ.

ಕ್ಷೇತ್ರ ವಿಧಾನದಲ್ಲಿ ಭಾಷಾ ವೈಜ್ಞಾನಿಕ ಬೆಳವಣಿಗೆಯ ವಿಧಾನಗಳು :

ಮೊದಲಿನಿಂದಲೂ ವಿಶೇಷವಾಗಿ ಮಾನವಶಾಸ್ತ್ರದ ಕ್ಷೇತ್ರಕಾರ್ಯ ಪರಿಸರ ಶಾಸ್ತ್ರಜ್ಞರ ಮಾಹಿತಿ ಸಂಗ್ರಹದಂತೆಯೇ ಇತ್ತು. ಭಾಷಿಕ ಮಾಹಿತಿಯನ್ನು ಹಲವು ಬುಡಕಟ್ಟುಗಳಿಂದ ಆಗಾಗ್ಗೆ ಸಂಗ್ರಹಿಸಿ ವಿಶ್ಲೇಷಿಸುವ ಕಾರ್ಯಗಳು ನೈಸರ್ಗಿಕ ಶಾಸ್ತ್ರಜ್ಞರ ಕೆಲಸವಾಗಿತ್ತು. ಅಂತಹ ಮಾಹಿತಿಯನ್ನು ಸಸ್ಯ, ಪ್ರಾಣಿ ಮತ್ತು ಜಲಚರಗಳ ಜೀವನಕ್ಕೆ ಸಂಬಂಧಿಸಿದ ಮಾಹಿತಿ, ಕೆಲವೇ ಶಬ್ದಗಳಾಗಿರುತ್ತಿದ್ದುವು. ಅಂತಹ ಮಾಹಿತಿಗಳನ್ನು ನಿರೂಪಿಸುವಲ್ಲಿ ಮತ್ತು ಸಂಗ್ರಹಿಸಿದ ಮಾಹಿತಿಗಳನ್ನು ವಿಶ್ಲೇಷಿಸುವಲ್ಲಿ ತಪ್ಪಾಗುತ್ತಿತ್ತು. ಭಾಷಿಕ ದತ್ತವನ್ನು ಸಂಗ್ರಹಿಸುವಲ್ಲಿ ಸಂಗ್ರಹ ಕಾರರ ಸ್ವಭಾಷೆಯಲ್ಲಿಯೇ ಬರೆದುಕೊಳ್ಳುವುದು ರೂಢಿಯಲ್ಲಿತ್ತು. ಆದರದು ಸಮರ್ಪಕವಾದ ದತ್ತ ಸಂಗ್ರಹವಾಗಿರಲಿಲ್ಲ. ಇಂದಿಗೂ ಹವ್ಯಾಸಿ ಸಂಗ್ರಹಕಾರರು ಈ ರೀತಿಯಲ್ಲಿಯೇ ದತ್ತ ಸಂಗ್ರಹಣೆಯನ್ನು ಮಾಡುತ್ತಿದ್ದಾರೆ. ವಿಶ್ವಾದ್ಯಂತ ಎಷ್ಟೋ ಭಾಷೆಗಳಲ್ಲಿ ಪ್ರಚಲಿತವಿರುವ ಈ ವಿಧಾನದ ದತ್ತ ಸಂಗ್ರಹಣಾಕಾರ್ಯ ಯೋಗ್ಯವಾದುದಲ್ಲ. ಅಂತೆಯೇ ಮಾಹಿತಿಯ ವರ್ಗೀಕರಣದ ಸಮಸ್ಯೆಯಂತೂ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿದ್ದು, ಅವುಗಳಿಗೆ ಎಷ್ಟೋಸಾರಿ ಬುಡಕಟ್ಟು ಗಳಲ್ಲೇ ದತ್ತ ದೊರೆಯದು.

ಬಹುಶಃ ಈ ಮಾದರಿಯ ದತ್ತ ಸಂಗ್ರಹಣೆ ಪ್ರಯೋಜನವಿಲ್ಲ. ಸಂಗ್ರಹ ಕಾರನ ಭಾಷೆ ಇಂಗ್ಲೀಷ್ ಆಗಿದ್ದರೆ, ಇಂಗ್ಲೀಷ್ ಬರವಣಿಗೆಯ ಹಲವಾರು ಅಂಶಗಳು ದತ್ತ ಸಂಗ್ರಹಣೆಯಲ್ಲಿ ನೇರ ಪಾಲ್ಗೊಂಡು ವಿಷಯ ಬರವಣಿಗೆ, ವರ್ಗೀಕರಣ, ವಿಶ್ಲೇಷಣೆಯಲ್ಲಿ ತೊಡಕು ಉಂಟಾಗುತ್ತದೆ. ಈ ದೃಷ್ಟಿಯಿಂದ ಲೇವಿಸ್ ಹೆನ್ರಿ ಮೊಗ್ಯಾನ್ ಅವರ ಪ್ರಯತ್ನ ಮತ್ತು ಸಾಧನೆ ಅಪರಿಮಿತವಾದುದು. ಆತ ಸನೇಕ (Seneca) ಭಾಷೆಯ ಪದಗಳನ್ನು ಅನುಲೇಖಿಸಿ ಒಂದು ಯುಕ್ತ ಮಾದರಿಯನ್ನೇ ನಿರ್ಮಿಸಿದ್ದಾನೆ. ಸಂಶೋಧಕನ ಮಾತೃಭಾಷೆಯಲ್ಲಿ ದತ್ತ ಸಂಗ್ರಹಣೆ ಮಾಡಿದಲ್ಲಿ, ವಿಶ್ಲೇಷಣೆ ಮಾಡುವ ಭಾಷೆಯ ಉಚ್ಚಾರಣೆ ಆಗಲಿ, ಸ್ವರ-ವ್ಯಂಜನಗಳ ಸಹಜ ಸ್ವರೂಪ ಆಗಲಿ, ಆ ಭಾಷೆಯ ರಚನೆ ಆಗಲಿ ಸ್ಪಷ್ಟವಾಗದು. ಇದಕ್ಕೆ ನಿದರ್ಶನ ಆಂಗ್ಲಭಾಷಾ ಸಮುದಾಯದಲ್ಲಿ ಮಾತನಾಡುವ ಇಟಲಿಯನ್ನರ ಭಾಷಾ ಸಂಗ್ರಹವೇ ಸಾಕ್ಷಿ. ಅದಕ್ಕೆ ಯಾವ ಭಾಷೆಯ ಮಾಹಿತಿ ಸಂಗ್ರಹ ಮಾಡ ಬೇಕೋ ಆ ಭಾಷೆಯಿಂದಲೇ ಅಂತರರಾಷ್ಟ್ರೀಯ ಧ್ವನಿ ಮಾಲೆಯ ಮೂಲಕ ಭಾಷೆಯ ದತ್ತ ಸಂಗ್ರಹಿಸಬೇಕು.

ಫ್ಲಾಯಿಡ್ ಜಿ. ಲೌನ್ಸ್‌ಬರಿ ಮುಖ್ಯವಾಗಿ ಭಾಷಿಕದತ್ತ, ಭಾಷಾ ವಿಶ್ಲೇಷಣಾ ಕ್ರಮ ಮತ್ತು ರಚನೆಯನ್ನು ಆಧರಿಸಿ ಮಾಹಿತಿ ಸಂಗ್ರಹಣೆಯ ಪ್ರಮುಖ ಘಟ್ಟಗಳನ್ನು ಕೆಳಕಂಡಂತೆ ವರ್ಗೀಕರಿಸಿದ್ದಾರೆ. ಪ್ರಮುಖ ಘಟ್ಟಗಳು ಇಂತಿವೆ

(ಅ) ಧ್ವನಿ ವಿಜ್ಞಾನ (Phonetics)

(ಆ) ಧ್ವನಿಮಾ ವಿಜ್ಞಾನ (Phonemics)
(ಇ) ವ್ಯಾಕರಣದತ್ತ ಮತ್ತು ಪಠ್ಯಗಳು
(Grammatical Data and Texts)
(ಈ) ಅರ್ಥ ಮತ್ತು ವಾಕ್ಯಮಾಹಿತಿ (Semantic and Syntactic Data)

(ಅ) ಧ್ವನಿ ವಿಜ್ಞಾನ:

ಈ ವಿಭಾಗವೇ ಸೂಚಿಸುವಂತೆ ಭಾಷಾ ಮಾಹಿತಿ ಸಂಗ್ರಹವು ನೈಸರ್ಗಿಕ ಧ್ವನಿ ಪ್ರಲೇಖದಿಂದ ಕೂಡಿದ್ದು, ಧ್ವನಿಪ್ರಲೇಖ ವ್ಯವಸ್ಥಿತವಾಗಿ ವಿಕಾಸಗೊಂಡಿರುತ್ತದೆ. ಮೊದಮೊದಲು ಇದಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹವು ಸಂಪೂರ್ಣ ಧ್ವನಿಬದ್ಧ ವಾಗಿರಲಿಲ್ಲ. ಅದಕ್ಕೆ ಇದ್ದ ಪ್ರಮುಖ ಕಾರಣ ಮಾಹಿತಿ ಸಂಗ್ರಹಕ್ಕೆ ಬಳಸಿ ಕೊಳ್ಳುತ್ತಿದ್ದ ಮಾನವ ಶಾಸ್ತ್ರೀಯ ಸಾಹಿತ್ಯ. ಮಾನವ ಶಾಸ್ತ್ರೀಯ ನಿಲವುಗಳು ಸ್ಪಷ್ಟ ಮಾಹಿತಿಗೆ ಸಾಧ್ಯವಾಗುತ್ತಿರಲಿಲ್ಲ. ಈ ನಡುವೆ ಅಂತರರಾಷ್ಟ್ರೀಯ ಧ್ವನಿ ಸಂಸ್ಥೆಯ (International Phonetic Association) ಶಿಫಾರಸ್ಸಿನ ಅನ್ವಯ ಅಮೆರಿಕಾದ ಮಾನವ ಶಾಸ್ತ್ರಜ್ಞರು ದತ್ತಸಂಗ್ರಹದಲ್ಲಿ ಭಾಷಿಕ ಧ್ವನಿಗಳನ್ನು ಬಳಸಲಾರಂಭಿಸಿದರು. ಮೊದಲು ಅಮೆರಿಕಾದಲ್ಲಿ ಸಪೀರ್ ಮತ್ತು ಆತನ ವಿದ್ಯಾರ್ಥಿಗಳ ತಂಡದಿಂದ ಈ ಕಾರ್ಯ ಆರಂಭವಾಯಿತು. ಆದರೆ ಬ್ಲಾಕ್ ಮತ್ತು ಟ್ರೇಗರ್ ಅವರ ಧೋರಣೆ ಇವರಿಗಿಂತ ಭಿನ್ನವಾಗಿತ್ತು. ಅವರು ಅನೇಕ ಪ್ರಯತ್ನ, ಪ್ರಯೋಗಗಳನ್ನು ಈ ನಿಟ್ಟಿನಲ್ಲಿ ನಡೆಸಿ, ಮಾಹಿತಿ ಸಂಗ್ರಹಕ್ಕೆ ಒಂದು ಸ್ಥಿರ ನೆಲೆ ಯನ್ನು ಒದಗಿಸಿದರು. 1855ರಲ್ಲಿ ಬಂದ ಲೆಪ್ಸಿಸ್ ಮಾಹಿತಿ ಪ್ರತಿಲೇಖದಲ್ಲಿ ಸ್ಪಷ್ಟ ರೂಪವನ್ನು ನೀಡಲು ಶ್ರಮಿಸಿ ಹೊಸ ಪದ್ಧತಿಯ ನಾಂದಿಗೆ ಕಾರಣನಾದ. ಆತನ ಜರ್ಮನ್, ಆಫ್ರಿಕನ್ ಭಾಷೆಗಳ ಮಾಹಿತಿ ಪ್ರತಿಲೇಖನ ಕಾರ್ಯವೇ ಇದಕ್ಕೆ ನಿದರ್ಶನ. ಬಹುಮಂದಿ ಮಾನವ ಶಾಸ್ತ್ರಜ್ಞರು ಲೆಪ್ಸಿಸ್ ಸಾಧನೆಗೆ ಮನ್ನಣೆ ಯನ್ನಿತ್ತು, ತಮ್ಮ ಮಾಹಿತಿ ಸಂಗ್ರಹದಲ್ಲಿ ಆ ತಂತ್ರವನ್ನು ಬಳಸಿಕೊಂಡರು. 1888ರಲ್ಲಿ ಅಂತರರಾಷ್ಟ್ರೀಯ ಧ್ವನಿಪರಿಷತ್ತಿನ ಪದ್ಧತಿಯ ಮೂಲಕ ದತ್ತಸಂಗ್ರಹಣಾ ಕಾರ್ಯಕ್ಕೆ ಒಂದು ಭದ್ರ ನೆಲೆ ಸಿಕ್ಕಿತು. ಕಾಲಕಾಲಕ್ಕೆ ಪುನರ್ವಿಮರ್ಶೆಗೊಂಡ ದತ್ತಸಂಗ್ರಹಣಾ ಕಾರ್ಯ ಇಂದಿನ ವೈಜ್ಞಾನಿಕ ವಿಶ್ಲೇಷಣೆಗೆ ಅನುವು ಮಾಡಿ ಕೊಟ್ಟಿತು. ಹಾಗಾಗಿ ಒಂದು ಭಾಷೆ ಇಲ್ಲವೇ ಯಾವುದೇ ಭಾಷೆಯ ಧ್ವನಿಗಳಿಂದಲೇ ಆ ಭಾಷೆಯ ಧ್ವನಿ ವ್ಯವಸ್ಥೆಯನ್ನು ಖಾತ್ರಿಗೊಳಿಸುವ ಪದ್ಧತಿ ರೂಢಿಗೆ ಬಂತು. ಇತ್ತೀಚಿನ ದಿನಗಳಲ್ಲಿ ಪೌಲ್‌ಪಸ್ಸಿ ಅನೇಕ ಪ್ರಸಿದ್ಧ ಆಂಗ್ಲ ಧ್ವನಿ ಶಾಸ್ತ್ರಜ್ಞರು ಒಡ ಗೂಡಿ ಮತ್ತು ಅವರ ಪ್ರಭಾವದಿಂದ ಧ್ವನಿಯ ಕಡೆಗೆ ಸಂಪೂರ್ಣವಾಲಿದ್ದಾರೆ. ಆದ್ದರಿಂದ ಅಮೆರಿಕಾದ ಮಾನವಶಾಸ್ತ್ರೀಯ ಸಂಸ್ಥೆಯವರು 1913–15ರಲ್ಲಿ ಬೋವಾಸ್‌ನ ಸಂಪಾದಕತ್ವದಲ್ಲಿ ಒಂದು ಸಮಿತಿಯನ್ನು ರಚಿಸಿ ದತ್ತಸಂಗ್ರಹಣೆ

ಯನ್ನು ಧ್ವನಿ ಮೂಲಕವಾಗಿಯೇ ಪ್ರತಿಲೇಖಿಸಿಕೊಳ್ಳಬೇಕೆಂದು ಒಮ್ಮತದಿಂದ ತೀರ್ಮಾನಿಸಿದರು. ಈ ಕಾರಣದಿಂದಲೇ ಸಪೀರ್, ಕ್ರೋಬರ್ ಧ್ವನಿ ಸಂಗ್ರಹ ಕಾರ್ಯವನ್ನು ಹಲವು ಅಮೆರಿಕ ಮತ್ತು ಭಾರತೀಯ ಭಾಷೆಗಳಲ್ಲಿ ದತ್ತಸಂಗ್ರಹಣಾ ಕಾರ್ಯವನ್ನು ಕೈಗೊಂಡರು. 1934ರಲ್ಲಿ ಆ ಸಂಸ್ಥೆಯ ಸಂಪಾದಕತ್ವವನ್ನು ವಹಿಸಿಕೊಂಡ ಹರ್ಜಾಗ್ ಒಂದು ಕಿರು ಬದಲಾವಣೆಯನ್ನು ಸೂಚಿಸಿದ. ಮೊದಲು ಸಾಧ್ಯವಾದ ಧ್ವನಿಗಳಿಗೆಲ್ಲಾ ಒಂದು ಚಿಹ್ನೆ ನೀಡಿ, ಧ್ವನಿಗುಚ್ಛಗಳಿಗೆ ಒಂದು ಧ್ವನಿಮಾವನ್ನು ಸ್ಥಾನಾಂತರಿಸುವುದರ ಮೂಲಕ ದತ್ತಸಂಗ್ರಹಿಸಬೇಕೆಂದನು. ಇದಕ್ಕೆ ನಿದರ್ಶನ ಸ್ಲಾವಿಕ್ (Slavic) ಭಾಷೆಯ ಧ್ವನಿ ಚಿಹ್ನೆಗಳ ದತ್ತಸಂಗ್ರಹ ಮಾದರಿ. 1942 ರಲ್ಲಿ ಬ್ಲಾಕ್ ಮತ್ತು ಟ್ರೇಗರ್ ಮಾಹಿತಿ ಸಂಗ್ರಹಣಾ ಪದ್ಧತಿಗೆ ಕೆಲವು ಪ್ರಮುಖ ಹೊಸ ತಂತ್ರಗಳನ್ನು ಅಳವಡಿಸುವುದಕ್ಕಿಂತ ಸ್ವರ ಧ್ವನಿಗಳ ಗುಂಪಿನಲ್ಲಿ ನಡುಮಧ್ಯ (Mean–Mid) ಎಂಬಂಶವನ್ನು ಪ್ರಸ್ತಾಪಿಸಿದರು. ಇದರಿಂದ ಧ್ವನಿಯಾಧಾರಿತ ದತ್ತಸಂಗ್ರಹ ಕಾರ್ಯ ಅತಿ ಸೂಕ್ಷ್ಮವಾಯಿತು. ಇಲ್ಲಿ ಯಾವ ರೀತಿಯಲ್ಲಿ ದತ್ತ ಸಂಗ್ರಹಿಸಬೇಕು, ಯಾವುದು ಮುಖ್ಯ, ಯಾವುದು ಉಪಯೋಗಕರ ಎನ್ನುವುದು ಗಮನಿಸಬೇಕಾದ ವಿಚಾರ. ಇದಕ್ಕೆ ಮುಖ್ಯ ಕಾರಣ, ಭಾಷಾ ವೈಜ್ಞಾನಿಕ ಮತ್ತು ಮಾನವಶಾಸ್ತ್ರೀಯ ವಿಧಾನಗಳಲ್ಲಿ ಪರಿಣತನಲ್ಲದವನಿಗೆ ಸಂದೇಹ ಮೂಡುವುದು ಸಹಜ. ಆದಕ್ಕೆ ಅವರು ಕೆಲವು ಯಂತ್ರೋಪಕರಣಗಳ, ಚಿಹ್ನೆಗಳ ಮತ್ತು ಭಾಷಿಕ ರೂಪಗಳ ಮೇಲೆ ಹೊಂದಿಕೊಂಡಿರಬೇಕು. ಸಾರ್ವತ್ರಿಕತೆ ಹಾಗೂ ಪ್ರಧಾನತೆಯನ್ನು ಕೆಲವು ವೇಳೆ ಧ್ವನಿಪ್ರಲೇಖದಲ್ಲಿ ಅನ್ವಯಗೊಳಿಸುತ್ತೇವೆ. ಅರ್ಥ ಉಚ್ಛರಿತ ಧ್ವನಿ ಮತ್ತು ಶ್ರವ್ಯ ಧ್ವನಿಗಳ ಮೇಲೆ ಹೊಂದಿಕೊಂಡಿರುತ್ತದೆ. ಉಚ್ಚಾರಣಾತ್ಮಕ ಹಾಗೂ ಶ್ರವ್ಯಾತ್ಮಕ ಲಕ್ಷಣಗಳು ಧ್ವನಿವಿಜ್ಞಾನದಲ್ಲಿ ಪ್ರಧಾನತೆಯನ್ನು ಪಡೆದ ಅಂಶಗಳು. ಇದರಿಂದಾಗಿ ಉಚ್ಛರಿತ ಧ್ವನಿಯೇ ಭಾಷಾಮಾಹಿತಿಯ ಪ್ರಧಾನ ಅಂಗ. ಇಂದಿನ ಸೂಕ್ಷ್ಮ ಪರಿವೀಕ್ಷಣಾ ಕಾರ್ಯದಲ್ಲಿ ದೊರೆಯಬಹುದಾದ ನವೀನ ಉಪಕರಣಗಳನ್ನು ಬಳಸಿಕೊಳ್ಳಲಾಗುತ್ತಿದೆ. ಇದಕ್ಕೆ ಧ್ವನಿಗ್ರಾಹಕ (Sound Specetrograph) ಉಪಕರಣ ಬಹು ಮುಖ್ಯವಾದುದು. ಮೂಲತತ್ತ್ವ ಎರಡರಲ್ಲೂ ಒಂದೇ ಇದ್ದು ನಿಖರತೆ ಮತ್ತು ನಿರ್ದಿಷ್ಟತೆಯ ಕಷ್ಟವನ್ನು ನೀಗಿಸುವುದೇ ಇದರ ಮುಖ್ಯ ಗುರಿ. ಬ್ಲಾಕ್ ಮತ್ತು ಟ್ರೇಗರ್, ಜೋನ್ಸ್, ಯಸ್ಪರ್‌ಸನ್ ಉಚ್ಚಾರಣಾತ್ಮಕ ಧ್ವನಿ ವಿಜ್ಞಾನದ ಸೌಲಭ್ಯ ಮುಖ್ಯವೆಂದರೆ; ಜೂಸ್, ಪಾಟರ್, ಕೂಪ್ ಮತ್ತು ಗ್ರೀನ್ ಶ್ರವ್ಯಾತ್ಮಕ ಧ್ವನಿ ವಿಜ್ಞಾನದ ಅಗತ್ಯವನ್ನು ಸ್ಪಷ್ಟಪಡಿಸಿದ್ದಾರೆ. ಧ್ವನಿಪ್ರಲೇಖದ ಕೌಶಲ ಅಷ್ಟೇನೂ ಕಷ್ಟವಲ್ಲ. ಕ್ಷೇತ್ರ ಮಾನವ ಶಾಸ್ತ್ರಜ್ಞನಿಗೆ ಭಾಷಾ ವೈಜ್ಞಾನಿಕ ತರಬೇತಿ ಬೇಕೇಬೇಕು. ಇದರಿಂದ ಆತನ ಸಂಶೋಧನೆಯು ಫಲಪ್ರದ ಎನಿಸುವುದು.

(ಆ) ಧ್ವನಿಮಾ ವಿಜ್ಞಾನ:

ವ್ಯಾಕರಣ ವಿಶ್ಲೇಷಣೆಯಂತೆಯೇ ಧ್ವನಿಮಾ ವಿಶ್ಲೇಷಣೆಯೂ ವೈಜ್ಞಾನಿಕ ವಾದುದು. ಧ್ವನಿಮಾ ವಿಜ್ಞಾನವು ಭಾಷಿಕ ರಚನೆಗಳ ಸಂಬಂಧ ಇಲ್ಲವೇ ಧ್ವನಿ ರೂಪಗಳ ಪರಸ್ಪರ ವೈದೃಶ್ಯಾತ್ಮಕ ಮೌಲ್ಯದಿಂದ ಬಳಕೆಗೆ ಬಂದಿದೆ. ಪ್ರಮುಖ ಉದ್ದೇಶಗಳಲ್ಲಿ ಧ್ವನಿಮಾ ಚಿಹ್ನೆಗಳ ವಿಕಾಸವೂ ಒಂದು. ಪ್ರಲೇಖಗಳು ಉಚ್ಚಾರಣೆ ಯನ್ನು ಅವುಗಳ ಸಹಾಯದೊಂದಿಗೆ ಭಾಷೆಯನ್ನು ಕಲಿಯುವವರ ಬರವಣಿಗೆಯ ಸಾಮರ್ಥ್ಯವನ್ನು ಸ್ಪಷ್ಟಪಡಿಸುತ್ತದೆ. ಸಾಮಾನ್ಯವಾಗಿ ಸಂಶೋಧಕನ ಅರಿವಿಲ್ಲದೆಯೇ ಧ್ವನಿಮಾ ತತ್ವಗಳು ದತ್ತ ಸಂಗ್ರಹಣೆಯಲ್ಲಿ ಸೇರಿರುತ್ತವೆ. ಆಂದರೆ ಸಂಶೋಧಕರು ಹೆಚ್ಚಾಗಿ ಧ್ವನಿಗಳ ವ್ಯತ್ಯಾಸಗಳನ್ನು ಗಮನಿಸಿದಂತಿರಲಿಲ್ಲ ಇದಕ್ಕೆ ಮುಖ್ಯ ಕಾರಣ ಧ್ವನಿಮಾಗಳು ಭಾಷೆಯಲ್ಲಿ ಯಾವುದೇ ಪರಸ್ಪರ ವೈದೃಶ್ಯಾತ್ಮಕ ವ್ಯತ್ಯಾಸವನ್ನು ನಿರ್ದೇಶಿಸುವಂತಿರಲಿಲ್ಲ. ಆದರೆ ಭಾಷಾ ಬೋಧನೆಯ ಸಮಸ್ಯೆಯಲ್ಲಿ ಸಹಾಯಕ ಸಂಕೇತಗಳನ್ನು ಹಾಗೂ ಭಾಷೆಯ ಮುಖ್ಯ ಧ್ವನಿಗಳಿಗೆ ಸಂಬಂಧಿಸಿದ ಗಮನವನ್ನು ಪ್ರಯೋಗದ ಮುಖೇನ ಪರಿಭಾವಿಸುತ್ತಿದ್ದರು. ಧ್ವನಿ ವಿಜ್ಞಾನದಲ್ಲಿ ವೈಜ್ಞಾನಿಕತೆ ಬೆಳೆದ ತರುವಾಯ ಭಾಷೆಯ ಧ್ವನಿಗಳ ಪರಿಗಣನೆ, ಸಂಗ್ರಹ ಕ್ರಮಬದ್ಧವಾಗಿ ಆರಂಭವಾಯಿತು. ಪಶ್ಚಿಮ ದೇಶಗಳ ಭಾಷಿಕ ವಿಶ್ಲೇಷಣೆಯಲ್ಲಿ ಸೂಕ್ಷ್ಮ ಮತ್ತು ಸ್ಥೂಲಧ್ವನಿಪ್ರಲೇಖಗಳು ಪ್ರಯೋಗಕ್ಕೆ ಬಂತು. ಸೂಕ್ಷ್ಮಧ್ವನಿಪ್ರಲೇಖ ಸಂಶೋಧಕನ ಮತ್ತು ಭಾಷೆಯ ಸುಭದ್ರತೆಯನ್ನು ಸ್ಪಷ್ಟಪಡಿಸುತ್ತದೆ ಜೊತೆಗೆ ಧ್ವನಿಲಕ್ಷಣಗಳನ್ನು ಅಪೂರ್ಣವಾಗಿ ಪಡೆಯುವುದರ ಮೂಲಕ ಸಂಶೋಧಕನ ತಂತ್ರಕ್ಕೆ ಹೊಂದಿಕೊಂಡಿರು ತ್ತದೆ. ಅಂತೆಯೇ ಸ್ಥೂಲ ಪ್ರಲೇಖ ವಿಷಯಕ್ಕೆ ಸಂಬಂಧಿಸಿದಂತಿದ್ದು ಭಾಷಿಕ ರಚನಾ ಚೌಕಟ್ಟಿಗೆ ಅನುಗುಣವಾಗಿರುತ್ತದೆ. ಅಲ್ಲದೆ ಸಂಬಂಧವಿಲ್ಲದ ಲಕ್ಷಣ ಗಳನ್ನು ಒಳಗೊಂಡಿರುತ್ತವೆ.

ಪರಸ್ಪರ ವೈದೃಶ್ಯಾತ್ಮಕತೆ ಭಿನ್ನ ಧ್ವನಿಗಳಿಗೆ ಸೇರಿದ್ದು. ಪರಸ್ಪರ ವೈದೃಶ್ಯ ಪರಿಸರದಲ್ಲಿ ಸದಾ ಈ ಲಕ್ಷಣ ಕಂಡುಬರುವುದು, ಆದರೆ ಇಂದಿಗೂ ಏಕಪರಿಸರದಲ್ಲಿ ಕಂಡುಬರುವುದು ಅಪರೂಪ. ಅರ್ಥ ವ್ಯತ್ಯಾಸವಿದ್ದು ಎರಡು ರೂಪಗಳು ಭಿನ್ನತೆ ಯನ್ನು ತೋರಿಸುತ್ತವೆ ಭಾಷಾ ವಿಜ್ಞಾನಿಗಳು ಎರಡು ಧ್ವನಿಗಳು ಪೂರಕ ಪ್ರಸಾರದಲ್ಲಿ ಬಂದರೆ ಧ್ವನಿ ವ್ಯತ್ಯಾಸಗಳು ಕಂಡು ಬರುತ್ತವೆ ಎಂಬುದನ್ನು ಸಾಬೀತು ಪಡಿಸಿದ್ದಾರೆ. ಅವನ್ನೇ ಅಪರಿಚ್ಛೇದಕ (Non–Distinctive Forms) ರೂಪಗಳು ಎನ್ನುವರು. ಅವೇ ಧ್ವನಿಮಾಗಳು. ಮನೋವಿಜ್ಞಾನಿಗಳು ಧ್ವನಿಮಾಗಳ ಬಗ್ಗೆ ಹೆಚ್ಚು ಕಾಳಜಿ ವಹಿಸದಿದ್ದರೂ ಅವುಗಳು ಎರಡು ಧ್ವನಿಗಳು ಒಂದೇ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಸಾಂಸ್ಕೃತಿಕ ಹೊಂದಾಣಿಕೆಯಿಂದ ಧ್ವನಿಮಾವನ್ನು ಪರಿಗಣಿಸುವುದಾದರೆ ಕೆಲವು ಪ್ರಮುಖ ಚಟುವಟಿಕೆಗಳನ್ನು ಗಮನಿಸಬೇಕು. ಮುಖ್ಯವಾಗಿ ಧ್ವನಿ ಲಕ್ಷಣಗಳು, ಅವುಗಳ ಯಾದೃಚ್ಛಿಕ ಚಾರಿತ್ರಿಕ ವಿಕಾಸ ಇತ್ಯಾದಿ

ಗಮನಾರ್ಹ ಅಂಶಗಳು. ಇವು ಸೂಕ್ಷ್ಮವಾದ ಘಟಕಗಳ ವ್ಯತ್ಯಾಸ ಹಾಗೂ ಅರ್ಥ ವ್ಯತ್ಯಾಸವನ್ನು ಸಹಜವಾಗಿ ನಿರೂಪಿಸುತ್ತವೆ. ಧ್ವನಿ ಲಕ್ಷಣ ಭಾಷೆಯ ಹೊರ ಲಕ್ಷಣದಿಂದ ತಿಳಿಯದಿದ್ದರೂ ಭಾಷೆಯ ಆಂತರಿಕ ರಚನೆ ಸಂಶೋಧನೆಯ ವಿಶ್ಲೇಷಣೆಗೆ ಅನ್ವಯಿಸಿರುತ್ತದೆ. ಇಲ್ಲಿ ಶಿಷ್ಟ ವಿಶ್ಲೇಷಣಾ ತಂತ್ರವೇ ಸಂಶೋಧಕನ ಕಿರು ಸಮಸ್ಯೆ. ಭಾಷಾ ವಿಶ್ಲೇಷಣೆಯಲ್ಲಿ ಧ್ವನಿಮಾ ತತ್ವ ಸಾಮಾನ್ಯವಾದುದು. ವಿಶೇಷವಾಗಿ ಧ್ವನಿಮಾ ಭಿನ್ನತೆ ಎರಡು ಧ್ವನಿಗಳ ಒಂದೇ ಧ್ವನ್ಯಾತ್ಮಕ ಪರಿಸರಕ್ಕೆ ಹೊಂದಿಕೊಂಡಿರುತ್ತದೆ. ಅಲ್ಲದೆ ಈ ಪರಿಸರಗಳು ಅರ್ಥ ಹಾಗೂ ಸನ್ನಿವೇಶ ಆಯ್ಕೆಗೆ ನಿಗದಿಯಾಗಿರುತ್ತದೆ. ಅದು ಏನೇ ಆಗಲೀ ಎರಡು ಧ್ವನಿಗಳು ಒಂದೇ ಆಗಿರುವುದಿಲ್ಲ. ಅಂದರೆ (1) ಸಮಾನ ಧ್ವನಿ ಪರಿಸರಗಳಲ್ಲಿ ಬರದೇ ಇರುವ ಧ್ವನಿಗಳು. (2) ಅರ್ಥ ಸಂಬಂಧ ಇಲ್ಲದೇ ಸಮಾನ ಧ್ವನಿ ಪರಿಸರಗಳಲ್ಲಿ ಬರುವ ಧ್ವನಿಗಳು. ಇವುಗಳಲ್ಲಿ ಮೊದಲ ಪರಿಸರದಲ್ಲಿ ಬರುವ ಧ್ವನಿಯು ಪೂರಕ ಪ್ರಸಾರ (Complementry Distribution) ದಲ್ಲಿರುತ್ತದೆ. ಎರಡನೆಯ ಪರಿಸರದಲ್ಲಿ ಬರುವ ಧ್ವನಿಯು ಸ್ವಚ್ಛಂದ ಪರಿಸರ (Free Variation)ದಲ್ಲಿ ಕಂಡುಬರುತ್ತದೆ. ಇವೆರಡು ಪರಿಸರ ದಲ್ಲಿಯೂ ಯಾವುದೇ ಧ್ವನಿಗಳ ಗುಚ್ಛ ಅವೈದೃಶ್ಯಾತ್ಮಕ ಪ್ರಸಾರದಲ್ಲಿರುತ್ತವೆ. ಇಂತಹ ವೇಳೆಯಲ್ಲಿ ಧ್ವನಿಮಾವೇ ಪರಿಸರಗಳ ಆಯ್ಕೆಯನ್ನು ನಿರ್ಧರಿಸುತ್ತದೆ ಅಥವಾ ಪರಿಸರ ವ್ಯತ್ಯಾಸವನ್ನು ಧ್ವನಿಮಾವೇ ತಿಳಿಸಬಹುದಾಗಿದೆ. ಆದರೆ ಇವು ಅರ್ಥ ವ್ಯತ್ಯಾಸವನ್ನು ಉಂಟುಮಾಡಲಾರವು.

ಅವೈದೃಶ್ಯಾತ್ಮಕ ಪರಿಸರದಲ್ಲಿ ಗಮನಿಸಬೇಕಾದ್ದು ಎರಡು ಧ್ವನಿಮಾಗಳು ಒಂದೇ ತೆರನಾದ ಧ್ವನಿಗಳಾಗಿದ್ದು ಇದರ ಜೊತೆಗೆ ಇತರ ಅವಶ್ಯಕ ಲಕ್ಷಣಗಳು ಅಗತ್ಯ ವಾಗಿವೆ. ಈ ಸಂದರ್ಭದಲ್ಲಿ ಧ್ವನ್ಯಾಂಗಗಳ ವಿಚಾರವು ಗಮನಾರ್ಹವಾದುದು. ಕೆಲವೊಮ್ಮೆ ಸೂತ್ರದನ್ವಯ ಧ್ವನಿಮಾ ವಿಜ್ಞಾನದ ತಂತ್ರಗಳನ್ನು ಪರಿಗಣಿಸಿ ದೊರೆತ ಭಾಷಾಮಾಹಿತಿಯು ವಿಶ್ಲೇಷಣೆಗೆ ಸಾಲದು. ಭಾಷೆಯ ಧ್ವನ್ಯಾತ್ಮಕ ಪರಿಸರವು ಭಿನ್ನಧ್ವನಿಗಳ ಗಣನೆಗೆ ಬಹುಮುಖ್ಯ. ಧ್ವನ್ಯಾತ್ಮಕ ಸೂತ್ರಗಳ ಪ್ರಕಾರ ವೈದೃಶ್ಯಾತ್ಮಕ ಅಂಶಗಳನ್ನು ಹೋಲಿಕೆ ಮಾಡಿದರೆ ಸೇರದ ಧ್ವನಿಗಳ ವೈದೃಶ್ಯ ಸಾಮಾನ್ಯತೆಯನ್ನು ಭಿನ್ನತೆಯಿಂದ ಅರಿಯುವುದು ಬಹು ಸುಲಭ. ಸಂಶೋಧಕನ ಭಾಷಾವಿಶ್ಲೇಷಣೆಯು ಧ್ವನ್ಯಾತ್ಮಕತೆ, ಕ್ಷೇತ್ರಭಿನ್ನತಂತ್ರಗಳನ್ನೂ ವಿಷಯ ವಿನ್ಯಾಸ ವನ್ನೂ, ದತ್ತಸಂಗ್ರಹವನ್ನೂ, ಕ್ಷೇತ್ರಹಂತಗಳನ್ನೂ ಅವಲಂಬಿಸಿರುತ್ತವೆ. ಪ್ರಯೋಗಿ ಕತೆಯೇ ಇದರ ಮಾಪನ, ತತ್ಕಾಲೀನ ಧ್ವನ್ಯಾತ್ಮಕ ವಿವರವು ಧ್ವನಿಮಾ ಸಿದ್ಧಾಂತಕ್ಕೆ ಮೂಲ ಪ್ರೇರಕ. ಈ ಕ್ಷೇತ್ರವಿಧಾನ ಪಠ್ಯಸಂಗ್ರಹವನ್ನು ವೊಟಕುಗೊಳಿಸಬಹು ದಾದ ವ್ಯಾಕರಣದತ್ತದ ವಿಶಿಷ್ಟತೆಯನ್ನು ನಿರೂಪಿಸುತ್ತದೆ. ಧ್ವನಿಮಾ ಚಿಹ್ನೆಗಳಲ್ಲಿ ಸಮನ್ವಯತೆಯನ್ನೂ, ಸಮರ್ಪಕತೆಯನ್ನೂ ಎತ್ತಿತೋರಬಹುದು. ಯಾವುದೇ ಪ್ರಲೇಖ ಚಿಹ್ನೆಗಳು ದೊರೆತರೂ ಅವು ಧ್ವನಿಮಾಗಳನ್ನು ಪ್ರತಿನಿಧಿಸುತ್ತವೆ. ಪ್ರತಿ

ಯೊಂದು ಧ್ವನಿಗಳು ಉಪಧ್ವನಿಗಳ ಪರಿಸರವನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಭಾಷೆಯ ವಿಶ್ಲೇಷಣೆಯಲ್ಲಿ ಧ್ವನಿಮಾ, ಉಪಧ್ವನಿಮಾಗಳ ವಿವರಣೆ ಒಂದು ಒಪ್ಪಿತ ವ್ಯವಸ್ಥೆಯಂತಿರುತ್ತದೆ ಈ ವಿಭಾಗದಲ್ಲಿ ಪ್ರಯೋಗಾತ್ಮಕ ಧ್ವನಿಮಾ ವಿಶ್ಲೇಷಣೆಯನ್ನು ಮೂಲಭೂತ ತತ್ವಗಳಿಗೆ ಅನ್ವಯಿಸಿದಂತೆ ಸಾಮಾನ್ಯ ರೀತಿಯಲ್ಲಿ ಮಾಡಬಹುದು.

(ಇ) ವ್ಯಾಕರಣದತ್ತ ಮತ್ತು ಪಠ್ಯಗಳು

ಪ್ರಾಚೀನ ಭಾಷಾವಿಶ್ಲೇಷಣಾ ಕ್ರಮವಿದು. ಒಂದು ಭಾಷೆಯ ಪೂರ್ಣ ವ್ಯಾಕರಣಾತ್ಮಕ ವಿಶ್ಲೇಷಣೆ ಕ್ಷೇತ್ರಮಾಹಿತಿಯ ಮೇಲೆ ಆಧರಿತವಾಗಿರುವುದಿಲ್ಲ. ದೊರೆಯುವ ಸಂಗ್ರಹಿತ ಪಠ್ಯಗಳು, ಮಾತೃಭಾಷಾ ಮಾಹಿತಿಗಳು ವಿಶ್ಲೇಷಣೆಗೆ ಬಹುಮುಖ್ಯ. ಅಲ್ಲದೆ ಗಮನಾರ್ಹ ವ್ಯತ್ಯಾಸವುಂಟು. ಪಠ್ಯವಿಶ್ಲೇಷಣೆ ಒಂದು ಹಂತವಾದರೆ, ಭಾಷೆಯ ಸಂಧಿ ಬದಲಾವಣಾ ವ್ಯವಸ್ಥೆ ಎರಡನೆಯಹಂತ. ಇವು ಅಸಹಜ ವ್ಯತ್ಯಾಸಗಳು, ಆದರೆ ಅದರಲ್ಲಿನ ಒಂದು ಸಮಸ್ಯೆ ಅರ್ಥಪೂರ್ಣ ಘಟಕ ಮತ್ತು ಧ್ವನಿಮಾ ನಿರ್ಣಯದ ರೀತಿ ಬಹು ಸರಳವಾದುದು. ಇದು ಸಂಪೂರ್ಣ ಸಂಕೀರ್ಣವೂ ಹೌದು, ಸಂಯೋಜಕವೂ ಹೌದು. ಭಾಷಾ ಅಧ್ಯಯನದಲ್ಲಿ ಆಕೃತಿಮಾ ವಿಶ್ಲೇಷಣೆ ಸಂಕೀರ್ಣವಾದುದು ನಿಜ. ಆದರೆ, ಅದರ ರೀತಿ ಮತ್ತು ವಿವರಣೆ ಭಾಷೆಯಿಂದ ಭಾಷೆಗೆ ಭಿನ್ನವಾದುದು. ಯಾವುದೇ ಭಾಷೆಯ ವ್ಯಾಕರಣವಾಗಲಿ ಆಯಾ ಭಾಷಾರಚನೆಯ ಮೇಲೆ ಅವಲಂಬಿತವಾಗಿರುತ್ತದೆ. ಚೈನಾ ಮತ್ತು ಎಸ್ಕಿಮೋ ಭಾಷೆಯ ವ್ಯಾಕರಣ ರಚನೆ ಇದಕ್ಕೆ ಯುಕ್ತ ನಿದರ್ಶನ. ಈ ತೆರನಾದ ವ್ಯಾಕರಣ ವಿಶ್ಲೇಷಣೆ "ಏಕರೂಪತಾ ಸಂಬಂಧ" (Concrete relational) ಎನ್ನುವ ಎಡ್ವರ್ಡ್ ಸಪೀರರ ಮಾತಿಗೆ ಪೂರಕವಾಗಿದೆ. ಭಾಷೆಯಲ್ಲಿ ಪದಗಳ ಸಾಮ್ಯತೆ ಭಿನ್ನ ಯಾದೃಚ್ಛಿಕ ಹಾಗೂ ತಾತ್ವಿಕವಾಗಿರುತ್ತದೆ. ಭಾಷಿಕ ರೂಪಗಳು ಅಥವಾ ಸಂದರ್ಭಗಳು ಹಲವುಬಾರಿ ಅಗತ್ಯವೂ ಹೌದು, ಅನಿವಾರ್ಯ ಕೂಡ. ಭಾಷಾ ಭಿನ್ನತೆಯು ಭಾಷಿಕ ಒಟ್ಟುರಚನೆ, ಸಾಂಸ್ಕೃತಿಕ ಸ್ವರೂಪ, ಭಾಷೆಯ ಪ್ರಭಾವ ಹಾಗೂ ಭಾಷಾ ಸ್ವೀಕರಣ ರೀತಿಗೆ ಅನುಸೂಚಿಯಾಗಿರುತ್ತದೆ.

ಪಠ್ಯದ ಕ್ರಮವೇ ವ್ಯಾಕರಣ ವಿಶ್ಲೇಷಣೆಯ ವಸ್ತು. ವ್ಯಾಕರಣ ವಿಶ್ಲೇಷಣೆಯಲ್ಲಿ ಪ್ರಧಾನವಾಗಿ ಭಾಷಾರಚನೆ ಗಮನಿಸುವ ಅಂಶ. ಇಲ್ಲಿ ನಡೆಸುವ ಭಾಷಿಕ ದತ್ತ ಸಂಗ್ರಹ ಕಾರ್ಯವು ಸ್ವಲ್ಪ ಭಿನ್ನವಾಗಿದೆ. ಭಾಷೆಯ ಇಡೀ ವಾಕ್ಯ, ವಾಕ್ಯವೃಂದ ಮತ್ತು ಅವುಗಳ ಭಿನ್ನರೂಪಗಳನ್ನು ಸಂಗ್ರಹಿಸಬೇಕು. ದತ್ತಸಂಗ್ರಹಣಾ ವಿಧಾನದಲ್ಲಿ ಪೃಚ್ಛಕ ನೀಡುವ ಮಾಹಿತಿಯು ಅರ್ಥಪೂರ್ಣವಾಗಿದ್ದು, ಭಾಷೆಯ ಹೊಸ ಸೃಷ್ಟಿಯ ಪದಗಳೊಂದಿಗೆ ಸಂಬಂಧವನ್ನು ಹೊಂದಿರುತ್ತದೆ. ರೂಪಗಳು ಒಂದಕ್ಕೊಂದು ಭಿನ್ನವಿದ್ದು, ಅರ್ಥವು ಮಾತ್ರ ರೂಪಕ್ಕೆ ಸನ್ನಿವೇಶಕ್ಕೆ ತಕ್ಕಂತೆ ಇರುತ್ತದೆ. ಒಂದು ಆಕೃತಿಮಾ ಭಾಷಾರಚನೆಯಲ್ಲಿ ತನ್ನದೇ ಆದ ವ್ಯಾಕರಣಾತ್ಮಕ ಬೆಳವಣಿಗೆಯನ್ನು

ಹಾಗೂ ತತ್ವಗಳನ್ನು ಹೊಂದಿರುತ್ತದೆ. ಮೊದಮೊದಲು ಭಾಷಾವಿಜ್ಞಾನಿಗಳು ಲ್ಯಾಟಿನ್ ವ್ಯಾಕರಣದ ಆಧಾರದಿಂದ ಅರ್ಥವಿಜ್ಞಾನ ಭಾಷೆಯ ರೂಪಗಳನ್ನು ಸ್ಪಷ್ಟವಾಗಿ ನಿರೂಪಿಸುವ ಅಂಶವೆಂದು ಭಾವಿಸಿದ್ದರು. ಆಧುನಿಕ ಯುರೋಪಿನ ಭಾಷೆಗಳಲ್ಲಿ ಸಾಹಿತ್ಯರೂಪಗಳು ಹೆಚ್ಚಾಗಿ ಪದ ವಿಂಗಡನೆಯ ಮೇಲೆ ಆಧರಿತವಾಗಿದೆ. ಅಂದರೆ ಭಾಷೆಯಲ್ಲಿ ಲಿಂಗ, ವಚನ, ವಿಭಕ್ತಿ, ಕಾಲಸೂಚಕ ಪ್ರತ್ಯಯಗಳು, ಧ್ವನಿರೂಪಗಳು ಬಹುಮುಖ್ಯ. ವ್ಯಾಕರಣ ವರ್ಗೀಕರಣವು ರೂಪಗಳ ರಚನೆಗೆ ಹೊಂದಿಕೊಂಡಿದೆ. ಇದರ ಜೊತೆಗೆ ಭಾಷೆಯನ್ನು ಆಡುವವರ ಸಾಂಸ್ಕೃತಿಕ ಮಟ್ಟ ಮತ್ತು ರೀತಿಯನ್ನು ಅವಲಂಬಿಸಿರುತ್ತದೆ. ಈ ನಿಟ್ಟಿನಲ್ಲಿ ಬೋವಾಸನ ಭಾಷಾವೈಜ್ಞಾನಿಕ ಸಾಧನೆ ಅಪರಿಮಿತವಾದುದು. ಶಾಸ್ತ್ರೀಯ ವ್ಯಾಕರಣಗಳು ಸಾರ್ವತ್ರಿಕವಾದವುಗಳಲ್ಲ. ಇದಕ್ಕೆ ಮುಖ್ಯಕಾರಣ ಭಾಷೆಯ ಆಂತರಿಕ ರಚನೆಗಳ ಭಿನ್ನತೆ, ಸಾಂಸ್ಕೃತಿಕ ಪ್ರಗತಿ ಮತ್ತು ಭಾಷೆಯ ಸಂಬಂಧವನ್ನು ರೂಪಗಳ ಹೊಂದಾಣಿಕೆಯಿಂದ ನಿರ್ಧರಿಸುವುದು. ತರುವಾಯ ಬೋವಾಸ್‌ನ ವಿದ್ಯಾರ್ಥಿಗಳೇ ಭಾಷೆಯ ಈ ಸಿದ್ಧಾಂತಕ್ಕೆ ಅನುಸಿದ್ಧಾಂತವನ್ನು ತಂದರು. ಭಾಷಾ ವಿಶ್ಲೇಷಣೆಯಲ್ಲಿ, ಅದರಲ್ಲೂ ವ್ಯಾಕರಣ ವಿಭಜನೆಯಲ್ಲಿ ಸಾಂಸ್ಕೃತಿಕ ಕಲ್ಪನಾ ಸಂಬಂಧವು ಬಹುಮುಖ್ಯ ವಿಚಾರ. ಬೋವಾಸ್‌ಕ್ಷೇತ್ರ ವಿಧಾನಗಳಲ್ಲಿ ಮಾಹಿತಿ ಸಂಗ್ರಹಣಾ ಹಂತವು ಪ್ರಮುಖವಾದುದು. ಹಾಗಾಗಿ ಮಾಹಿತಿ ಸಂಗ್ರಹಣೆಯಲ್ಲಿ ಪಠ್ಯ ಹಾಗೂ ವ್ಯಾಕರಣ ಗಮನಾರ್ಹ ವಿಚಾರ. ಭಾಷಾ ಸಮೀಕ್ಷೆ ಹಾಗೂ ವಿಶ್ಲೇಷಣೆಯು ಮಾಹಿತಿಗಳ ಮೇಲೆ ಹೊಂದಿಕೊಂಡಿದೆಯೇ ಹೊರತು ಭಾಷಾ ಸಾಮಾನ್ಯ ವಿಚಾರಗಳು ಮುಖ್ಯವಲ್ಲ. ಕ್ಷೇತ್ರ ನಿಯೋಜಕನ ಉದ್ದೇಶ ಅಗತ್ಯ ಮಾಹಿತಿ ಸಂಗ್ರಹಣೆ, ಅವುಗಳ ಸಂರಕ್ಷಣೆ ಹಾಗೂ ವಿಶ್ಲೇಷಿಸುವ ರೀತಿ, ಸಪ್ರಮಾಣ ಭಾಷಿಕದತ್ತ ಮತ್ತೆ ಅವುಗಳ ರೂಪಾವಳಿ ಪ್ರತ್ಯಯೀಕರಣವೂ ಅಷ್ಟೇ ಮುಖ್ಯ. ಪುನರಾವರ್ತನೆ, ಸೀಮಿತ ಪ್ರಸಾರ, ಪ್ರಯೋಗದಲ್ಲಿರದ ಮಾತುಗಳು ಭಾಷಾ ಅಧ್ಯಯನಕ್ಕೆ ಮುಕ್ತದತ್ತವಲ್ಲ.

(ಈ) ಅರ್ಥ ಮತ್ತು ವಾಕ್ಯ ಮಾಹಿತಿ

ಕ್ಷೇತ್ರ ವಿಧಾನಗಳಲ್ಲಿ ಇದೊಂದು ಪ್ರಗತಿಯ ವಿಧಾನ. ಧ್ವನ್ಯಾತ್ಮಕ ಹಾಗೂ ವ್ಯಾಕರಣ ದತ್ತಸಂಗ್ರಹದ ಕ್ರಮಕ್ಕೆ ಪ್ರತ್ಯಕ್ಷ ಸಂಬಂಧವನ್ನು ಹೊಂದಿರುವ ವಿಶ್ಲೇಷಣಾ ಮಾದರಿಯಿದು. ವಾಂಶಿಕ ಮಾಹಿತಿಗಳ ವಿಶ್ಲೇಷಣೆಯಲ್ಲಿ ಅರ್ಥ ಸದಾ ಸಂಬಂಧವನ್ನು ಸ್ಪಷ್ಟವಾಗಿ ತೋರಬಲ್ಲದು. ಅರ್ಥ ಮಾಹಿತಿಯಷ್ಟೇ ಮುಖ್ಯವಾದದ್ದು ಭಾಷೆಯ ಅರ್ಥಪೂರ್ಣ ವಾಕ್ಯಗಳು, ವಿಶ್ಲೇಷಣೆ ಮತ್ತು ಸಿದ್ಧಾಂತಗಳಲ್ಲಿ ಇಂತಿಷ್ಟೇ ಸಂಬಂಧವನ್ನು ಹೊಂದಿಲ್ಲ. ಇಂದಿಗೂ ಭಾಷಾ ವಿಜ್ಞಾನಿಗಳು ಕ್ಷೇತ್ರಕಾರ್ಯದಲ್ಲಿ ಅರ್ಥವನ್ನು ಯಾವ ಹಂತದಲ್ಲಿ ಗಮನಿಸಬೇಕು, ಅನ್ವಯಿಸಬೇಕು, ಅವುಗಳ ಪರಿಸರ ಹಾಗೂ ರಚನೆಗಳ ಬಗ್ಗೆ ಒಮ್ಮತಕ್ಕೆ ಬಂದಿಲ್ಲ. ಕ್ಷೇತ್ರತಜ್ಞರು ತಮ್ಮ ಇಂಗಿತವನ್ನು

ಭಾಷೆಯ ರಚನೆಗೆ ಸೀಮಿತಪಡಿಸಿಕೊಂಡಿಲ್ಲ. ಅರ್ಥಮಾಹಿತಿಯು ಮೊದಮೊದಲು ಭಾಷಿಕ ರಚನೆಯನ್ನು ಮಾತ್ರ ಅನ್ವಯಿಸಿಕೊಂಡಿದ್ದರೆ, ಮುಂದೆ ಸಂದರ್ಭ ಮತ್ತು ರಚನೆಯನ್ನೂ ಒಳಗೊಂಡಿದೆ. ಹ್ಯಾರೀಸ್ 1948 ರಲ್ಲಿ ಕ್ಷೇತ್ರ ಭಾಷಾ ವಿಶ್ಲೇಷಣೆಯಲ್ಲಿ ಅರ್ಥ ವಿವೇಚನೆಯನ್ನು ತನ್ನದೇ ಆದ ರೀತಿಯಲ್ಲಿ ವಿವರಿಸಿ, ಅರ್ಥವಿಜ್ಞಾನದ ಅಗತ್ಯವನ್ನು ಭಾಷಾ ಅಧ್ಯಯನದಲ್ಲಿ ತೋರಿಸಿಕೊಟ್ಟ. ಭಾಷಾವಿಜ್ಞಾನಿಗಳು ಅರ್ಥವನ್ನು ಪದರೂಪಗಳಿಗೆ ಅನ್ವಯಿಸಿಕೊಂಡು ವಿಶ್ಲೇಷಣೆ ಮಾಡಿದರು. ಆದರೆ ಮಾನವಶಾಸ್ತ್ರಜ್ಞರು ಅರ್ಥವನ್ನು ಸಾಮಾಜಿಕ ಸಾಮ್ಯತೆಯೊಂದಿಗೆ ವಿವರಿಸಿದರು. ಸಹಜವಾಗಿ ಭಾಷಾ ವೈಜ್ಞಾನಿಕ ವಿಶ್ಲೇಷಣೆಯು ಕಣ್ಣಿಗೆ ಕಾಣುವ, ಕಿವಿಗೆ ಕೇಳುವ ಹಾಗೂ ಅರ್ಥವಾಗುವ ಭಾಷಿಕ ಸಾಮಗ್ರಿಯನ್ನು ವಿಶ್ಲೇಷಿಸುತ್ತದೆ.

ಕ್ಷೇತ್ರಕಾರ್ಯದಲ್ಲಿ ಸಮಸ್ಯೆಗಳು

ಕ್ಷೇತ್ರಕಾರ್ಯದಲ್ಲಿ ನಿರತನಾದ ಸಂಶೋಧಕ ಹಲವಾರು ಸಮಸ್ಯೆಗಳನ್ನು ನಿವಾರಿಸಿಕೊಳ್ಳಬೇಕು. ಅಂತಹ ಸಮಸ್ಯೆಗಳು ಸೂಕ್ಷ್ಮವೂ ಸಮರ್ಪಕವೂ ಆಗಿರುತ್ತವೆ. ಅವನ್ನೇ ಕ್ಷೇತ್ರ ಸಮಸ್ಯೆಗಳೆನ್ನುವುದು. ಕ್ಷೇತ್ರ ಸಮಸ್ಯೆಗಳಲ್ಲಿ ಅನೇಕ ವಿಧಾನಗಳು ಉಂಟು. ಭಾಷಿಕ ಮತ್ತು ಸಾಂಸ್ಕೃತಿಕ ಸಮಸ್ಯೆ ಕ್ಷೇತ್ರ ಕಾರ್ಯದಲ್ಲಿ ಸರ್ವೇಸಾಮಾನ್ಯ. ಭಾಷಾ ವಿಜ್ಞಾನ ಹಾಗೂ ಮಾನವ ಶಾಸ್ತ್ರದಲ್ಲಿ ಕ್ಷೇತ್ರ ಸಮಸ್ಯೆಗಳ ವಿಂಗಡನೆ ವಿಶಿಷ್ಟವಾಗಿದೆ. ಭಾಷಾವಿಜ್ಞಾನಿ ಭಾಷೆಯ ರಚನೆ ಮತ್ತು ಕಾರ್ಯಾತ್ಮಕತೆಯನ್ನು ಗಮನಿಸಿದರೆ, ಮಾನವಶಾಸ್ತ್ರಜ್ಞರು ಸಾಂಸ್ಕೃತಿಕತೆ ಮತ್ತು ಚಾರಿತ್ರಿಕತೆಯನ್ನೂ ಗಮನಿಸಿದ್ದಾರೆ. ಭಾಷಾವಿಜ್ಞಾನ ಮತ್ತು ಮಾನವಶಾಸ್ತ್ರೀಯ ರೀತ್ಯ ಕ್ಷೇತ್ರ ಸಮಸ್ಯೆಗಳನ್ನು ಮೂರು ರೀತಿಯಲ್ಲಿ ವಿವರಿಸಬಹುದು.

(ಅ) ಚಾರಿತ್ರಿಕ ಸಮಸ್ಯೆಗಳು (Historical problems)
(ಆ) ರಚನಾತ್ಮಕ ಸಮಸ್ಯೆಗಳು (Structural problems)
(ಇ) ಕಾರ್ಯಾತ್ಮಕ ಸಮಸ್ಯೆಗಳು (Functional pıoblems)

ಚಾರಿತ್ರಿಕ ಸಮಸ್ಯೆಗಳು ಭಾಷೆಯ ವಂಶ ಪರಸ್ಪರ ಸಂಬಂಧದ ಮೂಲಕ ತಿಳಿಯುತ್ತವೆ. ಜೈವಿಕತೆ, ಐತಿಹಾಸಿಕ ಸಂಬಂಧ, ವಾಂಶಿಕ ಭಾಷಿಕ ಸಮುದಾಯ ಹಾಗೂ ಸಾಂಸ್ಕೃತಿಕ ಭಾಷಿಕ ಸಂಸರ್ಗ ಇದಕ್ಕೆ ಕಾರಣವಾಗುತ್ತದೆ. ಚಾರಿತ್ರಿಕ ಸಮಸ್ಯೆಯಲ್ಲಿ ಭಾಷೆಯ ವಾಂಶಿಕತೆಯು ಕಾಲಾನುಗತಿಯಲ್ಲಿ ಭಾಷಿಕ ಸಮುದಾಯಗಳ ವಿಭಜನೆ ಹಾಗೂ ನೈಸರ್ಗಿಕ ಭಾಷಾಪ್ರಸರಣಕ್ಕೆ ಪೂರಕವಾಗಿರುತ್ತದೆ. ರಚನಾತ್ಮಕ ಸಮಸ್ಯೆಗಳು ನಿರ್ದಿಷ್ಟ ಭಾಷೆಯ ವಿಶ್ಲೇಷಣೆಗೆ ಹಾಗೂ ಭಾಷೆಯನ್ನು ಪರಸ್ಪರ ಅರ್ಥ ಮಾಡಿಕೊಳ್ಳುವ ಚಟುವಟಿಕೆಯಲ್ಲಿ ಸೇರಿಕೊಂಡಿರುತ್ತವೆ. ಭಾಷಾವಿಜ್ಞಾನಿ ಮೂಲಭೂತವಾಗಿ ಭಾಷೆಗಳ ಪ್ರಭಾವ, ಸಾಂಸ್ಕೃತಿಕ ಸಿದ್ಧಾಂತ ಮತ್ತು ಮನೋವೈಜ್ಞಾನಿಕ ವಿವೇಚನೆಯನ್ನು ಮಾಡುವವನಾಗಿರುತ್ತಾನೆ. ಕಾರ್ಯಾತ್ಮಕ ಸಮಸ್ಯೆಗಳಲ್ಲಿ ಭಾಷೆಯ

ಸಾಂಸ್ಕೃತಿಕ ಸ್ವರೂಪ, ಅನ್ಯೋನ್ಯ ಕಾರಣತ್ವ ಸಂಬಂಧ ಅಥವಾ ಸಾಂಸ್ಕೃತಿಕಾಂಶಗಳು ಮತ್ತು ಅರ್ಥರಚನೆಯ ಪರಸ್ಪರ ಹೊಂದಾಣಿಕೆಯನ್ನು ಕಾಣುತ್ತೇವೆ. ಭಾಷೆಯ ಅರ್ಥರಚನಾರೂಪ, ಪದಕೋಶ ಹಾಗೂ ವ್ಯಾಕರಣ ರಚನೆಯನ್ನವು ನಿರ್ಧರಿತ ವಾಗುತ್ತದೆ. ಕ್ಷೇತ್ರ ಭಾಷಾವಿಜ್ಞಾನಿಯು ಯಾವುದೇ ಭಾಷಾ ವಿಶ್ಲೇಷಣೆ ರಚನಾತ್ಮಕ ಹಾಗೂ ಕಾರ್ಯಾತ್ಮಕ ಅಂಶಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಸಾಂಸ್ಕೃತಿಕಾಭ್ಯಾಸಿಗಳ ಮೂಲೋದ್ದೇಶವೂ ಸಂಸ್ಕೃತಿಯ (ಸಮಾಜ) ರಚನೆ ಮತ್ತು ಕಾರ್ಯವನ್ನು ವಿವರಿಸುವಂತಿರುತ್ತದೆ. ಭಾಷಾ ವಿಶ್ಲೇಷಣೆಯಲ್ಲಿ ರಚನಾತ್ಮಕ ಮತ್ತು ಕಾರ್ಯಾತ್ಮಕ ವರ್ಗಗಳು ವಿಶೇಷವಾಗಿದ್ದು, ಏಕಕಾಲಿಕ ಹಾಗೂ ದ್ವಿಕಾಲಿಕ ಭಾಷಾ ಅಧ್ಯಯನದ ಹೆಗ್ಗುರಿಗಳಾಗಿವೆ ಯಾವುದೇ ಭಾಷಾ ವಿಶ್ಲೇಷಣೆಯಲ್ಲಿ ಈ ತೆರನಾದ ಸಮಸ್ಯೆಗಳನ್ನು ನೇರವಾಗಿ ಕಾಣದಿದ್ದರೂ ಸಂದರ್ಭ, ಸ್ಥಾನ, ಕಾಲ ಸಮಸ್ಯೆಯ ನಿರ್ಣಯದಲ್ಲಿ ಬಹುಮುಖ್ಯವಾದುವು.

ದತ್ತ ಸಂಗ್ರಹಣಾ ತಾಂತ್ರಿಕ ಸಲಕರಣೆಗಳು

ಕ್ಷೇತ್ರ ವಿಧಾನದಲ್ಲಿ ದತ್ತಸಂಗ್ರಹಕ್ಕೆ ಬಳಸಿಕೊಳ್ಳುವ ನೂತನ ವಿದ್ಯುತ್ ಉಪಕರಣಗಳ ಪಾತ್ರ ಬಹು ಹಿರಿದಾದುದು. ಇಂದು ಮುಖ್ಯವಾಗಿ ಟೇಪ್ ರೆಕಾರ್ಡರ್, ಸ್ವಯಂಚಾಲಿತ ಪುನರ್‌ರೆಕಾರ್ಡರ್, ಐಸೋಲೇಟರ್, ಸೌಂಡ್ ಸ್ಪೆಕ್ಟ್ರೋಗ್ರಾಫರ್ ಹಾಗೂ ಅಯಸ್ಕಾಂತೀಯ ರೆಕಾರ್ಡರ್‌ಗಳನ್ನು ಕ್ಷೇತ್ರಕಾರ್ಯದಲ್ಲಿ ಸಂಶೋಧಕ ಬಳಸುತ್ತಿದ್ದಾನೆ. ಟೇಪ್‌ರೆಕಾರ್ಡರ್ ಇಲ್ಲವೇ ವೈರ್‌ರೆಕಾರ್ಡರ್ ಗಳನ್ನು ಬಹಳ ಸುಲಭದಲ್ಲಿ ದತ್ತ ಸಂಗ್ರಹಕ್ಕೆ ಬಳಸಿಕೊಳ್ಳಬಹುದು. ಕ್ಷೇತ್ರದಲ್ಲಿ ದತ್ತದ ಸ್ಪಷ್ಟ ಉಚ್ಚಾರಣೆಯನ್ನು ಅರಿಯುವುದು ಇದರಿಂದ ಸಾಧ್ಯ. ಸಂಶೋಧಕ ಪೃಚ್ಛಕನಿಂದ ದತ್ತವನ್ನು ರೆಕಾರ್ಡ್‌ಮಾಡಿಕೊಂಡ ಅನಂತರ ಅವನ್ನು ಪ್ರಲೇಖಿಸಿ ಕೊಳ್ಳಲು ಅನುಕೂಲ. ಭಾಷಾ ಮಾಹಿತಿಯ ಅಸ್ಪಷ್ಟತೆಯನ್ನು ಸ್ಪಷ್ಟಪಡಿಸುವಲ್ಲಿ ಇಂತಹ ವಿದ್ಯುತ್ ಸಲಕರಣೆ ಬಹಳ ಸಹಾಯಕವಾಗಿವೆ. ವಾಕ್ಯ, ಕಥೆ, ಸಾಂಸ್ಕೃತಿಕ ಮಾಹಿತಿಗಳಿಗೂ ಯುಕ್ತವಾದ ಸಲಕರಣೆಗಳಿವು. ಓಗ್ಲಿನ್ ಎಂಬ ಭಾಷಾವಿಜ್ಞಾನಿ ತನ್ನ ವಿದ್ಯಾರ್ಥಿಗಳು ರೆಕಾರ್ಡರ್‌ನ್ನು ಬಳಸಿಕೊಂಡ ಬಗೆಯನ್ನು ತನ್ನ ಉಪಭಾಷಾ ಅಧ್ಯಯನದಲ್ಲಿ ತಿಳಿಸಿದ್ದಾನೆ. ಕ್ಷೇತ್ರಕಾರ್ಯದಲ್ಲಿ ವಿವಿಧ ಸ್ವಯಂ ಚಾಲಿತ ಯಂತ್ರಗಳು, ವಿದ್ಯುತ್ ಉಪಕರಣಗಳು, ಹಾಗೂ ಇನ್ನಿತರ ವೈಜ್ಞಾನಿಕ ಯಂತ್ರ ಗಳನ್ನೂ ಉಪಯೋಗಿಸಬಹುದೆಂಬುದನ್ನು ತೋರಿಸಿಕೊಟ್ಟರು. ಸೂಕ್ಷ್ಮವಾದ ಭಾಷಾ ಭಿನ್ನತೆಯನ್ನು ಸುಲಭವಾಗಿ ಅರಿಯಬಹುದು. ಸೌಂಡ್‌ಸ್ಪೆಕ್ಟ್ರೋಗ್ರಾಫರ್‌ನಿಂದ ಭಾಷಿಕದತ್ತ ಪ್ರಸಾರವನ್ನು ನಿರ್ಧರಿಸಬಹುದು. ಉಚ್ಚಾರಣೆ ಹಾಗೂ ಅವುಗಳ ಸ್ಪಷ್ಟತೆ ವಿವರಣಾತ್ಮಕವಾಗಿ ತಿಳಿಯಲು ಇವುಗಳಿಂದ ಸಾಧ್ಯ. ಧ್ವನಿಗಳ ಏರಿಳಿತ, ಉಚ್ಚಾರಣಾ ವಿನ್ಯಾಸ, ಧ್ವನಿಗಳ ರಾಗಾತ್ಮಕ ಲಕ್ಷಣಗಳನ್ನು ವಿವರಿಸುತ್ತದೆ. ಸ್ಪೀಚ್

ಸ್ಟ್ರೆಚರ್ (Speech stretcher) ಮತ್ತೊಂದು ವೈಜ್ಞಾನಿಕ ಸಲಕರಣೆ. ಮಾಹಿತಿ ಸಂಗ್ರಹದ ವೈಜ್ಞಾನಿಕತೆಯನ್ನು ಈ ನೂತನ ಸಲಕರಣೆಗಳು ಹೆಚ್ಚಿಸುತ್ತವೆ. ಆಧುನಿಕ ಸಲಕರಣೆಗಳ ಉಪಯೋಗ ಹಾಗೂ ವೈಜ್ಞಾನಿಕ ಪರಿಶ್ರಮ ಮಾಹಿತಿ ಸಂಗ್ರಹಕ್ಕೆ ಅತ್ಯಗತ್ಯ.

ಕ್ಷೇತ್ರ ತಂತ್ರಗಳು (Field Techniques)

ಕ್ಷೇತ್ರ ಕಾರ್ಯದಲ್ಲಿ ಮಾನವ ಮತ್ತು ಭಾಷಾತಜ್ಞರು ದತ್ತಸಂಗ್ರಹದ ಅನೇಕ ತಂತ್ರಗಳನ್ನು ಸೂಚಿಸಿದ್ದಾರೆ. ಕ್ಷೇತ್ರತಂತ್ರಗಳ ಲಕ್ಷಣ, ಕಾರ್ಯ ಹಾಗೂ ತಂತ್ರಗಳ ಉಪಯೋಗವು ದತ್ತಸಂಗ್ರಹಣೆಗೆ ಯೋಗ್ಯವಾದುದು. ಸಂಶೋಧಕನ ಯೋಗ್ಯತೆಗೆ ತಕ್ಕಂತೆ ಮಾಹಿತಿ ಸಂಗ್ರಹವಾಗುತ್ತದೆ. ಇಂತಹ ಕ್ಷೇತ್ರ ತಂತ್ರಗಳು ಸಮಯ ಹಾಗೂ ಸಂಶೋಧಕನ ಶ್ರಮವನ್ನು ನಿವಾರಿಸುವುದರ ಜೊತೆಗೆ ಭಾಷೆಯ ವೈಜ್ಞಾನಿಕ ವಿಶ್ಲೇಷಣೆಯನ್ನೂ ನಿರೂಪಿಸಲು ಸಹಾಯವಾಗುತ್ತದೆ. ಕ್ಷೇತ್ರದಲ್ಲಿ ದತ್ತಸಂಗ್ರಹದ ರೀತಿ, ಮಾಹಿತಿಯ ಲಕ್ಷಣ ಮತ್ತು ದತ್ತದ ಉಪಯೋಗವನ್ನು ಆಧರಿಸಿ ಕ್ಷೇತ್ರತಂತ್ರಗಳನ್ನು ಮೂರು ಗುಂಪುಗಳಲ್ಲಿ ಗುರುತಿಸಬಹುದು.

(i) ಮೂಲಪದಗಳ ಸಂಗ್ರಹ (Collection of basic Vocabulary)
(ii) ಉಪಭಾಷೆಗಳ ಅಂತರ (Dialect Distance)
(iii) ಭಾಷಾ ಭೂಗೋಳ (Dialect Geography)

(i) ಮೂಲ ಪದಗಳ ಸಂಗ್ರಹ

ಬಹುಶಃ ಸರಳ ಉಪಯೋಗಕರ ಭಾಷಿಕಯೋಜನೆ ಇದು. ಕ್ಷೇತ್ರಕಾರ್ಯದಲ್ಲಿ ಭಾಷಾಶೋಧಕ ಅಲ್ಪ ವೇಳೆಯಲ್ಲಿ ಉತ್ತಮ ಭಾಷಿಕ ಮಾಹಿತಿಯನ್ನು ಸಂಗ್ರಹಿಸಬಹುದು. ಸಂಶೋಧಕ ಧ್ವನಿ ಮತ್ತು ಧ್ವನಿವಿಭಜನೆಗಳ ಸಾಮರ್ಥ್ಯವನ್ನೂ ಸಹಜ ದತ್ತದ ಅರಿವನ್ನೂ ಹೊಂದಿದವನಾಗಿರಬೇಕು. ಭಾಷೆಯಲ್ಲಿ ಮೂಲ ಪದಗಳೆಂದರೆ ಹೊಸ ಭಾಷಿಕ ರೂಪಗಳಲ್ಲ. ಭಾಷೆಯಲ್ಲಿ ಸಂದು ಬಂದಿರುವ ಪ್ರಾತಿನಿಧಿಕ ಪದಗಳವು. ಸಾಂಸ್ಕೃತಿಕ ಪದಗಳಿಗೂ ಮೂಲಪದಗಳಿಗೂ ಅತಿ ಹೆಚ್ಚಿನ ಅಂತರವಿಲ್ಲ. ಅವುಗಳ ಸ್ವರೂಪ, ಕಾರ್ಯ ಎರಡರಲ್ಲೂ ಒಂದೇ. ದೈನಂದಿನ ವ್ಯವಹಾರದಲ್ಲಿ ಮೂಲಪದಗಳ ಪಾತ್ರ ಬಹು ಮುಖ್ಯ. ವ್ಯಕ್ತಿಯ ಸಾಮಾಜಿಕತೆಗೆ ಹೊಂದಿಕೊಂಡಂತೆ ಭಾಷೆಯ ಸಾಂಸ್ಕೃತಿಕ ಪದಗಳಿದ್ದರೆ ಮೂಲ ಪದಗಳು ಭಾಷಾ ರಚನಾ ಚೌಕಟ್ಟಿಗೆ ಹೊಂದಿಕೊಂಡಿರುತ್ತದೆ. ಭಾಷೆಯಲ್ಲಿ ಮೂಲಪದಗಳನ್ನು ನಿರ್ಧರಿಸುವಾಗ ಭಾಷಾಸ್ವೀಕರಣ, ವಾಂಶಿಕ ಸಂಬಂಧ, ಜೈವಿಕ ಸಂಬಂಧ ಹಾಗೂ ರಚನಾ ಸಂಬಂಧಗಳು ಗಮನಾರ್ಹ ಅಂಶಗಳು. ಭಾಷಾ ಸ್ವೀಕರಣ, ಭಾಷಾ ಸಾಮ್ಯತೆ ಮತ್ತು ವಾಂಶಿಕತೆಗೆ ನಿರ್ಬಂಧಿತವಾದುದಲ್ಲ. ಇತ್ತೀಚಿನ ಭಾಷಾ ಅಧ್ಯಯನಗಳಲ್ಲಿ ಮೂಲಪದಗಳು ಮುಖ್ಯಪಾತ್ರ

ವನ್ನು ಗಿಟ್ಟಿಸಿಕೊಂಡಿವೆ. ಕ್ಷೇತ್ರ ಭಾಷಾವಿಜ್ಞಾನದಲ್ಲಿ ಸ್ವಾಡಿಷ್‌ನ ಇನ್ನೂರು ಮೂಲ ಶಬ್ದಗಳ ಪದಾವಳಿಯು ಒಂದು ಮೈಲಿಗಲ್ಲು. ಭಾಷಾ ಸಮುದಾಯದಲ್ಲಿ ಹೆಚ್ಚು ಪ್ರಚಲಿತವಿರುವ ಪ್ರಾಥಮಿಕ, ಸಾರ್ವತ್ರಿಕ ಶಬ್ದಗಳಿವೆ. ಈತನ ಪದಾವಳಿಯಲ್ಲಿ ಪದಗಳ ಧಾತು, ಪ್ರಕೃತಿ ಮತ್ತಿತರ ಭಾಷಿಕ ರೂಪಗಳು ಸೇರಿವೆ. ಈ ವಿಧಾನದಿಂದ ದತ್ತಸಂಗ್ರಹ ಮಾಡುವಲ್ಲಿ ಯಾವುದೇ ನಿರ್ಣಾಯಕ ಅಂಶಗಳನ್ನಾಗಲೀ, ಬದಲಾವಣೆಯ ಕಾರಣಗಳನ್ನಾಗಲೀ ತಿಳಿಸದಿದ್ದರೂ, ಮೂಲಪದಗಳ ಸಂಗ್ರಹ ಕ್ಷೇತ್ರಕಾರ್ಯದಲ್ಲಿ ಒಂದು ಪ್ರಮುಖ ತಂತ್ರವಾಗಿದೆ. ಸಾಂಸ್ಕೃತಿಕ, ಭೌಗೋಳಿಕ ಭಾಷಾ ಅಂತರವನ್ನು ಉಳಿಸಿಕೊಂಡ ತಂತ್ರವಿದು.

(ii) ಉಪ ಭಾಷೆಗಳ ಅಂತರ :

ಕ್ಷೇತ್ರಭಾಷಾ ವಿಜ್ಞಾನದಲ್ಲಿ ಭೌಗೋಳಿಕ ಕ್ಷೇತ್ರ ಬಹು ಮುಖ್ಯ. ಸಂಶೋಧಕ ಕ್ಷೇತ್ರಕಾರ್ಯದಲ್ಲಿ ಭಾಷಾ ಮಾಹಿತಿಯನ್ನು ಸಂಗ್ರಹಿಸಲು ರೆಕಾರ್ಡಿಂಗ್ ಯಂತ್ರಗಳನ್ನು ಬಳಸಿಕೊಳ್ಳುವುದು ಸಹಜ. ಉಪಭಾಷೆಗಳ ನಡುವಿರುವ ಅಂತರವನ್ನು ಅಳೆಯುವ ಸಾಮರ್ಥ್ಯ ಈ ಯಂತ್ರಗಳಿಗೆ ಉಂಟು. ಪರಸ್ಪರ ಮಾತಿನ ಅರ್ಥವಂತಿಕೆಯ ಸಾಮರ್ಥ್ಯ ಅಥವಾ ಪರಸ್ಪರ ಅರ್ಥವಂತಿಕೆಯ ಅಸಾಮರ್ಥ್ಯದ ಸಂಖ್ಯೆಯ ಸ್ಥಾನದ ರೀತ್ಯ ಉಪಭಾಷೆಗಳ ಅಂತರವನ್ನು ಸ್ಪಷ್ಟವಾಗಿ ತಿಳಿಸಬಹುದು. ಇದು ಉಪಭಾಷೆ ಮತ್ತು ಭಾಷೆಯ ಭಿನ್ನತೆಯ ಮಾಪನವೂ ಹೌದು. ಈ ತೆರವಾದ ದತ್ತಸಂಗ್ರಹಣೆ ಪ್ರತಿಯೊಂದು ಭಾಷೆ, ಉಪಭಾಷೆಯ ಅಂತರವನ್ನು ಕಾಯ್ದಿರುತ್ತದೆ. ಭಾಷೆ ಮತ್ತು ಉಪಭಾಷೆಗಳ ಅಂತರವು ಅಷ್ಟೇನೂ ಸೂಕ್ಷ್ಮವಲ್ಲ. ಭಾಷೆಯ ಪರಸ್ಪರ ಅರಿವಿನ ಸಾಮರ್ಥ್ಯ ಎಷ್ಟೋ ಸಲ ಭಾಷಿಕ ವರ್ಗಗಳ ಮೇಲೆ ಪ್ರಭಾವ ಬೀರಿರುತ್ತದೆ. ಈ ಕಾರಣವೇ ಭಾಷೆ ಮತ್ತು ಉಪಭಾಷೆಗಳ ಪರಸ್ಪರ ಸಂಬಂಧಕ್ಕೂ ಎಡೆಮಾಡಿಕೊಟ್ಟಿದೆ. ಉಪಭಾಷೆಗಳ ಅಂತರವನ್ನು ಮುಕ್ತ ತಂತ್ರಗಳ ಮೂಲಕ ಸ್ಪಷ್ಟಪಡಿಸುವುದೇ ಕ್ಷೇತ್ರ ಭಾಷಾ ವಿಜ್ಞಾನಿಯ ಗುರಿ.

(iii) ಭಾಷಾ ಭೂಗೋಲ :

ಕ್ಷೇತ್ರ ತಂತ್ರಗಳಲ್ಲಿ ಜನಪ್ರಿಯವಾಗಿರುವ ವಿಧಾನವಿದು. ಒಂದು ಭಾಷಾ ಸಮುದಾಯದಲ್ಲಿ ಭಾಷಾ ಪ್ರಬೇಧದ ಪ್ರಸಾರ ಹಾಗೂ ಸಂಯೋಜನೆಯನ್ನೂ ಭಾಷಾ ಭೂಗೋಳ ನಿಖರವಾಗಿ ತಿಳಿಸುತ್ತದೆ. ಭಾಷಾ ಸಮುದಾಯ (Speech Community) ಎಂದರೆ, ಒಂದು ಪ್ರದೇಶದಲ್ಲಿ ಸದಾ ಪರಸ್ಪರ ಭಾಷಾ ಅರಿವಿನ ಸಾಮರ್ಥ್ಯವನ್ನು ಪಡೆದಿರುವುದು. ಭಿನ್ನ ಪ್ರದೇಶಗಳು ಒಂದೇ ಭಾಷಿಕ ಸಮುದಾಯದಲ್ಲಿದ್ದಾಗ ಎಷ್ಟೋವೇಳೆ ಭಾಷೆ/ಉಪಭಾಷೆಯಲ್ಲಿ ಪರಸ್ಪರ ಅರಿವಿನ ಸಾಮರ್ಥ್ಯ ಇರಲಾರದು. ಆದರೆ ಅಂತಹ ಸಂದರ್ಭಗಳಲ್ಲಿ ಸೂಕ್ಷ್ಮಗೆರೆ ಎಳೆದು ಅರಿವಿನ ಅಂತರ

ವನ್ನು ತೋರಿಸಲಾಗದು. ಅಲ್ಲದೆ ನಿಧಾನವಾಗಿ ಉಪಭಾಷೆಗಳ ಪರಸ್ಪರ ಅರ್ಥವಂತಿಕೆ ಕಂಡುಬರುವುದು. ಭಿನ್ನ ಸ್ಥಳಗಳು ಒಂದೇ ಪ್ರದೇಶದಲ್ಲಿದ್ದಾಗ ಅಂತಹ ಭಾಷಾ ಸಮುದಾಯ ಎರಡು ಅಥವಾ ಹಲವು ಭಾಷಾ ಸಮುದಾಯಗಳಾಗಿ ಪರಿವರ್ತಿತ ಗೊಳ್ಳುತ್ತವೆ. ಅಧಿಕ ಸಂಖ್ಯೆಯ ಮಾಹಿತಿ ಸಂಗ್ರಹ ವಿಶೇಷ ಭಾಷಿಕವರ್ಗದ ಧ್ವನಿ ಮತ್ತು ಪದದ ಅಂತರವನ್ನು ಒಂದು ಸಮುದಾಯದ ನಡುವೆ ನಿಖರಗೊಳಿಸುತ್ತದೆ. ಈ ವ್ಯತ್ಯಾಸವನ್ನು ಸೀಮಾರೇಖೆಗಳ ಮೂಲಕ ಸುಲಭವಾಗಿ ಪತ್ತೆಮಾಡಬಹುದು. ಭಾಷಾಭೂಗೋಳ ತಂತ್ರದ ಅನ್ವಯ ಭಾಷಾಕೇಂದ್ರ ಭಾಷಾ ಪ್ರಸರಣ ಹಾಗೂ ಭಾಷಾ ಸಂಯೋಜನೆಯನ್ನೂ, ಅಲ್ಲದೆ ಭಾಷಾ ಐತಿಹಾಸಿಕ ಮಾಹಿತಿ, ಜನಸಂಖ್ಯಾ ಬೆಳವಣಿಗೆ ಸಾಂಸ್ಕೃತಿಕ ವಿಕಾಸತೆಯನ್ನೂ ವಿವರಿಸಲು ಸಾಧ್ಯ ಉಂಟು. ಸಂಶೋಧಕ ಧ್ವನಿ ವಿಜ್ಞಾನದಲ್ಲಿ ನಿಪುಣನಾಗಿರಬೇಕು. ಹಾಗಿದ್ದಾಗ ಮಾತ್ರ ನೆರೆಹೊರೆ ಭಾಷೆಯ ವ್ಯತ್ಯಾಸವನ್ನು ನಿಖರವಾಗಿ ತಿಳಿಸಲು ಸಾಧ್ಯ.

ಕ್ಷೇತ್ರ ವಿಧಾನದ ಮುಖ್ಯ ಗುರಿ ಭಾಷೆಯ ಸವಿವರ ವಿಶ್ಲೇಷಣೆ. ಭಾಷಾ ವಿಶ್ಲೇಷಣೆಗೆ ಅಗತ್ಯವಾಗಿ ಬೇಕಾಗಿರುವುದು ಆಯಾ ಭಾಷೆಯ ಸಮರ್ಪಕ ದತ್ತ, ಅಧ್ಯಯನಕ್ಕೆ ಅತಿ ಮುಖ್ಯವಾದ ದತ್ತ ಸಂಗ್ರಹಣಾಕಾರ್ಯ ಸಂಶೋಧಕನ ಭಾಷಾ ವಿಶ್ಲೇಷಣಾಯೋಜನೆಗೆ ಯುಕ್ತವಾಗಿರುತ್ತದೆ. ಸಾಮಾಜಿಕ ಪರಿಸರ, ಸಾಂಸ್ಕೃತಿಕ ಅಂತಸ್ತು, ಚಾರಿತ್ರಿಕ ಜನಪ್ರಿಯತೆ, ಭಾಷಾ ಪರಸ್ಪರ ಸಾಮ್ಯತೆ ಹಾಗೂ ಭಾಷಾ ವಿಶೇಷತೆಯನ್ನು ಆಧರಿಸಿ ಕ್ಷೇತ್ರಕಾರ್ಯದಲ್ಲಿ ದತ್ತಸಂಗ್ರಹ ಮಾಡಬೇಕು. ಸನ್ನಿವೇಶ ಗಳ ಹಿಂದೆ ಬಳಸುವ ಮಾತಿನ ಅರ್ಥ ಹಾಗೂ ಭಾಷೆ ಸಾಮಾಜಿಕ ರಚನೆಯಲ್ಲಿ ಹೊಂದಿರುವ ನೇರ ಸಂಬಂಧದ ಹಿನ್ನೆಲೆಯಲ್ಲಿ ದತ್ತ ಸಂಗ್ರಹಿಸಬೇಕು. ಇಂತಹ ಭಾಷಾ ಮಾಹಿತಿಯೇ ವೈಜ್ಞಾನಿಕ ಭಾಷಾ ಅಧ್ಯಯನಕ್ಕೆ ಬೇಕಾಗಿರುವುದು. ಈ ಕಾರಣದಿಂದಲೇ ಭಾಷಾ ವಿಜ್ಞಾನದಲ್ಲಿ ಸಂಶೋಧಕನಿಗೆ ಕ್ಷೇತ್ರಕಾರ್ಯ ಮತ್ತದರ ತಂತ್ರಗಳು ತೀರಾ ಅಗತ್ಯ ಮತ್ತು ಅನಿವಾರ್ಯ. ಪ್ರಾಯೋಗಿಕ ಭಾಷಾ ವಿಜ್ಞಾನ ದಲ್ಲಿ ಭಾಷೆಯನ್ನು ಇಂದಿನ ಜೀವನಕ್ಕೆ ಅಳವಡಿಸಿಕೊಳ್ಳುವಲ್ಲಿ, ಕ್ಷೇತ್ರಕಾರ್ಯದ ಹೆಗ್ಗಳಿಕೆ ಹೆಚ್ಚಿನದು. ಸಾಮಾನ್ಯ ಸ್ತರದಿಂದ ಅಧಿಕೃತ ಮಟ್ಟಕ್ಕೆ ಭಾಷೆಯನ್ನು ಕೊಂಡೊಯ್ಯುವಲ್ಲಿ ಕ್ಷೇತ್ರಕಾರ್ಯದ ಸಹಾಯ ಅನನ್ಯವಾದುದು. ಹೀಗಾಗಿ ಕ್ಷೇತ್ರಕಾರ್ಯ ಮತ್ತು ವಿಧಾನ ಭಾಷಾ ವಿಜ್ಞಾನದ ಒಂದು ಅವಿಭಾಜ್ಯ ಅಂಗವಾಗಿ ಪ್ರಾಮುಖ್ಯತೆ ಪಡೆದುಕೊಂಡಿದೆ. ಇದನ್ನು ಗಮನಿಸಿಯೇ ಸ್ಯಾಮರಿನ್ "ಭಾಷಾಕ್ಷೇತ್ರ ಭಾಷಾ ವಿಜ್ಞಾನಿಯ ಪ್ರಯೋಗಶಾಲೆ" ಎಂದು ಕರೆದಿರುವುದು.

ಆಧಾರ ಪುಸ್ತಕಗಳು

ಕುಳ್ಳಿ, ಜೆ. ಎಸ್. 1971 ವರ್ಣನಾತ್ಮಕ ಭಾಷಾವಿಜ್ಞಾನ, ಸಿರಿಗನ್ನಡ ಪ್ರಕಾಶನ ; ಧಾರವಾಡ

ಕೆಂಪೇಗೌಡ, ಕೆ. 1987 ಭಾಷೆ ಮತ್ತು ಭಾಷಾ ವಿಜ್ಞಾನ ಭಾರತಿ ಪ್ರಕಾಶನ ; ಮೈಸೂರು

Hockett, Charles, F. 1973 A Course in Modern Linguistics, Oxford & IBH Publishing Co. New Delhi. (Second print)

Lounsbury G. Floyd 1953 "Field Methods and Techniques in Linguistics", article in Anthropology Today by Kroeber, A.L. (ed) Chicago

Nayak, H. M. 1967 Kannada Literary and Colloquial, Geeetha Book House, Mysore

ವಾಚನವು ಪೂರ್ಣವ್ಯಕ್ತಿಯನ್ನಾಗಿಸುತ್ತದೆ; ಸಂವಾದವು ಜಾಗ್ರತವ
ನ್ನಾಗಿಸುತ್ತದೆ, ಬರಹವು ನಿರ್ದಿಷ್ಟತೆಯನ್ನೊದಗಿಸುತ್ತದೆ.

ಎಕ್ಕದ ಗಿಡದಲ್ಲಿಯೇ ಜೇನು ಸಿಕ್ಕರೆ ಬೆಟ್ಟದವರೆಗೂ ಏಕೆ ನಡೆಯಬೇಕು ?

—ಶಾಬರ ಭಾಷ್ಯ

ಆಧುನಿಕ ರಾಜಕೀಯ ಮನುಷ್ಯರ ನಡುವಣ ತಿಕ್ಕಾಟವಲ್ಲ ;
ಶಕ್ತಿಕೂಟಗಳ ನಡುವಣ ಹೋರಾಟ.

—ಹೆನ್ರಿ ಆಡಂಸ್

ದೇಶವನ್ನು ಸುತ್ತುವವನ, ವಿದ್ವಜ್ಜನರ ಸೇವೆ ಮಾಡುವವನ ಬುದ್ಧಿ,
ನೀರಿನ ಮೇಲೆ ಬಿದ್ದ ಎಣ್ಣೆಯ ಹನಿಯಂತೆ ವಿಸ್ತಾರವಾಗುತ್ತಾ ಹೋಗುತ್ತದೆ.

—ಮಹಾಭಾರತ

ಒಳಿತನ್ನು ಗುರುತಿಸಿ ತಿಳಿಯುವ ಹದ ಬಂದರೆ ಸಾಕು,
ಜನರ ಬಾಳಿಗೆ ಅದೊಂದೇ ಬೆಳಕು.

—ಸಾಕ್ರಟೀಸ್

ಡಾ. ಜಿ. ಪುರುಷೋತ್ತಮ

ಬುದ್ಧಿಮಾಂದ್ಯತೆ ಹಾಗೂ ಮಾತಿನ ತೊಂದರೆ

ಮಾತು ಬುದ್ಧಿವಂತಿಕೆಯ ಸಂಕೇತ. ಉದಾಹರಣೆಗೆ ಮನುಷ್ಯನನ್ನೇ ಹೋಲುವ ಪ್ರಾಣಿಗಳು ಇವೆ. ಆದರೆ ಅವುಗಳ ಮಿದುಳು ಮನುಷ್ಯನದಕ್ಕೆ ಹೋಲಿಸಲು ಬಹಳ ಕಡಿಮೆ, ಹೀಗಾಗಿ ಬುದ್ಧಿಶಕ್ತಿಯೂ ಕಡಿಮೆ. ಮನುಷ್ಯರಲ್ಲೂ ಬುದ್ಧಿವಂತಿಕೆಯ ಸ್ತರಗಳು ಹಲವು. ವಿಜ್ಞಾನಿಗಳನ್ನು, ಸಾಹಿತ್ಯ ಕಲಾವಿದರನ್ನು ಬುದ್ಧಿವಂತರೆಂದು ಹೆಸರಿಸಿದರೆ ಅವರ ಮಾತನ್ನು ಗಮನಿಸಿ. ವಿಜ್ಞಾನಿಗಳಿಗೆ ಜ್ಞಾನ ವಿಶೇಷಗಳನ್ನು ನಿಖರವಾಗಿ ಮುಂದಿಡಲು ಸಾಧ್ಯವಾದರೆ ಸಾಹಿತಿಗಳು ಭಾವನೆಗಳನ್ನು ಮಾತಿನ ಮೂಲಕ ಎಳೆಗಳಾಗಿ ಬಿಡಿಸಿ ಮುಂದಿಡುತ್ತಾರೆ, ಬೇರೆಯವರಿಗಾಗಿ. ಬುದ್ಧಿವಂತ ಜನಸಾಮಾನ್ಯರೂ ತಮ್ಮದೇ ಆದ ರೀತಿಯಲ್ಲಿ ಮಾತಿನಲ್ಲಿ ಚಮಕಿಸುತ್ತಾರೆ. ಅಂದರೆ ಎಲ್ಲ ಬುದ್ಧಿವಂತರೂ ಒಳ್ಳೆಯ ಮಾತುಗಾರರೆಂದು ಅರ್ಥವಾಗುವುದಿಲ್ಲ. ಆದರೆ ಎಲ್ಲ ಒಳ್ಳೆಯ ಮಾತುಗಾರರೂ ಬುದ್ಧಿವಂತರಾಗೇ ಇರುತ್ತಾರೆ. ಒಳ್ಳೆಯ ಕುಶಲ ಕಲೆಗಾರರು ಮಾತುಗಾರರಾಗಬೇಕೆಂದಿಲ್ಲ. ಆದರೆ ಅವರು ಖಂಡಿತ ಬುದ್ಧಿವಂತರಾಗಿರುತ್ತಾರೆ.

ಮನೋವಿಜ್ಞಾನಿಗಳು ಬುದ್ಧಿಮತ್ತೆಯನ್ನು ಪರೀಕ್ಷಿಸಲು ಭಾಷೆಗೆ ಸಂಬಂಧಪಟ್ಟ ಹಾಗೆ ಮತ್ತು ತರ್ಕಬದ್ಧ ವಿಚಾರಶಕ್ತಿ, ಅದರ ವೇಗ ಇವುಗಳನ್ನು ಪರಿಶೀಲಿಸುತ್ತಾರೆ. ಬುದ್ಧಿಶಕ್ತಿ ಎಂದರೆ ಮನುಷ್ಯನು ಯಾವುದೇ ಒಂದು ವ್ಯವಸ್ಥೆಯಲ್ಲಿ, ಪರಿಸರದಲ್ಲಿ, ಎಷ್ಟು ಚೆನ್ನಾಗಿ ಹೊಂದಿಕೊಳ್ಳುತ್ತಾನೆ ಎನ್ನುವುದೇ ಆಗಿದೆ. ಮನುಷ್ಯನಿಗೆ ಅವನ ಬುದ್ಧಿಶಕ್ತಿಯಿಂದಾಗಿ ಮರಳುಗಾಡಿನಲ್ಲಿಯಂತೆ ಮಂಜುಗಡ್ಡೆಗಳ ನಡುವೆಯೂ ಬದುಕಿ ಬಾಳುವುದು ಸಾಧ್ಯವಾಗಿದೆ. ಇದು ಸಾಮಾನ್ಯ ಮನುಷ್ಯನ ಶಕ್ತಿ. ಯಾವುದೇ ಪ್ರಾಣಿಯ ಜೀವನವ್ಯವಸ್ಥೆ ಜಟಿಲವಾಗಿರುತ್ತದೆ, ಮನುಷ್ಯನ ಸಾಮಾಜಿಕ ಜೀವನವೂ ಹಾಗೆಯೇ. ಬುದ್ಧಿಮಾಂದ್ಯತೆಯಿದ್ದಾಗ ಈ ಸಂಕೀರ್ಣ ವ್ಯವಸ್ಥೆಗೆ ಹೊಂದಿಕೊಳ್ಳುವುದು ಕಷ್ಟದ ಕೆಲಸವಾಗುತ್ತದೆ. ಬುದ್ಧಿಮಾಂದ್ಯತೆಯಿರುವ ಮಗು ಪ್ರತಿಯೊಂದು ವಿಷಯವನ್ನು ಕಲಿಯುವಲ್ಲಿಯೂ ಹಿಂದುಳಿಯುತ್ತಾನೆ. ಹೀಗಾಗಿ ಅವನು ಬೇರೆಯವರ ಮಾರ್ಗದರ್ಶನವಿಲ್ಲದೆ ತಾನಾಗಿಯೇ ಬದುಕಿನ

ವ್ಯಾಪಾರಗಳನ್ನು ನಿಭಾಯಿಸಲಾರ. ಬುದ್ಧಿಮಾಂದ್ಯತೆ ಎಷ್ಟು ಹೆಚ್ಚೋ ಅವನ ತೊಂದರೆಗಳೂ ಅಷ್ಟೇ ಹೆಚ್ಚು. ಯಾವುದಾದರೂ ಒಂದು ವಿಷಯದಲ್ಲಿ—ಓದಾಗಲೀ, ಗಣಿತವಾಗಲೀ, ಮಾತಾಗಲೀ, ನಡೆಯುವುದಾಗಲೀ ಮಗು ಕಲಿಯಲಾರದೆ ಹೋದರೆ ಅದು ಬುದ್ಧಿಮಾಂದ್ಯತೆಯಾಗಲಾರದು, ಅದಕ್ಕೆ ಬೇರೆ ಕಾರಣವೇ ಇರಬೇಕು. ಒಂದು ತೊಂದರೆಯಿಂದ ಜೀವನಕ್ಕೆ ತೊಂದರೆಯಾಗಲಾರದು — ಬುದ್ಧಿಮಾಂದ್ಯತೆಯಿಂದ ಆಗುವಷ್ಟು.

ಬುದ್ಧಿಮಾಂದ್ಯತೆಯು ಹುಟ್ಟಿನಿಂದಲೇ ಬರುವಂಥ ತೊಂದರೆ. ಸಾಮಾನ್ಯವಾಗಿ ಚಿಕ್ಕಂದಿನಲ್ಲೇ ಅಂದರೆ ಬೆಳವಣಿಗೆ/ಕಲಿಕೆಯ ಸಮಯದಲ್ಲೇ ಇದು ಕಾಣಿಸುತ್ತದೆ. ಹಲವಾರು ರೀತಿಯಲ್ಲಿ ಈ ತೊಂದರೆ ತನ್ನ ಇರವನ್ನು ಸೂಚಿಸುತ್ತದೆ. ಮಗು ಸರಿಯಾದ ಸಮಯದಲ್ಲಿ ಹೊರಳದೆ, ಕುಳಿತುಕೊಳ್ಳದೆ, ನಿಲ್ಲದೆ, ನಡೆಯದೆ ಹೋಗುತ್ತಾನೆ. ಇವುಗಳಲ್ಲಿ ಪ್ರತಿಯೊಂದು ತಡವಾಗಬಹುದು ಮಾತನ್ನು ಅರ್ಥ ಮಾಡಿಕೊಳ್ಳುವುದನ್ನು, ಪದಗಳನ್ನು ಹೊರಡಿಸುವುದನ್ನು ತಡಮಾಡುತ್ತಾನೆ. ಆಟ ಒಡನಾಟಗಳನ್ನು ಹಾಗೆಯೇ, ಬೇರೆ ಮಕ್ಕಳಷ್ಟು ಚೆನ್ನಾಗಿ ಕಲಿಯದೆ ಹಿಂದುಳಿಯುತ್ತಾನೆ ಇವೆಲ್ಲಾ ವಿಷಯಗಳಲ್ಲಿ ಮಗು ಹಿಂದುಳಿಯುವುದನ್ನು ತಂದೆತಾಯಿಯರು ಏನೇ ಕಾರಣದಿಂದ ಗಮನಿಸದೆ ಹೋದರೂ ಅಥವಾ ಕಡೆಗಣಿಸಿದರೂ ಒಂದು ವಿಷಯದಲ್ಲಿ ಅವನ ತೊಂದರೆ ಸ್ಫುಟವಾಗಿ ಹೊರಕಾಣುತ್ತದೆ. ಅದೆಂದರೆ ಶಾಲಾ ವಿದ್ಯಾಭ್ಯಾಸ. ಶಾಲೆಯಲ್ಲಿನ ಕಲಿಕೆ ಹೊರಗಡೆಯದಕ್ಕಿಂತ ಬೇರೆ ರೀತಿಯ ಕಲಿಕೆಯಾದ್ದರಿಂದ ಮಗು ಮತ್ತೆ ಮತ್ತೆ ಹಿಂದುಳಿಯುತ್ತಾ ಶಾಲೆ ಬಿಡುವ ಹಾಗೆ ಆಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಈ ಮಗು ಸಾಮಾನ್ಯ ಮಕ್ಕಳಂತೆ ಚಟುವಟಿಕೆಯಿಂದ ಕೂಡಿರುವುದಿಲ್ಲ.

ಬುದ್ಧಿಮತ್ತೆಯ ಸಾಮಾನ್ಯ ಕೆಲಸ:

ಸಾಮಾನ್ಯ ಬುದ್ಧಿಶಕ್ತಿಯಿರುವ ಮಗು ಹುಟ್ಟಿದಂದಿನಿಂದ ಹೊರ ಪ್ರಪಂಚವನ್ನು ಅರಿಯುತ್ತಲೇ ಹೋಗುತ್ತಾನೆ. ಮೊದಲನೆಯದಾಗಿ ಪ್ರತಿಯೊಂದು ವಸ್ತು, ಅದರ ಅರ್ಥ, ಉಪಯೋಗ ಇವುಗಳನ್ನು ತಿಳಿದು ಹೆಸರನ್ನು ಅರಿತು ಉಪಯೋಗಿಸಬೇಕು. ಅವನ ಸುತ್ತಲಿನ ವಾತಾವರಣ ಮಾಡಿಕೊಡುವ ಅನುಕೂಲಗಳಿಂದ ಕೆಲವದರಲ್ಲಿ ವಿಶೇಷ ಪರಿಣತಿಯನ್ನು ಪಡೆಯುತ್ತಾನೆ. ರೈತರ ಮಕ್ಕಳು ಸಸ್ಯಗಳ ಬಗ್ಗೆ ತಿಳಿದರೆ, ವ್ಯಾಪಾರಸ್ಥರ ಮಕ್ಕಳು ಹಣದ ವಹಿವಾಟಿನ ಬಗ್ಗೆ ಹೆಚ್ಚು ತಿಳಿಯುತ್ತಾರೆ. ಇದು ಸಹಜ. ಹಾಗೆಯೇ ಆಯಾ ವಿಷಯಗಳಲ್ಲಿ ಬರುವ ಸಮಸ್ಯೆಗಳನ್ನು ಬಿಡಿಸುವಲ್ಲಿ ಸೂಕ್ಷ್ಮದೃಷ್ಟಿಯುಳ್ಳವರಾಗಿರುತ್ತಾರೆ. ಯಾವುದೇ ಕೆಲಸಕ್ಕಾಗಲಿ ಮುಂದಾಲೋಚನೆಯಿಂದ ಒಂದು ಯೋಜನೆಯಿಂದ ಕಾರ್ಯಕ್ಕೆ ತೊಡಗುತ್ತಾರೆ. ಪ್ರಪಂಚದ ವಸ್ತು ವಿಶೇಷಗಳನ್ನು ತಿಳಿಯಲು, ಕೆಲಸವನ್ನು ಕಲಿತುಕೊಳ್ಳಲು, ಯೋಚಿಸಿ ಕೆಲಸ

ಮಾಡಲು ಜ್ಞಾಪಕಶಕ್ತಿಯ ಅವಶ್ಯಕತೆ ಬಹಳ. ಅವಶ್ಯವಾದ ವಿಷಯಗಳನ್ನು ಜ್ಞಾಪಕದಲ್ಲಿಡಲು ಸಾಮಾನ್ಯನು ಪ್ರಯಾಸ ಪಡಲೇಬೇಕಾಗಿಲ್ಲ. ಸಹಜವಾಗೇ ನಡೆಯುವಂಥವುಗಳು ಇವು. ಬುದ್ಧಿಮಾಂದ್ಯರಿಗಾದರೋ ಇವು ಬಹಳ ಕಷ್ಟದ ವಿಚಾರಗಳು. ಇವುಗಳಲ್ಲಿ ಒಂದು ಮಟ್ಟಕ್ಕಿಂತ ಅವರು ಮೇಲೆ ಏರುವುದಿಲ್ಲ.

ಬುದ್ಧಿಮಾಂದ್ಯತೆಗೆ ಕಾರಣಗಳು :

ಮಿದುಳು ಬುದ್ಧಿ ಹಾಗೂ ಮನಸ್ಸಿನ ಆಕರ. ಮಿದುಳಿನಲ್ಲಿ ಯಾವುದೇ ಐಬು ಇದ್ದರೂ ಅದು ನೇರವಾಗಿ ಬುದ್ಧಿವಂತಿಕೆಗೆ ಕುಂದು ತರುತ್ತದೆ. ಸಾಮಾನ್ಯವಾಗಿ ಹುಟ್ಟುವ ಮೊದಲೇ ಅಥವಾ ಹುಟ್ಟುವಾಗ ಮಿದುಳಿಗೆ ಆಘಾತವಾಗಲು ಹಲವಾರು ಕಾರಣಗಳು ಇರುತ್ತವೆ. ಕಿವುಡುತನಕ್ಕೆ ಕಾರಣಗಳು ಯಾವುವೋ ಅವೆಲ್ಲವೂ ಮಿದುಳಿಗೆ ಕುಂದು ತರಬಹುದಾಗಿವೆ. ಅವಲ್ಲದೆಯೂ ಕೆಲವು ವಿಶೇಷ ಕಾರಣಗಳೂ ಇವೆ. ಹುಟ್ಟಿದ ಮೇಲೆ ಮೇಲಿಂದ ಮೇಲೆ ಬರುವ ಸನ್ನಿ ಅಥವಾ ಫಿಟ್ಸ್ ಮಿದುಳಿನಲ್ಲಿ ಏನೋ ತೊಂದರೆ ಇರುವುದನ್ನು ಸೂಚಿಸುತ್ತದೆ. ಇದು ಬುದ್ಧಿವಂತಿಕೆಗೆ ಮಾರಕ ವಾಗಬಹುದು. ಮೈಯೊಳಗಿನ ಕಾಯಿಲೆಯಿಂದ ಅಥವಾ ನೇರವಾದ ಪೆಟ್ಟಿನಿಂದ ಮಿದುಳಿಗೆ ತೊಂದರೆಯಾಗಿ ಬುದ್ಧಿವಂತಿಕೆಗೆ ಕುಂದು ಬರಬಹುದು.

ಗರ್ಭಧರಿಸುವ ಸಮಯದಲ್ಲಾದ ಜೀವಕೋಶಗಳೊಳಗಿನ ವ್ಯತ್ಯಾಸಗಳಿಂದ ದೇಹದ ಲಕ್ಷಣಗಳೇ ಬೇರೆ ಬೇರೆಯಾಗಿರುವಂಥ ಮಕ್ಕಳು ಜನಿಸಲು ಸಾಧ್ಯ. ಇಂಥವುಗಳಲ್ಲಿ 'ಡಾನ್ಸ್‌ಸಿಂಡ್ರೋಮ' ಮುಖ್ಯವಾದದ್ದು (ಹಿಂದೆ ಇದನ್ನು ಮಂಗೋಲಿಸಂ ಎಂದು ಕರೆಯುತ್ತಿದ್ದರು). ಇಂಥ ಮಕ್ಕಳನ್ನು ಹುಟ್ಟಿನಲ್ಲೇ ಗುರುತಿಸು ವುದು ಸುಲಭ. ಮುಖವು ಮಂಗೋಲಿಯನ್ ಬುಡಕಟ್ಟಿನ ಜನರಂತೆ, ಮೂಗು ಚಪ್ಪಟೆ, ಕಣ್ಣು ಬಾದಾಮಿಯಾಕಾರ, ಮೊಟಕಾದ ಕೈಬೆರಳುಗಳು ಇತ್ಯಾದಿಯಾಗಿ ಇವರು ಗುಂಪಿನಲ್ಲೇ ಸುಲಭವಾಗಿ ಗುರುತಿಸಲ್ಪಡುತ್ತಾರೆ. ಇವರಲ್ಲಿ ಬುದ್ಧಿಮಾಂದ್ಯತೆ ಸಾಮಾನ್ಯ.

ಬುದ್ಧಿಮಾಂದ್ಯತೆಗೆ ನಮಗೆ ಗೊತ್ತಾಗದಂತೆ ಇರುವ ಕಾರಣಗಳು ಸಾಧ್ಯ. ಸೃಷ್ಟಿಯು ವಿಚಿತ್ರ. ಪ್ರತಿಯೊಬ್ಬ ಮನುಷ್ಯನೂ ತನ್ನದೇ ಆದ ವ್ಯಕ್ತಿತ್ವ ಹಾಗೂ ಬುದ್ಧಿಶಕ್ತಿಯನ್ನು ಹೊಂದಿರುತ್ತಾನೆ, ಒಂದು ರೀತಿಯಲ್ಲಿ ಪ್ರತಿಯೊಬ್ಬನೂ ಅಪ್ರತಿಮ. ಎಲ್ಲರಿಗೂ ಒಂದೇ ರೀತಿಯ ಬುದ್ಧಿಶಕ್ತಿ ಇರಲು ಸಾಧ್ಯವಿಲ್ಲ. ಅದು ಹೆಚ್ಚು ಇರಬಹುದು, ಕಡಿಮೆ ಇರಬಹುದು. ಯಾವುದೇ ಅಳೆಯುವ ರೀತಿಯನ್ನು ಅವಲಂಬಿಸಿ ದರೂ ಕೆಲವರು ಹೆಚ್ಚು ಬುದ್ಧಿವಂತರು, ಕೆಲವರು ಸಾಮಾನ್ಯರು, ಕೆಲವರು ಕಡಿಮೆ ಬುದ್ಧಿಶಕ್ತಿಯುಳ್ಳವರು ಕಂಡೇ ಕಾಣುತ್ತಾರೆ. ಈ ಕಡಿಮೆ ಬುದ್ಧಿಶಕ್ತಿಯುಳ್ಳವರೇ ಒಂದು ಗುಂಪೆಂದು ಭಾವಿಸೋಣ. ಆಗ ಅವರಲ್ಲಿಯೂ ಕೆಳಸ್ತರದ ಬುದ್ಧಿಶಕ್ತಿ ಯುಳ್ಳವರನ್ನು ಬುದ್ಧಿಮಾಂದ್ಯರೆಂದು ಗುರುತಿಸಬಹುದು. ಈ ರೀತಿಯವರಲ್ಲಿಯ

ತೊಂದರೆಗೆ ಕಾರಣವೇನೆಂದು ತಿಳಿಯುವುದು ಬಹಳ ಕಷ್ಟದ ಕೆಲಸ. ಬಹುಶಃ ಬುದ್ಧಿಶಕ್ತಿಗೆ ಕಾರಣವೇನೆಂದು ತಿಳಿಯಲು ಸಾಧ್ಯವಾದರೆ ಆಗ ಈ ರೀತಿಯ ಬುದ್ಧಿ ಮಾಂದ್ಯತೆಗೆ ಕಾರಣವೇನೆಂದು ತಿಳಿಯಲು ಸಾಧ್ಯವಾಗಬಹುದು.

ತೊಂದರೆಯ ಮಟ್ಟಗಳು :

ಬುದ್ಧಿಮಾಂದ್ಯತೆಯ ತೊಂದರೆ ಆ ಗುಂಪಿನ ಎಲ್ಲರಲ್ಲೂ ಒಂದೇ ಸಮ ಇರುವುದಿಲ್ಲ ಅಲ್ಪಸ್ವಲ್ಪ ತೊಂದರೆಯುಳ್ಳವರು ಎಲ್ಲರಂತೆಯೇ ಬದುಕಿ ಸಂಸಾರ ಮಾಡಿಕೊಂಡಿರುತ್ತಾರೆ. ಎಲ್ಲರೂ ಏನನ್ನಾದರೂ ಸಾಧಿಸಬೇಕೆಂದೇನೂ ಇಲ್ಲವಲ್ಲ. ಅವರಲ್ಲಿ ಅನಕ್ಷರಸ್ಥರು ಹೆಚ್ಚು ಇರಬಹುದು. ನಮ್ಮಂತಹ ದೇಶದಲ್ಲಿ ಅದು ಕುಂದೇ ಅಲ್ಲವೆಂದರೂ ನಡೆಯುತ್ತದೆ. ಅಭಿವೃದ್ಧಿಶೀಲ ದೇಶಗಳಲ್ಲಿ ಈ ಗುಂಪು ತೊಂದರೆ ಯಿದ್ದರೂ ಗುರುತಿಗೆ ಸಿಗಲಾರದೆ ಹೋಗುತ್ತದೆ, ಇದು ಒಂದು ರೀತಿಯಲ್ಲಿ ಒಳ್ಳೆಯದು. ಈ ಅಲ್ಪತೊಂದರೆಯುಳ್ಳವರು ಸಾಮಾನ್ಯವಾಗಿ ಸಮಾಜದಲ್ಲಿ ಹೊಂದಿಕೊಂಡರೂ, ಅವರು ಶ್ರೀಮಂತರ ಮನೆಗಳಲ್ಲಿ ಅಥವಾ ಪಂಡಿತರ ಮನೆಗಳಲ್ಲಿದ್ದರೆ ಸುಲಭವಾಗಿ ಗುರುತಿಸಲ್ಪಟ್ಟು ಹೊಂದಾಣಿಕೆ ಮಾಡಿಕೊಂಡು ಬದುಕುವುದರಲ್ಲಿ ತೊಂದರೆಗೊಳಗಾಗು ತ್ತಾರೆ. ಬುದ್ಧಿಶಕ್ತಿಯನ್ನು ಅಳೆಯುವ ಅಂಕಿಗಳು (I.Q.) ಸಾಮಾನ್ಯ 100 ಎಂದಿಟ್ಟುಕೊಂಡರೆ ಈ ಗುಂಪು 55ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುತ್ತದೆ. ನೂರಕ್ಕೆ ಒಬ್ಬ ಮನುಷ್ಯ ಒಂದು ವಿಷಯದಲ್ಲಿ ಪರಿಣಿತನಾಗುತ್ತಾನೆ, ಉದ್ಯಮ ನಡೆಸುತ್ತಾನೆಂದರೆ ಈ ಗುಂಪಿನವರು ಸಾಮಾನ್ಯ ಜೀವನ ನಡೆಸುವುದು ಸಾಧ್ಯವಾಗ ಬೇಕು. 25 ಅಂಕಗಳಿಗೂ ಕಡಿಮೆ ಬುದ್ಧಿವಂತಿಕೆ ಇರುವ ಮಕ್ಕಳದು ಅತ್ಯಂತ ದಾರುಣ ಸ್ಥಿತಿ. ಅವರಿಗೆ ಸುಮಾರು ಏನೂ ಮಾಡಲು ಬರುವುದಿಲ್ಲವೆಂದರೂ ಸರಿ ಹೋದೀತು.

ನಡೆಯುವುದು, ಮಾತಾಡುವುದು ಕೂಡ ಸಾಧ್ಯವಾಗದೆ ಹೋಗಬಹುದು. ಈ ಮಕ್ಕಳ ತೊಂದರೆಗಳನ್ನು ಓದುಗರು ಊಹಿಸಿಕೊಳ್ಳಬೇಕು. ಅವರಿಗೆ ತಮ್ಮನ್ನೇ ಸ್ವಚ್ಛವಾಗಿಟ್ಟುಕೊಳ್ಳಲು ಬರುವುದಿಲ್ಲ, ಸರಿಯಾಗಿ ತಿನ್ನುವುದೂ ಕಷ್ಟ, ಚೆಲ್ಲುತ್ತಾರೆ, ಬಟ್ಟೆ ಹಾಕಿಕೊಳ್ಳಲು ಬರದೆ ಹೋಗಬಹುದು, ಮಾತು ಅಥವಾ ಸನ್ನೆಯಿಂದ ಸಂಭಾಷಿ ಸುವುದೂ ಬಾರದು. ಹೀಗೆ ಹೆಚ್ಚು ಕಡಿಮೆ ಎಲ್ಲ ಕೆಲಸವನ್ನು ಪೋಷಕರೇ ಮಾಡ ಬೇಕಾದ ಸ್ಥಿತಿ. ಚಿಕ್ಕಂದಿನಲ್ಲಿ ಈ ಕೆಲಸಗಳನ್ನೆಲ್ಲ ಪೋಷಕರು ಮಾಡಿಕೊಟ್ಟರೂ ಬೆಳೆದ ಹಾಗೆ ಬಹು ಕಷ್ಟದಾಯಕವಾಗುತ್ತದೆ ; ಅವರನ್ನು ನೋಡಿಕೊಳ್ಳುವ ಹೊಣೆ. ನಮ್ಮ ದೇಶದಲ್ಲಾದರೋ ಇಂಥ ಮಕ್ಕಳಿಗೆ ಆಶ್ರಯ ಕೊಡುವ, ನೋಡಿಕೊಳ್ಳುವ ಸಂಸ್ಥೆಗಳೂ ದುರ್ಲಭ.

ಇಪ್ಪತ್ತೈದರಿಂದ 55ರ ವರೆಗಿನ ಅಂಕಗಳಷ್ಟು ಬುದ್ಧಿಶಕ್ತಿ ಇರುವ ಮಕ್ಕಳು ಮಧ್ಯದ ಗುಂಪು ಎಂದು ಪರಿಗಣಿಸಬಹುದು. ಇವರಿಗೆ ಶಿಕ್ಷಣದಿಂದ ಸ್ವಲ್ಪ ಮಟ್ಟಿಗೆ

ಪ್ರಯೋಜನ ಆಗುತ್ತದೆ. ಶಿಕ್ಷಣವೆಂದರೆ ಶಾಲೆಯದಲ್ಲ. ಇವರಿಗೆ ಹಲವಾರು ವಿಷಯ ಗಳಲ್ಲಿ ವಿಶೇಷ ತರಬೇತಿ ಬೇಕಾಗುತ್ತದೆ. ತಮ್ಮನ್ನು ತಾವು ಸ್ವಚ್ಛವಾಗಿಟ್ಟುಕೊಳ್ಳು ವುದು, ಸ್ನಾನ ಮಾಡುವುದು, ಅಚ್ಚುಕಟ್ಟಾಗಿ ಊಟ ಮಾಡುವುದು, ಆವಶ್ಯವಾದ ಮಾತುಗಳನ್ನು ಹೇಳುವುದು, ಹೇಳಿದ ಮಾತಿಗೆ ತಕ್ಕ ಹಾಗೆ ನಡೆದುಕೊಳ್ಳುವುದು, ಇದನ್ನೆಲ್ಲ ಕಲಿಸಬೇಕಾಗುತ್ತದೆ. ಸಮಯ ವ್ಯರ್ಥ ಮಾಡದ ಹಾಗೆ, ಹಾಗೂ ಅಹಿತಕರ ಕೆಲಸಗಳಲ್ಲಿ ತೊಡಗದ ಹಾಗೆ ಏನಾದರೂ ಪ್ರಯೋಜನಕಾರಿಯಾದ ಕೆಲಸಗಳನ್ನು ಮಾಡುವುದನ್ನು ಕಲಿಸಬೇಕಾಗುತ್ತದೆ. ಈ ಶಿಕ್ಷಣ ಬಹಳ ವರ್ಷಗಳ ಕಾಲ ನಡೆಯ ಬೇಕಾದ್ದಂಥದು. ಇಷ್ಟು ತೊಂದರೆಯಿರುವ ಮಕ್ಕಳಿಗೆ ಜೀವನದ ತುಂಬಾ ಬೇರೆಯವರ ಮಾರ್ಗದರ್ಶನದ ಅವಶ್ಯಕತೆ ಇದ್ದೇ ಇರುತ್ತದೆ. ಸ್ವತಂತ್ರರಾಗುವುದು ಹೆಚ್ಚು ಕಡಿಮೆ ಅಸಾಧ್ಯದ ಮಾತು. ಬೇರೆಯವರಿಗೂ ಅವರಿಗೂ ಹಿತವಾಗಿರುವಂತಹ ನಡವಳಿಕೆಯನ್ನು ಅವರಿಗೆ ಕಲಿಸಿದರೆ ಅಷ್ಟೇ ಸಾಕು.

ಬುದ್ಧಿಮಾಂದ್ಯರಲ್ಲಿ ಕಲಿಕೆಗೆ ಅಡೆತಡೆಗಳು :

ಬುದ್ಧಿಮಾಂದ್ಯತೆಗೆ ಕಾರಣವಾದ ಮಿದುಳಿನ ಆಘಾತ, ದೈಹಿಕ ವ್ಯತ್ಯಾಸಗಳಿಲ್ಲದೆ ಕಲಿಯುವಿಕೆಯಲ್ಲಿ ಅಡ್ಡಿ ಮಾಡುವ ಹಲವಾರು ಬೇರೆಯ ಕಾರಣಗಳು ಇರಬಹುದು. ಮಗು ನಡೆದಾಡಲು ಕಲಿಯಲು ಜೀವನದಲ್ಲಿ ಒಂದು ಸಮಯವಿದೆ. ಮಿದುಳು ಬಲಿತ ಹಾಗೆಲ್ಲಾ ಓಡಾಡುವುದನ್ನು ಯಾರ ಸಹಾಯವೂ ಇಲ್ಲದೆ ಕಲಿಯುತ್ತಾನೆ. ಹಾಗೆಯೇ ಮಕ್ಕಳು 3 ರಿಂದ 5 ವರ್ಷದೊಳಗೆ ಭಾಷೆಯನ್ನು ಸರಾಗವಾಗಿ ಕಲಿತುಬಿಡುತ್ತಾರೆ. ಆ ವಯಸ್ಸಿನಲ್ಲಿ ಯಾವುದೇ ಕಾರಣಕ್ಕಾಗಿ ಮಾತು ಕಲಿಯದಿದ್ದರೆ ಮುಂದೆ ಕಲಿಯು ವುದು ಕಷ್ಟವಾಗುತ್ತದೆ. ಬುದ್ಧಿಮಾಂದ್ಯ ಮಕ್ಕಳು ಈ ಸಮಯವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಲು ಆಗುವುದಿಲ್ಲ. ಇದೇ ಎಷ್ಟರಮಟ್ಟಿಗೆ ಸುಸಂಬದ್ಧ ಕಾರಣವಾಗುವುದೋ ಸರಿಯಾಗಿ ತಿಳಿದಿಲ್ಲ, ಆದರೂ ಆ ಸಮಯದ ನಷ್ಟ ನಷ್ಟವೇ.

ಮಗು ಓಡಾಡಲು ಕಲಿತ ಕೂಡಲೆ ಅವನ ಅನುಭವ ಪ್ರಪಂಚವೇ ಬೇರೆಯಾಗು ತ್ತದೆ. ಅವನು ಎಲ್ಲವನ್ನೂ ಬೇರೆ ಬೇರೆ ಕೆಲಸಗಳಿಂದ ನೋಡಬಲ್ಲವನಾಗುತ್ತಾನೆ, ಮುಟ್ಟುತ್ತಾನೆ, ವಸ್ತುಗಳ ಎತ್ತರ ಇತ್ಯಾದಿ ಅವನ ಅರಿವಿಗೆ ಬರುತ್ತದೆ. ಬುದ್ಧಿಮಾಂದ್ಯ ಮಗು ನಡೆಯುವುದನ್ನು ತಡವಾಗಿ ಕಲಿಯುತ್ತದೆ. ಅವನಿಗೆ ಒಟ್ಟಿನಲ್ಲಿ ಆಗುವ ಅನುಭವ ಕಡಿಮೆಯೆಂದೇ ತಿಳಿಯಬೇಕು. ಮೊದಲಿನ ವರ್ಷಗಳ ಈ ಮೂಲಭೂತ ಅನುಭವಗಳಿಲ್ಲದೆ ಅವನಿಗೆ ಮುಂದೆ ಬಹಳಷ್ಟು ನಷ್ಟವಾಗುತ್ತದೆ. ಬುದ್ಧಿಮಾಂದ್ಯತೆ ಮಿದುಳಿನ ಆಘಾತದಿಂದ ಬಂದಿರಬಹುದು. ಮಿದುಳಿನ ಆಘಾತದ ಒಂದು ವಿಪರೀತತೆ ಎಂದರೆ ಮಗುವಿನ ಚಂಚಲ ಸ್ವಭಾವ. ಮಗು ತನ್ನ ಗಮನವನ್ನು ಸಾಮಾನ್ಯನಂತೆ ಒಂದು ವಸ್ತುವಿನ ಮೇಲೆ, ವಿಷಯದ ಮೇಲೆ ಹರಿಸಲಾರ. ಕ್ಷಣಕ್ಕೊಂದು ಕಡೆ ಇರುತ್ತಾನೆ, ಮುಟ್ಟುತ್ತಾನೆ, ನೋಡುತ್ತಾನೆ. ಮಾತಾಡುವ ಬಗ್ಗೆಯೂ ಹಾಗೇ,

ಪೂರ್ಣ ಕೇಳಿಸಿಕೊಳ್ಳದೆ ಹೋಗಬಹುದು. ಈ ರೀತಿಯ ಮಗು ಚೂಟಿಯಾಗಿರುವಂತೆ ಕಂಡರೂ ನಿಜವಾದ ಅರ್ಥದಲ್ಲಿ ಚಟುವಟಿಕೆಯಿಂದಿರುವುದಿಲ್ಲ. ದೈಹಿಕವಾಗಿ ಒಂದು ಕಡೆ ಕೂಡದೆ, ಮನಸ್ಸನ್ನು ಒಂದು ಕಡೆ ಕೂಡಲು ಆಗದೆ ಕಲಿಯುವುದರಲ್ಲಿ ಹಿಂದೆ ಬೀಳುತ್ತಾನೆ. ಕೆಲವೊಂದು ಸಾರಿ ಈ ಮಕ್ಕಳ ಗಡಿಬಿಡಿ ಎಷ್ಟೊಂದು ಇರುತ್ತದೆಂದರೆ ಇವರ ವರ್ತನೆಯನ್ನು ಹಿಡಿತದಿಂದ ಇಡಲು ಔಷಧಿಯನ್ನು ಮಕ್ಕಳ ತಜ್ಞರಿಂದ ಪಡೆಯಬೇಕಾಗುತ್ತದೆ

ಮಗುವು ಒಂದು ಕಲಿಯುವ ಮೆಷಿನ್ ಅಲ್ಲ, ಅವನೂ ಒಬ್ಬ ಪುಟ್ಟ ಮನುಷ್ಯ ತನ್ನದೇ ಆದ ರೀತಿಯಲ್ಲಿ ಒಡನಾಡುತ್ತಾನೆ. ಹುಟ್ಟಿದ ಹಲವು ವಾರಗಳಲ್ಲಿ ಮಗು ದೊಡ್ಡವರನ್ನು ನೋಡಿದಾಗ ಎಳೆಯನಗೆ ಸೂಸುತ್ತಾನೆ. ಮಗುವಿನ ನಗುವಿಗೆ ಮರುಳಾದವರು ಅವನ ಜೊತೆ ಒಡನಾಟ ಹೆಚ್ಚು ಮಾಡುತ್ತಾರೆ. ಮುಂದೆ ಮಾತಿಗೆ, ಕಲಿಕೆಗೆ, ಅನುಕೂಲವಾಗುವಂಥ ವಾತಾವರಣ ಅವನೇ ಕಲ್ಪಿಸಿಕೊಳ್ಳುತ್ತಾನೆ. ಅಂದರೆ ಮಗು ತಾನಾಗೇ ಬೇರೆಯವರನ್ನೂ ತನ್ನ ಕಡೆಗೆ ಸೆಳೆದುಕೊಳ್ಳುತ್ತಾನೆ. ಬೆಳೆದ ಮೇಲಂತೂ ಅವನ ಕುತೂಹಲಕ್ಕೆ ಎಣೆಯೇ ಇರುವುದಿಲ್ಲ. ಅವನು ಎಲ್ಲವನ್ನೂ ತಿಳಿಯಬೇಕು, ಮುಟ್ಟಬೇಕು. ಈ ವರ್ತನೆ ಬುದ್ಧಿಮಾಂದ್ಯ ಮಕ್ಕಳಲ್ಲಿ ಹೆಚ್ಚಾಗಿ ಕಂಡು ಬರುವುದಿಲ್ಲ. ತನ್ನ ಸುತ್ತಮುತ್ತಲಿನ ಜನರ ಬಗ್ಗೆ, ಪ್ರಪಂಚದ ವಸ್ತುವಿಚಿತ್ರಗಳ ಬಗ್ಗೆ ಕುತೂಹಲವನ್ನು ಈ ಮಗು ತೋರಿಸದೆ ಹೋಗಬಹುದು. ನಗೆ, ಕುತೂಹಲವನ್ನು ತೋರಿಸದ ಮಗುವಿನ ಜೊತೆ ವಯಸ್ಕರು ಹೆಚ್ಚು ಹೆಚ್ಚಾಗಿ ಬೆರೆಯುವುದಿಲ್ಲವೆಂದು ಅಧ್ಯಯನಗಳಿಂದಲೂ ಕಂಡು ಬಂದಿದೆ. ಹೀಗಾಗಿ ಕಲಿಯುವ ಅವಕಾಶಗಳು ಕಡಿಮೆಯಾಗುವ ಸಂಭವವೇ ಹೆಚ್ಚು ಈ ಮಕ್ಕಳಿಗೆ.

ಬೆಳೆದ ಮೇಲೂ ಈ ಪ್ರವೃತ್ತಿ ಮುಂದುವರಿಯುತ್ತದೆ. ಮಕ್ಕಳ ಜೊತೆ ಬೆರೆತು ಆಡುವಾಗ ಈ ಮಗು ಆಟದ ನಿಯಮಗಳ ಬಗ್ಗೆ ಬೇರೆ ಮಕ್ಕಳಷ್ಟು ಕುತೂಹಲ ತೋರದೆ ಒಂದು ಬಗೆಯ ಅವರ ಒಡನಾಟದಲ್ಲಿ ಖುಷಿಯಾಗಿ ಇದ್ದು ಬಿಡಬಹುದು. ಪಾಠದಲ್ಲೂ, ಕೆಲಸಗಳಲ್ಲೂ ಸುಮಾರು ಎಲ್ಲ ವಿಷಯಗಳಲ್ಲೂ ಒಂದು ರೀತಿಯ 'ಅನಾಸಕ್ತಿಯೋಗ'ದಂತೆ ಹೆಚ್ಚಿನ ರೀತಿಯಲ್ಲಿ ಒಳಗಾಗದೆ ಇದ್ದು ಕಲಿಯುವುದರಲ್ಲಿ ಹಿಂದೆ ಬೀಳಬಹುದು.

ಮಾತಿನ ತೊಂದರೆಗಳು :

ಧ್ವನಿಯ ತೊಂದರೆಗಳು ಮಂದಬುದ್ಧಿಯ ಮಕ್ಕಳಲ್ಲಿ ವಿಶೇಷವೇನೂ ಅಲ್ಲ. ಆದರೆ ಈ ಗುಂಪಿನ ಹೆಚ್ಚು ಮಕ್ಕಳಲ್ಲಿ ಧ್ವನಿ ಇಂಪಾಗಿರದೆ ಹೋಗಬಹುದು. ಇದು ಬೇರೆ ತೊಂದರೆಗಳಿಗೆ ಹೋಲಿಸಿದರೆ ಹೇಳಿಕೊಳ್ಳುವಂಥದೇನಲ್ಲವಾದ್ದರಿಂದ ಇದರ ಬಗ್ಗೆ ಹೆಚ್ಚಾಗಿ ಇಲ್ಲಿ ಬರೆದಿಲ್ಲ. ಉಚ್ಚಾರಣೆಯ ತೊಂದರೆ ಹೆಚ್ಚು ಕಡಿಮೆ ಎಲ್ಲ ಬುದ್ಧಿಮಾಂದ್ಯ ಮಕ್ಕಳಲ್ಲೂ ಕಂಡುಬರುತ್ತವೆ. ಹಲವು ಮಾತಿನ ಶಬ್ದಗಳನ್ನು ಸಾಮಾನ್ಯ

ಮಕ್ಕಳು ತಡವಾಗಿ ಆಡುತ್ತಾರೆ. ಆದರೆ ಈ ಮಕ್ಕಳು ಎಲ್ಲ ಶಬ್ದಗಳನ್ನು ತಡವಾಗಿ ಆಡಲು ಶುರುಮಾಡುತ್ತಾರೆ, ಹಾಗೂ ಭಾಷೆಯ ಎಲ್ಲ ಶಬ್ದಗಳನ್ನು ಕಲಿಯದೇ ಹೋಗಬಹುದು. ಮಾತಿನ ಹಲವು ಶಬ್ದಗಳನ್ನಾಡಲು ನಾಲಿಗೆ ಹಾಗೂ ಮಾತಿನ ಅಂಗಗಳ ಹತೋಟಿ ಹೆಚ್ಚು ಬೇಕಾಗುತ್ತದೆ, ಈ ಶಬ್ದಗಳನ್ನು ನಿಕರವಾಗಿ ಹೇಳಲು ಇವರಿಗೆ ಆಗದೆ ಹೋಗಬಹುದು. ಬೆಳದ ಮೇಲೂ ಉಚ್ಚಾರಣೆಯಲ್ಲಿ ತಪ್ಪುಗಳು ಹಾಗೆಯೇ ಉಳಿದುಕೊಳ್ಳಬಹುದು. ಉಚ್ಚಾರಣೆಯ ರೀತಿಯಲ್ಲಿ ಸ್ಪಷ್ಟತೆ ಇಲ್ಲದೆ ಮಾತಿನ ರೀತಿಯೇ ಬೇರೆ ಅನ್ನಿಸುತ್ತದೆ.

ಉಗ್ಗು (ತೊದಲು) ಮಾತು ಬುದ್ಧಿಮಾಂದ್ಯ ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಇನ್ನೊಂದು ಮಾತಿನ ತೊಂದರೆ. ಶಬ್ದಗಳೋ, ಪದಗಳೋ, ತಡೆತಡೆದು ಅಥವಾ ತಿರುತಿರುಗಿ ಮಾತಿನಲ್ಲಿ ಕೇಳಿಬಂದು ಗಮನವೆಲ್ಲಾ ಮಾತಿನ ಕಡೆಗೆ ಹರಿದು ಏನು ಹೇಳುತ್ತಿದ್ದಾರೆಂದು ತಿಳಿಯಲು ಕೇಳುಗರು ಹೆಚ್ಚು ಗಮನಕೊಟ್ಟು ಕೇಳ ಬೇಕಾಗುತ್ತದೆ. ಮೊದಮೊದಲು ತನ್ನ ಈ ತೊಂದರೆಯ ಬಗ್ಗೆ ಕಾಳಜಿ ತೋರದ ಮಗು ಮುಂದೆ ಮಾತಾಡಲು ಗಾಬರಿಗೊಳ್ಳುವ ಸ್ಥಿತಿಗೆ ಬರಲೂ ಸಾಧ್ಯ. ಮೊದಲೇ ಉಚ್ಚಾರಣೆಯ ಕೊರತೆ ಇರುವ ಮಗುವಿಗೆ ಈ ತೊಂದರೆಯಿಂದ ಸಂಭಾಷಿಸಲು, ಒಡನಾಡಲು ಬಹಳ ಅನಾನುಕೂಲ.

ಉಚ್ಚಾರಣೆಯ ದೋಷ, ಉಗ್ಗು ಇವುಗಳಿಗಿಂತ ಹೆಚ್ಚಿನ ತೊಂದರೆ ಎಂದರೆ ಮಗುವಿನ ಕುಂಠಿತವಾದ ಮಾತಿನಶಕ್ತಿ. ಈ ಮಗುವಿಗೆ ಇರುವ ಅನಾನುಕೂಲಗಳೆಲ್ಲಾ ಸೇರಿ ಅವನ ಭಾಷೆಯ ಬೆಳವಣಿಗೆಗೆ ಒಂದು ಮಿತಿಯನ್ನು ಹಾಕುತ್ತವೆ. ಈ ಮಗು ಬೇರೆಯ ಮಕ್ಕಳಂತೆ ದಿನದಿನಕ್ಕೂ ಹೊಸ ಹೊಸ ಪದಗಳನ್ನು ಕಲಿಯುವುದಿಲ್ಲ. ಅತ್ಯವಶ್ಯವಾದ ಹಲವು ಪದಗಳನ್ನು ಕಲಿತು ಅವನ್ನೇ ಉಪಯೋಗಿಸುತ್ತಾನೆ. ಮಾತಿನ ಸರಣಿಯೂ ಹಾಗೆಯೇ ನಿಯಮಿತವಾದದ್ದು ಆಗಿರಬಹುದು. ಒಂದೆರಡು ಪದ ಗಳನ್ನಷ್ಟೇ ಒಂದು ಸಾರಿಗೆ ಉಪಯೋಗಿಸಬಹುದು. ಉದ್ದನೆಯ ವಾಕ್ಯಗಳನ್ನು ಹೇಳಲು ಆಗದೆ ಹೋಗಬಹುದು. ಹೇಳುವುದು, ಕೇಳುವುದು ಎಲ್ಲವೂ ಮೊಟಕಾಗಿರು ತ್ತವೆ. ಬೇರೆಯವರಿಗೆ ಕತೆ ಹೇಳುವ ಮಟ್ಟಕ್ಕೆ ಈ ಮಗು ಬರಲಾರದೆ ಹೋಗುವ ಸಂದರ್ಭಗಳೇ ಹೆಚ್ಚು.

ತಡವಾಗಿ ಬರುವ ಮಾತು ಬುದ್ಧಿಮಾಂದ್ಯತೆಯ ಸಂಕೇತವೆಂದು ಈ ಮೊದಲೇ ಹೇಳಿದೆ. ಇದು ಬರಿಯ ತಡವಾಗಿ ಬರುವುದಲ್ಲ. ಅದು ಕೊರತೆಯ ಮೊದಲ ಸುಳುವು. ಮುಂದೆ ಅದು ಸರಿ ಹೋಗದೆ, ಕುಂಟುತ್ತಲೇ ಸಾಗುವ ಬೆಳವಣಿಗೆ ಸುಮಾರು 13ನೇ ವಯಸ್ಸಿಗೆ ನಿಂತು ಬಿಡುತ್ತದೆ. ಮೊದಮೊದಲು ಕೈಗೊಳ್ಳುವ ನಿವಾರಣೋ ಪಾಯಗಳಿಂದ ಮಾತನ್ನು ಸ್ವಲ್ಪಮಟ್ಟಿಗೆ ಉತ್ತಮಗೊಳಿಸಿಕೊಳ್ಳಲು ಸಾಧ್ಯ.

ನಿವಾರಣೆ :

ಮಾತಿನ ತೊಂದರೆಗಳನ್ನು ಬುದ್ಧಿಮಾಂದ್ಯತೆಯಂತೆಯೇ ಪೂರ್ಣ ನಿವಾರಿಸಲು ಆಗದ ಮಾತು. ಮಾತಿನ ಬೆಳವಣಿಗೆಗೆ ಉದ್ದೇಶಪೂರ್ವಕವಾಗಿ ಉತ್ತೇಜನ ಕೊಡುವುದು, ಮಾತಿನ ಉಪಯೋಗವನ್ನು ಹೇಳಿಕೊಡುವುದು, ಹಲವು ದೋಷಗಳಿಗೆ ಮಾತಿನ ಚಿಕಿತ್ಸೆ, ಮಾತಿನ ಸ್ಪಷ್ಟತೆಗೆ ಹೆಚ್ಚಿನ ಗಮನ ಹರಿಸುವುದು, ಮಾತಲ್ಲದೆ ಬೇರೆ ಬೇರೆ ರೀತಿಯ ಮಾಧ್ಯಮದಿಂದ ಸಂಪರ್ಕಸಾಧನೆ, ಇವುಗಳನ್ನು ತಜ್ಞರ ಸಹಾಯದಿಂದ ಮಾಡಿದರೆ ಮಗುವಿನ ಹೊಂದಾಣಿಕೆ ಉತ್ತಮವಾಗಿ ಸಂಸಾರದ ಮೇಲೆ ಆತನ ಹೊರೆ ಕಡಿಮೆಯಾಗುತ್ತದೆ. ಮಾತಿನ ಚಿಕಿತ್ಸೆಗಿಂತಲೂ ಮಾತಲ್ಲದೆ ಬೇರೆ ವಿಧದ ಬೆಳವಣಿಗೆಗೆ ಹೆಚ್ಚು ಗಮನ ಕೊಡುವುದು ಮುಖ್ಯ ಹಾಗೂ ಅದರಿಂದ ಮಾತಿಗೂ ಪರೋಕ್ಷವಾಗಿ ಅನುಕೂಲವಾಗುತ್ತದೆ. ಇವನ್ನು ಮುಂದೆ ಹೆಸರಿಸಿದೆ.

ಮಗು ಚಿಕ್ಕವನಿದ್ದಾಗಲೇ, ಸುಮಾರು ಒಂದು ವರ್ಷದಿಂದಲೇ, ಗಮನ ಹರಿಸಬೇಕಾದ ವಿಷಯವೆಂದರೆ ಮಗು ಎಷ್ಟರಮಟ್ಟಿಗೆ ಮಾತನ್ನು ಅರ್ಥಮಾಡಿಕೊಳ್ಳುತ್ತಿದ್ದಾನೆ ಎನ್ನುವುದು. ಆ ವಯಸ್ಸಿನ ಮಕ್ಕಳು ಸಾಮಾನ್ಯವಾಗಿ ಪರಿಚಿತ ವಸ್ತುಗಳನ್ನು ಗುರುತಿಸಬಲ್ಲವರಾಗಿರುತ್ತಾರೆ. ಮಗುವು ಕೈ, ಕಾಲು, ಕಿವಿ, ಫ್ಯಾನು, ಕಿಟಕಿ ಇವನ್ನು ಕೇಳಿದರೆ ತೋರಿಸಬಲ್ಲ, ಮಾತನಾಡುವುದಕ್ಕೂ ಮೊದಲೇ. ಓಡಾಡುವ ಮಗು ಹೇಳಿದ ಕಡೆ ಓಡಾಡಬಲ್ಲ. ಮಗುವಿಗೆ ಎಲ್ಲದರ ಹೆಸರುಗಳನ್ನು ಪರಿಚಯಿಸಲು ಪ್ರಾರಂಭಿಸಬೇಕು. ತಾನಾಗೇ ನೋಡದಿದ್ದಾಗಲೂ ನಾವು ಅವನಿಗೆ ಸುತ್ತಲಿನ ಪ್ರಪಂಚದ ಬಗ್ಗೆ ಗಮನ ಸೆಳೆಯಲು ಸಾಧ್ಯ. ಅಂದರೆ ಅವನ ಜೊತೆ ಸಾಕಷ್ಟು ಸಮಯ ಕಳೆಯಲು ತಯಾರಿರಬೇಕು. ಅವನಿಗೆ ಮಾತನ್ನು ಕೇಳುವ ಹಾಗೂ ವಸ್ತುಗಳಿಗೆ ಹೊಂದಿಸುವ ಅವಕಾಶ, ಅನುಭವ ಆಗಬೇಕು, ಮಾಡಿಕೊಡಬೇಕು. ನಮ್ಮ ಜೊತೆ ಒಡನಾಡುವಾಗ ಅವನು ಕೈಸನ್ನೆ ಮಾಡಲಿ, ಮಾತಾಡಲು ಪ್ರಯತ್ನಿಸಿದಾಗಲಿ ಅದರ ಬಗ್ಗೆ ಪ್ರೀತಿ ತೋರಿಸಿ ಉತ್ತೇಜನ ಕೊಡುತ್ತಿರಬೇಕು. ಮಗುವು ಉತ್ಸಾಹಿಯಾಗಿರದಿದ್ದರೂ ತಂದೆತಾಯಿಯರು ಅವನ ಒಡನಾಟ ಕಡಿಮೆ ಮಾಡಬಾರದು, ಇದೇ ಕಷ್ಟದ ಕೆಲಸ. ಒಂದು ಸಮಯದ ಮೇಲೆ ಮಗು ಮಾತನ್ನು ಅನುಕರಿಸುವುದಕ್ಕೆ ಪ್ರಯತ್ನ ಪಡಬಹುದು, ಆಗ ಹೇಳುವ ಮಾತನ್ನು ಸರಿಯಾಗಿ ಹೇಳದೆ ಹೋಗಬಹುದು. ಮಗುವು ಸರಿಯಾಗಿ ಹೇಳದ ಪದವನ್ನು ದೊಡ್ಡವರು ಸರಿಯಾಗಿ ಹೇಳಿ ಮಾದರಿಯಾಗಬೇಕು. ರಿಪೇರಿ ಮಾಡಲು ಪ್ರಯತ್ನಮಾಡಬಾರದು, ಮತ್ತೆ ಅದೇ ಮಾತನ್ನೇ ಸರಿಯಾಗಿ ಹೇಳಿದರೆ ಸರಿ. ಮಗು ಕೈಯಿಂದ ಸನ್ನೆ ಮಾಡಿದಾಗ ಅದಕ್ಕೆ ಸರಿಯಾದ ಮಾತನ್ನು ಒದಗಿಸಬೇಕು. ಇದು ಮಗು ತಾನಾಗಿ ಮಾತು ಶುರು ಮಾಡುವವರೆಗೂ ಸಾಗುತ್ತಲೇ ಇರಬೇಕು

ಮಾತಿನಲ್ಲಿ ಶಬ್ದಗಳು ಸರಿಯಾಗಿ ಬಾರದೆ ಹೋದಾಗ ಅವುಗಳನ್ನು ತಜ್ಞರು ಸರಿಯಾಗಿ ಕಲಿಯಲು ಸಹಾಯ ಮಾಡುತ್ತಾರೆ. ಸಾಮಾನ್ಯ ಮಗು ಕೂಡ ಎಲ್ಲ

ಮಾತಿನ ಶಬ್ದಗಳನ್ನು ಸರಿಯಾಗಿ ಆಡಲು ಕಲಿಯಲು ಆರು ವರ್ಷ ಸಮಯ ತೆಗೆದುಕೊಳ್ಳುತ್ತಾನೆನ್ನುವುದನ್ನೂ ಜ್ಞಾಪಕದಲ್ಲಿಡಬೇಕು. ಮೊದಲ ಪ್ರಯತ್ನದಲ್ಲೇ ಮಾತು ಸರಿಯಾಗಿರಬೇಕೆಂದು ಬಯಸಬಾರದು. ಸರಿಯಾಗಿ ಮಾತನಾಡುವುದಕ್ಕೆ ಪೂರಕವಾದ ಪ್ರಯತ್ನಗಳು ಹಲವಾರಿವೆ. ಮೊದಲನೆಯದಾಗಿ ಮಗುವಿನ ಗಮನ ನಮ್ಮ ಸರಿಯಾದ ಮಾತಿನ ಮೇಲೆ ಹರಿಯಬೇಕು. ಮಗುವಿನ ಮಾತಿನ ಅಂಗಗಳು ಸರಿಯಾಗಿವೆಯೋ ಎಂದು ಪರೀಕ್ಷೆ ಮಾಡಿಸಬೇಕು. ಮಾತಿನ ಅಂಗಗಳು ಸರಿಯಾಗಿ ಇದ್ದು ಸರಿಯಾಗಿ ಕೆಲಸ ಮಾಡುತ್ತಿವೆಯಾದರೆ ಮಗುವಿಗೆ ಅಗಿಯುವುದರಲ್ಲಿ, ನುಂಗುವುದರಲ್ಲಿ ಏನೂ ತೊಂದರೆ ಇರಬಾರದು. ಮಗು ಜೊಲ್ಲು ಸುರಿಸುತ್ತಿದೆಯೆಂದರೆ (ಎರಡು ವರ್ಷಗಳಾದ ಮೇಲೂ) ಅವನಲ್ಲಿ ಮಾತಿನ ಅಂಗಗಳ ತೊಂದರೆ ಏನಾದರೂ ಇರಬಹುದು. ಅವನಿಗೆ ಉಗುಳನ್ನು ಆಗಾಗ್ಗೆ ನುಂಗುತ್ತಿರುವುದಕ್ಕೆ ಹೇಳಿಕೊಡಬೇಕು. ಕೆಲವು ಸಲ ಈ ಜೊಲ್ಲು ಸುರಿಯುವ ತೊಂದರೆ ಎಷ್ಟು ಹೆಚ್ಚು ಅಂದರೆ ಸರ್ಜರಿಯ ಮೂಲಕವೇ ಜೊಲ್ಲು ಹೊರಗೆ ಸುರಿಯುವುದನ್ನು ತಪ್ಪಿಸಿ ಗಂಟಲಿಗೆ ಹೋಗುವ ಹಾಗೆ ಮಾಡಬೇಕಾಗುತ್ತದೆ.

ಮಗು ಮಾತು ಕಲಿಯಲು ಪ್ರಾರಂಭಿಸಿದ ಮೇಲೆಯೇ ಅವನನ್ನು ಶಾಲೆಗೆ ಕಳುಹಿಸುವ ಯೋಚನೆ ಮಾಡಬೇಕು. ಮಾತಾಡಿ ಅನುಭವವಿಲ್ಲದ ಮಗುವಿಗೆ ಶಾಲೆಯಿಂದ ಏನೂ ಪ್ರಯೋಜನವಾಗದು. ಬುದ್ಧಿಮಾಂದ್ಯ ಮಗುವಿಗೆ ಶಾಲೆಯಲ್ಲಿ ಕಲಿಯುವ ತೊಂದರೆ ಇದ್ದೇ ಇರುತ್ತದೆ. ಆದ್ದರಿಂದ ಅವನು ಕಲಿಯುವಲ್ಲಿ ಸಹಾಯ ಮಾಡಿದರೂ ಹಲವು ವರ್ಷಗಳ ನಂತರ ಮುಂದೆ ಹೋಗಲಾರದ ಮಟ್ಟಕ್ಕೆ ಅವನು ತಲುಪಬಹುದು. ಇದರ ಬಗ್ಗೆ ತಂದೆತಾಯಿಯರು ಅರಿತಿದ್ದಷ್ಟೂ ಮಗುವಿಗೆ ಒಳ್ಳೆಯದು. ನಮ್ಮಲ್ಲಿ ಎಲ್ಲ ಮಕ್ಕಳಿಗೂ ಸರಿಯಾದ ಶಾಲೆಗಳೇ ದುರ್ಲಭವಾದ್ದರಿಂದ ಬುದ್ಧಿಮಾಂದ್ಯ ಮಕ್ಕಳಿಗಾಗಿ ವಿಶೇಷ ಶಾಲೆಗಳ ಅಭಾವವೆಂದು ಹೇಳಬೇಕಾಗಿಲ್ಲ. ಸಾಮಾನ್ಯ ಶಾಲೆಗಳೇ ಈ ಮಕ್ಕಳನ್ನು ಕೆಲವು ವರ್ಷಗಳಷ್ಟು ಮಟ್ಟಿಗೆ ಇಟ್ಟುಕೊಳ್ಳುತ್ತವೆ. ಮಗುವಿಗೆ ಹೆಚ್ಚಿನ ತೊಂದರೆಗಳು ಇಲ್ಲದಿದ್ದಲ್ಲಿ, ಸಧ್ಯಕ್ಕೆ ಅಷ್ಟೇ ಸಾಧ್ಯ. ವಿಶೇಷ ಶಾಲೆಗಳಿದ್ದಲ್ಲಿ ಅವು ಈ ಮಕ್ಕಳಿಗೆ ನಿಧಾನವಾದ ಗತಿಯಲ್ಲಿ ಕಲಿಸಿ ಅವರೂ ಒಂದು ಮಟ್ಟದ ಅಕ್ಷರಸ್ಥರಾಗುವಂತೆ ತಯಾರು ಮಾಡಲು ಸಾಧ್ಯ.

ಮಗುವಿನ ತೊಂದರೆ ಬಹಳವೇ ಇದ್ದು ಮಾತು ಕಲಿಯಲಾರದೇ ಹೋಗುವ ಪಕ್ಷದಲ್ಲಿ ಮಗುವು ತನ್ನ ಅವಶ್ಯಕತೆಗಳನ್ನು ತಿಳಿಸಲು ಕೈಸನ್ನೆಯನ್ನಾದರೂ ಉಪಯೋಗಿಸಲು ಉತ್ತೇಜನ ಕೊಡಬೇಕಾಗುತ್ತದೆ. ಮಗುವು ಎಲ್ಲರೂ ಅರ್ಥಮಾಡಿಕೊಳ್ಳುವಂಥ ಸನ್ನೆಗಳನ್ನು ಬಳಸುವಂತೆ ಮಾಡುವುದು ಮುಖ್ಯ. ಶೌಚದ ಅವಶ್ಯಕತೆಗಳಿಗೆ, ಊಟ, ತಿಂಡಿ ತಿನಿಸುಗಳ ಬಗ್ಗೆ ಯಾರಿಗೂ ಅರ್ಥವಾಗುವಂತೆ ತಿಳಿಸುವುದು ಮುಖ್ಯ. 'ಬೇಕು', 'ಬೇಡ' ಇವುಗಳನ್ನು ಮಗು ಸ್ಪಷ್ಟವಾಗಿ ಸನ್ನೆ ಮಾಡಿ ತಿಳಿಸುವಂತೆ ಆಗಬೇಕು. ಬೇರೆಯವರು ಮಾತನಾಡಿದರೂ ಸಾಕು ಮಗುವಿನ ಅವಶ್ಯಕತೆ

ತೀರಬೇಕು, ಇದು ಅಗತ್ಯ. ತಜ್ಞರಿಂದ ಮಗುವಿನ ಜೊತೆ ಬೇರೆ ಯಾವ ರೀತಿ ವ್ಯವಹರಿಸಲು ಸಾಧ್ಯವೆಂದು ತಿಳಿದುಕೊಳ್ಳಬೇಕು.

ಮಗುವಿನ ತೊಂದರೆ ಬರಿಯ ಬುದ್ಧಿಮಾಂದ್ಯತೆಯದೊಂದೇ ಆದಾಗ ಮಗುವಿನ ಬೆಳವಣಿಗೆ ನಿಧಾನವಾಗುತ್ತೆ. ಎಲ್ಲವನ್ನೂ ಕಲಿಯಲಾರ, ತನ್ನ ಕಾಲ ಮೇಲೆ ತಾನು ನಿಂತು ನಿಭಾಯಿಸಲಾರ ಎಂದರೂ ಬೇರೆಯವರ ಮಾರ್ಗದರ್ಶನದಲ್ಲಿ ಇರುವುದನ್ನು ಕಲಿಯುವ ಸಾಧ್ಯತೆಗಳು ಹೆಚ್ಚು. ಆದರೆ ಬುದ್ಧಿಮಾಂದ್ಯತೆಯ ಜೊತೆ ಇತರ ತೊಂದರೆಗಳು ಇದ್ದರೆ ಪರಿಸ್ಥಿತಿ ಇನ್ನೂ ಗಂಭೀರವಾಗುತ್ತದೆ. ಬುದ್ಧಿಮಾಂದ್ಯತೆಗೆ ಕಾರಣವಾದ ಅಂಶಗಳು ಈ ಹೆಚ್ಚಿನ ತೊಂದರೆಗಳಿಗೆ ಕಾರಣವಾಗಿರಲು ಸಾಧ್ಯ. ಕಣ್ಣಿನ ತೊಂದರೆ, ಕಿವಿಯ ತೊಂದರೆ, ಪಾರ್ಶ್ವವಾಯು ಇವು ಮಗುವಿನ ತೊಂದರೆಯನ್ನೂ ಗುಣಿತಗೊಳಿಸುತ್ತವೆ. ಆಗ ಅನಿವಾರ್ಯವಾಗಿ ಮಗುವಿನ ಜೊತೆ ಒಬ್ಬರನ್ನು ಗಂಟು ಹಾಕಿದ ಹಾಗೆ ಯಾರಾದರೂ ಒಬ್ಬರ ಇರುವಿಕೆ ಅವಶ್ಯಕವಾಗುತ್ತದೆ. ಮಗುವಿನ ಹೊಂದಿಕೊಳ್ಳುವ ಶಕ್ತಿ ಬಹಳವೇ ಕಡಿಮೆಯಾಗುತ್ತದೆ. ಬರಿಯ ಬುದ್ಧಿಶಕ್ತಿಯ ತೊಂದರೆ ಮಾತ್ರವೇ ಇರುವವನು ಸಮಾಜಕ್ಕೆ ಹೊಂದಿಕೊಳ್ಳುವುದು ಕಷ್ಟವಾದರೂ ಸಾಧ್ಯ.

ಸಮಾಜಕ್ಕೆ ಹೊಂದಿಕೊಳ್ಳಲು ಸಹಾಯಮಾಡುವ ಮೊದಲು ಬುದ್ಧಿಯಿಂದ ಮಕ್ಕಳು ಮನೆಯಲ್ಲಿ ಹೊಂದಿಕೊಳ್ಳಲು ಅವಕಾಶಮಾಡಿಕೊಡಬೇಕು. ಮಗು ತಾನಾಗೇ ಕಲಿಯುತ್ತಿಲ್ಲವೆಂಬ ಕಾರಣದಿಂದ ಎಲ್ಲ ಕೆಲಸಗಳನ್ನು ಹಿರಿಯರೇ ಮಾಡಿ ಕೊಡುವ ಅಭ್ಯಾಸ ಆಗಬಾರದು. ಎಲ್ಲ ಕೆಲಸಗಳನ್ನು ಹಿರಿಯರು ಅವನಿಗೆ ಮಾಡಲು ಕಲಿಸಬೇಕು. ಸ್ನಾನ, ಶೌಚ, ಚೆಲ್ಲದೆ ಊಟಮಾಡುವುದು, ಬಟ್ಟೆ ತೊಡುವುದು ಇವನ್ನಂತೂ ಕಲಿಸಲೇಬೇಕು. ಅಲ್ಲದೆ ಮನೆಯಲ್ಲಿ ಎಲ್ಲ ರೀತಿಯ ಸಣ್ಣಪುಟ್ಟ ಕೆಲಸಗಳನ್ನು ಮಾಡಲು ಕಲಿಸಬೇಕು. ಇವನ್ನು ಮಕ್ಕಳು ಬೇಗ ಕಲಿಯುವುದಿಲ್ಲ ನಿಜ, ಆದರೂ ಕಲಿಯಲು ಶುರುಮಾಡಿಸಬೇಕು. ಸುಮ್ಮನೆ ಕಾಲ ಕಳೆಯುವುದಕ್ಕೆ ಬಿಡಬಾರದು. ಸರಳವಾದ ಕೆಲಸಗಳನ್ನೇ ಅವರಿಗೆ ಮಾಡಲು ಸಾಧ್ಯ, ಮತ್ತೆ ಮತ್ತೆ ಮಾಡುವಂಥ ಕೆಲಸಗಳನ್ನು ಬೇಸರವಿಲ್ಲದೆ ಮಾಡುತ್ತಾರೆ. ಇವಿಷ್ಟನ್ನೂ ಮನೆಯಲ್ಲಿ ಮಾಡುವುದು ಸಾಧ್ಯವಾದರೆ ಹೊರಗೆ ಹೊಂದಿಕೊಳ್ಳುವುದು ಸುಲಭವಾಗುತ್ತದೆ.

ಬುದ್ಧಿಮಾಂದ್ಯರೆಂದು ಯಾವುದೇ ಸಾಮಾಜಿಕ ಕಾರ್ಯಕ್ರಮದಿಂದ ಇವರನ್ನು ಹೊರಗಿಡಬಾರದು. ಅವುಗಳಿಂದ ಮರೆಮಾಡಿದರೆ ಅವರಿಗೆ ಆಗುವ ಅನ್ಯಾಯ ಬಹಳ, ಮುಂದೆ ಸಮಾಜಕ್ಕೆ ಹೊಂದಿಕೊಳ್ಳಲು ಕಷ್ಟವಾಗುತ್ತದೆ. ಈ ಮಕ್ಕಳ ಅಸಹಜ ವರ್ತನೆಗಳಿದ್ದರೆ ಮಾತಿನಿಂದಲೇ ಅವರನ್ನು ತಡೆಯುವುದು ಅಭ್ಯಾಸವಾಗಬೇಕು. ಮಗುವನ್ನು ಹೊರಗೆ ಕರೆದೊಯ್ದರೆ ಬರಿಯ ಮಗುವಿಗೇ ಅಲ್ಲ ಬೇರೆಯವರಿಗೂ ಈ ರೀತಿಯ ಮಕ್ಕಳ ಜೊತೆ ವರ್ತಿಸಲು ಕಲಿಯಲು ಸಾಧ್ಯವಾಗುತ್ತದೆ.

ಬುದ್ಧಿಮಾಂದ್ಯ ಮಕ್ಕಳು ಬೆಳೆದು ಹೊಂದಿಕೊಂಡರು ಆನ್ನುವಷ್ಟರಲ್ಲಿ ಒಂದು ಹೊಸ ತೊಂದರೆ ಶುರುವಾಗುತ್ತಿರುತ್ತದೆ. ಯೌವನದಲ್ಲಿ ಕಾಲಿಡುತ್ತಿರುವ ಇವರಿಗೆ ಸಾಮಾನ್ಯರಂತೆ ಹೊಂದಿಕೊಳ್ಳುವುದು ಪ್ರಯಾಸದ ಕೆಲಸ. ಇಲ್ಲೂ ತಂದೆತಾಯಿ ಅಥವಾ ತಜ್ಞರ ಸಹಾಯ ಅಗತ್ಯ. ಗಂಡು ಮಕ್ಕಳು ಹೆಣ್ಣು ಮಕ್ಕಳು ಕಲೆತು ಬೆಳೆಯುದಿದ್ದರೆ ಇವರ ಮುಜುಗರ ಇನ್ನೂ ಹೆಚ್ಚು. ತಮ್ಮ ಮನಸ್ಸಿನಲ್ಲಿ ಅನ್ನಿಸಿದ್ದನ್ನು ಮುಚ್ಚಿಕೊಳ್ಳದೆ ಆಡಿ, ಮಾಡಿ ಸಮಾಜದ ದೂಷಣೆಗೆ ಒಳಗಾಗುತ್ತಾರೆ. ಇದನ್ನು ತಡೆಯುವುದಕ್ಕೆ ಉಪಾಯವೆಂದರೆ ಅವರ ಪ್ರಶ್ನೆಗಳಿಗೆ ನೇರ, ಸರಳ ಉತ್ತರಗಳನ್ನು ಕೊಡಬೇಕು. ಅದಕ್ಕೆ ಮೊದಲು ಮಕ್ಕಳು ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಆ ಪ್ರಶ್ನೆಯನ್ನೇ ಕೇಳಬೇಡವೆಂದರೆ ಮುಂದೆ ತೊಂದರೆಗಳನ್ನು ಸ್ವಾಗತಿಸಿದಂತೆಯೇ ಆಗುವುದು. ಏನು ಕೂಡದು ಎಂಬುದನ್ನು ನೇರವಾಗಿ ಹೇಳಿಬಿಡಬೇಕು, ಬೇರೆಯವರಿಗೆ ಬೇಜಾರಾಗುವಂಥಹ ಕೆಲಸ ಮಾಡಬಾರದೆಂದು. ಬೆಳೆದ ಮೇಲೆ ಇವರಿಗೆ ಮದುವೆ ಮಾಡುವ ಬಗ್ಗೆ ಹಾಗೂ ಅದರ ಪರಿಣಾಮಗಳ ಬಗ್ಗೆ ತಜ್ಞರೊಂದಿಗೆ ವಿಚಾರಿಸಿ ಕೆಲಸ ಕೈಗೊಳ್ಳುವುದು ಒಳ್ಳೆಯದು.

ಒಬ್ಬನೇ ಸತ್ಯಾಗ್ರಹಿಯಾದರೂ ಕೊನೆವರೆಗೂ ಧೃಢವಾಗಿ ನಿಂತರೆ ಗೆಲುವು ಕಟ್ಟಿಟ್ಟ ಗಂಟು.

—ಗಾಂಧೀಜೀ

ಯಾವ ಬಗೆಯ ಸರ್ಕಾರ ಎಂಬುದನ್ನು ದಡ್ಡರು ಚರ್ಚಿಸಲಿ. ದಕ್ಷ ಆಡಳಿತ ನಡೆಸುವ ಸರಕಾರವೇ ಶ್ರೇಷ್ಠ ಸರಕಾರ.

—ಅಲೆಕ್ಸಾಂಡರ್ ಪೋಪ್

ಸಹಜವಾಗಿ ಸಿಕ್ಕಿದ್ದು ಹಾಲಿಗೆ ಸಮ, ಬೇಡಿದ ಬಳಿಕ ದೊರೆತದ್ದು ನೀರಿಗೆ ಸಮ, ಎಳೆದಾಟದಿಂದ ದೊರೆತುದು ರಕ್ತ ಸಮ.

—ಕಬೀರ್

ಏನನಾದರೂ ಕೊಟ್ಟು ಜ್ಞಾನಿಯಾ ಕೆಳೆಕೊಳ್ಳು, ಜ್ಞಾನಹೀನನಾ ಕೆಳೆಗೊಂಬು ಹಣವನ್ನು ನೀನಿತ್ತು ಕಳುಹು.

—ಸರ್ವಜ್ಞ

ಕೋಟೆಯನು ಕೊಟ್ಟರೂ ಕೂಟಕರ್ವಿಯ ಹೊಲ್ಲ ನೋಟದಲಿ ನಿಜವನರಿವ ಸುಜ್ಞಾನಿಯಾ ಕೂಟವೇ ಲೇಸು.

—ಸರ್ವಜ್ಞ

ಎಂ. ಎಸ್. ಚಂದ್ರಶೇಖರಪ್ಪ

ವ್ಯಕ್ತಿಗತ ಸಮಾಜಕಾರ್ಯದಲ್ಲಿ ಸಂದರ್ಶನ*
(Interview in Social Case Work)

'ಸಮಾಜಕಾರ್ಯ'ವನ್ನು ಒಂದು ವೃತ್ತಿ ಎಂದು ಪರಿಗಣಿಸಲಾಗಿದೆ. ಇದು ತನ್ನದೇ ಆದ ವಿಧಾನಗಳು, ತಂತ್ರ ಹಾಗೂ ಕೌಶಲ್ಯಗಳನ್ನು ಹೊಂದಿದೆ. ಸಮಾಜ ಕಾರ್ಯವು ಮೂಲ ವಿಧಾನಗಳಾದ ವ್ಯಕ್ತಿಗತ ಸಮಾಜಕಾರ್ಯ (Social Case Work), ವೃಂದಗತ ಸಮಾಜಕಾರ್ಯ (Social Group Work) ಮತ್ತು ಸಮುದಾಯ ಸಂಘಟನೆ ಹಾಗೂ ಸಾಮಾಜಿಕ ಪ್ರಚೋದನೆ (Community Organisation and Social Action)ಗಳನ್ನೊಳಗೊಂಡಿದೆ. ಇವುಗಳಿಗೆ ಪೂರಕ ವಾಗಿ ಸಹಾಯಕ ವಿಧಾನಗಳಾದ ಸಮಾಜಕಾರ್ಯ ಆಡಳಿತ (Social Work Administration) ಮತ್ತು ಸಮಾಜಕಾರ್ಯ ಸಂಶೋಧನೆ (Social Work Research)—ಇವುಗಳೂ ಇವೆ. ಸಮಾಜಕಾರ್ಯಕರ್ತನು ಮೂಲ ವಿಧಾನಗಳನ್ನು ಸ್ವತಂತ್ರವಾಗಿ ವಿವಿಧ ಕ್ಷೇತ್ರ-ಕಾರ್ಯಗಳಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು ಎಂಬ ಜ್ಞಾನವನ್ನು ಅನುಭವದ ಮೂಲಕ ಪಡೆಯುವುದು ಅತ್ಯಾವಶ್ಯಕ. ಈ ರೀತಿಯ ಕಾರ್ಯದಕ್ಷತೆಯನ್ನು ಪಡೆಯುವಲ್ಲಿ 'ಸಂದರ್ಶನ' (Interview)ವು ವಿಶಿಷ್ಟ ರೀತಿಯ ಪಾತ್ರವನ್ನು ವಹಿಸುತ್ತದೆ. ಈ ಲೇಖನದಲ್ಲಿ ಸಂದರ್ಶನದ ಮಹತ್ವ ಹಾಗೂ ಅದರ ಪ್ರಕ್ರಿಯೆಯ ಬಗ್ಗೆ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

'ಸಂದರ್ಶನ'ದ ಬಗ್ಗೆ ಹೆಚ್ಚು ಚರ್ಚಿಸುವ ಮೊದಲು, 'ಸಮಾಜಕಾರ್ಯ-ಪರಿಕಲ್ಪನೆಯ' ಬಗ್ಗೆ ಸೂಕ್ಷ್ಮವಾಗಿ ತಿಳಿಯುವುದು ಸೂಕ್ತ. ಈ ದಿಸೆಯಲ್ಲಿ ಅನೇಕ ತಜ್ಞರು ವಿವಿಧ ರೀತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಪ್ರೊಫೆಸರ್ ಎಚ್. ಎಚ್. ಸ್ಟ್ರಾಪ್ ರವರ ಪ್ರಕಾರ, "ತಮಗೆ ತಾವೇ ನೆರವಾಗಲು ಸಾಧ್ಯವಾಗಿಸುವಂತೆ ಜನರಿಗೆ ನೆರವಾಗುವಲ್ಲಿ ಉಪಯೋಗಿಸುವ ವೈಜ್ಞಾನಿಕ ಜ್ಞಾನದ ಮೂಲಕ ವ್ಯಕ್ತಿಯ,

* ನಾನು ಕ್ಷೇತ್ರ-ಕಾರ್ಯ ಮೇಲ್ವಿಚಾರಕನಾಗಿ ಕೆಲಸಮಾಡುತ್ತಿರುವುದರ ಆಧಾರದ ಮೇಲೆ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಗುಂಪಿನ ಅಥವಾ ಸಮುದಾಯದ ಅವಶ್ಯಕತೆಗಳ ಮೇಲೆ ಪ್ರಭಾವಬೀರುವಂಥ ನಾನಾ ಸಂಪನ್ಮೂಲಗಳನ್ನು ತಂದೊದಗಿಸುವ ಕಲೆಯೇ ಸಮಾಜಕಾರ್ಯ."[1]

ಇಲ್ಲಿ ಇನ್ನೂ ಒಂದು ವ್ಯಾಖ್ಯಾನವನ್ನು ಗಣನೆಗೆ ತೆಗೆದುಕೊಳ್ಳುವುದು ಉಚಿತ ಎಂದು ತೋರುತ್ತದೆ. ಎ. ಈ. ಫಿಂಕ್‌ರವರ ಮಾತಿನಲ್ಲಿ ಹೇಳುವುದಾದರೆ, "ಜನರು ಸಮಾಜದಲ್ಲಿ ಸಂಪೂರ್ಣವಾಗಿ ಅಥವಾ ಪರಿಣಾಮಕಾರಿಯಾಗಿ ಭಾಗವಹಿಸಲು ತಡೆಯನ್ನುಂಟುಮಾಡುತ್ತಿರುವ ಅಥವಾ ತಡೆಯನ್ನುಂಟುಮಾಡಬಹುದಾದಂಥ, ಇಂದಿನ ಅಥವಾ ಮುಂದಿನ ಸಾಮಾಜಿಕ ಮತ್ತು ಮಾನಸಿಕ ಅಡ್ಡಿ-ಆತಂಕಗಳನ್ನು ಏಕೈಕವಾಗಿ ಅಥವಾ ಗುಂಪುಗಳಲ್ಲಿ ತಾವು ನಿಭಾಯಿಸಿಕೊಳ್ಳಲು ಸಾಧ್ಯವಾಗುವಂತೆ ವ್ಯಕ್ತಿಗಳಿಗೆ ನೆರವಾಗಲು ರೂಪಿತವಾಗಿರುವ ಸೇವಾ ಸೌಲಭ್ಯಗಳ ಒದಗಿಸುವಿಕೆಯೇ ಸಮಾಜಕಾರ್ಯ."[2]

ಈ ಮೇಲೆ ಕಾಣಿಸಿದ ವ್ಯಾಖ್ಯಾನಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ಕಂಡುಬರುವ ಅಂಶಗಳೆಂದರೆ, ಸಮಾಜಕಾರ್ಯವು ವ್ಯಕ್ತಿ, ವೃಂದ ಅಥವಾ ಸಮುದಾಯಕ್ಕೋಸ್ಕರ ಕೆಲಸಮಾಡದೆ, ಅವರ ಜೊತೆಗೂಡಿ ಕೆಲಸಮಾಡುವುದು ಎರಡನೆಯದಾಗಿ, ವ್ಯಕ್ತಿ, ವೃಂದ ಹಾಗೂ ಸಮುದಾಯಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ತನ್ನದೇ ಆದ ವಿಧಾನಗಳನ್ನು ಉಪಯೋಗಿಸಿ ಬಗೆಹರಿಸಲು ಪ್ರಯತ್ನಿಸುವುದೇ ಆಗಿದೆ.

ವ್ಯಕ್ತಿಗತ ಸಮಾಜಕಾರ್ಯದಲ್ಲಿ ಸಂದರ್ಶನ

ಸಂದರ್ಶನ ಒಂದು ವಿಧಾನ ಹಾಗೂ ತಂತ್ರವೂ ಹೌದು. ಇದು ವ್ಯಕ್ತಿಗತ ಸಮಾಜಕಾರ್ಯದಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಯಾವುದೇ ವ್ಯಕ್ತಿಯ, ವೃಂದದ ಅಥವಾ ಸಮುದಾಯದ ವಿವಿಧ ರೂಪು-ರೇಖೆಗಳನ್ನು ಕೂಲಂಕಶವಾಗಿ ಅಧ್ಯಯನ ಮಾಡಿ ಮಾಹಿತಿಯನ್ನು ಸಂಗ್ರಹಿಸಲು ಇದು ಉಪಯುಕ್ತ. ಸಮಾಜಕಾರ್ಯದಲ್ಲಿ ಸಂದರ್ಶನಗಳನ್ನು ನಡೆಸಬೇಕಾದರೆ ವಿಧಾನಗಳಿಗನುಗುಣವಾಗಿ ಇರುವ ಹಲವು ವಿಶಿಷ್ಟತೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುವುದು. ಉದಾಹರಣೆಗೆ ವ್ಯಕ್ತಿಗತ ಸಮಾಜಕಾರ್ಯದಲ್ಲಿ ಸಂದರ್ಶನಗಳು ಕಾರ್ಯಕರ್ತ ಹಾಗೂ ಅರ್ಥಿಯ (Client) ನಡುವೆ ನಡೆದರೆ; ವೃಂದಗತ ಸಮಾಜಕಾರ್ಯದಲ್ಲಿ ಮುಖ್ಯವಾಗಿ ಕಾರ್ಯಕರ್ತ ಹಾಗೂ ವೃಂದ ಸದಸ್ಯರ ನಡುವೆ ನಡೆಯುವುದು. ಅದೇ ಸಮುದಾಯವಾದರೆ, ವ್ಯಕ್ತಿ ಹಾಗೂ ಗುಂಪುಗಳೊಂದಿಗೆ ಕಾರ್ಯಕರ್ತ ಸಂದರ್ಶನ ನಡೆಸಬೇಕಾಗುವುದು. ಅಂದಹಾಗೆ, ಸಮಾಜಕಾರ್ಯಕರ್ತನು

---

1. ಡಾ. ಎಚ್. ಎಂ. ಮರುಳಸಿದ್ಧಯ್ಯ : ಸಮಾಜಕಾರ್ಯ, ಅಭ್ಯುದಯ ಪ್ರಕಾಶನ, ಬೆಂಗಳೂರು, 1983 ಪು. 37.

2. ಅದೇ. ಪು. 37

ಸಮಸ್ಯೆ ಇರುವ ಅಥವಾ ಸಹಾಯ ಬೇಡುವ ವ್ಯಕ್ತಿ, ವೃಂದ ಹಾಗೂ ಸಮುದಾಯ ದೊಡನೆ ಸಂದರ್ಶನ ನಡೆಸುವ ಕೌಶಲ್ಯವನ್ನು ಹೊಂದಿರಬೇಕು.

ಸಮಾಜ ಕಲ್ಯಾಣ ಕೇಂದ್ರಕ್ಕೆ ಸಹಾಯವನ್ನು ಬಯಸಿಬರುವ ವ್ಯಕ್ತಿಗೆ ನಾವು 'ಅರ್ಥಿ' ಎಂದು ಕರೆಯುತ್ತೇವೆ. ಕೆಲವೊಮ್ಮೆ ಅಂತಹ ವ್ಯಕ್ತಿಯನ್ನು ಕೇಂದ್ರಕ್ಕೆ ಬೇರೆಯವರು ಕರೆತಂದು ಸೇರಿಸಬಹುದಾಗಿದೆ. ಮೊಟ್ಟಮೊದಲನೆಯ ದಾಗಿ ಕೇಂದ್ರದಲ್ಲಿರುವ ಕಾರ್ಯಕರ್ತನು ಅರ್ಥಿಯನ್ನು ಸಂದರ್ಶಿಸಿ, ಅಂಥ ವ್ಯಕ್ತಿಗೆ ಕೇಂದ್ರವು ಸಹಾಯಮಾಡಬಹುದೇ ಅಥವಾ ಇಲ್ಲವೇ ಎಂಬುದನ್ನು ಕಂಡುಹಿಡಿದು ಕೊಳ್ಳಬೇಕು. ಈ ಪ್ರಕ್ರಿಯೆ ಕೇಂದ್ರದ 'ಸ್ವೀಕಾರ ಧೋರಣೆ' (Intake-Policy) ಆಧಾರದ ಮೇಲೆ ನಿಂತಿದೆ. ವ್ಯಕ್ತಿಯ ಎಲ್ಲ ಸಮಸ್ಯೆಗಳಿಗೆ ಒಂದೇ ಕಲ್ಯಾಣ ಕೇಂದ್ರ ದಲ್ಲಿ ಪರಿಹಾರ ಸಿಗುತ್ತದೆಂದಾಗಲೀ ಅಥವಾ ಎಲ್ಲ ಕೇಂದ್ರಗಳಲ್ಲಿ ವಿವಿಧ ರೀತಿಯ ಸಮಸ್ಯೆಗಳಿಗೆ ಪರಿಹಾರವನ್ನು ಕೊಡುವಲ್ಲಿ ಕಾರ್ಯನಿರತವಾಗಿರುತ್ತವೆ ಎಂದಾಗಲೀ ಭಾವಿಸುವುದು ತಪ್ಪು. ಯಾಕೆಂದರೆ ವ್ಯಕ್ತಿಗಳ ಸಮಸ್ಯೆಗಳು ಅನೇಕ ವಿಧವಾಗಿದ್ದು, ವಿಶಿಷ್ಟರೀತಿಯ ಸೇವಾಕ್ರಮಗಳನ್ನು ನಿರೂಪಿಸಿ, ಬಗೆಹರಿಸಬೇಕಾಗುತ್ತದೆ. ಉದಾಹರಣೆಗೆ ಬಾಲಕರ ಮಾನಸಿಕ ಸಮಸ್ಯೆಗಳನ್ನು ಪರಿಶೀಲಿಸಿ ಬಗೆಹರಿಸುವ ಕೇಂದ್ರವು 'ವಿವಾಹರಹಿತ ತಾಯಂದಿರ'ನ್ನು ಸೇರಿಸಿಕೊಳ್ಳುವುದಿಲ್ಲ. 'ಸ್ವೀಕಾರ-ಧೋರಣೆ'ಯನುಸಾರ ಒಬ್ಬ ಅರ್ಥಿಗೆ ತನ್ನ ಕೇಂದ್ರದಲ್ಲೇ ಸಹಾಯ ಸಿಗಲು ಅವಕಾಶವಿದ್ದರೆ ಅಂಥ ಅರ್ಥಿಯನ್ನು ಕೇಂದ್ರಕ್ಕೆ ಸೇರಿಸಿಕೊಂಡು, ವ್ಯಕ್ತಿಗತ ಸಮಾಜ ಕಾರ್ಯ ಪ್ರಕ್ರಿಯೆಯಲ್ಲಿ ತೊಡಗಬಹುದಾಗಿದೆ.

ವ್ಯಕ್ತಿಗತ ಸಮಾಜಕಾರ್ಯಕರ್ತನು ಅರ್ಥಿಯೊಡನೆ ಸಂದರ್ಶನಗಳನ್ನು ನಡೆಸುವ ಮುನ್ನ ಅನೇಕ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಮೊದಲನೆಯದಾಗಿ ಕಾರ್ಯಕರ್ತನು ಅರ್ಥಿಯೊಡನೆ 'ಅನುನಯ-ಸಂಬಂಧ' (Rapport)ವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಗಬೇಕು. ಇಂತಹ ಸಂಬಂಧವನ್ನು ಹೊಂದಿರದಿದ್ದರೆ, ಅರ್ಥಿಯಿಂದ ಸತ್ಯಾಂಶಗಳನ್ನೊಳಗೊಂಡ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗುವುದಿಲ್ಲ. 'ಅರ್ಥಿಯ-ಸ್ವೀಕಾರ'ದಲ್ಲಿ ಪ್ರಾರಂಭಿಸಿದ ಮೊದಲ ಸಂದರ್ಶನದಿಂದ ಹಿಡಿದು ಅತನು ಕಲ್ಯಾಣ-ಕೇಂದ್ರದಿಂದ ಬಿಡುಗಡೆ ಯಾದಾಗ (ಸೂಕ್ತ ಚಿಕಿತ್ಸೆಯ ನಂತರ) ನಡೆಸುವ ಸಂದರ್ಶನದವರೆಗೆ ಅನೇಕ ಸಂದರ್ಶನಗಳನ್ನು ಕಾರ್ಯಕರ್ತ ನಡೆಸುವನು.

ಕಾರ್ಯಕರ್ತನು ಮಾಡಬೇಕಾದ ಇನ್ನೊಂದು ಆದ್ಯ ಕರ್ತವ್ಯವೆಂದರೆ ಸಂದರ್ಶನದ ದಿನಾಂಕ, ಸಮಯ (time) ಹಾಗೂ ಸ್ಥಳವನ್ನು ಅರ್ಥಿಯೊಡನೆ ಚರ್ಚಿಸಿದ ನಂತರ ನಿಗದಿಪಡಿಸುವುದು. ಒಮ್ಮೆ ನಿಗದಿಪಡಿಸಿದ ದಿನಾಂಕ ಹಾಗೂ ಸಮಯವನ್ನು ಕಾರ್ಯಕರ್ತನು ಹೇಗೆಂದರೆ ಹಾಗೆ ಸಕಾರಣವಿಲ್ಲದೆ ಬದಲಾಯಿಸ ಬಾರದು. ಕಾರ್ಯಕರ್ತನು ಆ ದಿನದಂದು ಗೈರುಹಾಜರಿಯಾಗಲೂಕೂಡದು.

ಹಾಗೇನಾದರೂ ಬದಲಾವಣೆ ಅನಿವಾರ್ಯ ಎಂದಾದರೆ, ಅರ್ಥಿಗೆ ಮೊದಲೇ ತಿಳಿಸ ತಕ್ಕದು. ಯಾಕೆಂದರೆ, ಇವುಗಳ ಪರಿಣಾಮದ ತೀವ್ರತೆ ಗರಿಷ್ಠಮಟ್ಟದ್ದು ಎಂದು ಬೇರೆ ಹೇಳಬೇಕಾಗಿಲ್ಲ. ಕಾರ್ಯಕರ್ತನು ಮೊದಲ ಎರಡು ಅಥವಾ ಮೂರು ಸಂದರ್ಶನಗಳಲ್ಲಿ ಅರ್ಥಿಯ ವ್ಯಕ್ತಿತ್ವಕ್ಕೆ ಧಕ್ಕೆ ಬರುವಂತಹ ಪ್ರಶ್ನೆಗಳನ್ನು ಹಾಕಲೇ ಬಾರದು. ಈ ಸಂದರ್ಶನಗಳಲ್ಲಿ ಅರ್ಥಿಯ ಯೋಗಕ್ಷೇಮ, ಸುಸ್ಥಿತಿ, ಹವ್ಯಾಸಗಳು, ಆಟಪಾಠಗಳು—ಇವುಗಳ ಬಗ್ಗೆ ಅನೌಪಚಾರಿಕ ಮಾತುಕತೆಯ ಮೂಲಕ ತಿಳಿದು ಕೊಳ್ಳಬೇಕು. ಇದರಿಂದ ಕಾರ್ಯಕರ್ತನು ಅರ್ಥಿಯಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿ, ಅಭಿವೃದ್ಧಿಪಡಿಸಲು ನೆರವಾಗುವುದು. ಒಮ್ಮೆ ಅರ್ಥಿಯು ಕಾರ್ಯಕರ್ತ ನಲ್ಲಿ ವಿಶ್ವಾಸವನ್ನು ಹೊಂದಿದನಂತರ ಕ್ಲಿಷ್ಟಪ್ರಶ್ನೆಗಳನ್ನು ಕೇಳಬಹುದು. ಅರ್ಥಿಗೆ ಸಂದರ್ಶನದ ಉದ್ದೇಶವನ್ನು ಮನದಟ್ಟುಮಾಡಿಕೊಡುವುದೂ ಸಹ ಕಾರ್ಯಕರ್ತನ ಕರ್ತವ್ಯ. ಇಂತಹ ಸಂದರ್ಶನಗಳಲ್ಲಿ ಅರ್ಥಿಯ ಸಹಕಾರ ಎಷ್ಟರಮಟ್ಟಿಗೆ ಆತನ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಹಾಗೂ ಮಹತ್ವಪೂರ್ಣವಾದುವು ಎಂಬುದನ್ನು ವಿವರಿಸಬೇಕು. ಇಲ್ಲಿ ಒಂದು ಮುಖ್ಯವಾದ ಅಂಶವನ್ನು ಹೇಳ ಬೇಕಾಗಿದೆ. ಅದೇನೆಂದರೆ, ಅರ್ಥಿಯು ಕಾರ್ಯಕರ್ತನ 'ಕಾರ್ಯದಕ್ಷತೆ'ಯ ಬಗ್ಗೆ ಸಂಪೂರ್ಣ ವಿಶ್ವಾಸ ಹೊಂದಿರಬೇಕು. ಅದೇ ರೀತಿ ಕಾರ್ಯಕರ್ತನೂ ಕೂಡ ಅರ್ಥಿಯ ವ್ಯಕ್ತಿತ್ವದ ಉತ್ಕೃಷ್ಟ ದಕ್ಷತೆಯ ಲಕ್ಷಣಗಳನ್ನು ಗುರುತಿಸಿ ಅವುಗಳ ಅಭಿವೃದ್ಧಿಗೆ ಪ್ರೋತ್ಸಾಹಿಸಬೇಕು. ಆದುದರಿಂದ ಕಾರ್ಯಕರ್ತನು ತನ್ನೆಲ್ಲ ಜಾಣ್ಮೆ, ಅನುಭವದ ಜ್ಞಾನ-ಇವುಗಳ ಒಟ್ಟಿನ ಉಪಯೋಗವನ್ನು ಇಲ್ಲಿ ಮಾಡಬೇಕಾಗಿದೆ. ಅರ್ಥಿಯ ಜಾತಿ, ಲಿಂಗ, ಗೋತ್ರ, ಬಣ್ಣ ಇವುಗಳನ್ನು ಆಧಾರವಾಗಿಟ್ಟುಕೊಂಡು ಅವನನ್ನು ಕೀಳುಮಟ್ಟದಲ್ಲಿ ಕಾಣಬಾರದು. ಕಾರ್ಯಕರ್ತ ಅರ್ಥಿಯನ್ನು ಒಬ್ಬ ವ್ಯಕ್ತಿ ಯಂತಲೂ, ಆತನಂತೆಯೇ ಅರ್ಥಿಗೂ ಕೂಡ ಅವನದೇ ಆದ ವ್ಯಕ್ತಿತ್ವ ಇರುವುದೆಂದೂ ತಿಳಿದು ಪ್ರಕ್ರಿಯೆಯಲ್ಲಿ ತೊಡಗುವುದು ಅತ್ಯಾವಶ್ಯಕ. ವ್ಯಕ್ತಿಗತ ಸಮಾಜಕಾರ್ಯ ದಲ್ಲಿ ಸಂದರ್ಶನ ನಡೆಸುವಾಗ, 'ಏಕಾಂತತೆ' (Privacy)ಯನ್ನು ಕಾಪಾಡಿಕೊಳ್ಳ ಬೇಕು. ಸಂದರ್ಶನ ನಡೆಯುವಾಗ, ನಡೆಸುವಾಗ ಕಾರ್ಯಕರ್ತ ಹಾಗೂ ಅರ್ಥಿ ಇಬ್ಬರೇ ಇರಬೇಕಾದುದು ಅಗತ್ಯ. ಯಾಕೆಂದರೆ ಇದರಿಂದ ಅರ್ಥಿಗೆ ತಾನು ಹೇಳ ಬೇಕಾದುದ್ದನ್ನೆಲ್ಲ ವಿವರವಾಗಿ ಧೈರ್ಯವಾಗಿ ಹೇಳಲು ಸಾಧ್ಯವಾಗುವುದು.

ಸಮಾಜಕಾರ್ಯದ ಯಾವುದೇ ವಿಧಾನವನ್ನು ತೆಗೆದುಕೊಂಡರೂ, ಅದು ಮುಖ್ಯವಾಗಿ ಮನೋ-ಸಾಮಾಜಿಕ ಅಂಶಗಳನ್ನು ಒಳಗೊಂಡು, ಮಾನವ ಸಂಬಂಧ ಗಳ ಹಂದರವನ್ನು ಆಧರಿಸಿ, ಸಂದರ್ಶನ-ಸಂವಾದ, ಚರ್ಚೆ-ಸಂವಹನ, ಇಂಥ ಕ್ರಿಯೆ ಗಳ ಮೂಲಕ ನಡೆಯುವ ಕಾರ್ಯವಾಗಿದೆ. ಇದಕ್ಕೆ ಪೂರಕವಾಗಿ ಒಂದು ಉದಾಹರಣೆಯನ್ನು ಕೊಡುವುದು ಸೂಕ್ತ ಎಂದು ನನ್ನ ಭಾವನೆ.

ನನ್ನ ಮೇಲ್ವಿಚಾರಣೆ (Supervision)ಯಲ್ಲಿ ಕ್ಷೇತ್ರಕಾರ್ಯ ಮಾಡುತ್ತಿದ್ದ

ವಿದ್ಯಾರ್ಥಿಗಳಲ್ಲಿ ಒಬ್ಬ ವಿದ್ಯಾರ್ಥಿನಿ ವೈಯಕ್ತಿಕ ಸಮ್ಮೇಳನದಲ್ಲಿ ನನ್ನನ್ನು ಭೇಟಿಯಾಗಿ ಕೆಳಗೆ ಕೊಟ್ಟಿರುವ 'ಪ್ರಸಂಗ'ವನ್ನು ವಿವರಿಸಿ ಸೂಕ್ತಮಾರ್ಗದರ್ಶನವನ್ನು ಕೊಡಲು ಕೇಳಿಕೊಂಡಳು. ಆ 'ಪ್ರಸಂಗ'ವನ್ನು ಗ್ರಹಿಸಿದ ನಾನು 'ಸಮಸ್ಯೆಯನ್ನು ಬಗೆಹರಿಸುವ ಪ್ರಕ್ರಿಯೆ'ಯಲ್ಲಿ ಭಾಗವಹಿಸಿದ್ದ ನನ್ನ ವಿದ್ಯಾರ್ಥಿಗೆ ಮಾರ್ಗದರ್ಶನ ನೀಡಿದೆನು. ಅದರ ಒಟ್ಟು ಸಾರಾಂಶ ಈ ರೀತಿ ಇದೆ :

ಮೈಸೂರು ನಗರದ ಪ್ರತಿಷ್ಠಿತ ಬಡಾವಣೆಯೊಂದರಿಂದ ಒಂದು ಮಾದರಿ ಶಾಲೆಗೆ ಬರುತ್ತಿದ್ದ ವಿದ್ಯಾರ್ಥಿನಿ (ಇನ್ನುಮುಂದೆ 'ಅರ್ಥಿ' ಎಂದು ಸಂಭೋದಿಸಲಾಗುವುದು) ಆರನೇ ತರಗತಿಯಲ್ಲಿ ಓದುತ್ತಿದ್ದಳು. ಅರ್ಥಿಯು ಮೊದಲು ತರಗತಿಗೆ ಪ್ರತಿದಿನವೂ ತಪ್ಪದೆ ಹಾಜರಾಗುತ್ತಿದ್ದಳಲ್ಲದೆ, ಓದಿನಲ್ಲೂ ಸಹ ಹಿಂದೆ ಬಿದ್ದಿರಲಿಲ್ಲ. ಆದರೆ ಸಮಾಜಕಾರ್ಯ ವಿದ್ಯಾರ್ಥಿನಿ ಈ ಅರ್ಥಿಯನ್ನು 'ಸ್ವೀಕಾರ' ಮಾಡುವ ವೇಳೆಗಾಗಲೇ (ಅಂದರೆ ಸ್ವೀಕಾರ ಮಾಡಿಕೊಂಡ ದಿನಾಂಕದ ಒಂದು ತಿಂಗಳ ಹಿಂದಿನಿಂದ) ಅವಳು ತರಗತಿಗೆ ಸರಿಯಾಗಿ ಹೋಗದೆ ಸ್ವ-ಇಚ್ಛಾನುಸಾರವಾಗಿ ಕಾಲಹರಣಮಾಡುತ್ತಿದ್ದಳು. ಅದರಿಂದಾಗಿ ಅವಳ ವಿದ್ಯಾಭ್ಯಾಸದಲ್ಲೂ ಕೂಡ ನಕಾರಾತ್ಮಕ ಬದಲಾವಣೆಯಾಗಿತ್ತು.

ನನ್ನ ಮಾರ್ಗದರ್ಶಕ್ಕನುಗುಣವಾಗಿ ವಿದ್ಯಾರ್ಥಿಯು ಅರ್ಥಿಯನ್ನು ಮೊದಲೆರಡು ಸಲ ಭೇಟಿಯಾದಾಗ ಆಕೆ ಏನನ್ನೂ ಉತ್ತರಿಸಲು ನಿರಾಕರಿಸಿದ್ದರೂ, ನಂತರದ ಸಂದರ್ಶನಗಳಲ್ಲಿ ಸತ್ಯಾಂಶವನ್ನೊಳಗೊಂಡ ಮಾಹಿತಿಯನ್ನು ಪಡೆಯುವಲ್ಲಿ ಯಶಸ್ವಿಯಾದಳು. ಅರ್ಥಿಯು ಕೊಟ್ಟ ಮಾಹಿತಿ ಈ ರೀತಿ ಇದೆ: ಒಂದು ತಿಂಗಳ ಹಿಂದೆ (ಅರ್ಥಿಯನ್ನು ಸ್ವೀಕಾರ ಮಾಡಿದ ದಿನಾಂಕದಿಂದ) ತರಗತಿಯಲ್ಲಿ ಗಣಿತಶಾಸ್ತ್ರ ಅಧ್ಯಾಪಕಿ ಒಂದು ಲೆಕ್ಕವನ್ನು ಕಪ್ಪು ಹಲಗೆಯಮೇಲೆ ಬರೆದು ಎಲ್ಲ ವಿದ್ಯಾರ್ಥಿಗಳಿಗೂ ಉತ್ತರಿಸಲು ಹೇಳಿದ್ದರಂತೆ. ಆದರೆ ಅರ್ಥಿ ಲೆಕ್ಕಕ್ಕೆ ಉತ್ತರವನ್ನು ಬಿಡಿಸದಿದ್ದಾಗ, ಅಧ್ಯಾಪಕಿ ಹಲವು ಮಾತುಗಳನ್ನು ಬಳಸಿ ತಮಾಷೆ ಮಾಡಿದಾಗ ಉಳಿದ ವಿದ್ಯಾರ್ಥಿಗಳೆಲ್ಲ ನಕ್ಕಿದ್ದಕ್ಕೆ ಮಾನಸಿಕವಾಗಿ ನೊಂದುಕೊಂಡಿದ್ದಳು. ಅರ್ಥಿ ತನ್ನ ಸಹಪಾಠಿಗಳಿಂದ ಹಾಗೂ ಅಧ್ಯಾಪಕಿಯಿಂದ ಆದ ಅವಮಾನವನ್ನು (ಅರ್ಥಿ ತಿಳಿದುಕೊಂಡಂತೆ) ತಡೆಯಲಾರದೆ ತರಗತಿಗಳಿಗೆ ದಿನವೂ ಹೋಗುವುದನ್ನು ನಿಲ್ಲಿಸಿ ಆ ಸಮಯವನ್ನು ಸಹಪಾಠಿಗಳಲ್ಲದ ತನ್ನ ಸ್ನೇಹಿತರ ಜೊತೆಯಲ್ಲಿ ಕಳೆಯಲು ಪ್ರಾರಂಭಿಸಿದಳು.

ಈ ಎಲ್ಲ ಮಾಹಿತಿಯನ್ನು ಸಂದರ್ಶನಗಳ ಮೂಲಕ ಸಂಗ್ರಹಿಸಿದ ಮೇಲೆ, ವಿದ್ಯಾರ್ಥಿಯು ತರಗತಿಯ ಅಧ್ಯಾಪಕಿಯನ್ನು ಭೇಟಿಮಾಡಿ ಅರ್ಥಿಯ ಸ್ಥಿತಿ-ಗತಿಗೆ ಕಾರಣವನ್ನು ಕೂಲಂಕಶವಾಗಿ ಚರ್ಚಿಸಿದ್ದಲ್ಲದೆ, ಮುಂದೆ ಅರ್ಥಿಯನ್ನು ಈ ರೀತಿಯಾಗಿ ನಡೆಸಿಕೊಳ್ಳದಿದ್ದರೆ, ಆಕೆ ಹಿಂದಿನ ಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲವೆಂದು ಸಲಹೆಯನ್ನಿತ್ತಳು. ತರಗತಿಯ ಅಧ್ಯಾಪಕಿ ಹಾಗೂ-ಶಾಲೆಯ ಮುಖ್ಯೋಪಾಧ್ಯಾಯರ ಜೊತೆ ಈ ವಿಷಯದ ಬಗ್ಗೆ ಚರ್ಚಿಸಿದನಂತರ, ವಿದ್ಯಾರ್ಥಿ ಅರ್ಥಿಯ ತಂದೆ-ತಾಯಿಯನ್ನು ಭೇಟಿಮಾಡಿದಳು (ವಿದ್ಯಾರ್ಥಿಯ ಜೊತೆ ನಾನು ಕೂಡ ಹೋಗಿದ್ದೆ).

ವಿದ್ಯಾರ್ಥಿಯು ಅರ್ಥಿಯ ಬಗ್ಗೆ ವಿವರವಾಗಿ ಅವಳ ತಂದೆ-ತಾಯಿಗೆ ತಿಳಿಸಿದಾಗ, ಅವರು ಆಶ್ಚರ್ಯ ವ್ಯಕ್ತಪಡಿಸಿದರು. ಅಷ್ಟೇ ಏಕೆ ಕೋಪವನ್ನು ತೋರಿದರು. ಅವರ ಹೇಳಿಕೆಯ ಪ್ರಕಾರ ಅರ್ಥಿ ದಿನವೂ ಬೆಳಿಗ್ಗೆ 8-40ಕ್ಕೆ ಶಾಲಾ ವಾಹನದಲ್ಲಿ ಹೋಗಿ ಸಂಜೆ 5 ಗಂಟೆಯ ಸುಮಾರಿಗೆ ಮನೆಗೆ ಹಿಂದಿರುಗುತ್ತಿದ್ದಳು. ಅದು ನಿಜವೂ ಹೌದು. ಆದರೆ ಒಂದು ವಿಚಾರವನ್ನು ನಾವು ಇಲ್ಲಿ ಗಮನಿಸುವುದು ಅತ್ಯಾವಶ್ಯಕ. ಅದೇನೆಂದರೆ ತಂದೆ ಹಾಗೂ ತಾಯಿ-ಇಬ್ಬರೂ ಸರ್ಕಾರಿ ನೌಕರಿಯಲ್ಲಿದ್ದರು. ಆ ಕಾರಣದಿಂದಲೋ ಏನೋ ಇವರು ಒಮ್ಮೆಯಾದರೂ (ಆ ಎರಡು ತಿಂಗಳಲ್ಲಿ) ಶಾಲೆಗೆ ಹೋಗುವುದಾಗಲೀ, ಅಧ್ಯಾಪಕರನ್ನು ಭೇಟಿಯಾಗಿ ತಮ್ಮ ಮಗಳ ಬಗ್ಗೆ ವಿಚಾರ ಮಾಡುವುದಾಗಲೀ ಸಮಯದ (ಅರ್ಥಿಯ ತಂದೆ-ತಾಯಿಯ ಪ್ರಕಾರ) ಅಭಾವದಿಂದ ಆಗಿರಲಿಲ್ಲ. ನಾನು ಮತ್ತು ನನ್ನ ವಿದ್ಯಾರ್ಥಿ ಅರ್ಥಿಯ ತಂದೆ-ತಾಯಿಗೆ ತಿಂಗಳಿಗೊಮ್ಮೆಯಾದರೂ ಆಕೆಯನ್ನು ಶಾಲೆಯಲ್ಲಿ ಭೇಟಿಮಾಡಿ ಅವಳ ಚಟುವಟಿಕೆಗಳ ಬಗ್ಗೆ ವಿಚಾರಿಸಿ-ಎಂದು ಸಲಹೆಯನ್ನಿತ್ತೆವು. ಇದರ ಜೊತೆಗೆ ಮನೆಯಲ್ಲಿ ಆಕೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಹರಿಸುವಂತೆ ಮಾಡಲು ತಿಳಿಸಿದೆವು.

ವಿದ್ಯಾರ್ಥಿ ಅರ್ಥಿಯನ್ನು ಭೇಟಿಯಾಗಿ ಎಲ್ಲ ವಿಷಯಗಳ ಬಗ್ಗೆ ಕೂಲಂಕಶವಾಗಿ ವಿವರಿಸಿದ್ದಲ್ಲದೆ, ಆಕೆಯನ್ನು ಅಧ್ಯಾಪಕರಲ್ಲಿಗೆ ಕರೆದುಕೊಂಡು ಹೋಗಿ ಮುಖಾ-ಮುಖಿ ಭೇಟಿ ಮಾಡಿಸಿದಳು. ಇವೆಲ್ಲದರ ಪರಿಣಾಮದಿಂದಾಗಿ 'ಆತ್ಮವಿಶ್ವಾಸ ಹೊಂದಿದ ಅರ್ಥಿ ಶಾಲೆಗೆ ಪ್ರತಿದಿನ ಹಾಜರಾಗಲು ಪ್ರಾರಂಭಿಸಿದ್ದಲ್ಲದೆ, ಪಾಠ-ಪ್ರವಚನಗಳ ಬಗ್ಗೆ ಹೆಚ್ಚಿನ ಗಮನ ನೀಡತೊಡಗಿದ್ದು ಕಂಡುಬಂತು. ಈ ರೀತಿಯ ಸಂದರ್ಶನಗಳಿಂದ ಅಧ್ಯಾಪಕಿಗೆ, ತಂದೆ-ತಾಯಿಗೆ ಹಾಗೂ ಅರ್ಥಿಗೆ ತಮ್ಮ ತಪ್ಪಿನ ಅರಿವಾಗಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ವಿದ್ಯಾರ್ಥಿ ಪ್ರೋತ್ಸಾಹಕಳಾಗಿ ಕಾರ್ಯನಿರ್ವಹಿಸಿದ್ದಳು.

ಈ ಒಂದು 'ಪ್ರಸಂಗ'ದಲ್ಲಿ ನನ್ನ ವಿದ್ಯಾರ್ಥಿ ಮಾಡಿದ್ದಾದರೂ ಏನು? ಅರ್ಥಿಗೆ ಸಂಬಂಧಪಟ್ಟವರನ್ನು ಭೇಟಿಯಾಗಿ, ಸಮಸ್ಯೆಯ ಕಾರಣವನ್ನು ಹುಡುಕಿ ಅದರ 'ಪರಿಹಾರ'ಕ್ಕೆ ಸೂಕ್ತ ಸಲಹೆಯನ್ನು ಕೊಟ್ಟು ಸಮಸ್ಯೆಯನ್ನು ಬಗೆಹರಿಸಲು ಪ್ರೋತ್ಸಾಹಿಸಿದ್ದಷ್ಟೆ. ಇದೆಲ್ಲವೂ ಆದದ್ದು ಸಂದರ್ಶನಗಳಿಂದಲ್ಲವೆ? ಆದುದರಿಂದ ವ್ಯಕ್ತಿಗತ ಸಮಾಜಕಾರ್ಯದಲ್ಲಿ 'ವ್ಯಕ್ತಿಗತ ಸಮಸ್ಯೆ'ಗಳಿಗೆ ಪರಿಹಾರ ಕಂಡು ಹಿಡಿಯುವಲ್ಲಿ ಸಂದರ್ಶನ ಮುಖ್ಯ ಪಾತ್ರವನ್ನು ವಹಿಸುತ್ತದೆ.

ಉಪಸಂಹಾರ

'ಸಂದರ್ಶನ' ಈ ಹಿಂದೆ ಹೇಳಿದಂತೆ ಒಂದು ಸಾಧನ ಹಾಗೂ ತಂತ್ರವೂ ಹೌದು. ಸಂದರ್ಶನ ನಡೆಸುವಾಗ ಸಮಾಜಕಾರ್ಯಕರ್ತ ಅತ್ಯಂತ ಜಾಣ್ಮೆಯಿಂದ

ವರ್ತಿಸಬೇಕಾದುದು ಅವಶ್ಯ. ಕಾರ್ಯಕರ್ತನು ಅರ್ಥಿಗೆ ಆತನ ಅಭಿಪ್ರಾಯಗಳನ್ನು ತಿಳಿಸಲು ಸಾಕಷ್ಟು ಕಾಲಾವಕಾಶವನ್ನು ಒದಗಿಸುವುದರ ಜೊತೆಗೆ ಅರ್ಥಿ ಹೇಳಿದ್ದನ್ನೆಲ್ಲ ಬಹಳ ತಾಳ್ಮೆಯಿಂದ ಕೇಳಿಸಿಕೊಳ್ಳಬೇಕು. ಅರ್ಥಿಯ ಹೇಳಿಕೆಯಲ್ಲಿ ಕಾರ್ಯಕರ್ತನಿಗೆ ಬೇಕಾಗದಿದ್ದುದೂ ಇರಬಹುದು. ಆದರೆ ಬೇಕಾದ ಹೇಳಿಕೆಯನ್ನಷ್ಟೇ ದಾಖಲಿಸಿಕೊಳ್ಳುವುದು ಕಾರ್ಯಕರ್ತನ ಕರ್ತವ್ಯ. ಕಾರ್ಯಕರ್ತನು ಅರ್ಥಿಯ ಹೇಳಿಕೆಯನ್ನು ದಾಖಲಿಸಿಕೊಳ್ಳುವುದಲ್ಲದೆ ಅರ್ಥಿಯ ಮುಖದಿಂದ ಹೊರಹೊಮ್ಮುವ ಭಾವನೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅವುಗಳನ್ನು ಸರಿಯಾದ ರೀತಿಯಲ್ಲಿ ವಿಶ್ಲೇಷಿಸುವುದು ಸಂದರ್ಶನದ ಬಹು ಮುಖ್ಯ ಅಂಶ.

ವಿವೇಕವಿಲ್ಲದ ಜನರಿಗೆ ಒಳ್ಳೆಯವರ ಮಾತು ಅಸಂಬದ್ಧ.

—ಕ್ಷತ್ರ ಚೂಡಾಮಣಿ

ಶೂರರಿಗೆ ಯುದ್ಧದಲ್ಲಿ ಜಯ ಅಪಜಯ ಸ್ಥಿರವಲ್ಲ.

—ಕ್ಷತ್ರ ಚೂಡಾಮಣಿ

ಸಜ್ಜನರು ತಮ್ಮ ಉಪಯುಕ್ತತೆಯನ್ನು ಮಾಡಿತೋರಿಸುವವರೆ ವಿನಾ ಆಡಿ ತೋರಿಸುವವರಲ್ಲ.

—ನೈಷದೀಯಚರಿತ

ಅಲ್ಪವಾದ ವಸ್ತುಗಳು ಹೆಚ್ಚುಸಂಖ್ಯೆಯಲ್ಲಿ ಒಟ್ಟಿಗೆ ಸೇರಿದರೆ ಯಾವ ಮಹತ್ಕಾರ್ಯವನ್ನಾದರೂ ಸಾಧಿಸುತ್ತವೆ. ನಾರುಗಳು ಹಗ್ಗವಾಗಿ ಮಾರ್ಪಟ್ಟು ಮದ್ದಾನೆಯನ್ನು ಸಹ ಕಟ್ಟಿಹಾಕುತ್ತವೆ.

—ಬೋಜ ಪ್ರಬಂಧ

ಎಸ್. ತಿಪ್ಪೇಸ್ವಾಮಿ

ಛಾಯಾಗ್ರಹಣ ಕಲೆ

ಒಂದು ಒಳ್ಳೆಯ ಚಿತ್ರ ಒಂದು ಸಾವಿರ ಪದಗಳಿಗೆ ಸಮಾನ ಎನ್ನುವ ನಾಣ್ಣುಡಿ ಈಗಾಗಲೇ ಸಾಕಷ್ಟು ಪ್ರಚಲಿತದಲ್ಲಿದೆ. ಛಾಯಾಗ್ರಹಣ ಎನ್ನುವ ಪದ ಗ್ರೀಕ್ ಶಬ್ದದಿಂದ ಬಂದಿದೆ. ಛಾಯ ಅಂದರೆ ಬೆಳಕು, ಗ್ರಹಣ ಅಂದರೆ ಸೆರೆಹಿಡಿಯುವುದು ಅಥವಾ ಸಂಗ್ರಹಿಸುವುದು. ಬೆಳಕಿನಿಂದ ಗ್ರಹಿಸುವುದಕ್ಕೆ ಛಾಯಾಗ್ರಹಣವೆಂದು ಹೆಸರು.

ಛಾಯಾಗ್ರಹಣ ಎನ್ನುವ ಪದವನ್ನು ಮೊಟ್ಟಮೊದಲನೆಯ ಬಾರಿಗೆ ೧೮೩೯ರಲ್ಲಿ ಜಾನ್ ಹರ್ಷಲ್ ಎನ್ನುವ ವಿಜ್ಞಾನಿ ಬಳಸಲು ಪ್ರಾರಂಭಿಸಿದ. ಕ್ಯಾಮರ ಎಂದರೆ ಬಿಂಬಗ್ರಾಹಿ ಅಥವಾ ಚಿತ್ರಗ್ರಾಹಿ. ಕ್ಯಾಮರ "ಅಬ್ಸ್ಕ್ಯೂರ" ಮೊಟ್ಟಮೊದಲಿಗೆ ನಿರ್ಮಿತವಾದ ಕ್ಯಾಮರ. ಅಬ್ಸ್ಕ್ಯೂರ ಎನ್ನುವ ಪದವನ್ನು ಲ್ಯಾಟಿನ್‌ನಿಂದ ಬಳಸಲಾಗಿದೆ. ಅಬ್ಸ್ಕ್ಯೂರ ಎಂದರೆ ಕತ್ತಲೆ ಕೋಣೆ. ಕ್ಯಾಮರ ಅಬ್ಸ್ಕ್ಯೂರದ ಬಳಕೆ ಹನ್ನೊಂದನೆಯ ಶತಮಾನದಲ್ಲಿಯೇ ಬಳಕೆಗೆ ಬಂದಿತು. ಹಿಂದೆ ಅನೇಕ ಕಲಾವಿದರು ತಮ್ಮ ಕಲಾಕೃತಿಗಳನ್ನು ಈ ಕ್ಯಾಮರ ಅಬ್ಸ್ಕ್ಯೂರದ ನೆರವಿನಿಂದ ಚಿತ್ರಿಸುತ್ತಿದ್ದರು.

ಕ್ಯಾಮರ ಅಬ್ಸ್ಕ್ಯೂರ ಒಂದು ದೊಡ್ಡ ಕತ್ತಲೆಯ ಪೆಟ್ಟಿಗೆ. ಈ ಪೆಟ್ಟಿಗೆಯ ಮುಂಭಾಗದಲ್ಲಿ ಸಣ್ಣದೊಂದು ರಂಧ್ರವಿದ್ದು, ಕಲಾವಿದ ತಾನು ಯಾವ ದೃಶ್ಯವನ್ನು ನೈಜವಾಗಿ ಚಿತ್ರಿಸಬೇಕೆಂದು ನಿರ್ಧರಿಸಿಕೊಂಡಿರುತ್ತಿದ್ದನೋ, ಅಂತಹ ದೃಶ್ಯದ ಮುಂದೆ ಆ ಪೆಟ್ಟಿಗೆಯನ್ನು ಇಟ್ಟು, ಆ ಚಿಕ್ಕ ರಂಧ್ರದಿಂದ ಹಾದ ನೈಸರ್ಗಿಕ ಚಿತ್ರ ಅದರ ಎದುರುಗಡೆಯ ಗೋಡೆಯ ಮೇಲೆ ಬೀಳುತ್ತಿತ್ತು. ಈ ರೀತಿಯಾಗಿ ಮೂಡಿದ ಚಿತ್ರದ ದೃಶ್ಯವನ್ನು ಕಲಾವಿದ ತನ್ನ ಕ್ಯಾನ್‌ವಾಸ್ ಮೇಲೆ ಚಿತ್ರೀಕರಿಸುತ್ತಿದ್ದ.

ಹದಿನಾರನೆಯ ಶತಮಾನದಲ್ಲಿ ಕ್ಯಾಮರಾ ಅಬ್ಸ್ಕ್ಯೂರವನ್ನು ಬಳಸಿ ಸುಂದರ ಕಲಾಕೃತಿಗಳನ್ನು ರಚಿಸಿದ ಕೀರ್ತಿ ಶ್ರೇಷ್ಠ ಕಲಾವಿದ ಲಿಯೋನಾರ್ಡೊ ಡಾವಿಂಚಿಯವರಿಗೆ ಸಲ್ಲುತ್ತದೆ. ಕಾಲಕ್ರಮೇಣ ಅನೇಕ ಪ್ರಯೋಗಗಳಿಂದಾಗಿ ಈ ಹಿಂದೆ

ಕೇವಲ ದೃಶ್ಯಗಳನ್ನು ಕಂಚದಲ್ಲಿ ಸೆರೆಹಿಡಿಯಲು ಉಪಯೋಗಿಸುತ್ತಿದ್ದ ಈ ಕ್ಯಾಮರ ಅನೇಕ ವಿಜ್ಞಾನಿಗಳ ಅವಿರತ ಹೋರಾಟದಿಂದಾಗಿ ಕ್ಯಾಮರಕ್ಕೆ ಬೇಕಾದ ಮಸೂರ ಮತ್ತು ಫಿಲಂಗಳ ಉಪಯೋಗದಿಂದಾಗಿ ನಾವು ಈಗ ಸುಲಭವಾಗಿ ಛಾಯಾಚಿತ್ರ ತೆಗೆಯುವಂತೆ ನೆರವು ಮಾಡಿಕೊಟ್ಟಿದ್ದಾರೆ

ಕಲಾವಿದ ಅಥವಾ ಛಾಯಾಗ್ರಾಹಕನಿಗೆ ಒಂದು ಸುಂದರವಾದ ದೃಶ್ಯವನ್ನು ಚಿತ್ರಿಸಲು ಅಗತ್ಯವಾಗಿ ಕೆಲವು ವಸ್ತುಗಳು ಬೇಕೇ ಬೇಕು. ಒಬ್ಬ ಕಲಾವಿದ ತನ್ನ ಮನಸ್ಸಿನಲ್ಲಿರುವ ಸುಂದರ ಕಲಾಕೃತಿಯನ್ನು ಚಿತ್ರಿಸಲು ಅವನಿಗೆ ಅಗತ್ಯವಾಗಿ ಕ್ಯಾನವಾಸ್, ಬ್ರಷ್ ಹಾಗೂ ಬಣ್ಣಗಳು ಬೇಕೇ ಬೇಕು ಅದೇ ರೀತಿ ಒಬ್ಬ ಛಾಯಾಗ್ರಾಹಕ ತನ್ನ ಮನಸ್ಸಿನಲ್ಲಿ ಮೂಡಿದ ಭಾವನೆಗಳಿಗೆ ತಕ್ಕ ಹಾಗೆ ಚಿತ್ರೀಕರಿಸಿಕೊಳ್ಳಲು ಅವನಿಗೆ ಅಗತ್ಯವಾಗಿ ಕ್ಯಾಮರ, ಫಿಲಂ ಹಾಗೂ ಬೇಕು ಬೇಕೇ ಬೇಕು.

ಒಬ್ಬ ಛಾಯಾಗ್ರಾಹಕ ತಾನು ದಿನನಿತ್ಯ ನೋಡುವ ಅನೇಕ ದೃಶ್ಯಗಳನ್ನು ಕಲಾತ್ಮಕವಾಗಿ ಚಿತ್ರಿಸಬೇಕಾಗಿದ್ದಲ್ಲಿ ಅವನಿಗೆ ಕಲಾತ್ಮಕ ದೃಷ್ಟಿ ಇರಬೇಕು. ಒಬ್ಬ ಛಾಯಾಗ್ರಾಹಕನಿಗೆ ಮುಖ್ಯವಾಗಿ ಇರಲೇಬೇಕಾದ ಗುಣಗಳೆಂದರೆ ಕಲಾತ್ಮಕ ದೃಷ್ಟಿ, ಆಸಕ್ತಿ, ತಾಳ್ಮೆ, ಪ್ರತಿಭೆ ಹಾಗೂ ತಾಂತ್ರಿಕತೆಯ ಸರಿಯಾದ ಬಳಕೆ, ಶ್ರಮ ಹಾಗೂ ಅದೃಷ್ಟ, ಇವೆಲ್ಲ ಒಟ್ಟುಗೂಡಿದರೆ ಮಾತ್ರ ಅವನೊಬ್ಬ ಉತ್ತಮ ಛಾಯಾಗ್ರಾಹಕನಾಗಬಲ್ಲ.

ಛಾಯಾಗ್ರಹಣದಲ್ಲ ಎರಡು ವಿಷಯಗಳನ್ನು ಮುಖ್ಯವಾಗಿ ತಿಳಿದುಕೊಂಡಿರ ಬೇಕು. ಒಂದನೆಯದಾಗಿ ನಾವು ಯಾವ ದೃಶ್ಯವನ್ನು ಚಿತ್ರಿಸಿಕೊಳ್ಳಬೇಕೊ ಆ ದೃಶ್ಯಕ್ಕೆ ಅಗತ್ಯವಾದ ಕ್ಯಾಮರ, ಫಿಲಂ, ಮಸೂರ ಮತ್ತು ಫಿಲ್ಟರ್‌ಗಳ ಬಳಕೆ ಹಾಗೂ ನೆರಳು ಬೆಳಕುಗಳ ಸಂಯೋಜನೆಯ ಹಾಗೂ ತಾಂತ್ರಿಕತೆಯ ಬಳಕೆಯಿಂದ ಒಂದು ಚಿತ್ರವನ್ನು ಕಲಾತ್ಮಕವಾಗಿ ಫಿಲಂ ಮೇಲೆ ಚಿತ್ರೀಕರಿಸಿಕೊಳ್ಳುವುದು. ಎರಡನೆಯ ದಾಗಿ ಈ ರೀತಿಯಾಗಿ ಫಿಲಂ ಮೇಲೆ ಚಿತ್ರೀಕರಿಸಿಕೊಂಡ ಕಣ್ಣಿಗೆ ಕಾಣದ ದೃಶ್ಯವನ್ನು ಸುಂದರ ಚಿತ್ರವನ್ನಾಗಿ ಮಾರ್ಪಡಿಸಲು ಬೇಕಾದ ರಾಸಾಯನಿಕ ಕ್ರಿಯೆಯ ಬಗ್ಗೆ ಅಥವಾ ಫಿಲಂ ಸಂಸ್ಕರಣೆಯ ಬಗ್ಗೆಯೂ ಸರಿಯಾದ ಮಾಹಿತಿಯನ್ನು ತಿಳಿದುಕೊಂಡಿರ ಬೇಕು. ಹಾಗಿದ್ದಲ್ಲಿ ಮಾತ್ರ ಅವನು ಒಬ್ಬ ಉತ್ತಮ ಹಾಗೂ ಶ್ರೇಷ್ಠ ಛಾಯಾ ಗ್ರಾಹಕನಾಗಲು ಸಾಧ್ಯ

ಛಾಯಾಗ್ರಹಣವು ವಿಜ್ಞಾನ ಹಾಗೂ ಕಲೆಯ ಸಂಯೋಜನೆಯೆಂದರೆ ತಪ್ಪಾಗಲಾರದು. ವಿದೇಶಗಳಲ್ಲಿ ಇದಕ್ಕೆ ಕಲೆಯ ಸ್ಥಾನಮಾನ ಕೊಟ್ಟಿದ್ದಾರೆ. ಅಮೆರಿಕಾ, ಇಂಗ್ಲೆಂಡ್, ಜಿನೀವಾ, ಜಪಾನ್, ಜರ್ಮನಿ ಮತ್ತು ಸಿಂಗಪೂರ್‌ಗಳಲ್ಲಿ ಇದಕ್ಕೆ ಕಲೆಯ ಸ್ಥಾನಮಾನ ಕೊಟ್ಟು ಗೌರವಿಸಿದ್ದಾರೆ.

ನಮ್ಮ ದೇಶದಲ್ಲಿ ಇನ್ನೂ ಇದಕ್ಕೆ ಕಲೆಯ ಸ್ಥಾನಮಾನ ಕೊಟ್ಟಿಲ್ಲ ಅಂಥ

ಪ್ರದೇಶ ಸರ್ಕಾರ ಮಾತ್ರ ಫೋಟೋಗ್ರಫಿ ಅಕಾಡಮಿ ಸ್ಥಾಪಿಸಿ ಆ ಮೂಲಕ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಮಹಾರಾಷ್ಟ್ರ ಸರ್ಕಾರವು ಸಹ ಫೋಟೋಗ್ರಫಿ ಅಕಾಡಮಿ ಸ್ಥಾಪನೆಯ ಬಗ್ಗೆ ಯೋಚಿಸುತ್ತಿದೆ.

ಸಂಗೀತ, ನೃತ್ಯ, ಕಲೆಗಳಲ್ಲಿ ಅನೇಕ ಮಾದರಿಗಳಿರುವಂತೆ ಛಾಯಾಗ್ರಹಣ ಕಲೆಯಲ್ಲಿಯೂ ನಾನಾ ಮಾದರಿಗಳಿವೆ. ಸಾಮಾನ್ಯವಾಗಿ ಒಬ್ಬ ಛಾಯಾಗ್ರಾಹಕ ಎಲ್ಲಾ ಬಗೆಯ ಛಾಯಾಚಿತ್ರ ತೆಗೆಯುವಲ್ಲಿ ಪರಿಣತಿ ಪಡೆದಿರುವುದಿಲ್ಲ ಒಬ್ಬೊಬ್ಬ ಛಾಯಾಗ್ರಾಹಕನಿಗೂ ಒಂದೊಂದು ರೀತಿಯ ವಸ್ತುಗಳ ಚಿತ್ರೀಕರಣದ ಬಗ್ಗೆ ಪರಿಣತಿ ಹೊಂದಿರುತ್ತಾನೆ.

ಸಾಮಾನ್ಯವಾಗಿ ಛಾಯಾಗ್ರಹಣವನ್ನು ನಿಸರ್ಗಚಿತ್ರಣ ಹಾಗೂ ವನ್ಯಪ್ರಾಣಿಗಳ ಚಿತ್ರಣ, ಕ್ರೀಡೆಗಳ ಛಾಯಾಗ್ರಹಣ, ಪ್ರಚಾರಕಲೆಯ ಛಾಯಾಗ್ರಹಣ, ಶಿಲ್ಪಾಕೃತಿಗಳ ಛಾಯಾಗ್ರಹಣ, ವ್ಯಕ್ತಿ ಮತ್ತು ಗ್ಲಾಮರ್ ಛಾಯಾಗ್ರಹಣ, ಏರಿಯಲ್ ಛಾಯಾಗ್ರಹಣ, ನೀರಿನಲ್ಲಿ ತೆಗೆಯುವ ಛಾಯಾಗ್ರಹಣ, ತನಿಖಾ ಛಾಯಾಗ್ರಹಣ, ಕ್ಷಕಿರಣದ ಛಾಯಾಗ್ರಹಣ, ಜಾಹಿರಾತುಗಳ ಛಾಯಾಗ್ರಹಣ, ಕೈಗಾರಿಕೆ ಮತ್ತು ವಿಜ್ಞಾನದ ಛಾಯಾಗ್ರಹಣ ಮುಂತಾಗಿ ವಿಂಗಡಿಸಬಹುದು.

ಎಲ್ಲಾ ಛಾಯಾಗ್ರಾಹಕರೂ ಎಲ್ಲಾ ವಿಷಯಗಳಲ್ಲಿಯೂ ಪರಿಣತಿಯನ್ನು ಪಡೆದಿರಲು ಸಾಧ್ಯವಿಲ್ಲ. ಅವರವರ ಅಭಿರುಚಿಗನುಗುಣವಾಗಿ ಆ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿಯನ್ನು ಪಡೆದು ಛಾಯಾಚಿತ್ರ ತೆಗೆಯುವುದರಲ್ಲಿ ನೈಪುಣ್ಯತೆಯನ್ನು ಹೊಂದಿರುತ್ತಾರೆ.

ಆಧುನಿಕ ತಾಂತ್ರಿಕತೆಯಿಂದಾಗಿ ಇಂದು ನಾವು ಉಪಯೋಗಿಸುವ ಕ್ಯಾಮರ ಫಿಲಂ ಹಾಗೂ ತಾಂತ್ರಿಕ ಉಪಕರಣದಿಂದ ಸಾಧಾರಣವಾಗಿ ಆಸಕ್ತಿಯಿರುವ ವ್ಯಕ್ತಿಯೂ ಸಹ ಉತ್ತಮ ಚಿತ್ರಗಳನ್ನು ತೆಗೆಯಬಲ್ಲವನಾಗಿದ್ದಾನೆ. ಆಧುನಿಕ ಪ್ರಪಂಚಕ್ಕನುಗುಣವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಸುಲಭವಾಗಿ ಛಾಯಾಚಿತ್ರ ತೆಗೆಯಲು ಅನುಕೂಲವಾಗುವಂತೆ ಜಪಾನ್ ಮತ್ತು ಜರ್ಮನ್ ದೇಶಗಳು ಕ್ಯಾಮರ ತಯಾರಿಕೆಯಲ್ಲಿ ಒಂದಕ್ಕೊಂದು ಪೈಪೋಟಿ ನಡೆಸುತ್ತಿವೆ. ಕ್ಯಾಮರ ಯಾವುದೇ ಇರಲಿ, ಫಿಲಂ ಯಾವುದೇ ಇರಲಿ, ತಾಂತ್ರಿಕ ಸಲಕರಣೆಗಳೇನೇ ಇರಲಿ ಕ್ಯಾಮರಕ್ಕಿಂತ ಅಥವಾ ಅದರ ಸಲಕರಣೆಗಳಿಗಿಂತ ಅದರ ಹಿಂದಿರುವ ವ್ಯಕ್ತಿ ಬಹುಮುಖ್ಯ. ಯಾವ ಕ್ಯಾಮರ ಎಷ್ಟೇ ಆಟೋಮ್ಯಾಟಿಕ್ ಆಗಿದ್ದರೂ ಸಹ ಅದರ ಹಿಂದಿರುವ ಮನುಷ್ಯನ ಚಾಕಚಕ್ಯತೆ, ತಾಂತ್ರಿಕತೆ, ಕಲಾಕೌಶಲ್ಯತೆ ಮುಖ್ಯ. ಕಲಾತ್ಮಕ ದೃಷ್ಟಿ, ತಾಂತ್ರಿಕ ಸಂಯೋಜನೆಯಿಂದ ಒಂದು ಛಾಯಾಚಿತ್ರ ಉತ್ತಮ ಕಲಾಕೃತಿಯಾಗಬಲ್ಲದು.

ನಾವು ಉಪಯೋಗಿಸುವ ಕ್ಯಾಮರ, ಫಿಲಂ, ತಾಂತ್ರಿಕ ಉಪಕರಣಗಳು ಎಲ್ಲಾ ಒಂದೇ ಬಗೆಯವುಗಳಾಗಿದ್ದರೂ ಸಹ ಎಲ್ಲರೂ ಒಂದೇ ರೀತಿಯ ಚಿತ್ರಗಳನ್ನು

ತೆಗೆಯಲು ಸಾಧ್ಯವಾಗುತ್ತಿಲ್ಲ. ಅದಕ್ಕೆ ಕ್ಯಾಮರ ಮುಖ್ಯವಲ್ಲ ಅದರ ಹಿಂದಿರುವ ಮಾನವನ ಕಲಾತ್ಮಕ ದೃಷ್ಟಿ ಮುಖ್ಯ.

ಇನ್ನು ಛಾಯಾಚಿತ್ರದಿಂದಾಗುವ ಉಪಯೋಗದ ಬಗ್ಗೆ ತಿಳಿದುಕೊಳ್ಳೋಣ. ಮೊಟ್ಟಮೊದಲನೆಯದಾಗಿ ಛಾಯಾಚಿತ್ರದಿಂದ ಒಬ್ಬ ವ್ಯಕ್ತಿಯನ್ನು ಗುರ್ತಿಸಲು (Identification) ಸಾಧ್ಯ. ಮನುಷ್ಯ ಬೆಳೆದಂತೆಲ್ಲಾ ತನ್ನ ಹಿಂದಿನ ಸವಿನೆನಪುಗಳನ್ನು ಮರೆಯುವುದು ಸ್ವಾಭಾವಿಕ. ಆದರೆ ಅಂತಹ ಸವಿನೆನಪುಗಳನ್ನು ಛಾಯಾಚಿತ್ರದ ಮೂಲಕ ಸೆರೆಹಿಡಿದಿಟ್ಟರೆ ಅಂತಹ ಸವಿನೆನಪುಗಳು ಅಚ್ಚಹಸಿರಾಗಿಯೇ ಉಳಿಯುವಂತೆ ಮಾಡಬಹುದು. 'ಕ್ಷ' ಕಿರಣದ ಛಾಯಾಚಿತ್ರದಿಂದ ಒಬ್ಬ ವ್ಯಕ್ತಿಯ ದೇಹದೊಳಗಿನ ಕಾಯಿಲೆಯನ್ನು ಗುರುತಿಸಲು ಅನುಕೂಲವಾಗುತ್ತದೆ. ಮೈಕ್ರೋ ಫೋಟೋಗ್ರಫಿಯಿಂದ ಸೂಕ್ಷ್ಮಾಣುಗಳ ಅಧ್ಯಯನಕ್ಕೆ ಅನುಕೂಲವಾಗುತ್ತದೆ. ಕಳ್ಳಕಾಕರನ್ನು ಪತ್ತೆಹಚ್ಚುವಲ್ಲಿ ಪೋಲೀಸ್ ಇಲಾಖೆಗೆ ಅಗತ್ಯವಾಗಿ ಛಾಯಾಗ್ರಹಣ ಬೇಕು ಛಾಯಾಗ್ರಹಣದ ಮೂಲಕ ಸೂಕ್ಷ್ಮವಾದ ಬೆರಳಚ್ಚಿನ ರೇಖೆಗಳನ್ನು ಮತ್ತು ಇತರೇ ಅಂಗಾಂಗಗಳನ್ನು ಇಂತಹ ವ್ಯಕ್ತಿಯದೇ ಎಂದು ನಿರ್ದಿಷ್ಟವಾಗಿ ಗುರುತಿಸಿ ಅಂತಹ ವ್ಯಕ್ತಿಯನ್ನು ಪತ್ತೆಹಚ್ಚುವಲ್ಲಿ ಛಾಯಾಗ್ರಹಣದ ಪಾತ್ರ ಅತಿ ಮುಖ್ಯವಾಗಿದೆ. ಒಂದು ಮನೆಗೆ ಬೆಂಕಿ ಬಿದ್ದಿದ್ದರೆ, ಅದು ದುರುದ್ದೇಶದಿಂದ ಮಾಡಿದ್ದೋ ಅಥವಾ ಆಕಸ್ಮಿಕವಾಗಿ ಆಗಿದ್ದೋ ಎಂದು ಪತ್ತೆಹಚ್ಚಲು ಛಾಯಾಗ್ರಹಣದಿಂದ ಅನುಕೂಲವಾಗಿದೆ. ಪ್ರಾಂಸರಿ ನೋಟು, ಲಾಟರಿ ಟಿಕೇಟ್‌ಗಳ ಸಂಖ್ಯೆಯನ್ನು ತಿದ್ದುಪಡಿಮಾಡಿದ್ದರೆ ಅಥವಾ ಅಕ್ಷರಗಳನ್ನು ತಿದ್ದುಪಡಿಮಾಡಿದ್ದರೆ ಅಂತಹ ತಿದ್ದುಪಡಿಯಾದ ಅಕ್ಷರಗಳನ್ನು, ಸಂಖ್ಯೆಗಳನ್ನು 'ಇನ್‌ಫ್ರಾರೆಡ್' ಛಾಯಾಗ್ರಹಣದಿಂದ ಪತ್ತೆಹಚ್ಚಬಹುದು.

ಕೈಗಾರಿಕೆ ಮತ್ತು ವಾಣಿಜ್ಯೋದ್ಯಮದಲ್ಲಿ ಯಾವುದೇ ಹೊಸ ವಸ್ತುವು ತಯಾರಾದಾಗ ಅದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕಾದರೆ ಆ ವಸ್ತುಗಳ ಸುಂದರ ಛಾಯಾಚಿತ್ರಗಳನ್ನು ವೃತ್ತಪತ್ರಿಕೆಗಳಲ್ಲಿ ಮುದ್ರಿಸಿಯೋ, ಕ್ಯಾಟಲಾಗ್‌ಗಳನ್ನು ತಯಾರಿಸಿಯೋ ಅಥವಾ ಸಿನಿಮಾ ಮಂದಿರಗಳಲ್ಲಿ ವರ್ಣರಂಜಿತ ಸ್ಲೈಡ್‌ಗಳನ್ನು ಪ್ರದರ್ಶಿಸಿ ಪ್ರೇಕ್ಷಕರ ಗಮನವನ್ನು ಸೆಳೆಯುವಲ್ಲಿಯೂ ಈ ಛಾಯಾಗ್ರಹಣ ಅವಶ್ಯಕ.

ನೀರಿನಲ್ಲಿರುವ ಪರಿಸರ ಹಾಗೂ ಪ್ರಾಣಿ ಚಿತ್ರಣಕ್ಕೂ, ಆಕಾಶದಲ್ಲಿರುವ ಮೋಡಗಳ ಮಾರ್ಪಾಡುಗಳನ್ನು ತಿಳಿಯಲು ಹಾಗೂ ಹವಾಮಾನ ಮತ್ತು ಭೂಮಿಯ ಮೇಲ್ಮೈಲಕ್ಷಣ ತಿಳಿಯಲು ಛಾಯಾಗ್ರಹಣ ಅಗತ್ಯ.

ಪತ್ರಿಕೆಯಲ್ಲಿ ಬರುವ ಸುದ್ದಿ ಚಿತ್ರಗಳಿಗೆ, ದಿನನಿತ್ಯದ ಆಗುಹೋಗುಗಳ ಬಗ್ಗೆ ಮತ್ತು ಸುಂದರವಾದ ವರ್ಣಚಿತ್ರಗಳಿಂದ ಕೂಡಿದ್ದರೆ ಪತ್ರಿಕೆಯ ಮಾರಾಟವೂ ಸುಲಭವಾಗುತ್ತದೆ. ದಿನನಿತ್ಯ ನೋಡುವ ನೈಸರ್ಗಿಕ ದೃಶ್ಯಗಳನ್ನು ಕಲಾತ್ಮಕವಾಗಿ

ಚಿತ್ರಿಸಿ ಸಹಸ್ರಾರು ಜನರ ಮನವನ್ನು ಸೂರೆಗೊಳ್ಳಲು ಈ ಛಾಯಾಗ್ರಹಣ ಕಲೆ ಅತಿ ಮುಖ್ಯವಾಗಿದೆ. ಅಂತೆಯೇ ಛಾಯಾಚಿತ್ರಕ್ಕೆ ಯಾವುದೇ ಭಾಷೆಯಿಲ್ಲ. ಯಾವ ಚಿತ್ರವನ್ನು ಯಾವ ಭಾಷೆಯ ಪತ್ರಿಕೆಗಳಲ್ಲಾದರೂ ಸಂದರ್ಭಕ್ಕೆ ತಕ್ಕ ಹಾಗೆ ಮುದ್ರಿಸಬಹುದು.

ಇಷ್ಟೆಲ್ಲಾ ಅನುಕೂಲಗಳಿದ್ದರೂ ಈ ಛಾಯಾಚಿತ್ರಕಲೆಯನ್ನು ಅತ್ಯಂತ ದುಃಬಾರಿಯ ಕಲೆಯೆಂದು ಕರೆಯುತ್ತಾರೆ.

ಜೀವಿಗಳಿಗೆ ದುಃಖದ ತರುವಾಯ ಉಂಟಾಗುವ ಸೌಖ್ಯವು ಮಹತ್ವವುಳ್ಳದ್ದು.

—ಕ್ಷತ್ರ ಚೂಡಾಮಣಿ

ಕಾರ್ಯ ಫಲಕಾರಿಯಾದ ಮೇಲೆ ಕ್ಲೇಶತೋರದೆ ಮತ್ತೆ ಹುರುಪುಂಟಾಗುತ್ತದೆ.

—ಪಂಚತಂತ್ರ

ಕೆಟ್ಟಕೆಲಸವನ್ನು ಎಲ್ಲೂ ಮಾಡಬಾರದು.

—ಬೃಹಸ್ಪತಿ

ಅಪಕಾರ ಮಾಡಿದವನ ವಿಷಯದಲ್ಲಿ ಪ್ರತೀಕಾರಕ್ಕೆ ತಕ್ಕ ಸಮಯ ಸಿಗದಿದ್ದರೆ ಮೆದುವಾಗಿರಬೇಕು.

ಡಾ|| ಎಚ್. ಆರ್. ರಘುನಾಥ ಭಟ್

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನಲ್ಲಿ ಕೈಕೊಂಡ ಪ್ರಾಚ್ಯವಸ್ತು ಶೋಧನೆಗಳು —ಒಂದು ಟಿಪ್ಪಣಿ

ಈಚಿನ ದಿನಮಾನಗಳಲ್ಲಿ ಪ್ರಾದೇಶಿಕ ಇತಿಹಾಸ–ಸಂಸ್ಕೃತಿ–ಶೋಧನೆಗಳಿಗೆ ವಿಶೇಷ ಮಹತ್ವ ಬರುತ್ತಿದೆ. ನಾಡಿನ ಹಾಗೂ ದೇಶದ ಒಟ್ಟಾರೆ ಸಾಂಸ್ಕೃತಿಕ ಐತಿಹಾಸಿಕ ಪುನಾರಚನೆಯಲ್ಲಿ ಅದರ ಅವಿಭಾಜ್ಯ ಅಂಗವಾದ ಪ್ರಾದೇಶಿಕ ಚರಿತ್ರೆಯು ಅದರ ಎಲ್ಲ ಆಯಾಮಗಳೊಡನೆ, ಸತ್ವಪೂರ್ಣ ಪಾತ್ರವಹಿಸುತ್ತದೆ. ಚಾರಿತ್ರಿಕ ಅರ್ಥನಿರೂಪಣೆಗೆ ಹೆಚ್ಚಿನ ವಾಸ್ತವಿಕತೆಯನ್ನು ತುಂಬಿಕೊಡಲು ಸಹಾಯಕವಾಗುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗದ ಆಶ್ರಯದಲ್ಲಿ ೧೯೮೮–೮೯ನೆಯ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನಲ್ಲಿ ಮೂರು ಹಂತಗಳಲ್ಲಿ, ನಾನು ಕೈಗೊಂಡ ಗ್ರಾಮೀಣ ಕ್ಷೇತ್ರಕಾರ್ಯ ಪ್ರೋತ್ಸಾಹದಾಯಕವಾಗಿದ್ದು ಅದರ ಸಂಕ್ಷಿಪ್ತ ಸಮೀಕ್ಷೆಯನ್ನು ಇಲ್ಲಿ ನೀಡಲಾಗಿದೆ.

ಇದುವರೆಗೆ ಸಿದ್ದಾಪುರ ತಾಲ್ಲೂಕಿನ ಪಶ್ಚಿಮ ಹಾಗೂ ದಕ್ಷಿಣ ಭಾಗಗಳಲ್ಲಿರುವ ಇಪ್ಪತ್ತೈದು ಹಳ್ಳಿಗಳಲ್ಲಿ ಕ್ಷೇತ್ರಕಾರ್ಯವನ್ನು ಸಂಪೂರ್ಣಗೊಳಿಸಿದ್ದು ಹೊಸದಾಗಿ ಹನ್ನೆರಡು ಶೈವಾಲಯಗಳನ್ನು, ಎರಡು ವೈಷ್ಣವಾಲಯಗಳನ್ನು ಹಾಗೂ ಎರಡು ಜಿನಾಲಯಗಳನ್ನು (ಭಗ್ನಾವಶೇಷಗಳನ್ನು) ಗುರುತಿಸಲಾಗಿದೆ. ವಾಸ್ತುಶಿಲ್ಪದ ದೃಷ್ಟಿಯಿಂದ ಇವು ಅಷ್ಟೊಂದು ಮಹತ್ವಪೂರ್ಣವಿರದಿದ್ದರೂ ಆ ತಾಲ್ಲೂಕಿನ ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಉಪಯುಕ್ತವೆಂದು ಹೇಳಬಹುದು. ಕೋಡಿಗದ್ದೆಯ ಈಶ್ವರ ದೇವಾಲಯದ ಗರ್ಭಗೃಹ ಗಜಪೃಷ್ಠಾಕೃತಿಯಲ್ಲಿರುವುದು ಹಾಗೂ ಅದರ ನಿರ್ಮಿತಿಯಲ್ಲಿ ಜಂಬಿಟ್ಟಿಗೆ ಕಲ್ಲನ್ನು (laterite) ಬಳಸಿರುವುದು ಒಂದು ವೈಶಿಷ್ಟ್ಯ. ಹೊರಗ ಭಿತ್ತಿಯ ಮೇಲೆ ಸರಳವಾದ ಪಟ್ಟಿಕೆ–ಸ್ತಂಭಿಕೆಗಳ ವಿನ್ಯಾಸವನ್ನಷ್ಟೆ ಕೊರೆಯಲಾಗಿದೆ. ಜಂಬಿಟ್ಟಿಗೆ ಕಲ್ಲಲ್ಲಿ ಸೂಕ್ಷ್ಮ ಕೆತ್ತನೆ, ಸುಳಿಕೆಲಸ ಕಷ್ಟಸಾಧ್ಯ

ನಾದ್ದರಿಂದ ಆ ಪ್ರಯತ್ನಕ್ಕೆ ಇಲ್ಲಿ ಹೋಗಿಲ್ಲ. ಕೊರ್ಲಕೈ ಬಳಿ "ಜೀನಿಮಠ" (ಜೈನಮಠ) ಎಂದು ಕರೆಯಲಾಗುವ ಜೈನ ಬಸ್ತಿ, ಮಠಗಳ ಭಗ್ನಾವಶೇಷಗಳ ಮಧ್ಯೆ ಮುಕ್ಕೊಡೆಕಲ್ಲೊಂದು ಪತ್ತೆಯಾಯಿತು. ಈ ನೆಲೆಯ ಸಮೀಪದಲ್ಲೇ ಜೈನಾಚಾರ್ಯರ ಸಮಾಧಿ ಸ್ಥಾನದಲ್ಲಿರುವ ನಿಶಿದಿಗೆಗಳನ್ನು ಸಂಪೂರ್ಣವಾಗಿ ಜಂಬಿಟ್ಟಿಗೆ ಕಲ್ಲಿನಲ್ಲಿ ಕಟ್ಟಲಾಗಿದೆ. ಈಗ ಉಳಿದಿರುವ ಒಂದು ಕಟ್ಟಡದಲ್ಲಿ ಯತಿಪಾದ ಶಿಲೆಯನ್ನು ಮಾತ್ರ ಕಗ್ಗಲ್ಲಿ ಕೊರೆಯಲಾಗಿದೆ. ಈ ನಿಶಿದಿಗೆ ಶಿಖರವು ಕದಂಬನಾಗರ ಶಿಖರದ ಮಾದರಿಯಲ್ಲಿ ಕಟ್ಟಿರುವುದು ಇಲ್ಲಿ ಉಲ್ಲೇಖನೀಯ.[1]

ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಗಮನಿಸಲಾದ ಬಿಡಿಶಿಲ್ಪಗಳು ಹಲವಾರು. ಅವುಗಳಲ್ಲಿ ಕೋಡಿಗದ್ದೆ ಗಣಪತಿ, ನಾಗಿನಮನೆಯ ಕೇಶವ, ಕ್ಯಾದಗಿಯ ಬಲಮುರಿ ಗಣಪತಿ, ಕಿಲಾರದ ಗಣಪತಿ, ಕೊರ್ಲಕೈ ಬಳಿಯಿರುವ ಜಿಡ್ಡಿ ಸ್ತಂಭ ಸಹಿತ ಗಜಲಕ್ಷ್ಮಿ ಶಿಲ್ಪ ಗಮನಾರ್ಹವಾದವು. ಕೋಡಿಗದ್ದೆ ಗಣಪತಿಯು ಭಗ್ನವಾದ್ದರಿಂದ ಆ ಊರ ಮುಂಭಾಗದ ಕೆರೆಯಲ್ಲಿ ವಿಸರ್ಜಿಸಲಾಗಿತ್ತು. ಅದನ್ನು ಹೊರತೆಗೆದು ನೋಡಲಾಗಿ ಅದೊಂದು ಪ್ರಾಚೀನ ದ್ವಿಭುಜಗಣಪತಿ ಪ್ರತಿಮೆಯೆಂದು ತಿಳಿದು ಬಂತು. ನಾಗಿನಮನೆ ಕೇಶವಮೂರ್ತಿಯು ಒಂದು ಅಪೂರ್ವ ಕಲಾಕೃತಿಯಾಗಿದೆ. ಮುಕ್ಕಾಗದ ಈ ಮೂರ್ತಿಯ ಕಂಡರಣೆ ಚಾಳುಕ್ಯ–ಹೊಯ್ಸಳ ಶೈಲಿಯ ಅನುಕರಣೆಯನ್ನು ಸೂಚಿಸುತ್ತದೆ. ಹಾನಗಲ್ಲ ಕದಂಬ ಶೈಲಿಯೆಂದು ಹೇಳಬಹುದಾದ ಪ್ರಾದೇಶಿಕ ಶೈಲಿಯನ್ನು ಇದರಲ್ಲಿ ಕೆಲಮಟ್ಟಿಗೆ ಗುರುತಿಸಬಹುದು. ಆಳೆತ್ತರದ ಈ ವಿಗ್ರಹದ ನಿಲುವು, ಭಾವ ಭಂಗಿ, ಆಭರಣ, ಆಯುಧಗಳನ್ನು ಹಿಡಿದಿರುವ ರೀತಿ ಈ ಊಹೆಯನ್ನು ಪುಷ್ಟೀಕರಿಸುತ್ತವೆ. ಈ ಪ್ರದೇಶದಲ್ಲಿ ಹಾನಗಲ್ಲ ಕದಂಬರ ಕಾಲದ ಕೆಲಶಾಸನಗಳೂ ಪತ್ತೆಯಾಗಿರುವುದೂ ಉಲ್ಲೇಖನೀಯ. ಈ ಭಾಗದಲ್ಲಿದ್ದಿರಬಹುದಾದ ಮೂಲ ವಾಸ್ತುಶಿಲಾ ನಿರ್ಮಿತಿ ಈಗ ಉಳಿದಿಲ್ಲ. ಒಂದು ಪುಟ್ಟ (ನವೀನ) ಗುಡಿಯಲ್ಲಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ.

ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು ಹೆಚ್ಚಿನ ಹಳ್ಳಿಗಳಲ್ಲಿ ದೊರೆತಿದ್ದು ಐಸೂರು ಹಾಗೂ ಶೆಟ್ಟಳ್ಳಿಗಳಲ್ಲಿ ಈ ಸ್ಮಾರಕ ಶಿಲೆಗಳ ಸಾಂದ್ರತೆ (Cluster) ಗಮನಾರ್ಹವಾಗಿದೆ. ವೀರಗಲ್ಲುಗಳಷ್ಟೇ ಸಂಖ್ಯೆಯ ಮಾಸ್ತಿಕಲ್ಲುಗಳಿರುವುದು, ಐಸೂರಲ್ಲಂತೂ ವೀರಗಲ್ಲುಗಳಿಗಿಂತ ಮಾಸ್ತಿಕಲ್ಲುಗಳೇ ಅಧಿಕ ಸಂಖ್ಯೆಯಲ್ಲಿ ಕಂಡು ಬಂದಿರುವುದು ಕುತೂಹಲಕಾರಿಯಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಮಾಸ್ತಿ–ಪರಂಪರೆಯ ಹಿನ್ನೆಲೆಯಲ್ಲಿ ಇವುಗಳ ವಿಶೇಷ ಅಧ್ಯಯನ ಕೈಗೊಳ್ಳುವುದು ಅಗತ್ಯ.

ಈವರೆಗೆ ಹನ್ನೆರಡು ಶಾಸನಗಳು ಹೊಸದಾಗಿ ನಮ್ಮ ಗಮನಕ್ಕೆ ಬಂದಿದ್ದು ಅವುಗಳಲ್ಲಿ ಹೆಚ್ಚಿನವು ಹನ್ನೆರಡು–ಹದಿಮೂರನೆಯ ಶತಮಾನದವು. ಅವು ವೀರಗಲ್ಲು ಶಾಸನ, ದಾನ ಶಾಸನಗಳಾಗಿದ್ದು ಅವುಗಳ ವಿವರ ಪೂರ್ಣ ವಿಶ್ಲೇಷಣೆ ಹಾಗೂ ಅಧ್ಯಯನವನ್ನು ಪ್ರತ್ಯೇಕವಾಗಿ ಕೈಗೊಳ್ಳಲಾಗಿದೆ. ತಮ್ಮಡಿ (ದಮ್ಮಡಿ) ಕಲ್ಲಾಳದಲ್ಲಿ

ದೊರೆತಿರುವ ಎರಡು ವೀರಗಲ್ಲುಗಳು ಶಾಸನ, ಶಿಲ್ಪಕಲಾ ದೃಷ್ಟಿಯಿಂದ, ಆ ಪ್ರದೇಶದ ಸಾಂಸ್ಕೃತಿಕ ಇತಿಹಾಸದ ಪುನಾರಚನೆಯ ದೃಷ್ಟಿಯಿಂದ ಸ್ವಾರಸ್ಯಕರವಾಗಿವೆ. ಈ ವೀರಗಲ್ಲುಗಳ ಶಾಸನ ಪಾಠವನ್ನು ಇನ್ನೊಮ್ಮೆ ಪರಿಷ್ಕರಿಸಲಾಗಿದೆ (ಕರ್ನಾಟಕ ಇನ್‌ಸ್ಕ್ರಿಪ್ಶನ್ಸ್, ಸಂ. ೬ (ಧಾರವಾಡ)ರಲ್ಲಿ ಇದು ಪ್ರಕಟವಾಗಿದೆ).

ಕಿಲಾರ ಗ್ರಾಮದ ಹೊರವಲಯದಲ್ಲಿ ಅಕಸ್ಮಾತ್ತಾಗಿ ಪತ್ತೆಯಾದ "ಕೊಟ್ಟ" ಎಂದು ಸ್ಥಳೀಯವಾಗಿ ಕರೆಯಲಾದ ಜಂಬಿಟ್ಟಿಗೆ ಕಲ್ಲಿನ ನೆಲಮಾಳಿಗೆಗೂಡು ನಮ್ಮ ಗಮನವನ್ನು ವಿಶೇಷವಾಗಿ ಕೆರಳಿಸ ತೊಡಗಿದೆ.[2] ಸುಮಾರು ಎರಡೂಕಾಲು ಮೀಟರ್ ಆಳ ಮತ್ತು ಮೇಲ್ತುದಿಯಲ್ಲಿ ಸುಮಾರು ತೊಂಬತ್ತು ಸೆಂಟಿಮೀಟರ್ ವ್ಯಾಸವುಳ್ಳ ಈ ನಿರ್ಮಿತಿ ಸ್ವಾರಸ್ಯಪೂರ್ಣವಾಗಿದೆ. ಇದರ ತಳಭಾಗದಲ್ಲಿ ಸುಮಾರು ಎರಡೂವರೆ ಮೀಟರ್ ವ್ಯಾಸವುಳ್ಳ ಹಳೆಯ ಕಾಲದ ಕೊಳಗದ ಆಕಾರದಲ್ಲಿರುವ ಈ ಕೊಟ್ಟವನ್ನು ಉತ್ಖನನ ಮಾಡಲಾಯಿತು. ಅದು ಹಿಂದೊಮ್ಮೆ ಆಗೆತಕ್ಕೆ ಒಳಗಾಗಿದ್ದಿರ ಬೇಕು. ಆದರೂ ನಾವು ಕೈಗೊಂಡ ಉತ್ಖನನದಲ್ಲಿ ಕಪ್ಪು-ಕೆಂಪು, ಕಪ್ಪು-ಬೂದಿ ಬಣ್ಣದ ಮಡಿಕೆಯ ಚೂರುಗಳು, ಕಿಲುಬುಕಟ್ಟಿದ ಲೋಹದ ಮಣಿ ಹಾಗೂ ಎರಡು ನಾಣ್ಯಗಳೆಂದು ಊಹಿಸಲಾದ ಲೋಹದ ತುಂಡುಗಳೂ ಪತ್ತೆಯಾದವು. ಕೊಟ್ಟದ ತಳದಲ್ಲಿ ಮಸೆಯುವ ಕಲ್ಲಿನಾಕಾರದ ಸಣ್ಣ ಕಲ್ಲೊಂದು ದೊರಕಿದ್ದು ಕುತೂಹಲಪೂರ್ಣವಾಗಿದೆ. ಇದರ ಸಮೀಪದಲ್ಲೇ ಮತ್ತೊಂದು ಕೊಟ್ಟವು ದೊರೆತಿದ್ದು ಅದರಲ್ಲೂ ಕೆಂಪು ಬಣ್ಣದ ಮಡಿಕೆ ಚೂರುಗಳೂ ಹಾಗೂ ಕೊಟ್ಟಕ್ಕೆ ಬಳಸಿದ ಮುಚ್ಚಳದ ಕಲ್ಲು ಹಲಗೆಯ ಚೂರುಗಳೂ ದೊರೆತಿವೆ. ಈ ಬಗೆಯ ಕೊಟ್ಟಗಳು ಆ ಪ್ರದೇಶದಲ್ಲಿ ಇನ್ನೂ ಇರಬಹುದಾದ್ದರಿಂದ ಇವೆಲ್ಲವುಗಳ ಸಮಗ್ರ ಅನ್ವೇಷಣೆ, ಉತ್ಖನನ, ಹಾಗೂ ಅಧ್ಯಯನಗಳನ್ನು ಅಗತ್ಯವಾಗಿ ಕೈಕೊಳ್ಳಬೇಕಾಗಿದೆ. ಆ ಮೂಲಕ ಇವುಗಳ ರಚನೆಯ ಉದ್ದೇಶ, ಕಾಲ ಪರಿಗಣನೆ ಮತ್ತು ಸಾಂಸ್ಕೃತಿಕ ಮಹತ್ವವನ್ನು ಇನ್ನೂ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ಸ್ಥಳೀಯರು ಇಂಥ ಕೊಟ್ಟಗಳನ್ನು ಆಪತ್ಕಾಲದಲ್ಲಿ ದವಸಧಾನ್ಯ ಮತ್ತು ಅಮೂಲ್ಯ ವಸ್ತು ಒಡವೆಗಳನ್ನು ಬಚ್ಚಿಡಲು ಪೂರ್ವಿಕರು ಮಾಡಿಕೊಂಡ ಒಂದು ವ್ಯವಸ್ಥೆಯನ್ನು ಸೂಚಿಸುತ್ತದೆಯೆಂದು ಭಾವಿಸುತ್ತಾರೆ. ಡಾ. ಅ. ಸುಂದರರವರು ಇವು ಬೃಹತ್ ಶಿಲಾಯುಗದ ಗೋರಿಗಳು ಆಗಿರಲು ಸಾಕೆಂದು ಊಹಿಸಿದ್ದಾರೆ.[3] ಅಂತೂ ಕೊಟ್ಟಗಳು ಮತ್ತಷ್ಟು ಕುತೂಹಲವನ್ನು ಕೆರಳಿಸಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾಗ್ಐತಿಹಾಸಿಕ ನೆಲೆಗಳು, ಅವಶೇಷಗಳು ಈವರೆಗೂ ಅಷ್ಟೇನೂ ಸಿಗದ ಹಿನ್ನೆಲೆಯಲ್ಲಿ ಈ ಶೋಧನೆಗಳು ಗಮನಾರ್ಹವಾಗಿವೆ. ಈ ಹಿಂದೆ ಡಾ. ಅ. ಸುಂದರರವರು ಬನವಾಸಿ ಬಳಿ ಕಂತ್ರಾಜಿಯಲ್ಲಿ ಪತ್ತೆಮಾಡಿದ ಬೃಹತ್‌ಶಿಲಾಗೋರಿಸಂಸ್ಕೃತಿಗೆ ಸಂಬಂಧಿಸಿದ ಕೆಂಪು-ಕಪ್ಪು ಮಡಿಕೆ ಚೂರುಗಳೂ,[4] ನನ್ನ ಕ್ಷೇತ್ರಕಾರ್ಯದಲ್ಲಿ ಪತ್ತೆಯಾದ ಹರೀಶಿ ಮತ್ತು ನಗೂರು ಗ್ರಾಮಗಳ ಹೊಸವಲಯದಲ್ಲಿರುವ ಬೃಹತ್‌ಶಿಲಾಗೋರಿ ಕುರುಹುಗಳು,[5] ಡಾ. ಕೆ. ಜಿ.

ಭಟ್ ಸೂರಿಯವರು ಸುಪಾತಾಲೂಕಿನಲ್ಲಿ ಕಂಡು ಹಿಡಿದ ನವಶಿಲಾಯುಗದ ಕಲ್ಲಿನ ಕೊಡಲಿ[6] ಉತ್ತರ ಕನ್ನಡ ಜಿಲ್ಲೆಯ ಪ್ರಾಗ್ ಐತಿಹಾಸಿಕ ಅಧ್ಯಯನದಲ್ಲಿ ಉಲ್ಲೇಖನೀಯವಾಗಿವೆ. ಇವು ಇಲ್ಲಿಯ ಪರಿಸರ–ಕಾಡು–ಕಾನುಗಳಲ್ಲಿ, ನದಿ–ಗುಡ್ಡಗಳ ತಡಿಯಲ್ಲಿ ಇನ್ನೂ ವ್ಯಾಪಕವಾಗಿ ಪರಿವೀಕ್ಷಣೆ ಮಾಡುವ ಅವಶ್ಯಕತೆಯನ್ನೂ ಸೂಚಿಸುತ್ತವೆ.

ಪ್ರಾಚ್ಯಾವಶೇಷಗಳ ಸಂಶೋಧನೆಗಳಿಗೆ ಪೂರಕವಾಗಿ ಆಯಾ ಸ್ಥಳಗಳ ಸ್ಥಳ ಪುರಾಣ, ಸ್ಥಳ ಮಹಾತ್ಮೆ, ಜಾನಪದ ಐತಿಹ್ಯ, ದಂತಕತೆ ಮುಂತಾದ ವಿವರಗಳನ್ನೂ ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಂಗ್ರಹಿಸಲಾಗಿದೆ. ಅವುಗಳ ವೈಜ್ಞಾನಿಕ ವಿಶ್ಲೇಷಣೆಯನ್ನು ಮಾಡಲಾಗುತ್ತಿದೆ. ಕೋಡಿಗದ್ದೆ ಮಹಿಷಮರ್ದಿನಿ ಗುಡಿಯು ಕಾಳಿಕಾ (ದುರ್ಗಾ) ದೇವಾಲಯವಾಗಿ, ಜನಪದೀಯವಾಗಿ ಹೆಚ್ಚು ಜನಪ್ರಿಯತೆ ಗಳಿಸಿರುವುದು ಹಾಗೂ ಶಕ್ತಿಸ್ಥಾನವಾಗಿ ಬೆಳೆಯುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ.[7] ಹೀಗೆ ಒಂದು ಪ್ರದೇಶದ ಸಮಗ್ರ ಅಧ್ಯಯನದಲ್ಲಿ ಲಭ್ಯವಿರುವ ಎಲ್ಲ ಮಾಹಿತಿಗಳನ್ನು ಶಾಸ್ತ್ರೀಯವಾಗಿ ಸಂಗ್ರಹಿಸಿ, ವರ್ಗೀಕರಿಸಿ, ವಿಶ್ಲೇಷಿಸಿ, ವ್ಯಾಖ್ಯಾನಿಸುವಲ್ಲಿ ಅಂತರ ಶಾಸ್ತ್ರೀಯ, ಬಹುಶಾಸ್ತ್ರೀಯ ಮಾರ್ಗವನ್ನನುಸರಿಸುವುದು ಅಗತ್ಯ; ಸಂಗ್ರಹಮುಖಿ ಸಂಶೋಧನೆ ವ್ಯಾಖ್ಯಾನಮುಖಿಯಾಗಬೇಕಾಗಿದೆ. ಇದರಿಂದ ಪ್ರಾದೇಶಿಕ ಸಂಸ್ಕೃತಿಯ ಚಿತ್ರಣ ಒಟ್ಟಂದದಲ್ಲಿ, ಅದರ ಎಲ್ಲ ಆಯಾಮಗಳೊಂದಿಗೆ ಮೂಡಿ ಬರಲು ಸಾಧ್ಯ ಮತ್ತು ಇಂಥ ಒಂದು ಅಧ್ಯಯನ ಇಂದಿನ ಅಗತ್ಯವೂ ಆಗಿದೆ.

ಅಡಿಟಿಪ್ಪಣಿಗಳು

೧. ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಳೀಯವಾಗಿ ಲಭ್ಯವಿರುವ ಈ ಜಂಬಿಟ್ಟಿಗೆ (laterite) ಕಲ್ಲನ್ನು ಕಡಿಗಲ್ಲು, ಕಟ್ಟುವಕಲ್ಲು ಎಂದು ಮುಂತಾಗಿ ಕರೆಯಲಾಗಿದ್ದು ಇದನ್ನು ಪ್ರಾದೇಶಿಕವಾಗಿ ಮಧ್ಯಕಾಲೀನ, ಅರ್ವಾಚೀನ ವಾಸ್ತುಕೃತಿಗಳ ನಿರ್ಮಿತಿಯಲ್ಲಿ ವಿಶೇಷವಾಗಿ ಬಳಸಿದ್ದು ಕಂಡುಬರುತ್ತದೆ. ಮೂಲತಃ ಮೃದುವಾಗಿದ್ದರೂ, ಸಣ್ಣಪುಟ್ಟ ತೂತುಗಳಿಂದ ಕೂಡಿದ (porous) ಈ ಕಲ್ಲು ಸೂಕ್ಷ್ಮಕೆತ್ತನೆಗೆ, ಅಲಂಕರಣೆಗೆ ಸೂಕ್ತವಾದದ್ದಲ್ಲ. ಆದರೂ ಸ್ಥಳೀಯವಾಗಿ, ಸುಲಭವಾಗಿ ಲಭ್ಯವಿರುವ ಈ ಕಲ್ಲನ್ನು ಬಳಸಲಾಗಿದೆ.

೨. ಈ ಕೊಟ್ಟದ ಉತ್ಖನನ ಕಾರ್ಯದಲ್ಲಿ ವಿಶೇಷವಾಗಿ ನೆರವಾದ ಕಿಲಾರದ ಹೇರಂಭ ಹೆಗಡೆ, ಸತೀಶ ಸಹನಾ, ಸುಚಿತ್ರಾ ಹೆಗಡೆಯವರನ್ನು ಇಲ್ಲಿ ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

೩. ಡಾ. ಸುಂದರರವರೊಡನೆ ನಡೆಸಿದ ಸಮಾಲೋಚನೆಯಲ್ಲಿ ಅವರು ನೀಡಿದ ಅಮೂಲ್ಯವಾದ ಈ ಸಲಹೆಗಳು ಉಪಯುಕ್ತವಾಗಿದ್ದು ಬೃಹತ್‌ಶಿಲಾಗೋರಿ ಸಂಸ್ಕೃತಿಯ ವ್ಯಾಸಂಗಕ್ಕೆಡೆಮಾಡಿ ಕೊಟ್ಟಿದೆ.

೪. ಕರ್ನಾಟಕ ಭಾರತಿ ಸಂ. iv-೨ (೧೯೭೧) ಪು. ೬೦.

೫. ರಘುನಾಥ ಭಟ್, ಎಚ್. ಆರ್., ಪುರಾತತ್ವ ಪರಿಚಯ, ಮೈಸೂರು, ೧೯೮೪, ಪು. ೧ ಬನವಾಸಿ ಬಳಿಯಿರುವ ನರೂರು ಹೊರವಲಯದಲ್ಲಿರುವ ಬೃಹತ್‌ಶಿಲಾಗೋರಿಯ ಕುರುಹುಗಳ ಬಗ್ಗೆ ಸುಳಿವು ನೀಡಿದ ದ. ರಾ. ಭಟ್ಟರವರಿಗೂ, ಅವರ ಮಕ್ಕಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಬನವಾಸಿಯಲ್ಲಿ ಕೂಡ ಪ್ರಾಗ್ಐತಿಹಾಸಿಕ ಅವಶೇಷಗಳು ಈ ಹಿಂದೆ ದೊರೆತಿರುವುದು ಇಲ್ಲಿ ಗಮನಾರ್ಹ. ೧೯೭೦–೭೧ರಲ್ಲಿ ಬನವಾಸಿ ಉತ್ಖನನ ಕಾಲದಲ್ಲಿ ಈ ಮಾಹಿತಿಯು ನನಗೆ ಸಿಕ್ಕಿತ್ತು.

೬. ನೋಡಿ: ಭಟಸೂರಿ ಕೆ. ಜಿ. ಆರ್ಟ್ ಎಂಡ್ ಆರ್ಕಿಟೆಕ್ಚರ್ ಆಫ್ ನಾರ್ತ್ ಕೆನರ (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಮೈಸೂರು, ೧೯೮೭–೮

೭. ವಾಸ್ತವವಾಗಿ ಈ ಮಹಿಷಮರ್ದಿನಿಯ ವಿಗ್ರಹವು ಆಗಮೋಕ್ತ ಶಿವಾಲಯದ ನವರಂಗದಲ್ಲಿದ್ದಿರಬೇಕು; ಕೋಡಿಗದ್ದೆ ಶಿವಾಲಯದಲ್ಲಿದ್ದ ಗಣಪತಿ. ಸಪ್ತಮಾತೃಕೆ ವಿಗ್ರಹಗಳ ಜೊತೆಗೆ ಈ ಪ್ರತಿಮೆಯೂ ಇದ್ದಿರಬೇಕು. ಕ್ರಮೇಣ ಇದಕ್ಕೇ ಪ್ರತ್ಯೇಕ ದೇವಾಲಯವನ್ನು ನಿರ್ಮಿಸಿ, ಮಹತಿಯನ್ನು ಪಡೆಯುವಂತಾಯಿತು. ಜಡ್ಡಿಯಲ್ಲಿರುವ ಸ್ತಂಭಸಹಿತ ಗಜಲಕ್ಷ್ಮಿವಿಗ್ರಹವೂ ಅಷ್ಟೇ ಕುತೂಹಲಪೂರ್ಣ. ದೇವರಕಾನು, ಪವಿತ್ರವನದ (Sacred grove) ಪರಿಸರದಲ್ಲಿರುವ ಈ ಬಗೆಯ ಮೂರ್ತಿಗಳು ಸ್ಥಳೀಯ ಜಾನಪದ-ನಂಬಿಕೆಗಳಿಂದ ಪ್ರೇರಿತವಾಗಿದ್ದು, ಅನಂತರದಲ್ಲಿ ಕ್ಲಾಸಿಕಲ್ ಪೌರಾಣಿಕ ಆರಾಧನಾ ವಿಧಿಗಳು ಅಂಟಿಕೊಂಡು ಸಂಕೀರ್ಣವಾದವು. ಜಡ್ಡಿದೇವಿ ಪವಿತ್ರವನದ ಬಗೆಗೆ ಧಾರವಾಡದಲ್ಲಿ ನಡೆದ 'ಇಕಾಲಜಿ ಎಂಬ ಫೋಕ್ ಹೆರಿಟೇಜ್' ಎಂಬ ಗೋಷ್ಠಿಯಲ್ಲಿ ಪ್ರಬಂಧವನ್ನು ಮಂಡಿಸಲಾಗಿದೆ.

ಹೂಜಿಯೊಳಗಿನ ನೀರು ಹೊಳೆಯುತ್ತದೆ, ಸಮುದ್ರದೊಳಗಿನ ನೀರು ಕಪ್ಪಾಗಿರುತ್ತದೆ.

ಅಲ್ಪ ಸತ್ಯಕ್ಕೆ ಸ್ಪಷ್ಟ ನುಡಿ ಇದೆ, ಬೃಹತ್ ಸತ್ಯಕ್ಕೆ ಮಾತ್ರ ಬೃಹತ್ ಮೌನ ಒಂದೇ.

ಸತ್ಯಕ್ಕಾಗಿ ಸಾಯುವವರು ಅಮರರಾಗುವರು. ಅಂತೆಯೇ ಒಂದು ಇಡೀ ಜನಾಂಗವು ಸತ್ಯಕ್ಕಾಗಿ ಸಾಯಬಲ್ಲುದಾದರೆ ಅದೂ ಸಹ ಮಾನವತೆಯ ಇತಿಹಾಸದಲ್ಲಿ ಅಮರತ್ವವನ್ನು ಹೊಂದುವುದು.

ಸತ್ಯವು ಎಷ್ಟೋ ಸುಳ್ಳುಗಳಿಗಿಂತಲೂ ಶ್ರೇಷ್ಠವಾದುದಲ್ಲವೆ? ಮಾಡಿದ ತಪ್ಪನ್ನೇ ನೀನು ಪುನಃ ಪುನಃ ಮಾಡಿದ ಮಾತ್ರಕ್ಕೆ ಆ ತಪ್ಪೇ ನೆಲೆಯೂರಬೇಕೆ?

—ರವೀಂದ್ರನಾಥ ಟಾಗೂರ್

ಯಾವುದೇ ಪಕ್ಷವು ಯುದ್ಧದಲ್ಲಿ ವಿಜಯಿಯೆಂದು ಕರೆದುಕೊಂಡರೂ ವಿಜಯಿಗಳು ಯಾರೂ ಅಲ್ಲ. ಎಲ್ಲರೂ ಕಳೆದುಕೊಂಡವರೇ.

ಡಾ. ಅಂಬಳಿಕೆ ಹಿರಿಯಣ್ಣ

ಗಾದೆಗಳ ರಾಚನಿಕ ಅಧ್ಯಯನ : ಡಂಡೆಸ್ ವಿಚಾರಗಳು

ಗಾದೆಗಳ ಅಧ್ಯಯನ ಬೇರೆ ಬೇರೆ ಕ್ಷೇತ್ರಗಳ ವಿದ್ವಾಂಸರನ್ನು ಆಕರ್ಷಿಸಿದೆ. ಕೇವಲ ವರದಿರೂಪದ ದಾಖಲೀಕರಣಗಳಿಗೆ ಬದಲಾಗಿ ಚರಿತ್ರನಿಷ್ಠ ವಿದ್ವತ್ತು ಇಲ್ಲಿ ಕಂಡುಬಂದಿದೆ. ಆರಂಭಿಕ ಯತ್ನಗಳಲ್ಲಿ ಸಂಬಂಧಿತ ಭಾಷೆಗಳ ಜನರ ಜ್ಞಾತಿ ಗಾದೆಗಳನ್ನು ಶೋಧಿಸುವ ಗುರಿಯೇ ಸಾಮಾನ್ಯವಾಗಿತ್ತು. ಅಲ್ಲದೆ ಅವುಗಳ ಮೂಲ ಮತ್ತು ಕಾಲನಿರ್ದೇಶನ ಮಾಡುವ ಉದ್ದೇಶವೂ ಆಗ ಇತ್ತು.

ಇಪ್ಪತ್ತನೆಯ ಶತಮಾನದಲ್ಲಿ, ಸಮಾಜ ವಿಜ್ಞಾನಗಳ ಪ್ರಭಾವದಿಂದಾಗಿ ಸಾಹಿತ್ಯಿಕ ಮತ್ತು ಚಾರಿತ್ರಿಕ ಅಧ್ಯಯನ ವಿಧಾನಗಳಿಂದ ಬೇರೆಯಾದ ಹೊಸ ಬಗೆಯ ಅಧ್ಯಯನ ಸಾಧ್ಯತೆಗಳನ್ನು ಕಂಡುಕೊಳ್ಳಲಾಗಿತ್ತು. ನಿರ್ದಿಷ್ಟ ಗಾದೆಗಳನ್ನು ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಬಳಸುವ ಬಗೆಗೆ ವಿಸ್ತಾರ ಕ್ಷೇತ್ರ ಸಂಶೋಧನೆಗಳು ನಡೆದವು. ವಸ್ತುವನ್ನು ರಾಷ್ಟ್ರೀಯ ಗುಣದೊಡನೆ ಸಂಬಂಧಗೊಳಿಸಿ ಅಧ್ಯಯನ ನಡೆಸಿದ ವಸ್ತು ವಿಶ್ಲೇಷಣಾ ಪ್ರಯತ್ನಗಳೂ ಇವೆ. ಗಾದೆಗಳಲ್ಲಿಯ ಲೋಕವೃಷ್ಟಿಯನ್ನು (World View) ವಿಶ್ಲೇಷಿಸುವ ಪ್ರಯತ್ನಗಳೂ ಇಲ್ಲದಿಲ್ಲ. ಇಷ್ಟೇ ಅಲ್ಲ ; ಅನ್ವಯಿಕ ಜಾನಪದದಲ್ಲಿ ಗಾದೆಗಳ ಅಸಂಖ್ಯ ಪ್ರಾಯೋಗಿಕ ಬಳಕೆಯ ವಿವೇಚನೆಯೇ ಇದೆ.

ಆಸಕ್ತರ ಲಕ್ಷ್ಯವನ್ನು ಸಾಕಷ್ಟು ಗಣನೀಯ ಪ್ರಮಾಣದಲ್ಲಿ ಸೆಳೆದಿರುವ ಮತ್ತು ಇಂದಿಗೂ ಆ ಲಕ್ಷ್ಯವನ್ನು ಕಾಯ್ದುಕೊಂಡಿರುವ ಗಾದೆಗಳನ್ನು ಸಮರ್ಪಕವಾಗಿ ವಿಶ್ಲೇಷಿಸಲು ಸಾಧ್ಯವಾಗದಿರುವುದು ಆಶ್ಚರ್ಯದ ಸಂಗತಿಯೇ ಸರಿ. ಗಾದೆಯಿಲ್ಲದ ಭಾಷೆಯೇ ಇಲ್ಲ ; ದೇಶವೂ ಇಲ್ಲ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ ಜನಭಾಷೆಯಲ್ಲಿ ಮಾತ್ರ ಗಾದೆಯ ಅಸ್ತಿತ್ವ ಎಂಬುದನ್ನು ನೆನಪಿಡಬೇಕು (ಸಿಪಿಕೆ ೧೯೮೧ : ೧೮). ಗಾದೆ ನೂರು ಭಾವದ ನೂರು ವಿಷಯದ ನೂರು ಅಭಿವ್ಯಕ್ತಿಯಾಗಿರುವುದರಿಂದ (ರಾಗೌ ೧೯೬೮ : ೧೨) ಗಾದೆ ಎಂದರೇನೆಂದು

ಸೂತ್ರೀಕರಿಸಿ ಹೇಳುವುದು ಕಷ್ಟ. ಬಿ. ಜೆ. ವೈಟಿಂಗ್ ಅವರ ಅಭಿಪ್ರಾಯದಲ್ಲಿ ಗಾದೆಗೆ ಸಂಬಂಧಿಸಿದಂತೆ ಒಂದು ಸಂಕ್ಷಿಪ್ತ ವಿವರಣೆ ಕೊಡುವುದು ಕಷ್ಟಸಾಧ್ಯ. 'ನಿಜ ಹೇಳಬೇಕೆಂದರೆ ಗಾದೆಯನ್ನು ಕುರಿತಾದ ಯಾವ ವ್ಯಾಖ್ಯೆಯ ಅವಶ್ಯಕತೆಯೂ ಇಲ್ಲ. ಏಕೆಂದರೆ ಗಾದೆ ಎಂದರೇನೆಂದು ಎಲ್ಲರಿಗೂ ಗೊತ್ತು'.[1]

ಆದರೆ ಹಲವರು ಇದನ್ನು ಒಪ್ಪುವುದಿಲ್ಲ. ಏಕಸಂಸ್ಕೃತಿಯಿಂದ ದೊರಕಿಸಿಕೊಂಡ ವ್ಯಾಪಕ ಗಾದೆ ಸಾಮಗ್ರಿಯಲ್ಲಿ ಗಾದೆಯ ಚಾರಿತ್ರಿಕ ಅಧ್ಯಯನ ನಡೆಯುವುದಾಗಿರಲಿ ರಾಷ್ಟ್ರೀಯ ಗುಣಗಳ ಶೋಧವಾಗಿರಲಿ ಗಾದೆಯನ್ನು ಕುರಿತಾದ ವ್ಯಾಖ್ಯೆಯೊಂದರ ಅಗತ್ಯ ಇದ್ದೇ ಇದೆ.

ಗಾದೆಯನ್ನು, ರಾಚನಿಕ ಪರಿಭಾಷೆಯಲ್ಲಿ, ಉತ್ತಮ ರೀತಿಯಲ್ಲಿ ವ್ಯಾಖ್ಯಾಯಿಸಬಹುದು. ಜಾನಪದದ ಇತರ ರೂಪಗಳೂ ಅದೇ ಕ್ರಿಯೆಗಳನ್ನು ಹಂಚಿಕೊಳ್ಳುವುದರಿಂದ ಸಂಪೂರ್ಣ ಔಪಚಾರಿಕ ವ್ಯಾಖ್ಯೆಗಳನ್ನು ಕೊಡುವುದು ಯುಕ್ತವಲ್ಲ. ಅವು 'ಸನ್ನಿವೇಶವೊಂದನ್ನು ಮೊತ್ತದಲ್ಲಿ ಹೇಳುವುದು' ಅಥವಾ ಕ್ರಿಯಾಗತಿಗಳನ್ನು ಅಂಗೀಕಾರವಾಗುವಂತೆ ಮಾಡುವ ಸೂಚನೆ ಕೊಡುತ್ತವೆ ಅಷ್ಟೆ. ಅಲ್ಲದೆ ಅದೇ ಔಪಚಾರಿಕ ಮಾನದಂಡಗಳನ್ನು ಜಾನಪದದ ಇತರ ರೂಪಗಳಲ್ಲಿಯ ದೃಷ್ಟಾಂತಗಳೂ ಒಳಗೊಳ್ಳಬಹುದು. ಡಂಡೆಸ್ ಪ್ರಕಾರ, ಇದು ಕ್ರಿಯಾತ್ಮಕ ಪರಿಗಣನೆಗಳ ಉಪಯೋಗಿಕತೆಯನ್ನು ಅರ್ಥಹೀನಗೊಳಿಸಲ್ಲ. ಕೇವಲ ಬಾಹ್ಯ ರೂಪಕ್ಕಿಂತ ಆಂತರಿಕ ಅಗತ್ಯಗಳನ್ನು ದೃಢೀಕರಿಸಲು ಬೇಕು. ಎಂದರೆ ಗಾದೆಯೊಂದು ಏನು ಮಾಡುತ್ತದೆ ಎಂಬುದು ಮುಖ್ಯವಲ್ಲ ; ಆದರೆ ಗಾದೆ ಏನಾಗಿದೆ ಎಂಬುದೇ ಪ್ರಶ್ನೆಯಾಗಿದೆ.

ಗಾದೆಯ ರಾಚನಿಕ ವಿಶ್ಲೇಷಣೆಯ ಪ್ರಯತ್ನ ಸಾಮಾನ್ಯವಾಗಿ ಜಾನಪದದ ರಾಚನಿಕ ವಿಶ್ಲೇಷಣೆಯ ಒಂದು ಮೌಲಿಕವಾದ ಪರೀಕ್ಷಾಗತಿಯನ್ನು ಪ್ರತಿನಿಧಿಸುತ್ತದೆ. ಮೌಖಿಕ ರೂಪಗಳ ರಚನೆಯನ್ನು ನಿಜವಾಗಿಯೂ ವಿಶ್ಲೇಷಿಸಲು ಸಾಧ್ಯವಾಗುವುದಾದರೆ ಗಾದೆಗಳ ರಚನೆಯನ್ನು ಕುರಿತು ಕೂಡ ವಿಶ್ಲೇಷಿಸಲು ಸಾಧ್ಯವಾಗಲೇಬೇಕು. ರಾಚನಿಕ ವಿಶ್ಲೇಷಣೆಯೊಂದಿಗೆ ಸೇರಿಕೊಂಡಿರುವ ಎಲ್ಲ ಸೈದ್ಧಾಂತಿಕ ಸಮಸ್ಯೆಗಳೂ ಮೂಲಭೂತ ಅಥವಾ ಕನಿಷ್ಠ ರಾಚನಿಕ ಏಕಕಗಳನ್ನು ಒಳಗೊಂಡಿರುವುದರಿಂದ ಗಾದೆಗೂ ಸಂಗತವಾದವೇ ಆಗಿವೆ.

ಗಾದೆಗಳು ಚಿಕ್ಕ ಹಾಗೂ ವಾಕ್ಚತುರ ಸಾಂಪ್ರದಾಯಿಕ ಅಭಿವ್ಯಕ್ತಿಗಳು.

---

1. "Happily, no definition is really necessary, since all of us know what a proverb is"—Quoted by Alan Dundes in his *Analytic Essays in Folklore*, 1975, Mouton, The Hague, Paris, p. 104.

ಶಿಕ್ಷಣ ಮತ್ತು ನ್ಯಾಯ ತೀರ್ಮಾನ ಕಲಾಪಗಳಲ್ಲಿ, ಸನ್ನಿವೇಶಗಳಲ್ಲಿ ಅವು ಅತ್ಯಂತ ರಚನಾತ್ಮಕವಾಗಿರುತ್ತವೆ. ದೈನಂದಿನ ಚಟುವಟಿಕೆಗಳಲ್ಲಿ ಪ್ರತಿಯೊಬ್ಬರ ಮಾತಿನಲ್ಲೂ ಅವು ಪ್ರಯೋಗಗೊಳ್ಳುತ್ತವೆ. ಪ್ರತಿಯೊಂದು ಗಾದೆಯೂ ಮತ್ತೆ ಮತ್ತೆ ಉದ್ಭವ ವಾಗುವ ಸಮಸ್ಯೆಗೆ ಉತ್ತರ ರೂಪದ ಒಂದು ಪೂರ್ಣ ಹೇಳಿಕೆಯಾಗಿರುತ್ತದೆ. ಅದು ಒಂದು ದೃಷ್ಟಿಯನ್ನು ತಂದುಕೊಡುತ್ತದೆ. ಒಂದು ಕೌಶಲವಾಗಿ, ಕಲಾತ್ಮಕ ರೂಪವಾಗಿ ಹಾಗೂ ಕೃತಕ ಮತ್ತು ಚಮತ್ಕಾರಪೂರಿತ ರಚನೆಯಾಗಿ ಉಚ್ಚರಣೆಯ ಎಲ್ಲ ಬಗೆಯ ವಿನ್ಯಾಸಗಳನ್ನು ಅದು ಬಳಸಿಕೊಳ್ಳುತ್ತದೆ. ಛಂದಸ್ಸು, ದ್ವಿಗುಳ ರಚನೆ, ಸಮತೂಕ, ಪ್ರಾಸ, ಸ್ವರಾನುಪ್ರಾಸ, ಸಾರಸಂಗ್ರಹತನ, ರೂಪಕಾತ್ಮಕ ವಿನ್ಯಾಸ ಅವುಗಳಲ್ಲಿ ಮುಖ್ಯವಾದವು.

ಕಥೆ, ಪುರಾಣ ಅಥವಾ ಲಾವಣಿಗಳನ್ನು ಬಳಸುವುದಕ್ಕಿಂತ ಹೆಚ್ಚಾಗಿ ಗಾದೆಗಳನ್ನು ಪ್ರಯೋಗಿಸುವುದರ ಮಹತ್ತರ ಅನುಕೂಲವೆಂದರೆ ಈ ರೂಪದ ಸಾಪೇಕ್ಷ ಸರಳತೆ. ಆದ್ದರಿಂದ ಇದು ಸಂಕೀರ್ಣ ಸ್ವರೂಪದ ಪುರಾಣದ ಮೇಲೆ ಗಮನ ಕೇಂದ್ರೀಕರಿಸುವುದಕ್ಕೆ ಬದಲಾಗಿ ಸರಳ ಗಾದೆಯತ್ತ ಲಕ್ಷ್ಯಹರಿಸುವುದರ ಮೂಲಕ ಸೈದ್ಧಾಂತಿಕವಾಗಿ ರಾಚನಿಕ ವಿಶ್ಲೇಷಣೆಯನ್ನು ಎದುರಿಸಲು ಅದು ಸುಳುಹು ಕೊಡುತ್ತದೆ.

ಗಾದೆ ರಚನೆಗೆ ಸಂಬಂಧಿಸಿದಂತೆ ಸಾಕಷ್ಟು ಹಿಂದೆಯೇ ಜಿಜ್ಞಾಸೆಗಳು ನಡೆದಿರುವುದು ಗಮನಾರ್ಹ. ಶ್ರೀಮತಿ ಕಿಮ್ಮರ್ಲೆ ೧೯೪೭ರಲ್ಲೇ ಗಾದೆಗಳ ವರ್ಗೀಕರಣ ಕ್ರಮಕ್ಕೆ ಯತ್ನಿಸಿದ್ದುಂಟು. ಆದರೆ ಆಕೆಯ ಯೋಜನೆ ಭಾಷಾ ವೈಜ್ಞಾನಿಕ ಹಾಗೂ ವಾಕ್ಯವಿನ್ಯಾಸಾತ್ಮಕ ಸೂತ್ರಗಳಿಗೆ ಬಂಧಿತವಾಗಿವೆ. ಡಂಡೆಸ್ ಪ್ರಕಾರ, ಆಕೆಯ ಎಲ್ಲ ಹದಿನೇಳು ವಿಂಗಡಣೆಗಳು ಗಾದೆಗಳಿಗೆ ಸಂಗತವಾಗಿಲ್ಲ ಮತ್ತು ಅಂತಹ ವ್ಯಾಕರಣಾತ್ಮಕ ಭಿನ್ನತೆಗಳ ಬಳಕೆ ಆಕೆಯ ವಿಶ್ಲೇಷಣೆ ಒಳರಚನೆಯನ್ನು ಹುಡುಕುವುದಕ್ಕಿಂತ ಬಾಹ್ಯರಚನೆಯನ್ನು ನೋಡುವುದಾಗಿದೆ. ಇದರಿಂದ ಗಾದೆಗಳ ಶಬ್ದ ಲಕ್ಷಣ ಹೇಳುವ ಅವಕಾಶ ಸಿಗುವುದಾದರೂ ಅವು ನಿಜವಾಗಿಯೂ ಗಾದೆಗಳ ರಚನೆಯ ಮೇಲೆ ಬೆಳಕು ಚೆಲ್ಲುತ್ತವೆಯೆ ಎಂಬ ಪ್ರಶ್ನೆ ಏಳುತ್ತದೆ. ಅಲ್ಲಿ ಭಾಷಿಕ ರಚನೆ ಇಲ್ಲ ಎಂದರ್ಥವಲ್ಲ. ಗಾದೆಗಳು ಶಬ್ದಗಳ ಸಂಯೋಜನೆಯಿಂದಾದವು. ಅಲ್ಲದೆ ಅಲ್ಲಿ ಭಾಷಿಕ ರಚನೆ ಸೇರಿದೆ ಎಂಬುದು ಸತ್ಯ. ಆದರೆ ಪ್ರತ್ಯೇಕಗೊಳಿಸಲಾಗುವ ಭಾಷಿಕ ರಚನೆಗೆ ವಿರುದ್ಧವಾಗಿ ಅಲ್ಲಿ ಜಾನಪದೀಯ ರಚನೆಗಳ ಮೂಲಾಧಾರ ರೀತಿಗಳು ಇವೆಯೆ ಎಂಬುದು ಮುಖ್ಯ ಪ್ರಶ್ನೆ.

ಭಾಷಿಕ ರಚನೆಗಳಿಂದ ಪ್ರತ್ಯೇಕಗೊಳ್ಳುವ ಜಾನಪದೀಯ ರಚನೆಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಅಧ್ಯಯನಕಾರ ನಿಜವಾಗಿಯೂ ಗಾದೆ ಪ್ರತಿಮೆ, ಗಾದೆ ಸಂದೇಶ ಅಥವಾ ಗಾದೆಯ ಶಿಲ್ಪ ಸೂತ್ರಗಳನ್ನು ಗಣನೆಗೆ ತೆಗೆದುಕೊಳ್ಳುವನೋ

ಇಲ್ಲವೊ ಎಂಬುದು ಇಲ್ಲಿ ಏಳುವ ಸಮಸ್ಯೆ. ಉದಾಹರಣೆಗೆ ಕೆಲವು ಗಾದೆಗಳಲ್ಲಿ ಸಂಯೋಜನಾತ್ಮಕ ಅಥವಾ ಶಿಲಾತ್ಮಕ ಸೂತ್ರಗಳು ಹೀಗೆ ಕಾಣಿಸಿಕೊಳ್ಳುವುದುಂಟು.[2]

೧. ಅಪ್ಪನ ಮನೆ ತಂಪಿಗಿಂತ ಹಿಪ್ಪೆ ಮರದ ತಂಪು ಲೇಸು.

೨. ಅಳಿಯನ ಅರಮನೆಲಿರೋದ್ಕಿಂತ ಮಗನ ಕಿರುಮನೇಲಿರೋದು ಲೇಸು.

೩. ಒಬ್ಬನಿಗಿಂತ ಇಬ್ಬರು ಲೇಸು ಹಬ್ಬಕ್ಕಿಂತ ಮದುವೆ ಲೇಸು.

೪. ಉಪ್ಪು ನೀರಿಗಿಂತ ಕಪ್ಪು ನೀರು ಲೇಸು.

೫. ಮಲಗಿರೋದ್ಕಿಂತ ಎದ್ದಿರೋದು ಲೇಸು.
ಕೂತ್ಕೊಂಡಿರೋದ್ಕಿಂತ ಕೂಲಿ ಮಾಡೋದು ಲೇಸು.

೬. ನನ್ನವರಿಗಿಂತ ಅನ್ನಿಗರು ವಾಸಿ.

೭ ನಿರೂಣಿಸವರಿಗೆ ತುಪ್ಪದ ಅನ್ನ ಹಾಕೂದರ ಬದಲು
ನನ್ನೋರ್ಸವರಿಗೆ ಅಂಬಲಿ ಬಿಡುವುದು ಲೇಸು.

೮. ಹಂದಿಯಾಗಿ ನೂರು ವರ್ಷ ಬಾಳೋದ್ಕಿಂತ
ನಂದಿಯಾಗಿ ಮೂರು ವರ್ಷ ಬಾಳೋದು ಲೇಸು.

೯. ಮಿನುಗೋ ಸಾವಿರ ಚುಕ್ಕಿಗಳಿಗಿಂತ
ಬೆಳಗೋ ಒಬ್ಬ ಚಂದ್ರ ಲೇಸು.

ಮತ್ತೆ ಕೆಲವು ಸಾಮಾನ್ಯ ಗಾದೆಗಳ ಶಿಲ್ಪ ಸೂತ್ರಗಳು ಇರುವ ಬಗೆಯಂತೂ ಇನ್ನೂ ಸರಳ :

೧. ಎಡವಿದ ಬೆಳ್ಳಿಗೇ ಎಡವೋದು

೨. ಬೊಗಳುವ ನಾಯಿ ಕಚ್ಚುವುದಿಲ್ಲ

೩. ಮಾಡು, ಇಲ್ಲ ಸುಮ್ಮನೆ ನೋಡು

೪. ಗೌಡಶ್ಯಾನಿ ಅಂದ್ರೆ ಓ ಅಂದ್ಲು
ಸೊಲಿಗೆ ತುಪ್ಪ ಅಂದ್ರೆ ಸೊಲ್ಲೇ ಇಲ್ಲ

೫. ಕುರುಡನಿಗೆ ದೀಪ ಬೇಡ
ಹೊಂಗೆ ಮರ ಯಾಕೆ ? ಅಂದಂಗೆ

ಗಾದೆ ಸೂತ್ರಗಳು ಪ್ರತಿಮೆಗೆ ಹೆಚ್ಚು ಸ್ವಾತಂತ್ರ್ಯ ನೀಡುವಂತೆಯೂ ಸಂದೇಶಕ್ಕೆ ತುಸು ಕಡಿಮೆ ಪ್ರಾಶಸ್ತ್ಯವನ್ನು ಕೊಡುವಂತೆಯೂ ಕಾಣುತ್ತವೆ :

---

2. ಇಲ್ಲಿ ಉದ್ಧರಿಸಿರುವ ಗಾದೆಗಳನ್ನು ಸುಧಾಕರ ಅವರ 'ನಮ್ಮ ಸುತ್ತಿನ ಗಾದೆಗಳು' ಹಾಗೂ ರಾಗೌ ಅವರ 'ನಮ್ಮ ಗಾದೆಗಳು' ಸಂಗ್ರಹಗಳಿಂದ ಆಯ್ದುಕೊಂಡಿದೆ.

‘ ಅಳಿಯನ ಅರಮನೇಲಿರೋದ್ಕಿಂತ
ಮಗನ ಕಿರುಮನೇಲಿರೋದು ಲೇಸು ’
ಎಂಬ ಗಾದೆ
‘ ಬೆಳ್ಳು ಬಿಡಿಸಿಕೊಳ್ಳೋಕೆ ಹೋಗಿ
ತಳ್ದು ಸಿಕ್ಕಿಸಿಕೊಂಡ ’
ಎಂಬ ಗಾದೆಯು ಅಥವಾ
‘ ಲಾಯರ್ನ ಕೈಲಿ ಸಿಗಾಕಳ್ಳಾದ್ಕಿಂತ
ಬೆಕ್ಕಿನ ಬಾಯಾಗೆ ಇಲಿಯಾಗಿರಾದು ಲೇಸು ’

ಎಂಬ ಗಾದೆಯು ಅರ್ಥವನ್ನು ಕೊಡುವುದಿಲ್ಲ. ಇಲ್ಲಿ ರಾಚನಿಕ ಅರ್ಥ ಸಂದೇಶದಲ್ಲಿ ಒಂದು ಏಕರೂಪತೆ ಇರುವುದನ್ನು ಗಮನಿಸಬಹುದು. ಅದನ್ನು ‘ಅ’ ಎನ್ನಬಹುದು. ಎರಡನೆಯ ಬಗೆ ‘ಬ’ ಗಿಂತ ಉತ್ತಮ ಎಂದು ತಿಳಿದುಕೊಳ್ಳಬಹುದು. ಆದರೆ ಎರಡರ ಸಂದೇಶಗಳೂ ಬೇರೆಯಾದವು. ಒಂದರಲ್ಲಿ ವ್ಯಕ್ತಿಯೊಬ್ಬನಿಗೆ ಲಾಯರನ ಹತ್ತಿರ ಹೋಗಬೇಡ ಬೇರೆಲ್ಲಾದರೂ ಹೋಗು ಎಂಬ ಒತ್ತಾಯವಿದೆ ‘ ಹೋಗುವುದು ’ ‘ ಹೋಗದಿರುವುದು ’—ಎರಡೂ ಒಂದೇ ಅಲ್ಲ, ಒಟ್ಟು ಸೂತ್ರದ ದೃಷ್ಟಿಯಿಂದ ಸಂದೇಶ ಒಂದೇಯಾಗಿ ಕಾಣಬಹುದು.

ಈಚಿನ ದಿನಗಳಲ್ಲಿ ಗಾದೆ ಅಧ್ಯಯನಕಾರರು ಗಾದೆಗಳಲ್ಲಿರುವ ಪ್ರತಿಮೆಗೆ ಕಟ್ಟು ಬೀಳದೆ ಅವು ಕೊಡುವ ಸಂದೇಶಗಳ ಕಡೆ ಗಮನ ಹರಿಸುತ್ತಿರುವುದು ಸಮಾಧಾನದ ಸಂಗತಿಯಾಗಿದೆ. ಒಂದೇ ತೆರನ ಅರ್ಥಗಳು ಭಿನ್ನ ಪ್ರತಿಮೆಗಳಿಂದ ಸಂವಹನಗೊಳ್ಳಬಹುದು : ‘ ತಾಳ ಹಾಕೋಕೆ ಹೋಗಿ ತೊಲ್ದು ಸಿಕ್ಕಿಸಿಕೊಂಡ’

ಇದೇ ರೀತಿಯಾಗಿ ‘ ಹಗ್ಗ ನೋಡಿ ಹಾವು ಅಂತ ಹಾದ್ಹಾಗೆ ’ ಎಂಬ ಗಾದೆ ‘ ಗಾಯಗೊಂಡ ಬೆಕ್ಕು ತಣ್ಣೀರಿಗೂ ಹೆದರುತ್ತದೆ ’ ಎಂಬ ಫ್ರೆಂಚ್ ಗಾದೆಯನ್ನು ರಾಚನಿಕ ಅರ್ಥಸ್ತರದಲ್ಲಿ ಹೋಲುತ್ತದೆ. ಸಂದೇಶದಲ್ಲಿ ಈ ಎರಡೂ ಗಾದೆಗಳು ಗ್ರೀಕ್ ಗಾದೆಯನ್ನು ಹೋಲುತ್ತವೆ : ‘ ಯಾರೇ ಆಗಲಿ ಸಾದಾ ಫಲಾಮೃತದಿಂದ ತಣಿದರೆ ತಂಪಾದ ಒಡಕು ಹಾಲಿನ ಸ್ವಾದದಿಂದ ತೇಲುತ್ತಾರೆ ’. ಇಲ್ಲಿ ಸಂದೇಶಗಳು ಭಿನ್ನವಾಗಿಲ್ಲ. ಆದರೆ ಪ್ರತಿಮೆಗಳು ಒಂದರಿಂದ ಮತ್ತೊಂದು ಬೇರೆಯಾಗಿವೆ. ಇದಕ್ಕೆ ಇನ್ನೂ ಎರಡು ಉದಾಹರಣೆಗಳನ್ನು ಗಮನಿಸಬಹುದು :

೧. ‘ ಕತ್ತೆ ಕಾಶಿಗೆ ಹೋದರೆ ಕುದುರೆ ಆದಾದ ?’

೨. ‘ ಹಂದಿ ಕಿವಿಯಿಂದ ರೇಷ್ಮೆ ತೈಲಿಯನ್ನು ಮಾಡಲಾಗುವುದೆ ?’

ಎರಡನೆಯ ಗಾದೆ ಮೊದಲಿನ ಗಾದೆಯ ಸಂದೇಶವನ್ನೇ ಕೊಡುತ್ತದೆ. ಆದರೆ ಗಾದೆಯ ಪ್ರತಿಮೆ ಮೊದಲಿನದರಿಂದ ಬೇರೆಯಾಗಿದೆ. ರಾಚನಿಕ ವಿಶ್ಲೇಷಣೆ ಪ್ರತಿಮೆಯನ್ನು ವಿಷಯವಾಗಿಸಬೇಕೊ ? ಅಂತರ್ಗತ ಸೂತ್ರವನ್ನೊ ? ಇದು ಇಲ್ಲಿ ಎದಿರಾಗುವ

ಪ್ರಶ್ನೆ. "……ದಿಂದ—— ನ್ನು ನೀವು ಮಾಡಲಾರಿರಿ—" ಈ ವಿನ್ಯಾಸ ಯಾವುದೇ ಒಂದು ಪ್ರತಿಮೆಗೆ ಸ್ವತಂತ್ರವಾಗಿ ಕಾಣುತ್ತದೆ. ಬಹಳ ಸಂದರ್ಭಗಳಲ್ಲಿ ಅದು ಪ್ರತಿಮೆಯಾಗಿರುವುದಕ್ಕಿಂತ ಮೂಲಾಧಾರ ಸೂತ್ರವಾಗಿ ಕಾಣುತ್ತದೆ. ಬೇರೆ ಬೇರೆ ಗಾದೆ ಪ್ರತಿಮೆಗಳು ಆರ್ನೆ ಥಾಂಪಸನ್ನರ ಕಥಾವರ್ಗಗಳಿಗಿಂತ ಭಿನ್ನವಾದವು. ಡಂಡೆಸ್ ಪ್ರಕಾರ, ವಸ್ತುವಿನಲ್ಲಿನ ಭಿನ್ನತೆ ಮೂಲಾಧಾರ ರಚನೆಯಲ್ಲಿನ ಸಮೀಕೃತ ವ್ಯತ್ಯಾಸ ವೇನಲ್ಲ. ಪ್ರಾಪ್ ಅವರ ವಾಕ್ಯವಿನ್ಯಾಸಾತ್ಮಕ ಮಾದರಿ ಅನೇಕ ವಿಭಿನ್ನ ಆರ್ನೆ–ಥಾಂಪಸನ್ನರ ಕಥಾವರ್ಗಗಳಿಗೆ ಮೂಲಭೂತವಾಗಿರುವಂತೆ ಲೆವಿಸ್ಟ್ರಾಸ್ ಅವರ ನಿದರ್ಶನಾತ್ಮಕ ಮಾದರಿ ದಕ್ಷಿಣ ಅಮೆರಿಕನ್ ಇಂಡಿಯನ್ನರ ಪುರಾಣಗಳನ್ನು ಆಧರಿಸಿದೆ. ಗಾದೆಯ ವಿಶ್ಲೇಷಣಕಾರರು ಈ ಎರಡರಲ್ಲಿ ಒಂದು ಮಾದರಿಯನ್ನು ಆಯ್ದುಕೊಳ್ಳುವುದು ಯುಕ್ತ.

ರೂಪಕ್ಕಿಂತ ವಸ್ತುವಿಗೆ ಹೆಚ್ಚು ಲಕ್ಷ್ಯ ಕೇಂದ್ರೀಕರಿಸುವುದು ಈಚಿನ ಒಂದು ಮಹತ್ವಾಕಾಂಕ್ಷೆಯ ಯತ್ನ. ಸ್ಯಾಮ್ಸನ್ ಗಾದೆಗಳ ಸಂಗ್ರಹಣೆಯಿಂದ ಪ್ರೇರಣೆ ಪಡೆದ ಜಿ. ಬಿ. ಮಿಲ್ನರ್ (೧೯೬೯) ಅವರು ಗಾದೆಗಳನ್ನು ನಾಲ್ಕು ಭಾಗಗಳ ರಚನೆಯೆಂದು ವ್ಯಾಖ್ಯಾಯಿಸಬಹುದು ಎಂದಿದ್ದಾರೆ. ಮಿಲ್ನರ್ ಸಿದ್ಧಾಂತದ ಪ್ರಕಾರ, ಗಾದೆಯೊಂದರ ನಾಲ್ಕು ಕಾಲುಭಾಗಗಳ ಕಿರಿಯ ಹೋಳುಗಳನ್ನು ಎರಡು ಪ್ರಧಾನ ತುಂಡುಗಳಾಗಿ ಗುಂಪುಗೂಡಿಸಬೇಕು. ಅವು ಪರಸ್ಪರ ಎರಡನ್ನೂ ಹೊಂದಿಸುತ್ತವೆ, ಅಲ್ಲದೆ ಸಮತೂಕದಲ್ಲಿಡುತ್ತವೆ. ಮಿಲ್ನರ್ ಪರಿಭಾಷೆಯಲ್ಲಿ ಮೊದಲ ಅರ್ಧವನ್ನು 'ಶಿರ'ವೆಂದೂ ಕಡೆಯ ಅರ್ಧವನ್ನು 'ಪುಚ್ಛ' ಎಂದೂ ಕರೆಯಲಾಗಿದೆ.

ಪ್ರತಿಯೊಂದು ಕಾಲುಭಾಗದ ಶಬ್ದಗಳನ್ನೂ ಪರಿಲಕ್ಷಿಸುವುದು ಮಿಲ್ನರ್ ಅವರ ವಿಶೇಷ. ಶಬ್ದಗಳು ಇತ್ಯಾತ್ಮಕ ಅಥವಾ ನೇತ್ಯಾತ್ಮಕ ಮೌಲ್ಯವನ್ನು ಹೊಂದಿವೆಯೆ ಇಲ್ಲವೆ ಎಂಬುದನ್ನು ಅವರು ನಿರ್ಣಯಿಸುತ್ತಾರೆ:

+ +
ಕಳಿಯುವುದೂ ಬೇಗ
+ +
ಕೊಳೆಯುವುದೂ ಬೇಗ

ಮಿಲ್ನರ್ ಸಿದ್ಧಾಂತದ ಪ್ರಕಾರ, ಗಾದೆಯ ಪ್ರತಿ ಅರ್ಧ ಭಾಗ ಎರಡು ಇತ್ಯಾತ್ಮಕ ಅಥವಾ ಎರಡು ನೇತ್ಯಾತ್ಮಕ ಅಥವಾ ವಿರೋಧಗಳಾಗಬಹುದು. ಎರಡು ಕಾಲು ಭಾಗಗಳು ಇತ್ಯಾತ್ಮಕ ಅಥವಾ ಎರಡು ಕಾಲು ಭಾಗಗಳು ನೇತ್ಯಾತ್ಮಕವಾದರೆ ರಚನೆಯ ಒಟ್ಟು ಅರ್ಥವನ್ನು ಇತ್ಯಾತ್ಮಕವಾಗಿ ಪರಿಗಣಿಸಬೇಕಾಗುವುದು. ಕಾಲು ಭಾಗಗಳು ವಿರೋಧಗಳಾದರೆ ಗಾದೆಯ ಪೂರ್ಣ ಅರ್ಥ ನೇತ್ಯಾತ್ಮಕವೆಂದು ಪರಿಗಣಿತವಾಗುವುದು. ಈ ಕಾರಣದಿಂದ ಯಾವುದೇ ಗಾದೆ ಇತ್ಯಾತ್ಮಕ ಅಥವಾ ನೇತ್ಯಾತ್ಮಕ ಶಿರವನ್ನು ಒಳಗೊಂಡಿದ್ದರೆ ಅದು ಇತ್ಯಾತ್ಮಕ ಅಥವಾ ನೇತ್ಯಾತ್ಮಕ ಪುಚ್ಛವನ್ನು

ಅನುಸರಿಸುತ್ತದೆ. ಹೀಗೆ ಈ ವಿನ್ಯಾಸವನ್ನು ಸ್ಥಾಪಿಸುವುದರೊಂದಿಗೆ ಮಿಲ್ನರ್ ಅವರು ಸಾಧ್ಯವಿರುವ ಹದಿನಾರು ವರ್ಗಗಳಲ್ಲೊಂದನ್ನು ಗಾದೆಯೊಂದಕ್ಕೆ ನಿರ್ದೇಶಿಸುತ್ತಾರೆ. ಈ ಹದಿನಾರು ವರ್ಗಗಳನ್ನು ನಾಲ್ಕು ಮುಖ್ಯ ವರ್ಗಗಳಾಗಿ ನೆಲೆಗೊಳಿಸಿದ್ದಾರೆ (ಪ್ರತಿಯೊಂದು ವರ್ಗವೂ ನಾಲ್ಕು ಉಪವರ್ಗಗಳನ್ನು ಒಳಗೊಂಡಿದೆ). ವರ್ಗ 'ಅ' ಇತ್ಯಾತ್ಮಕ 'ಶಿರ'ವನ್ನೂ ಇತ್ಯಾತ್ಮಕ 'ಪುಚ್ಛ'ವನ್ನೂ ಹೊಂದಿರುತ್ತದೆ ವರ್ಗ 'ಬ' ನೇತ್ಯಾತ್ಮಕ 'ಶಿರ' ಹಾಗೂ ಇತ್ಯಾತ್ಮಕ 'ಪುಚ್ಛ'ವನ್ನು ಪಡೆದಿರುತ್ತದೆ. ವರ್ಗ 'ಕ' ಒಂದು ಇತ್ಯಾತ್ಮಕ 'ಶಿರ' ಮತ್ತು ನೇತ್ಯಾತ್ಮಕ 'ಪುಚ್ಛ'ವನ್ನು ಹೊಂದಿದ್ದರೆ ವರ್ಗ 'ಜ' ನೇತ್ಯಾತ್ಮಕ 'ಶಿರ' ಮತ್ತು ನೇತ್ಯಾತ್ಮಕ 'ಪುಚ್ಛ' ವನ್ನು ಹೊಂದಿರುತ್ತದೆ. ಈ ಎಲ್ಲ ಮುಖ್ಯ ವರ್ಗಗಳೊಳಗೆ ಗುರಿ ಸಾಧಿಸಲು ನಾಲ್ಕು ವಿಭಿನ್ನ ಸಾಧನಗಳಿವೆ ಉದಾಹರಣೆಗೆ ವರ್ಗ 'ಅ'ದಲ್ಲಿ ನಾಲ್ಕು ಕಾಲು ಭಾಗಗಳು (Quarters) ಈ ಕೆಳಗಿನ ಯಾವುದೇ ಒಂದು ವಿನ್ಯಾಸವಾಗಬಹುದು: + + + +; — — — —; + + — —; — — + +. ಇತರ ಮುಖ್ಯ ವರ್ಗಗಳನ್ನು ಕೂಡ ಇದೇ ರೀತಿಯಾಗಿ ಉಪವರ್ಗಗಳನ್ನಾಗಿ ಒಡೆಯಬಹುದು.

ಡಂಡೆಸ್ ಅವರು ಮಿಲ್ನರ್ ವಿಧಾನದಲ್ಲಿ ಹಲವಾರು ತೊಡಕುಗಳನ್ನು ಗುರುತಿಸಿದ್ದಾರೆ. ಆದರೆ ಈ ತೊಡಕುಗಳು ಮಿಲ್ನರ್ ವಿಶ್ಲೇಷಣೆಯ ತಾಜಾತನವನ್ನು ನಿಕೃಷ್ಟಗೊಳಿಸುವುದಿಲ್ಲ. ಡಂಡೆಸ್ ಪ್ರಕಾರ, ಮಿಲ್ನರ್ ಅವರ ವಿಶ್ಲೇಷಣೆಗೆ ವರ್ಗೀಕರಣ ಕೋಶವಾಗಿ ಬೇರೆ ಗುರಿ ಇದ್ದಂತೆ ಕಾಣುವುದಿಲ್ಲ; ಮಿಲ್ನರ್ ಅವರ ಹದಿನಾರು ವರ್ಗಗಳು ಗೊತ್ತಾದ ಗಾದೆಯೊಂದಕ್ಕೆ ಏನು ಅನುಕೂಲವನ್ನು ಕಲ್ಪಿಸಿಕೊಡುತ್ತವೆ ಎಂಬುದು ಸ್ಪಷ್ಟವಾಗುವುದಿಲ್ಲ. ಮಿಲ್ನರ್ ವಿಧಾನದ ಮತ್ತೊಂದು ತೊಡಕೆಂದರೆ ನಾಲ್ಕು ಭಾಗವುಳ್ಳ ಗಾದೆ ರಚನೆಯ ಮೂಲಭೂತ ತಾರ್ಕಿಕ ಅದ್ಯತೆ. ನಾಲ್ಕು ಕಾಲು ಭಾಗಗಳನ್ನು ಹೊಂದಿರದ ಯಾವುದೇ ಗಾದೆ ಕೇವಲ ಮೊದಲಿನ ಪೂರ್ಣರೂಪದ ಅಪಕರ್ಷವಾಗಿರುತ್ತದೆ. ಮಿಲ್ನರ್ ಮಾತುಗಳಲ್ಲೇ ಹೇಳುವುದಾದರೆ '......it is likely that a very large number of tripartite, bipartite and unipartite idioms current today were once quadripartite and have been eroded by the familiarity of usage (1969 a : 202). ಅಲ್ಲದೆ ಮಿಲ್ನರ್ ಅವರು ಗಾದೆಗಳ ಮೂಲಭೂತ ನಾಲ್ಕು ಕಾಲುಭಾಗಗಳ ರಚನೆ ಅಂತಿಮವಾಗಿ ಯೂಂಗಿಯನ್ ಚತುರ್ಮೂರ್ತಿಕೆಗೆ ಸಂಬಂಧಿಸಿದೆ ಎಂಬ ಸುಳುಹನ್ನು ಕೊಡುತ್ತಾರೆ. ಇದು ಕೂಡ ಊಹಾತ್ಮಕವಾದುದೇ ಆಗಿದೆ.

ಮಿಲ್ನರ್ ಅವರಿಂದ ಪರಿಗಣಿತವಾದ ಒಂದು ವಿವಾದಾಂಶವೆಂದರೆ ನಾಲ್ಕು ಕಾಲುಭಾಗಗಳ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಮೌಲ್ಯಗಳ ವಿಷಯನಿಷ್ಠ ಸ್ವರೂಪದ 'ಕಾರಣ ನಿರೂಪಣ' ಕೆಲಸ. 'ಉರುಳುಗಲ್ಲುಗಳು ಹಾವಸೆಯನ್ನು ಶೇಖರಿಸುವುದಿಲ್ಲ' ಎಂಬ ಗಾದೆಗೆ ಎರಡು ವೈದೃಶ್ಯಾತ್ಮಕ ವಿಶ್ಲೇಷಣೆಯನ್ನು ಕೊಟ್ಟಿದ್ದಾರೆ. ಗಾದೆಯು

ಅರ್ಥದ ಬಗೆಗಿನ ಇಂಗ್ಲಿಷ್ ಮತ್ತು ಸ್ಕಾಟಿಷ್ ವ್ಯಾಖ್ಯಾನಗಳು ಗಾದೆಯ ವಿಭಿನ್ನ ಮೌಲ್ಯ 'ಕಾರಣ ನಿರೂಪಣ'ಗಳನ್ನು ಹುಟ್ಟು ಹಾಕಿವೆ. ಇಂಗ್ಲೆಂಡಿನಲ್ಲಿ ಕಲ್ಲುಗಳು ಹಳ್ಳದಲ್ಲಿರುವ ಕಲ್ಲುಗಳಿಗೆ ಮತ್ತು ವಿರಳವಾಗಿ ಚಲಿಸುವ ಕಲ್ಲುಗಳಿಗೆ ಅನ್ವಯಿಸುತ್ತವೆ. ಹಾವಸೆಯನ್ನು ಐಶ್ವರ್ಯ, ಸಮೃದ್ಧಿ ಎಂದು ಪರಿಗಣಿಸಲಾಗಿದೆ. ಆದ್ದರಿಂದ ಗಾದೆಯ ಇಂಗ್ಲಿಷ್ ಅರ್ಥ ರೂಪುಗೊಳ್ಳುವುದು ಹೀಗೆ:

— +
ಉರುಳುವ ಕಲ್ಲುಗಳು

— +
———— —
—
ಹಾವಸೆಯನ್ನು ಶೇಖರಿಸುವುದಿಲ್ಲ

ಸ್ಕಾಟ್ಲೆಂಡಿನಲ್ಲಿ ಕಲ್ಲುಗಳನ್ನು ಹಳೆಯ ಮಾದರಿಯ ಉರುಳುವ ಸಿಲಿಂಡರಾಕೃತಿಯ ಕಲ್ಲುಗಳೆಂದು ಕಲ್ಪಿಸಿಕೊಳ್ಳಲಾಗಿದೆ. ಅಂತಹ ಕಲ್ಲುಗಳು ಜಡವಾಗಿರುವುದಿಲ್ಲ ಅಥವಾ ಅವುಗಳ ಮೇಲೆ ಹಾವಸೆ ಬೆಳೆಯುವುದಿಲ್ಲ. ಆಗ ಸ್ಕಾಟಿಷ್ ಸಂದರ್ಭದಲ್ಲಿ 'ಉರುಳುವುದು' ಇತ್ಯಾತ್ಮಕವಾಗುತ್ತದೆ. 'ಕಲ್ಲುಗಳು' 'ಸೇರಿಸುವುದು' 'ಹಾವಸೆಯಿಲ್ಲ'–ಎಲ್ಲವೂ ಇತ್ಯಾತ್ಮಕ ಮೌಲ್ಯವನ್ನು ಪಡೆದುಕೊಳ್ಳುತ್ತವೆ.

+ +
ಉರುಳುವ ಕಲ್ಲುಗಳು

+ +
ಹಾವಸೆಯನ್ನು ಶೇಖರಿಸುವುದಿಲ್ಲ

ಹೀಗೆ ಗಾದೆ ನಾಲ್ಕು ಭಾಗದ ರಚನೆಯಾಗಿಯೇ ಮುಂದುವರಿಯುವುದನ್ನು ನೋಡಬಹುದಾದರೂ ಇಂಗ್ಲಿಷ್ ಮತ್ತು ಸ್ಕಾಟಿಷ್ ಅರ್ಥಗಳು ವಿಭಿನ್ನ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ರೀತಿಗಳನ್ನು ಒಳಗೊಂಡಿವೆ.

ಆದರೆ ಮಿಲ್ನರ್ ಅವರು ತಮ್ಮ ಇತರ ಉದಾಹರಣೆಗಳಲ್ಲಿ ಈ ವಿಷಯನಿಷ್ಠತೆಯನ್ನು ಕಾಣುವುದಿಲ್ಲ. ಉದಾಹರಣೆಗೆ:

(ಇಂಗ್ಲೆಂಡಿನಲ್ಲಿ) ಸೌಮ್ಯ ಚಳಿಗಾಲಗಳು
ಆದರೆ ಕ್ಲಿಷ್ಟ ಬೇಸಿಗೆಗಳು.

ಈ ಗಾದೆಯನ್ನು ಮಿಲ್ನರ್ ಅವರು ವರ್ಗ 'ಕ'ದಲ್ಲಿರಿಸಿದ್ದಾರೆ (ಇತ್ಯಾತ್ಮಕ ಶಿರ; ನೇತಾತ್ಮಕ ಪುಚ್ಛ). ಆದರೆ ಅವರು ಚಳಿಗಾಲಗಳಿಗೆ ನಿರ್ದೇಶಿಸಿರುವ ಮೌಲ್ಯ ಇತ್ಯಾತ್ಮಕವಲ್ಲ; ಅದು ನೇತ್ಯಾತ್ಮಕವಾಗಬೇಕೆಂದು ಡಂಡೆಸ್ ವಾದಿಸಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮಿಲ್ನರ್ ಅವರು ಗಾದೆಯ ಕೇವಲ ಒಂದು ಕಾಲುಭಾಗವನ್ನು ತಪ್ಪಾಗಿ ಗುರುತಿಸಿದ್ದಾರೆಂಬುದಷ್ಟೇ ಅಲ್ಲ. ಅತಿಯಾದ ಸೂಕ್ಷ್ಮ ವಿಶೇಷಣಾ

ಕ್ರಮಕ್ಕೆ ಅವರು ಬಲಿಯಾಗಿರುವುದು. ಗಾದೆಯೊಂದರ ರಾಚನಿಕ ಏಕಕಗಳು ಏನೇ ಆಗಿರಬಹುದು ಆದರೆ ಗಾದೆಯ ಉಳಿದ ಭಾಗದೊಡನೆ ಅವುಗಳ ಸಂಬಂಧವನ್ನು ಹೊರತುಪಡಿಸಿ ವ್ಯಾಖ್ಯಾನಿಸಲಾಗುವುದಿಲ್ಲ. ಪ್ರತಿಯೊಂದು ಕಾಲು ಭಾಗಕ್ಕೂ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಮೌಲ್ಯವನ್ನು ಆರೋಪಿಸುವಾಗ ಉಳಿದ ಮೂರು ಕಾಲುಭಾಗಗಳು ಅಲ್ಲಿ ಬರುವುದಿಲ್ಲ ಎಂಬಂತೆ ತಿಳಿದು ಮೌಲ್ಯವನ್ನು ಗೊತ್ತು ಮಾಡುವುದರಲ್ಲೇ ಮಿಲ್ನರ್ ಅವರ ತಪ್ಪು ಎದ್ದು ಕಾಣುತ್ತದೆ. ಅವರದೇ ವಿವರಣೆ ಇಲ್ಲಿ ಗಮನಾರ್ಹ: With in each half the two quarters have independent values which modify and affect each other but do not modify the quarters of the other half (ಮಿಲ್ನರ್ ೧೯೬೯a : ೨೦೦).

‘(ಇಂಗ್ಲೆಂಡಿನಲ್ಲಿ) ಸೌಮ್ಯ ಚಳಿಗಾಲಗಳು ಆದರೆ ಕ್ಲಿಷ್ಟ ಬೇಸಿಗೆಗಳು’— ಗಾದೆಯ ಬೇಸಿಗೆಗಳನ್ನು ಗಣನೆಗೆ ತೆಗೆದುಕೊಳ್ಳದೆ ‘ಚಳಿಗಾಲ’ಗಳ ರಾಚನಿಕ ಮಹತ್ವವನ್ನು ತಿಳಿಯಲು ಸಾಧ್ಯವಿಲ್ಲ ಎಂಬುದು ಡಂಡೆಸ್ ವಿಚಾರ. ಇಲ್ಲಿ ಚಳಿಗಾಲ ಮತ್ತು ಬೇಸಿಗೆ (ಸೌಮ್ಯ ಮತ್ತು ಕ್ಲಿಷ್ಟಗಳ ಹಾಗೆ) ವಿರೋಧಗಳು. ಡಂಡೆಸ್ ಪ್ರಕಾರ, ಇದು ಮಿಲ್ನರ್ ಅವರ ವಿಶ್ಲೇಷಣಾ ವಿಧಾನದ ಮೂಲಭೂತ ದೋಷ. ವಾಕ್ಯ ವಿನ್ಯಾಸಾತ್ಮಕವೊ ನಿದರ್ಶನಾತ್ಮಕ ವಿಧಾನವೊ—ಈ ಯಾವುದೇ ಒಂದರ ಬಗ್ಗೆ ಒಲವು ಹೊಂದಿದ್ದರೂ ಯಾರೂ ಯಾವ ರಾಚನಿಕ ಮೂಲಾಂಶವನ್ನೂ ಸಮಗ್ರ ನಿದರ್ಶನಾತ್ಮಕ ಅಥವಾ ವಾಕ್ಯವಿನ್ಯಾಸಾತ್ಮಕ ಸರಣಿಯಿಂದ ಪ್ರತ್ಯೇಕಿಸಿ ವ್ಯಾಖ್ಯಾನಿಸಲಾಗುವುದಿಲ್ಲ.

ಡಂಡೆಸ್ ಅವರ ದೃಷ್ಟಿಯಲ್ಲಿ ಗಾದೆ ರಚನೆಗೂ ಒಗಟು ರಚನೆಗೂ ನಿಕಟ ಸಂಬಂಧವಿದೆ. ಈ ಎರಡೂ ರೂಪಗಳ ನಡುವೆ ಕೆಲವು ಪ್ರಮುಖ ಕಾರ್ಯಾತ್ಮಕ ವ್ಯತ್ಯಾಸಗಳಿರುವುದರಲ್ಲಿ ಸಂದೇಹವೇ ಇಲ್ಲ. ಒಗಟು ಪ್ರಶ್ನೆಗಳನ್ನು ಒಡ್ಡುತ್ತದೆ; ಗಾದೆಯಾದರೂ ಬದುಕಿನ ಪ್ರಶ್ನೆಗಳಿಗೆ ಉತ್ತರಿಸುತ್ತದೆ, ಸಮಸ್ಯೆಗಳನ್ನು ಬಿಡಿಸುತ್ತದೆ (ಸಿಪಿಕೆ ೧೯೮೧ : ೧೮). ರಾಚನಿಕವಾಗಿ ಇವೆರಡರ ನಡುವೆ ಪ್ರಮುಖ ಹೋಲಿಕೆಗಳಿವೆ. ಮೊದಲನೆಯದಾಗಿ ಗಾದೆ ಮತ್ತು ಒಗಟು—ಎರಡೂ ಸಾಕಾರ ವಸ್ತು ಚಿತ್ರಗಳೇ. ಗಾದೆ ಅಥವಾ ಒಗಟು ಒಂದು ವರ್ಣನಾತ್ಮಕ ಮೂಲಾಂಶವನ್ನು ಒಳಗೊಂಡಿರುತ್ತದೆ. ಒಗಟುಗಳಲ್ಲಿ ಈ ವರ್ಣನಾತ್ಮಕ ಮೂಲಾಂಶದ ಆಧಾರದಿಂದ ಅನುಕ್ತವಾದುದನ್ನು ಪತ್ತೆಹಚ್ಚಬೇಕು. ಗಾದೆಯಲ್ಲಾದರೆ ನಿರೂಪಕ ಮತ್ತು ಉದ್ದೇಶಿತ ವ್ಯಕ್ತಿ ಇಬ್ಬರಿಗೂ ಕುರಿತಿರುವ ಸಂಗತಿ ಏನೆಂಬುದು ಗೊತ್ತಿರುತ್ತದೆ. ಇದು ಗಾದೆಗಳು ಮತ್ತು ಒಗಟುಗಳ ನಡುವಿನ ಪ್ರಧಾನ ವ್ಯತ್ಯಾಸಗಳಲ್ಲೊಂದು ಎಂದು ಹೇಳಬಹುದು.

ಈ ಎರಡೂ ರೂಪಗಳ ನಡುವಿನ ರಾಚನಿಕ ಸಾದೃಶ್ಯತೆಯನ್ನು ಲಕ್ಷ್ಯಕ್ಕೆ ತೆಗೆದುಕೊಂಡ ವಿದ್ವಾಂಸರು ವರ್ಣನಾತ್ಮಕ ಮೂಲಾಂಶದ ಆಧಾರದಿಂದ ಅನುಕ್ತವಾದುದನ್ನು ಪತ್ತೆ ಹಚ್ಚುವುದಷ್ಟೇ ವ್ಯತ್ಯಾಸವಾಗಿದ್ದರೆ ಇದು ರಾಚನಿಕ ವ್ಯತ್ಯಾಸ

ಅಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಡಂಡೆಸ್ ದೃಷ್ಟಿಯಲ್ಲಿ ಇದು ರಾಚನಿಕ ವ್ಯತ್ಯಾಸವಲ್ಲದೆ ಬೇರೇನೂ ಅಲ್ಲ. ವಿಶೇಷವಾಗಿ, ಒಗಟ್ಟಿನ ಉತ್ತರ ವಿರೋಧಾತ್ಮಕ ಒಗಟುಗಳಲ್ಲಿ ವಿರೋಧವನ್ನು ಬಗೆಹರಿಸುವ ಸಾಧನವಾಗಿರುತ್ತದೆ. ಸಾಮಾನ್ಯವಾಗಿ ವಿರೋಧಾತ್ಮಕ ಗಾದೆಗಳಲ್ಲಿ ವೈರುಧ್ಯ ಬಗೆಹರಿಯುವುದಿಲ್ಲ. ಗಾದೆಗಳ ಉದ್ಧರಣೆಯನ್ನು ಉದ್ದೀಪಿಸುವ ಆರಂಭಿಕ ಸ್ಥಿತಿ ಗಾದೆಯಲ್ಲಿ ವರ್ಣಿತವಾದ ವಿರೋಧವನ್ನು ಬಗೆಹರಿಸುವುದು ಅಥವಾ ಬಗೆಹರಿಸದಿರಬಹುದು. ಆದರೆ ವಿರೋಧಾತ್ಮಕ ಒಗಟುಗಳಲ್ಲಿ ಉತ್ತರ ವಿರೋಧವನ್ನು ಬಗೆಹರಿಸುತ್ತದೆ. ಇದಕ್ಕೆ ಒಂದು ಕಾರಣವೆಂದರೆ ಒಗಟುಗಳಲ್ಲಿಯ ವೈರುಧ್ಯಗಳು ನೆಪಮಾತ್ರಕ್ಕೆ ವಿರೋಧಗಳು. ವಿರೋಧಾತ್ಮಕ ಗಾದೆಗಳಲ್ಲಿ ಈ ವೈರುಧ್ಯಗಳು ಗಂಭೀರವಾದವು ಹಾಗೂ ಅವನ್ನು ಸುಲಭವಾಗಿ ಬಗೆಹರಿಸಲಾಗುವುದಿಲ್ಲ.

ಇತರ ಜಾನಪದ ಅಧ್ಯಯನಕಾರರು ಗಾದೆ ಮತ್ತು ಒಗಟುಗಳ ರಚನೆಯಲ್ಲಿ ಈಗಾಗಲೇ ಹೋಲಿಕೆಯನ್ನು ಗಮನಿಸಿದ್ದಾರೆ. ರಷ್ಯನ್ ಜಾನಪದ ತಜ್ಞ ಸೊಕೊಲೊವ್ (೧೯೫೦ : ೨೮೫) ಒಂದು ನಿದರ್ಶನ ಕೊಟ್ಟಿದ್ದಾರೆ. "ಅದನ್ನು ಏನೂ ಬಾಧಿಸುವುದಿಲ್ಲ ; ಆದರೆ ಅದು ಎಲ್ಲ ಕಾಲದಲ್ಲೂ ನರಳುತ್ತದೆ. ಗಾದೆಯಂತೆ ಬಳಸಿದರೆ ಇದು ಒಬ್ಬ ಕಪಟಿ ಮತ್ತು ಭಿಕ್ಷುಕನಿಗೆ ಅನ್ವಯಿಸುತ್ತದೆ. ಒಗಟಾಗಿ ಬಳಸಿದರೆ ಅದು ಹಂದಿಗೆ ಅನ್ವಯಿಸುತ್ತದೆ. ಸ್ವರಲಹರಿಯ ಏಕೈಕ ವ್ಯತ್ಯಾಸದಿಂದ ಗಾದೆಯೊಂದು ಒಗಟಾಗಿ ರೂಪುಗೊಂಡಿದೆ ಎಂದು ಅವರು ಪ್ರತಿಪಾದಿಸಿದ್ದಾರೆ. ಆದರೆ ಡಂಡೆಸ್ ಅಭಿಪ್ರಾಯದಲ್ಲಿ ಅದು ನಿಜವಾಗಿಯೂ ಸ್ವರಲಹರಿಯಲ್ಲ ; ಕಠಿಣ ಪ್ರೇರಣಾರ್ಥಕ ಸಂಗತಿಯಾಗಿದೆ. ಪಠ್ಯವನ್ನು ಉದ್ಧರಿಸಲು ಅದು ತಕ್ಕ ಸಂದರ್ಭವಾಗಿದೆ. ನಿರೂಪಕ ಮತ್ತು ಶ್ರೋತೃ ಇಬ್ಬರಿಗೂ ತಿಳಿದಿರುವ ಕಪಟಿಯೊಬ್ಬನಿಗೆ ಅದನ್ನು ಅನ್ವಯಿಸಿ ಬಳಸಿದರೆ ಪಠ್ಯವು ಗಾದೆಯಾಗಿ ಕೆಲಸ ಮಾಡುತ್ತದೆ. ನಿರೂಪಕನು ಉದ್ದೇಶಿತ ವ್ಯಕ್ತಿಯನ್ನು ಪರೀಕ್ಷಿಸಲು ಬಯಸಿದರೆ ಆಗ ಅವನು ಪಠ್ಯವನ್ನು ಒಂದು ಪ್ರಶ್ನೆಯಂತೆ ಪ್ರಶ್ನಾರ್ಥಕ ಸ್ವರಲಹರಿ ಮಾದರಿಯಲ್ಲಿ ನಿರೂಪಿಸಬಹುದು. ಮಾತಿನ ಸಂದರ್ಭ, ಕಲಾತ್ಮಕ ನಿರೂಪಣೆಯ ಗುರಿ ಸ್ವರಲಹರಿ ಮಾದರಿಯನ್ನು ನಿರ್ಧರಿಸುತ್ತದೆ ಮತ್ತು ರೂಪ ಭಿನ್ನತೆಯನ್ನು ಪ್ರತಿಪಾದಿಸುತ್ತದೆ. ಸ್ವರಲಹರಿ ಯಾವುದರೊಂದಿಗಾದರೂ ಸೇರಿಹೋಗುವ ಲಕ್ಷಣವುಳ್ಳದ್ದು. ಅಷ್ಟೇ ಅಲ್ಲ, ಗಾದೆ ರೂಪದ ಗುರುತೂ ಹೌದು.

ಒಂದೇ ಪಠ್ಯ ಗಾದೆ ಮತ್ತು ಒಗಟಾಗಿ ಎರಡು ಜೀವನ ನಡೆಸುವುದು ವಿರಳವೇನಲ್ಲ, ಡಂಡೆಸ್ (೧೯೬೪ b) ಬರ್ಮಾದ ಒಂದು ಉದಾಹರಣೆ ಕೊಟ್ಟಿದ್ದಾರೆ. ಪಠ್ಯ ಹೀಗಿದೆ : "ಅದರ ಬಗ್ಗೆ ಏನೂ ತಿಳಿಯದವನು ಅದರ ಮೇಲೆ ನಡೆದು ಹೋಗಬಹುದು ; ಅದರ ಬಗ್ಗೆ ತಿಳಿದವನು ಅದನ್ನು ಕಿತ್ತು ತಿನ್ನಬಹುದು." ಒಂದು ಒಗಟಾಗಿ ಇದಕ್ಕೆ ಉತ್ತರ : ಗೆಣಸು, ಒಂದು ಗಾದೆಯಾಗಿ ಇದನ್ನು ಅನೇಕ ಭಿನ್ನ ಸನ್ನಿವೇಶಗಳಿಗೆ ಅನ್ವಯಿಸಲಾಗಿದೆ. "ಹಿತ್ತಲುಗಿಡ ಮದ್ದಲ್ಲ" ಎನ್ನುವಂತೆ ತನ್ನ

ಎದುರಿಗೇ ತನಗೆ ನಿಕಟವಾಗಿಯೇ ಇದ್ದರೂ ವಸ್ತುವಿನ ಮಹತ್ವವನ್ನು ಮನಗಾಣದಿರುವಂತಹ ಸನ್ನಿವೇಶಗಳವು. ಅಂಥ ಪಠ್ಯಗಳನ್ನು ಗಾದೆ ಮತ್ತು ಒಗಟುಗಳಾಗಿ ನಿಯೋಜಿಸಿದರೆ ಗಾದೆಗಳು ಮತ್ತು ಒಗಟುಗಳ ರಚನೆಗಳ ಹೋಲಿಕೆಯನ್ನು ಕಂಡುಹಿಡಿಯುವುದು ಕಷ್ಟದ ಕೆಲಸವೇನಲ್ಲ. ಕುತೂಹಲಕರ ಸಂಗತಿಯೆಂದರೆ ಗಾದೆಗಳು ವಿರಳವಾಗಿರುವ ಸಾಂಸ್ಕೃತಿಕ ವಲಯಗಳಲ್ಲಿ ಕಡಿಮೆ ಒಗಟುಗಳು ಕಾಣಿಸಿಕೊಳ್ಳಬಹುದು. ಉತ್ತರ ಮತ್ತು ದಕ್ಷಿಣ ಅಮೆರಿಕನ್ ಇಂಡಿಯನ್ನರಲ್ಲಿ ಕೆಲವೇ ಗಾದೆ ಮತ್ತು ಒಗಟುಗಳಿವೆ. ಒಂದಿಲ್ಲದೆ ಮತ್ತೊಂದು ಜಾನಪದ ರೂಪವನ್ನು ಮಾತ್ರ ಸಂಸ್ಕೃತಿಯೊಂದು ಹೊಂದಿದೆಯೆಂದರೆ ಯಾರಾದರೂ ಗಾಬರಿಗೊಳ್ಳುವುದು ಸಹಜ. ರಾಚನಿಕವಾಗಿ ಹೇಳುವುದಾದರೆ ಒಂದು ರೂಪದ ಅಸ್ತಿತ್ವ ಮತ್ತೊಂದರ ಸಂಭವನೀಯ ಲಭ್ಯತೆಯನ್ನು ಉಂಟುಮಾಡುವುದು ತಾರ್ಕಿಕವಾಗಿ ಸಾಧ್ಯ ಎಂಬ ವಾದಕ್ಕೆ ಎಡೆಮಾಡಿಕೊಡುತ್ತದೆ.

ವಿರೋಧಾತ್ಮಕವಲ್ಲದ ಒಗಟುಗಳಿರುವಂತೆ ವಿರೋಧಾತ್ಮಕವಲ್ಲದ ಗಾದೆಗಳೂ ಇವೆ. ಈ ಗಾದೆಗಳು ಏಕ ವರ್ಣನಾತ್ಮಕ ಮೂಲಾಂಶವನ್ನು ಹೊಂದಿರುತ್ತವೆ. ''ದುಡ್ಡು ಮಾತಾಡಿಸುತ್ತದೆ''—ವಿರೋಧಾತ್ಮಕವಲ್ಲದ ಗಾದೆಗೆ ಒಂದು ಉದಾಹರಣೆಯಾಗಬಲ್ಲುದು. ಒಂದು ವರ್ಣನಾತ್ಮಕ ಮೂಲಾಂಶದಂತೆ ಒಂದೇ ಶಬ್ದದ ಗಾದೆಯನ್ನು ಹೊಂದುವುದು ಸಾಧ್ಯವಿಲ್ಲ ಎಂಬುದನ್ನು ಗಮನಿಸಬೇಕು. ಗಾದೆಯೊಂದರ ರಾಚನಿಕ ವ್ಯಾಖ್ಯೆಯ ಪ್ರಕಾರ ಒಂದು ಗಾದೆಯನ್ನು ಪಡೆಯಲು ಎರಡು ಶಬ್ದಗಳನ್ನಾದರೂ ಹೊಂದಬೇಕಾಗುತ್ತದೆ. ಆಡುಮಾತಿನಲ್ಲಿ ಸಾಂಪ್ರದಾಯಿಕ ಏಕ ಶಬ್ದಗಳಿದ್ದರೂ ಅವನ್ನು ಗಾದೆಗಳನ್ನಾಗಿ ಪರಿಗಣಿಸಲಾಗುವುದಿಲ್ಲ.

ವಿರೋಧಾತ್ಮಕ ಗಾದೆಗಳ ಸ್ವಭಾವ ಕುರಿತು ಜಿಜ್ಞಾಸೆ ನಡೆಸುವ ಮೊದಲು ಕೆನೆತ್‌ಪೈಕ್ ಹೇಳಿರುವ ಅಭಿನಿರ್ಧಾರಿತ ವೈದೃಶ್ಯಾತ್ಮಕ (Identificational Contrastive) ಲಕ್ಷಣಗಳ ಹಿನ್ನೆಲೆಯಲ್ಲಿ ಗಾದೆಗಳನ್ನು ಪರಿಶೀಲಿಸುವುದು ಯುಕ್ತ. ಏಕೆಂದರೆ ಧ್ವನಿಮಾ, ಆಕೃತಿಮಾಗಳಂಥ ಭಾಷಾವೈಜ್ಞಾನಿಕ ಏಕಕಗಳಲ್ಲಿ ಉಪ ಏಕಕಗಳು ಅನನ್ಯಾತ್ಮಕ ಹಾಗೂ ವೈದೃಶ್ಯಾತ್ಮಕ ಲಕ್ಷಣಗಳ ಸಂಯೋಜನೆಯನ್ನು ಸ್ಪಷ್ಟವಾಗಿ ತೋರಿಸಿವೆ. ಅಂತೆಯೇ ಡಂಡೆಸ್ ಗಾದೆ ರಚನೆಯನ್ನು ವಿಶ್ಲೇಷಿಸಲು ಭಾಷಾ ವಿಜ್ಞಾನದಲ್ಲಿಯ ಅನನ್ಯಾತ್ಮಕ ವೈದೃಶ್ಯಾತ್ಮಕ ಪರಿಕಲ್ಪನೆಯನ್ನು ಸಾಧನವಾಗಿ ಬಳಸಲು ಯತ್ನಿಸಿದ್ದಾರೆ. ಡಂಡೆಸ್ ಪ್ರಕಾರ, ಬಹು ವರ್ಣನಾತ್ಮಕ ಮೂಲಾಂಶದ ಗಾದೆಗಳು ಸದೃಶ ಅನನ್ಯಾತ್ಮಕ ಹಾಗೂ ವೈದೃಶ್ಯಾತ್ಮಕ ಲಕ್ಷಣಗಳಿಂದ ಸಂಯೋಜಿತವಾಗಿವೆ. ಕೆಲವು ಗಾದೆಗಳು ಅನನ್ಯಾತ್ಮಕವಾಗಿವೆ; ಕೆಲವು ಪ್ರಾಥಮಿಕವಾಗಿ ವೈದೃಶ್ಯಾತ್ಮಕ ಮತ್ತೆ ಕೆಲವು ಅನನ್ಯಾತ್ಮಕ ಹಾಗೂ ವೈದೃಶ್ಯಾತ್ಮಕ ಲಕ್ಷಣಗಳ ಸಂಯೋಜನೆಗಳಾಗಿವೆ.

ಡಂಡೆಸ್ ಅವರು ವರ್ಣನಾತ್ಮಕ ಮೂಲಾಂಶ ವಿರುದ್ಧಾತ್ಮಕವಾಗಿರಲು

ಸಾಧ್ಯವಿಲ್ಲ ಎಂಬುದನ್ನು ತೋರಿಸಲು ಬಹುವರ್ಣನಾತ್ಮಕ ಮೂಲಾಂಶ ಗಾದೆಗಳನ್ನು ಉದ್ಧರಿಸಿದ್ದಾರೆ. ಒಂದು ವರ್ಣನಾತ್ಮಕ ಮೂಲಾಂಶದ ಇಂಗ್ಲೀಷ್ ಗಾದೆಗಳ ಸೂಚಿಯಲ್ಲಿ ೧. 'ದುಡ್ಡು ಮಾತಾಡಿಸುತ್ತದೆ' ೨. 'ವಿರುದ್ಧ ಶಕ್ತಿಗಳು ಆಕರ್ಷಣೆಗೊಳಗಾಗುತ್ತವೆ' ಮತ್ತು ೩. 'ಕಾಲ ಹಾರುತ್ತದೆ'—ಎಂಬ ಗಾದೆಗಳು ಸೇರ್ಪಡೆಗೊಳ್ಳುತ್ತವೆ. ಏಕ ವರ್ಣನಾತ್ಮಕ ಮೂಲಾಂಶದ ಗಾದೆಗಳು ಬಹು ವರ್ಣನಾತ್ಮಕ ಮೂಲಾಂಶದ ಗಾದೆಗಳಂತೆ ಅಷ್ಟು ಸಾಮಾನ್ಯವಾದುವಲ್ಲ. ಅಲ್ಲದೆ ಅವು ಅಸ್ತಿತ್ವ ಹೊಂದೇ ಇರುತ್ತವೆ ಮತ್ತು ಯಾವುದೇ ಗಾದೆ ವ್ಯಾಖ್ಯೆ ಅವನ್ನು ಗಣನೆಗೆ ತೆಗೆದುಕೊಳ್ಳುತ್ತದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಡಂಡೆಸ್ ಅವರು ರೂಪಕ ಮತ್ತು ಗಾದೆ ರಚನೆಗಳಿಗಿರುವ ಸಂಬಂಧದ ಪ್ರಶ್ನೆಯನ್ನು ಸಂಕ್ಷೇಪವಾಗಿ ಎತ್ತುವ ಯತ್ನ ಮಾಡಿದ್ದಾರೆ. ಒಗಟು ರಚನೆಯ ಮೊದಲಿನ ವಿಶ್ಲೇಷಣೆಯಲ್ಲಿ (೧೯೬೩) ವಿರೋಧಾತ್ಮಕವಲ್ಲದ ಒಗಟುಗಳು ಸಾಹಿತ್ಯಿಕ ಅಥವಾ ರೂಪಾತ್ಮಕವಾಗಿರುತ್ತವೆ ಎಂದು ತೋರಿಸಿಕೊಟ್ಟಿದ್ದಾರೆ. ಅವರ ಅಭಿಪ್ರಾಯದಲ್ಲಿ ಒಗಟುಗಳ ರಚನೆ, ಒಗಟೊಂದು ಸಾಹಿತ್ಯಿಕವಾಗಿರಲಿ ಅಥವಾ ರೂಪಾತ್ಮಕವಾಗಿರಲಿ ಅದಾವುದನ್ನೂ ಆಧರಿಸಿಲ್ಲ. ಗಾದೆಗಳ ವಿಷಯದಲ್ಲೂ ಇದು ನಿಜ. ವಿರೋಧಾತ್ಮಕವಲ್ಲದ ಒಗಟುಗಳು ಹೇಗೆ ಸಾಹಿತ್ಯಿಕ ಅಥವಾ ರೂಪಾತ್ಮಕವಾಗಿರುತ್ತವೊ ಅದೇ ರೀತಿಯಾಗಿ ವಿರೋಧಾತ್ಮಕವಲ್ಲದ ಗಾದೆಗಳೂ ಸಾಹಿತ್ಯಿಕ ಅಥವಾ ರೂಪಕಾತ್ಮಕವಾಗಿರುತ್ತವೆ. ವಿರೋಧಾತ್ಮಕವಲ್ಲದ ಕೆಲವು ಇಂಗ್ಲಿಷ್ ಗಾದೆಗಳ ಕನ್ನಡ ರೂಪಾಂತರಗಳನ್ನು ಇಲ್ಲಿ ಉದಾಹರಿಸಬಹುದು ೧ 'ಹಿಂದಿನದನ್ನೆಲ್ಲ ಮರೆತುಬಿಡು' ೨ 'ಅವಸರ ನಿರರ್ಥಕ' ೩. 'ಗುಣ ತನಗೆ ತಾನೇ ಒಂದು ವರ' ೪. 'ಅನುಭವವೇ ಅತ್ಯುತ್ತಮ ಅಧ್ಯಾಪಕ' ೫. 'ಚತುರ ತೀರ್ಮಾನವೇ ವೀರತನದ ಒಂದು ಭಾಗ'. ಕೆಲವು ವಿದ್ವಾಂಸರು ಇಂಥ ಗಾದೆಗಳನ್ನು aphorism ಎಂಬ ಹೆಸರಿನಿಂದ ಗುರುತಿಸಿದ್ದಾರೆ. ರಾಚನಿಕವಾಗಿ ಅವು ರೂಪಕಾತ್ಮಕ ಗಾದೆಗಳನ್ನು ಬಹುಮಟ್ಟಿಗೆ ಹೋಲುತ್ತವೆ.

ಒಂದು ಅಕ್ಷ (axis) ವನ್ನು ನಾವು ಕಲ್ಪಿಸಿಕೊಂಡರೆ ಅದರ ಒಂದು ತುದಿ ಅನನ್ಯತಾ ಲಕ್ಷಣಗಳನ್ನು ಪ್ರತಿನಿಧಿಸಿದರೆ ಇನ್ನೊಂದು ತುದಿ ವೈದೃಶ್ಯಾತ್ಮಕ ಲಕ್ಷಣಗಳನ್ನು ಪ್ರತಿನಿಧಿಸುತ್ತದೆ ಸಮೀಕರಣಾತ್ಮಕ ಗಾದೆ ಅನನ್ಯತೆಯ ಕೊನೆಗೆ ಸಮೀಪವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ೧. 'ಚೌಕಾಶಿ ಚೌಕಾಶಿಯೇ' ೨. 'ವ್ಯಾಪಾರ ವ್ಯಾಪಾರವೇ' ೩. 'ಹುಡುಗರು ಹುಡುಗರೇ' ೪. 'ಸಾಕು ಎಂದರೆ ಸಾಕು' ಈ ಮುಂತಾದ ಸಮೀಕರಣಾತ್ಮಕ ಗಾದೆಗಳಲ್ಲಿರುವಂತೆ ಅನನ್ಯತೆ ಸ್ಥಾಪಿತವಾದರೆ ಆಗ ಅಲ್ಲಿ ಸಹಜವಾಗಿ ವೈದೃಶ್ಯಾತ್ಮಕ ಅಥವಾ ವಿರುದ್ಧಾತ್ಮಕವಲ್ಲದ ಲಕ್ಷಣಗಳು ಇರುವುದಿಲ್ಲ. ಸಾಮಾನ್ಯವಾಗಿ ಅ=ಬ ಆಗುವ ಸಮೀಕರಣಾತ್ಮಕ ಗಾದೆಗಳು ವೈದೃಶ್ಯಾತ್ಮಕವಾಗಿರುವುದಕ್ಕಿಂತ ಅನನ್ಯಾತ್ಮಕವಾಗಿರುತ್ತವೆ. ಸಮೀಕರಣಾತ್ಮಕ

ಗಾದೆಗಳ ಸಾಲಿನಲ್ಲಿ 'ಸಮಯವೇ ಹಣ', 'ನೋಟವೆ ನಂಬುಗೆ' ಮುಂತಾಗಿ ಮೇಲೆ ಉದ್ಧರಿಸಿದ ಅನೇಕಾನೇಕ ವಿರುದ್ಧಾತ್ಮಕವಲ್ಲದ ಸಾಹಿತ್ಯಿಕ ಗಾದೆಗಳನ್ನು ಹೆಸರಿಸಬಹುದು. ಎಷ್ಟೋ ವೇಳೆ ಯಾವುದು 'ಅ' ಆಗಿರುತ್ತದೊ ಅದೇ 'ಬ' ಆಗುವುದುಂಟು. ಅದು ಮೂಲಭೂತವಾದ ಅ=ಬ ಸೂತ್ರದ ರೂಪಪರಿವರ್ತನೆಯಾಗಿ ಕಾಣುತ್ತದೆ. "ಯಾರು ಕಟ್ಟಕಡೆಗೆ ನಗುತ್ತಾರೊ ಅವರು ಚೆನ್ನಾಗಿ ನಗುತ್ತಾರೆ" ಎಂಬ ಗಾದೆ ಕಟ್ಟಕಡೆಯಲ್ಲಿ ನಗುವುದು=ಚೆನ್ನಾಗಿ ನಗುವುದು—ಇದನ್ನು ಸೂಚಿಸುತ್ತದೆ. ಇದೇ ರೀತಿಯಾಗಿ "ಮುಜುಗರಪಟ್ಟರೆ ಕಳೆದುಕೊಳ್ಳಬೇಕಾಗುತ್ತದೆ" ಎಂಬ ಗಾದೆ ಮುಜುಗರಪಡುವಿಕೆ=ಕಳೆದುಕೊಳ್ಳುವಿಕೆಯನ್ನು ಧ್ವನಿಸುತ್ತದೆ. ಬಹುಮಟ್ಟಿಗೆ ಹೇಗೆಯೇ ಎಲ್ಲಿ 'ಅ' ಇರುತ್ತದೊ ಅಲ್ಲಿ 'ಬ' ಇರುವುದು ಎಂಬ ಸೂತ್ರ ಅನುಸರಿಸಿ ಬರುವ ಗಾದೆಗಳು ಮೂಲಭೂತ ಸಮೀಕರಣ ಸೂತ್ರದ ಮತ್ತೊಂದು ರೂಪ ಪರಿವರ್ತನೆಯಾಗಿ ಕಾಣುತ್ತದೆ. 'ಎಲ್ಲಿ ಬದುಕು ಇರುವುದೋ ಅಲ್ಲಿ ಭರವಸೆ' ಎಂಬ ಗಾದೆ ಬದುಕು=ಭರವಸೆ ವಾದಕ್ಕೆ ನಮ್ಮ ಮನವೊಲಿಸುತ್ತದೆ. 'ಬೆಂಕಿ ಇದ್ದಲ್ಲಿ ಬೆಳಕು' ಗಾದೆ ಬೆಂಕಿ=ಬೆಳಕು ಸಮೀಕರಣ ಸ್ಥಾಪಿಸಿದರೆ "ಮನಸ್ಸಿದ್ದರೆ ಮಾರ್ಗ" ಎಂಬ ಗಾದೆಯನ್ನು ಸಂಕಲ್ಪ= ದಾರಿ ಎಂದು ಸಮೀಕರಿಸಿ ನಿರೂಪಿಸಬಹುದು.[3]

ಮತ್ತೊಂದು ಗಮನಾರ್ಹ ಅಂಶವೆಂದರೆ ಸಮೀಕರಣಾತ್ಮಕ ರಚನಾ ರೂಪ ಪರಿವರ್ತನೆ ಒಂದು ಸರಣಿ ರೂಪದ ಎರಡು ಅಥವಾ ಅದಕ್ಕಿಂತ ಹೆಚ್ಚು ವಿವರಣಾತ್ಮಕ ಮೂಲಾಂಶಗಳನ್ನು ಒಳಗೊಳ್ಳುವುದು. ಈ ವಿವರಣಾತ್ಮಕ ಅಂಶಗಳು ವಿಷಯ ಅಥವಾ ಟೀಕೆಯ ಪುನರುಕ್ತಿಯೊಂದಿಗೆ ಬೆಸೆದಿರುತ್ತವೆ. ಉದಾಹರಣೆಗೆ 'ಎಷ್ಟು ಜನರೊ ಅಷ್ಟು ಮನಸ್ಸುಗಳು', 'ಮೊದಲು ಬಂದವಗೆ ಮೊದಲು ಮಣೆ'—ಈ ಎರಡೂ ಸರಣಿಗಳನ್ನು ಅರ್ಥನಷ್ಟಗೊಳಿಸದೆ ಸಾಮಾನ್ಯ ಸಮೀಕರಣಾತ್ಮಕ ರೂಪದಲ್ಲಿ ಹೀಗೆ ಬರೆಯಬಹುದು:

ಅನೇಕ ಜನ=ಅನೇಕ ಮನಸ್ಸುಗಳು
ಮೊದಲು ಬಂದವ=ಮೊದಲು ಮಣೆ

ಕುತೂಹಲಕರ ಸಂಗತಿಯೆಂದರೆ ಸಾಮಾನ್ಯವಾಗಿ ಅನನ್ಯಾತ್ಮಕವಾಗಿರುವ ಈ ಬಗೆಯ ರಚನೆಗಳು ವಿರೋಧಾತ್ಮಕವಲ್ಲದ ಸರಣಿ ಅಥವಾ ಸಮೀಕರಣಗಳಾಗಿರುತ್ತವೆ. ಉದಾಹರಣೆಗೆ:

---

3. ಕೊನೆಯ ಎರಡು ಉದಾಹರಣೆಗಳಲ್ಲಿ ಕಾರಣ ಮತ್ತು ಪರಿಣಾಮದ ಊಹಾತ್ಮಕ ಸಮತೋಲನ ಇರುವುದನ್ನು ನೋಡಬಹುದು. ಮೊದಲು ಬೆಂಕಿಯು ಪರಿಣಾಮ ಅದರ ಉದ್ದೇಶ ಬೆಳಕು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಎರಡನೆಯ ಸಂಕಲ್ಪ ಶಕ್ತಿ ಒಂದು ದಾರಿ ತೋರಿಸುತ್ತದೆ. ಉದ್ದೇಶ = ಪರಿಣಾಮ ಅಥವಾ ಪರಿಣಾಮ = ಉದ್ದೇಶ—ಈ ಸಮೀಕರಣವನ್ನು ಕಾಯ್ದುಕೊಳ್ಳಲಾಗಿದೆ.

೧. ಕೋತಿ ನೋಡುತ್ತದೆ, ಕೋತಿ ಮಾಡುತ್ತದೆ.

೨. ಕಾಫಿ ಕುದಿದು ಕಾಫಿಯನ್ನು ಕೆಡಿಸಿತು.

೩. ಆಪತ್ತಿಗಾದವನೇ ನೆಂಟ.

೪. ಕಣ್ಣಿಗೆ ದಂಡೆ ಕಾಲಿಗೆ ದೂರ.

ಕೆಲವು ಸರಣಿಗಳು ಸಾಂದರ್ಭಿಕವಾಗಿ ಸಮೀಕರಣಾತ್ಮಕವಾಗಿರುವುದಕ್ಕಿಂತ ಹೆಚ್ಚು ಸಂಯೋಜನಾತ್ಮಕ ಅಥವಾ ಸಂಯೋಗಾತ್ಮಕವಾಗಿರುತ್ತವೆ. ಉದಾಹರಣೆಗೆ

೧. ಬದುಕು ಮತ್ತು ಕಲಿ.

೨. ಬದುಕು, ಬದುಕಲು ಬಿಡು.

೩. ನಗು, ದಪ್ಪವಾಗು.

೪. ಪ್ರೀತಿಸು, ಪ್ರೀತಿಸುವವರನ್ನು ಅವರ ಪಾಡಿಗೆ ಅವರನ್ನು ಬಿಟ್ಟುಬಿಡು.

ಗಾದೆಗಳಲ್ಲಿ ವಿಭಿನ್ನರೂಪದ ವಿರೋಧಗಳು ಕಂಡುಬರುತ್ತವೆ. ಅತ್ಯಂತ ಸರಳವಾದುದೆಂದರೆ ನಕಾರ (negation). ಇಲ್ಲಿ ನಕಾರ ಅನನ್ಯಾತ್ಮಕ ಸಮೀಕರಣವನ್ನು ಒಪ್ಪಿಕೊಳ್ಳುವುದಿಲ್ಲ. ಇದಕ್ಕೆ ಡಂಡೆಸ್ "ಎರಡು ತಪ್ಪುಗಳು ಒಂದು ಸರಿಯನ್ನು ಮಾಡುವುದಿಲ್ಲ" ಎಂಬ ಗಾದೆಯನ್ನು ಉದಾಹರಿಸಿದ್ದಾರೆ ಈ ಗಾದೆಯಲ್ಲಿ ನಾವು ಒಂದು ಮೂಲಭೂತ ಸೂತ್ರ ಅ=ಬವನ್ನು ಹೊಂದಿದ್ದೇವೆ. ಎರಡು=ಒಂದು ಹಾಗೂ ತಪ್ಪು≠ ಸರಿಗಳಿಂದ ವಿರೋಧ ಬಲಗೊಂಡಿದೆ. "ಒಂದು ಕೊಕ್ಕಾನಕ್ಕಿಯಿಂದ ಬೇಸಿಗೆಯಾಗುವುದಿಲ್ಲ"—ಎಂಬ ಗಾದೆಯಲ್ಲಿ ಕೊಕ್ಕಾನಕ್ಕಿ=ಬೇಸಿಗೆಯಾಗುತ್ತದೆ. ಪ್ರಾಯಶಃ ಅನೇಕ ಕೊಕ್ಕಾನಕ್ಕಿಗಳ ಹಿಂಡು ಬೇಸಿಗೆಯ ಆಗಮನವನ್ನು ಹೇಳುತ್ತದೆ. ಹೀಗೆ ಇಲ್ಲಿ 'ಒಂದು' 'ಅನೇಕ'ದರೊಂದಿಗೆ ವೈದೃಶ್ಯೀಕರಣಕ್ಕೆ ಗುರಿಯಾಗಿದೆ. 'ಬ'ಗಿಂತ 'ಅ' ಕಡಿಮೆ ಅಥವಾ 'ಬ'ಗಿಂತ 'ಅ' ದೊಡ್ಡದು ಎಂಬ ಸೂತ್ರದ ಮೇಲೆ ಎಲ್ಲ ಗಾದೆಗಳೂ ನಿಂತಿವೆ ಎಂದು ಡಂಡೆಸ್ ಒಂದೆಡೆ ಅಭಿಪ್ರಾಯಪಟ್ಟಿದ್ದಾರೆ. ವಾಸ್ತವವಾಗಿ ಅನನ್ಯಾತ್ಮಕವಾದ ಗಾದೆಗಳಿಗಿಂತ ವೈದೃಶ್ಯಾತ್ಮಕ ಗಾದೆಗಳೇ ಹೆಚ್ಚು. "ಮುಂದೆ ಹೋಗಬಾರದು ಹಿಂದೆ ತೆಗಳಬಾರದು" ಇಲ್ಲಿ ಎರಡು ಅನನ್ಯತೆಗಳನ್ನು ವೈದೃಶ್ಯೀಕರಿಸಲಾಗಿದೆ. ಎಲ್ಲ ಗಾದೆಗಳು ಹೋಲಿಸಬಹುದಾದ ಅಥವಾ ವೈದೃಶ್ಯಗೊಳಿಸಲಾಗುವ ಅಂತಸ್ಥ ಪ್ರಸ್ತಾವಗಳೇ ಆಗಿವೆ. ಅನನ್ಯಾತ್ಮಕವಾದ ಸಾಮಾನ್ಯ ಲಕ್ಷಣಗಳನ್ನು ಕಂಡುಕೊಳ್ಳಲು ಒಂದನ್ನು ಮತ್ತೊಂದರೊಂದಿಗೆ ಹೋಲಿಸಲಾಗುವುದು. ವ್ಯತ್ಯಾಸಗಳನ್ನು ವರ್ಣಿಸುವ ಸಂಗತಿಗಳಿಗೆ ವೈದೃಶ್ಯಗಳು ಅನ್ವಯವಾಗುತ್ತವೆ. 'ಅ'ದ ಇತರ ಉದಾಹರಣೆಗಳು 'ಬ'ಗಿಂತ ದೊಡ್ಡವು.

"ಅವನ ಕಣ್ಣುಗಳು ಅವನ ಜಠರಕ್ಕಿಂತ ದೊಡ್ಡವು"

"ಭರಣಿ ಮಳೆ ಹುಯ್ದರೆ ಧರಣಿ ಎಲ್ಲ ಬೆಳೆ"

ಈ ಗಾದೆಗಳಲ್ಲಿ ಕಾಣಬರುವ ವಿರೋಧಗಳ ಸ್ವಭಾವ ವೈದೃಶ್ಯಾತ್ಮಕ ಒಗಟುಗಳ ವಿರೋಧ ಬಗೆಗಳ ಕೆಲವು ಸಾದೃಶ್ಯಗಳನ್ನು ಹುಡುಕುವಂತೆ ಮಾಡುತ್ತವೆ. ಒಗಟು ಅಧ್ಯಯನ ಸಂದರ್ಭದಲ್ಲಿ, ಜಾರ್ಜಸ್ ಮತ್ತು ಡಂಡೆಸ್, ಇಂಗ್ಲಿಷ್ ಒಗಟುಗಳಲ್ಲಿಯೂ ಮೂರು ಬಗೆಯ ವೈರುಧ್ಯಗಳನ್ನು ಭಿನ್ನಗೊಳಿಸಿ ಹೇಳಿರುವುದುಂಟು. (೧೯೬೩)

೧. ವಿರೋಧಾಲಂಕಾರದ ವಿರೋಧೋಕ್ತಿ (Antithetical Contradictive)

೨. ವ್ಯಕ್ತಿಗತ ವಿರೋಧೋಕ್ತಿ (Privational Contradictive)

೩. ಪ್ರೇರಣಾರ್ಥಕ ವಿರೋಧೋಕ್ತಿ (Causal Contradictive)

ಈ ಮೂರು ಬಗೆಗಳನ್ನು ಸ್ವೀಕರಣದಿಂದಲೊ ನಿರಾಕರಣೆಯಿಂದಲೊ ಸೃಷ್ಟಿಸ ಬಹುದು. ಅದಕ್ಕನುಗುಣವಾಗಿ ಒಗಟುಗಳಲ್ಲಿ ವಿರೋಧಾಲಂಕಾರದ ಪ್ರತಿಷೇಧ ಅ = ಬ, ಅ ≠ ಬ, ಅಥವಾ ಅ = ಬ, ಅ = ಕ, (ಬ ≠ ಕ) ಒಪ್ಪಿಗೆ ಮೂಲಕ ಸೃಷ್ಟಿಯಾಗಬಹುದು.

ವಿರೋಧಾಲಂಕಾರದ ವಿರೋಧೋಕ್ತಿ ಭಾಷಾ ವೈಜ್ಞಾನಿಕ ಸಿದ್ಧಾಂತದಲ್ಲಿ ಗೌರವ ವಿತರಣೆಗೆ (Complementary distribution) ಸದೃಶವಾಗಿದೆ ಎಂದು ಹೇಳಲಾಗಿದೆ ನೀವು 'ಅ'ವನ್ನು ಹೊಂದಿದ್ದರೆ 'ಬ'ವನ್ನು ಹೊಂದಲಾರಿರಿ–ಇಂತಹ ಗೌರವ ವಿತರಣೆಯನ್ನು ಹಂಚಿಕೊಳ್ಳುವ ಗಾದೆಗಳಿವೆ :

೧. ಆಚೆ ಮನೆಯೋಳು ಓಲೆ ಇಕ್ಕ್ಯೊಂಡ್ರೆ
ಈಚೆ ಮನೆಯೋಳು ಕಿವಿ ಕಿತ್ಕೊಂಡ್ಲು

೨. ಆ ಮನೆ ಅಮ್ಮ ಗಂಡು ಮಗು ಹೆತ್ಲು
ಈ ಮನೆ ಅಮ್ಮ ಗುದ್ದ್ಕೊಂಡು ಸತ್ಲು

ಆಚೆಮನೆ ಅಮ್ಮ "ಗಂಡು ಮಗು ಹೆರುವುದು" ಈಚೆ ಮನೆ ಅಮ್ಮ "ಗುದ್ದಿಕೊಂಡು ಸಾಯುವುದು" ಪಾರಸ್ಪರಿಕವಾಗಿ ಹೊರತಾಗಿಯೇ ಇವೆ. ಹೆರುವುದು (ಜೀವ ಕೊಡುವುದು) ಸಾಯುವುದು (ಸಾವು ಹೊಂದುವುದು)–ಎರಡೂ ಗಾದೆಯ ವಿರೋಧಾತ್ಮಕತೆಯನ್ನು ಹೇಳುತ್ತವೆ. ಇದಕ್ಕೆ ಇನ್ನೊಂದು ಉದಾಹರಣೆ :

ಬಲಗಾರನ ಮನೆ ಮಾತು ಚಂದ
ಬಡವನ ಮನೆ ಊಟ ಚಂದ

ಇಲ್ಲಿ ಬಲಗಾರನ 'ಮಾತು' ಬಡವನ 'ಊಟ' ಗೌರವ ವಿತರಣೆಯಲ್ಲಿವೆ. ಅವು ಒಟ್ಟಿಗೆ ಸಂಭವಿಸುವುದಿಲ್ಲ.

ಗೌರವ ವಿತರಣೆ ನಕಾರ ಚಿಹ್ನೆಯಿಲ್ಲದೆಯೂ ಸಂಭವಿಸಬಹುದು ಉದಾಹರಣೆಗೆ "ಬೆಕ್ಕು ಇಲ್ಲದಾಗ ಇಲಿಗಳ ಆಟ"—ಇಲ್ಲಿ ಉಪಸ್ಥಿತಿ ಮತ್ತು ಅನುಪಸ್ಥಿತಿಗಳ ನಡುವೆ ವಿರೋಧ ಏರ್ಪಟ್ಟಿದೆ. ಬೆಕ್ಕು ಮತ್ತು ಇಲಿಗಳ ಸ್ಪಷ್ಟ ವೈದೃಶ್ಯದೊಂದಿಗೆ 'ಒಂದ'ರ ವಿರುದ್ಧ 'ಅನೇಕ'ದ ಆವಶ್ಯಕತೆಯನ್ನು ಈ ಗಾದೆ ಪ್ರತಿಪಾದಿಸುತ್ತದೆ.

ಬೆಕ್ಕು ಇದ್ದರೆ ಇಲಿಗಳು ಕಣ್ಮರೆಯಾಗುತ್ತವೆ. ಬೆಕ್ಕು ಇಲ್ಲದಿದ್ದರೆ ಇಲಿಗಳು ಆಟವಾಡುತ್ತವೆ. ಹೀಗೆ ಬೆಕ್ಕು ಮತ್ತು ಇಲಿಗಳು ಗೌರವ ವಿತರಣೆಗೆ ಒಳಪಡುತ್ತವೆ. ಒಟ್ಟಿಗೆ ಏನೂ ಸಂಭವಿಸುವುದಿಲ್ಲ.

ಸ್ಪಷ್ಟ ನಕಾರವಿಲ್ಲದೆಯೂ ವಿರೋಧ ಸಾಧ್ಯ. ನಕಾರದ ಮೂಲಕ ಸೃಷ್ಟಿಯಾದ ವಿರೋಧವನ್ನು ಸುಲಭವಾಗಿ ಗಮನಿಸಬಹುದು. ಅ≠ಬಯಲ್ಲಿನಂತೆ ನಕಾರ ಕ್ರಿಯಾಪದಕ್ಕಷ್ಟೇ ಸೀಮಿತವಾಗಬೇಕಿಲ್ಲ. ಅ ಅಥವಾ ಬ ನೇತ್ಯಾತ್ಮಕವಾಗಿರಬಲ್ಲದು. ಮಿಲ್ನರ್ ಅವರು ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಮೌಲ್ಯಗಳನ್ನು ಗಾದೆಯ ಘಟಕ ಮೂಲಾಂಶಗಳಿಗೆ ಸರಿಯಾಗಿಯೇ ಆರೋಪಿಸಿದ್ದಾರೆಂದು ಡಂಡೆಸ್ ಅಭಿಪ್ರಾಯಪಟ್ಟಿದ್ದಾರೆ. ಆದರೆ ನಕಾರ ಒಂದು ಅಂಶವೇ ಅಥವಾ ಅಲ್ಲವೇ ಎಂಬುದನ್ನು ಖಚಿತಮಾಡಿಕೊಳ್ಳಲು ವಿಷಯಿಕ ಮೌಲ್ಯವನ್ನು ಆರೋಪಿಸುವ ಅಗತ್ಯವಿಲ್ಲ. ಇದನ್ನು ಸ್ಪಷ್ಟಪಡಿಸಲು ಡಂಡೆಸ್ ಈ ಕೆಳಗಿನ ಉದಾಹರಣೆ ನೀಡಿದ್ದಾರೆ: 'ಯಾವ ಸುದ್ದಿಗಳೂ ಒಳ್ಳೆಯ ಸುದ್ದಿಗಳಲ್ಲ'—ಇಲ್ಲಿ ನಕಾರ ಮೊದಲ ವಿವರಣಾತ್ಮಕ ಮೂಲಾಂಶದಲ್ಲಿ ಘಟಿಸುತ್ತದೆ. ಏನೂ ಸುದ್ದಿಯೇ ಇಲ್ಲ ಎಂಬುದು ಸುದ್ದಿಯೇ ಆಗುವುದಿಲ್ಲ ಎಂಬ ಪ್ರಶ್ನೆಯನ್ನು ಇದಿರಿಸುತ್ತೇವೆ. ಆದರೆ ಸುದ್ದಿ ಇಲ್ಲದಿರುವಿಕೆಯೇ ಒಳ್ಳೆಯ ಸುದ್ದಿಯಾಗಬಹುದು. ಹೀಗೆ ಇಲಿ ಮತ್ತು ಬೆಕ್ಕು ಗಾದೆಯಲ್ಲಿರುವಂತೆ ಇಲ್ಲಿಯೂ ಅನುಪಸ್ಥಿತಿ=ಉಪಸ್ಥಿತಿ ಆಗುತ್ತದೆ.

ಬಹು ವರ್ಣನಾತ್ಮಕ ಮೂಲಾಂಶ ಗಾದೆಗಳ ಉತ್ತರಾರ್ಧ ಭಾಗದ ವಿವರಣೆಗಳಲ್ಲಿ ನಕಾರ ಘಟಿಸಬಹುದು. ಉದಾಹರಣೆಗೆ 'ಉರುಳುವ ಕಲ್ಲುಗಳ ಹಾವಸೆಯನ್ನು ಕೂಡಿ ಹಾಕುವುದಿಲ್ಲ'. ಇಲ್ಲಿ 'ಇಲ್ಲ' ಎನ್ನುವುದರಲ್ಲಿ ನಕಾರಾತ್ಮಕತೆಯುಂಟು. ಇಷ್ಟಾದರೂ ನಕಾರ, ಪ್ರಾಯಶಃ, ಮೊದಲ ವರ್ಣನಾತ್ಮಕ ಮೂಲಾಂಶ 'ಉರುಳುವ' ಎಂಬುದರಿಂದಲೇ ಉದ್ದೇಶಿಸಲ್ಪಟ್ಟಿದೆ. ಆಗ ಉರುಳುವ ಕ್ರಿಯೆ ಹಾವಸೆಯ ಶೇಖರಣೆಯನ್ನು ತಳ್ಳಿಹಾಕುತ್ತದೆ. ಕಲ್ಲೊಂದು ಉರುಳಿದರೆ ಅದು ಹಾವಸೆಯನ್ನು ಹೊಂದಲು ಸಾಧ್ಯವೇ ಇಲ್ಲ. ಕಲ್ಲೊಂದು ಹಾವಸೆಯನ್ನು ಹೊಂದಿದರೆ ಅದನ್ನು ಉರುಳಗೊಟ್ಟಿಲ್ಲ ಎಂದೇ ಹೇಳಬೇಕಾಗುತ್ತದೆ. ಇಲ್ಲಿ ಹಾವಸೆಯನ್ನು ಒಂದು ಒಳ್ಳೆಯ ಅಥವಾ ಕೆಟ್ಟ ವಸ್ತುವನ್ನಾಗಿ ಪರಿಭಾವಿಸಿ ಗಣನೆಗೆ ತೆಗೆದುಕೊಂಡಿಲ್ಲದಿರುವುದನ್ನು ಗಮನಿಸಬೇಕು. ರಚನೆಯೊಂದು ಅರ್ಥದಲ್ಲಿ ಹೆಚ್ಚು ಕಡಿಮೆ ಸ್ವತಂತ್ರವಾಗಿದ್ದರೂ ಗೊತ್ತಾದ ರಚನೆಗೆ ಬೆಸೆದ ಪ್ರಜ್ಞಾಪೂರ್ವಕ ಅಥವಾ ಅಪ್ರಜ್ಞಾಪೂರ್ವಕ ಅರ್ಥಗಳು ಇದ್ದೇ ಇರುತ್ತವೆ. ಇದೇ ರೀತಿಯಾಗಿ 'ಬೊಗಳುವ ನಾಯಿ ಕಚ್ಚುವುದಿಲ್ಲ' ಎಂಬ ಗಾದೆಯಲ್ಲಿ ಬೊಗಳುವಿಕೆ ಕಚ್ಚುವಿಕೆಯನ್ನು ಪ್ರತಿಬಂಧಿಸುತ್ತದೆ. ಆಗ ಬೊಗಳುವ ನಾಯಿಗಳು ಕಚ್ಚುವ ನಾಯಿಗಳಲ್ಲ ಎಂಬ ನೇತ್ಯಾತ್ಮಕ ಸಮೀಕರಣ ಸಿದ್ಧವಾಗುತ್ತದೆ. ಗಾದೆಯನ್ನು ರೂಪಕಾತ್ಮಕವಾಗಿ ಅರ್ಥ ಮಾಡಿಕೊಂಡರೆ ನಾಯಿಯೊಂದು ಏಕಕಾಲದಲ್ಲಿ ಬೊಗಳುತ್ತಾ ಕಚ್ಚಲು

ಸಾಧ್ಯವಿಲ್ಲ. ಈ ರೀತಿಯಾಗಿ 'ಬೊಗಳುವಿಕೆ' ಮತ್ತು 'ಕಚ್ಚುವಿಕೆ' ಗಾದೆಯ ವಿತರಣೆಗೊಳಪಟ್ಟ ಎರಡು ಪ್ರತ್ಯೇಕ ಚಟುವಟಿಕೆಗಳು. ಆರಂಭಿಕ ಅಂಶದ ಉಪಸ್ಥಿತಿ ಕೊನೆಯದರ ಅನುಪಸ್ಥಿತಿಯನ್ನು ಅರ್ಥೈಸುತ್ತದೆ. 'ಕುದಿಯುವುದನ್ನೇ ಕಾಯುತ್ತಾ ಕೂತರೆ ಆ ಮಡಕೆ ಕುದಿಯುವುದೇ ಇಲ್ಲ'—ಇಲ್ಲಿ ಕಾಯುವುದು ಕುದಿಯುವಿಕೆಯನ್ನು ನಿರ್ಬಂಧಿಸುತ್ತದೆ. 'ಆಳೋನು ಸರಿಯಾಗಿದ್ರೆ ಹೆಂಡ್ರಿಗ್ಯಾಕೆ ಹಲವರು?' ಎಂಬ ಗಾದೆಯಲ್ಲಿ ಆಳಲಾಗದವನ ಹೆಂಡತಿಯನ್ನು 'ಹಲವರು' ಕೆಡಿಸುವುದನ್ನು ಹೇಳಲಾಗಿದೆ. ಅಂತೆಯೇ 'ಸತ್ತವರು ಕತೆ ಹೇಳಲ್ಲ' ಎಂಬ ಗಾದೆ ಸತ್ತುಹೋದವರು ಕತೆ ಹೇಳುವಿಕೆಯನ್ನು ಪ್ರತಿಬಂಧಿಸುತ್ತಾರೆ ಎಂಬ ಸತ್ಯವನ್ನು ಹೇಳುತ್ತದೆ.

ಇನ್ನೂ ಕೆಲವು ವಿರೋಧಾತ್ಮಕ ಗಾದೆಗಳಿವೆ ಅವು ಒಗಟುಗಳ ವಿರೋಧಾಲಂಕಾರ ವಿರೋಧೋಕ್ತಿಗಳಿಗೆ ಸದೃಶವಾಗಿವೆ: 'ಆಳುವವರು ಕೇಳಬೇಕು, ಕೇಳದವರಾಗಬೇಕು, ನೋಡಬೇಕು, ನೋಡದವರಾಗಬೇಕು' — 'ನೋಡುವುದು' ಮತ್ತು 'ಕುರುಡಾಗಿರುವುದು' ಖಂಡಿತವಾಗಿಯೂ ಇದು ಒಗಟು ವಿರೋಧಾತ್ಮಕ ರಚನೆಯನ್ನು ನೆನಪಿಗೆ ತರುತ್ತದೆ. ವ್ಯಕ್ತಿಗತ ವಿರೋಧೋಕ್ತಿಗೆ ಸದೃಶವಾದ ಗಾದೆಗಳೂ ಇವೆ. ಆದರೆ ಅವುಗಳಲ್ಲಿ ವಸ್ತುವಿನ ಗುಣವನ್ನು ನಿರಾಕರಿಸಲಾಗಿದೆ: 'ಗುಂಪಿನಲ್ಲಿ ತಲೆಗಳೇನೊ ಇವೆ ಆದರೆ ಮಿದುಳಿಲ್ಲ' ಎಂಬುದು ಈ ಬಗೆಯ ಒಂದು ಗಾದೆ. 'ಆದಕ್ಕೊಂದು ತಲೆ ಇದೆ. ಆದರೆ ಅದು ಆಲೋಚಿಸುವುದಿಲ್ಲ' ಎಂಬ ಒಗಟನ್ನು ಅದು ಬಹುಮಟ್ಟಿಗೆ ಹೋಲುತ್ತದೆ.

ಪ್ರೇರಣಾರ್ಥಕ ವಿರೋಧೋಕ್ತಿಗಳಿಗೆ ಇನ್ನೂ ಕೆಲವು ಗಾದೆ ಸಾದೃಶ್ಯಗಳಿವೆ. ಅವುಗಳಲ್ಲಿ ಸಹಜ ಪರಿಣಾಮ ಅಥವಾ ಪ್ರಭಾವಗಳನ್ನು ನಿರಾಕರಿಸಲಾಗಿದೆ. ವಿರೋಧಾತ್ಮಕವಲ್ಲದ ಪ್ರೇರಣಾರ್ಥಕ ಗಾದೆಗಳೂ ಇವೆ. 'ಅ' ವು 'ಬ' ವನ್ನು ಉಂಟುಮಾಡುತ್ತದೆ. ಉದಾಹರಣೆಗೆ ೧. 'ಸತತ ಅಭ್ಯಾಸ ಫಲ ಕೊಡುತ್ತದೆ; ೨. 'ಅವಸರ ಎಲ್ಲವನ್ನೂ ಹಾಳುಗೆಡುವುತ್ತದೆ' ೩. 'ಸಲುಗೆ ತಾತ್ಸಾರವನ್ನು ಬಿತ್ತುತ್ತದೆ.' ಅತ್ಯುಚ್ಚ ಭಾವನೆಯ ಹಿನ್ನೆಲೆಯಲ್ಲಿ ಪರಿಣಾಮ ಕಾರಣಕ್ಕೆ ಸಮಾಂತರವಾಗಿರುತ್ತದೆ: ಉದಾಹರಣೆಗೆ ೧. 'ಬಿತ್ತಿದಂತೆ ಬೆಳೆ'; ೨. 'ಮಾಡಿದ್ದುಣ್ಣೋ ಮಹಾರಾಯ' ಗಾದೆಗಳು. ಏನೇ ಇರಲಿ, ವಿರೋಧಾತ್ಮಕವಾದ ಪ್ರೇರಣಾರ್ಥಕ ಗಾದೆಗಳಲ್ಲಿ ಕಾರಣವನ್ನು ನಿರಾಕರಿಸಲಾಗಿದೆ ಅಥವಾ ಅಸಾಧ್ಯವೆಂದೇ ನಂಬಲಾಗಿದೆ: ೧. 'ಹೊತ್ಕೊಂಡುಹೋದ ನಾಯಿ ಮೊಲ ಹಿಡಿದಾತ?' ಎಂಬ ಗಾದೆ ಇಲ್ಲಿ ಗಮನಾರ್ಹವಾದುದು. ಯಾರಾದರೂ ನಾಯಿಯನ್ನು ಕಾಡಿಗೆ ಹೊತ್ತುಕೊಂಡು ಹೋದರೆ ನಾಯಿ ಮೊಲ ಹಿಡಿಯುತ್ತದೆಂದು ನಿರೀಕ್ಷಿಸಿಯಾರು ಅಥವಾ ಆ ನಾಯಿಗೆ ಮೊಲ ಹಿಡಿಯಲು ಪ್ರೇರಣೆ ಒದಗಿಸಬಹುದು. 'ಹಿಡಿಯಲು ಸಾಧ್ಯ' 'ಹಿಡಿಯಲು ಸಾಧ್ಯವೇ ಇಲ್ಲ' ಎಂಬ ವೈದೃಶ್ಯಗಳಿಂದ ವಿರೋಧ ಫಲಿತಗಳನ್ನು ಪಡೆಯಬಹುದು. ಒಬ್ಬನು ನಾಯಿ

ಯನ್ನು ಕಾಡಿಗೆ ಹೊತ್ತಯ್ಯ ಬಲ್ಲ ಆದರೆ ಅದನ್ನು ಮೊಲ ಹಿಡಿಯುವಂತೆ ಮಾಡಲಾರ. ಪುನಃ ಇಲ್ಲಿ ಒಗಟಿನ ಸಾದೃಶ್ಯತೆ ಸ್ಫುಟವಾಗಿ ಗೋಚರಿಸುತ್ತದೆ.

ಗಾದೆಗಳಲ್ಲಿಯ ಅನನ್ಯಾತ್ಮಕ ರೂಪಗಳು ಮತ್ತು ವೈದೃಶ್ಯಾತ್ಮಕ ಲಕ್ಷಣಗಳ ನಡುವಿನ ಭೇದ ಅಥವಾ ವೈರುಧ್ಯಾತ್ಮಕವಲ್ಲದ ಮತ್ತು ವಿರೋಧಾತ್ಮಕ ಗಾದೆಗಳ ನಡುವಿನ ಭಿನ್ನತೆಯನ್ನು ಗುರುತಿಸುವಾಗ ಎಲ್ಲ ಗಾದೆಗಳು ಒಂದೇ ಸಾಲಿಗೆ ಸೇರುವುದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕೆಲವು ವರ್ಷಗಳ ಹಿಂದೆಯೇ ವೆಸ್ಟರ್‌ಮಾರ್ಕ್ ಗುರುತಿಸಿರುವಂತೆ ಗಾದೆಗಳಿಗೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಸಾದೃಶ್ಯ ಪ್ರತಿಪಾದನೆಗಳನ್ನು ಹೊಂದುವ ಪ್ರವೃತ್ತಿಯುಂಟು. ವಿರೋಧಾಲಂಕಾರ ಮತ್ತು ವೈದೃಶ್ಯಕ್ಕಾಗಿ ಒಂದು ಒಲವೂ ಇರುತ್ತದೆ. ವಿಷಯ ಮತ್ತು ಸತ್ಯಗಳ ನಡುವಿನ ವ್ಯತ್ಯಾಸವನ್ನು ತೋರಿಸುವ ಯತ್ನಗಳೂ ನಡೆದಿವೆ. ವೆಸ್ಟರ್‌ಮಾರ್ಕ್ ಅವರ ಕರ್ತೃ (Subject) ಮತ್ತು ಕ್ರಿಯಾರ್ಥಕ (Predicate)ಗಳಿಗೆ ಸಂವಾದಿಯಾಗಿ ಡಂಡೆಸ್ ಅವರು ವಾದಪ್ರಕರಣ (Topic) ಮತ್ತು ಗುಣದೋಷ ವಿಮರ್ಶೆ (Comment) ಪರಿಭಾಷೆಯನ್ನು ಬಳಸಿದ್ದಾರೆ. ಸಮಾಂತರ ಮತ್ತು ವೈದೃಶ್ಯಾತ್ಮಕ ಲಕ್ಷಣಗಳು ಒಂದು ಅಥವಾ ಅದೇ ತೆರನ ಗಾದೆಗಳಲ್ಲಿ ಘಟಿಸಬಹುದು. ಗಾದೆ ಪ್ರಚಲಿತವಿರುವ ಎಲ್ಲ ಸಂಸ್ಕೃತಿಗಳಲ್ಲೂ ಗಾದೆಗಳ ಗುಣ ಏಕಕಾಲದಲ್ಲಿ ಅನನ್ಯ ಮತ್ತು ವೈದೃಶ್ಯಾತ್ಮಕಗೊಂಡು ಆ ಲಕ್ಷಣಗಳೇ ಗಾದೆಗಳ ಗುಣಲಕ್ಷಣಗಳಾಗುವಂತಾಗಬೇಕು ಎಂದು ಡಂಡೆಸ್ ಬಯಸುತ್ತಾರೆ.

ಗಾದೆಗಳ ರಚನಾ ವಿಶ್ಲೇಷಣೆ ನಡೆಸುವಾಗ ಗಾದೆಗಳಲ್ಲಿ ವಿರೋಧವನ್ನು ಹುಟ್ಟುಹಾಕುವ ಅಂಶಗಳನ್ನು ಮತ್ತು ಅಸಂಖ್ಯ ಸಾಂಪ್ರದಾಯಿಕ ಅರ್ಥಸ್ತರದ ವೈದೃಶ್ಯಾತ್ಮಕ ಕ್ರಿಯೆಗಳನ್ನು ಬಳಸಿಕೊಳ್ಳುವುದು ಯುಕ್ತ. ಅವುಗಳ ಒಂದು ಪಟ್ಟಿಯನ್ನೇ ಡಂಡೆಸ್ ಒದಗಿಸಿದ್ದಾರೆ

ಒಂದು × ಎರಡು
ಕೆಲವು × ಅನೇಕ
ಅಲ್ಪ × ಮಹತ್ತು
ಹತ್ತಿರ × ದೂರ
ದುರ್ಬಲ × ಬಲಿಷ್ಠ
ಕೆಟ್ಟ × ಉತ್ತಮ
ಸುಲಭ × ಕಷ್ಟ
ಕಪ್ಪು × ಬಿಳಿ
ಇಂದು × ನಾಳೆ

ಈ ಮೇಲಿನ ಜೋಡಿಯಲ್ಲಿ ಯಾವುದೂ ಎಲ್ಲ ಕಾಲಕ್ಕೂ ಶ್ರೇಷ್ಠವಲ್ಲ. ಒಂದರ ವಿರುದ್ಧ ಎರಡು–ಕೆಲವೊಮ್ಮೆ ಒಂದನ್ನು ಬಯಸಬಹುದು; ಮತ್ತೆ ಕೆಲವೊಮ್ಮೆ

ಎರಡನ್ನು ನೆಚ್ಚಿಕೊಳ್ಳಬಹುದು. ಉದಾಹರಣೆಗೆ 'ಬ' ಗಿಂತ 'ಅ' ದೊಡ್ಡದಾಗಿರುವ ಗಾದೆಗಳಲ್ಲಿ "ಮಧ್ಯರಾತ್ರಿಗೆ ಮುಂಚಿನ ನಿದ್ರೆ ಬೆಳಗಿನ ಜಾಮದ ನಿದ್ರೆಗಿಂತ ವಾಸಿ" ಗಮನಾರ್ಹ. ಎರಡು 'ಅ'ಗಳು ಒಂದಕ್ಕಿಂತ ಉತ್ತಮ ಎಂಬುದು ಒಂದಕ್ಕಿಂತ ಎರಡು ತಲೆಗಳು ಉತ್ತಮ' ಎಂಬುದರಲ್ಲಿರುವಂತೆ ಎರಡರ ಮೇಲುಗೈಯನ್ನು ಯಾರಾದರೂ ಗುರುತಿಸಬಹುದು. 'ಪೊದೆಯಲ್ಲಿರುವ ಎರಡು ಹಕ್ಕಿಗಳಿಗಿಂತ ಕೈಯಲ್ಲಿರುವ ಒಂದು ಹಕ್ಕಿಯೇ ಸಾಕು'—ಕೈಯಲ್ಲಿರುವುದು, ಪೊದೆಯಲ್ಲಿರುವುದು, —ಈ ವೈದೃಶ್ಯವನ್ನು ಗಮನಿಸಬೇಕು. ಅದು ಸಂಖ್ಯಾ ಅಸಮಾನತೆಯನ್ನು ಸರಿದೂಗಿಸುತ್ತದೆ.

ಪ್ರೇರಣಾರ್ಥಕ ಗಾದೆಗಳಲ್ಲಿ ಅಂಥ ವೈರುಧ್ಯ ಜೋಡಿಗಳ ಬಳಕೆಯಿಂದ ಕಾರಣ ಮತ್ತು ಪರಿಣಾಮಗಳ ನಡುವಿನ ವೈದೃಶ್ಯ ಎದ್ದುಕಾಣುತ್ತದೆ. ಉದಾಹರಣೆಗೆ 'ಒಂದು ಸಣ್ಣ ಕಿಡಿ ದೊಡ್ಡ ಬೆಂಕಿಯನ್ನೇ ಹೊತ್ತಿಸುತ್ತದೆ'. ಇದು ಕೇವಲ ಕಿಡಿ ಮತ್ತು ಬೆಂಕಿಯ ವೈದೃಶ್ಯವಾಗಷ್ಟೇ ಉಳಿದಿಲ್ಲ ಸಣ್ಣ ಮತ್ತು ದೊಡ್ಡದರ ವೈದೃಶ್ಯವೂ ಆಗಿದೆ. ಇದೇ ವಿರೋಧ ಕೆಳಗಿನ ಉದಾಹರಣೆಗಳಲ್ಲಿದೆ : 'ಕರಿಕೋಳಿ ಬಿಳಿಮೊಟ್ಟೆ ಇಟ್ಟಂಗೆ' 'ಬೀಜದಿಂದ ಮರ'—ಈ ಗಾದೆಗಳಲ್ಲಿ ವಿರೋಧಾತ್ಮಕ ತತ್ವ ಒಂದೇ ಆಗಿದೆ. 'ಕಣ್ಣಿಗೆ ದಂಡೆ ಕಾಲಿಗೆ ದೂರ'—ಒಂದು ಸಮೀಕರಣಾತ್ಮಕ ಗಾದೆ. ಅನನ್ಯಾತ್ಮಕ ಲಕ್ಷಣವನ್ನು ಧ್ವನಿಸುವ ಒಂದು ಸಮೀಕರಣ ಇಲ್ಲಿದೆ. ಹತ್ತಿರ=ಸುದೂರ ಈ ಸಮೀಕರಣವನ್ನು ಅದು ಒಳಗೊಳ್ಳುತ್ತದೆ. 'ಒಬ್ಬರ ಹಲ್ಲು ಮತ್ತೊಬ್ಬರಿಗೆ ನಂಜು'—ಇದು ಸ್ಪಷ್ಟವಾಗಿ ವಿರೋಧಾತ್ಮಕವಾದುದು. ಇಲ್ಲಿ ಹಲ್ಲು (ಜೀವನ)= ನಂಜು (ಸಾವು)–ಈ ಸಮೀಕರಣಾತ್ಮಕ ರಚನೆ ಅನನ್ಯತೆಯನ್ನು ಸೂಚಿಸುವ ಒಂದು ಚೌಕಟ್ಟನ್ನು ಒದಗಿಸುತ್ತದೆ. ಆದರೆ ಈ ಚೌಕಟ್ಟಿನೊಳಗಿನ ವಸ್ತು ವೈದೃಶ್ಯಾತ್ಮಕ ಲಕ್ಷಣಗಳನ್ನು ಒಳಗೊಳ್ಳುತ್ತದೆ. ಇದಕ್ಕೆ ಇನ್ನೊಂದು ಉಧಾಹರಣೆಯನ್ನು ಕೊಡಬಹುದು. 'ಸುಲಭವಾಗಿ ಬರುವುದು ಸುಲಭವಾಗಿ ಹೋಗುವುದು'—ಇಲ್ಲಿ 'ಬರುವುದು' ಮತ್ತು 'ಹೋಗುವುದು'–ವಿರೋಧದಲ್ಲಿವೆ. ಸುಲಭದ ಎರಡು ಸಂದರ್ಭಗಳು ಅನನ್ಯತೆಯನ್ನು ಸ್ಥಾಪಿಸುತ್ತವೆ. ಇದೇ ಬಗೆಯ ಸಂಯೋಜನೆ 'ಕೆಲವನ್ನು ಗೆಲ್ಲಿ ; ಕೆಲವನ್ನು ಕಳಕೊಳ್ಳಿ' ಎಂಬಲ್ಲಿಯೂ ಕಾಣಿಸಿಕೊಳ್ಳುತ್ತದೆ.

ಬಹು ವರ್ಣನಾತ್ಮಕ ಮೂಲಾಂಶದ ಗಾದೆಗಳು ಕಡಿಮೆ ಸಂದಿಗ್ಧದವು. ಇವನ್ನು ಡಂಡೆಸ್ ಅವರು ವಾದ ಪ್ರಕರಣಗಳು ಮತ್ತು ಗುಣದೋಷ ವಿಮರ್ಶೆ–ಈ ವೈದೃಶ್ಯಾತ್ಮಕ ಜೋಡಿಯ ಕೆಲವು ಉದಾಹರಣೆಗಳೊಡನೆ ಲಕ್ಷಿಸಿದ್ದಾರೆ :

೧. ಒಟ್ಟಾದರೆ ನಾವು ನಿಲ್ಲುತ್ತೇವೆ
ಒಡೆದರೆ ಬಿದ್ದುಹೋಗುತ್ತೇವೆ

೨. ಎಲ್ಲವೂ ಗೊತ್ತು ಆದರೆ ಯಾವುದೂ ಸರಿಯಾಗಿ ಗೊತ್ತಿಲ್ಲ

ಮೊದಲಿನ ಗಾದೆಯಲ್ಲಿ ಒಟ್ಟಾಗುವುದು/ಒಡೆದುಹೋಗುವುದು : ನಿಲ್ಲು/ಬೀಳು ಎಂಬ ಸಮೀಕರಣವೂ ಎರಡನೆಯದರಲ್ಲಿ ಪರಿಜ್ಞಾನ/ಪ್ರಾವೀಣ್ಯ : ಎಲ್ಲ/ಒಂದೂ ಇಲ್ಲ ಎಂಬ ಸಮೀಕರಣವೂ ಅಸ್ತಿತ್ವ ಪಡೆಯುತ್ತದೆ.

ಇಲ್ಲಿ ಅವಿರೋಧದಿಂದ ವಿರೋಧಕ್ಕೆ ಒಂದು ನಿರಂತರತೆ ಎದ್ದುಕಾಣುತ್ತದೆ. ಅದುದರಿಂದಲೇ ಯಾರೇ ಆದರೂ ವಾದ ಪ್ರಕರಣಗಳು ಮತ್ತು ಗುಣದೋಷ ವಿಮರ್ಶೆ — ಈ ವೈದೃಶ್ಯಾತ್ಮಕ ಜೋಡಿಯ ರಚನೆಗಳನ್ನು ಹೊಂದಬಹುದು. ರಚನೆಯಲ್ಲಿ ಅಥವಾ ಸರಣಿಯಲ್ಲಿ ಅವು ಒಂದಕ್ಕೊಂದು ಸಾದೃಶ್ಯ ಇರುವಂಥವು ಮತ್ತು ವಿರೋಧ ಇಲ್ಲದವು. 'ಅನೇಕ ಜನ ಅನೇಕ ಮನಸ್ಸುಗಳು' 'ಮೊದಲು ಬಂದವರಿಗೆ ಮೊದಲು ಮಣೆ'— ಇಲ್ಲಿ ವಾದ ಪ್ರಕರಣ ಅಥವಾ ಗುಣದೋಷ ವಿಮರ್ಶೆ ಅನನ್ಯವಾಗಿದೆ. ಇನ್ನೂ ಕೆಲವೊಮ್ಮೆ ವಾದ ಪ್ರಕರಣ ಮತ್ತು ಗುಣದೋಷ ವಿಮರ್ಶೆ— ಎರಡೂ ವಿರೋಧದಲ್ಲಿರುವ ಗುಣವನ್ನು ಹೊಂದಲು ಸಾಧ್ಯ. ಉದಾಹರಣೆಗೆ 'ಸುಲಭವಾಗಿ ಬಂದು ಸುಲಭವಾಗಿ ಹೋಗು'. ಸರಣಿ ಮತ್ತು ವಿರುದ್ಧ ಪ್ರಯೋಗಗಳಲ್ಲಿ ಅತ್ಯಂತ ಮುಖ್ಯವಾಗಿ ಎದ್ದುಕಾಣುವ ವೈದೃಶ್ಯ ಗಮನಾರ್ಹ. 'ಬದುಕು ಮತ್ತು ಕಲಿ' ಎಂಬ ಗಾದೆಯ ರೂಪಕಕ್ಕೂ 'ಮಾಡು ಇಲ್ಲವೆ ಮಡಿ' ಗಾದೆಯ ರೂಪಕಕ್ಕೂ ನಡುವೆ ಇರುವ ವ್ಯತ್ಯಾಸದಿಂದ ಅದನ್ನು ದೊರಕಿಸಿಕೊಳ್ಳಲಾಗಿದೆ. ಬದುಕುವುದು ಮತ್ತು ಕಲಿಯುವುದರ ನಡುವೆ ವಿರೋಧವಾಗಲಿ ಸಂದಿಗ್ಧತೆಯಾಗಲಿ ಇಲ್ಲ. ಬದಲಾಗಿ ಬದುಕುವುದು ಕಲಿಯುವುದಕ್ಕಾಗಿಯೇ ಬದುಕುವುದು = ಕಲಿಯುವುದು ; 'ಮಾಡುವುದು' ಮತ್ತು 'ಸಾಯುವುದು' ವಿರೋಧದಲ್ಲಿದೆ. ಒಬ್ಬನು ಮಾಡದಿದ್ದರೆ ಅವನು ಸಾಯುತ್ತಾನೆ. ಒಬ್ಬನು ಸತ್ತರೆ ಇನ್ನೊಬ್ಬನು ಏನೂ ಮಾಡಲಾಗುವುದಿಲ್ಲ, ಇದೇ ಸತ್ಯ. 'ಮುಳುಗು ಇಲ್ಲವೆ ಈಜು', 'ಕೆಲಸ ಮಾಡು ಇಲ್ಲವೆ ಬಾಯಿ ಮುಚ್ಚು', 'ಪ್ರಕಟಿಸು ಇಲ್ಲವೆ ನಾಶಗೊಳಿಸು'— ಈ ಬಗೆಯ ಗಾದೆಗಳಲ್ಲಿ ಶಬ್ದಗಳು ಸಾಮಾನ್ಯವಾಗಿ ಗೌರವ ವಿತರಣೆಯಲ್ಲಿರುತ್ತವೆ ಎಂದರೆ ಅವು ಪರಸ್ಪರ ಪ್ರತ್ಯೇಕವಾದವು. ಮೊದಲೇ ಗುರುತಿಸಿರುವಂತೆ ಗಾದೆಗಳಲ್ಲಿ ಗೌರವ ವಿತರಣೆ ವಿರೋಧ ರೂಪಗಳಲ್ಲಿ ಪ್ರಬಲವಾದುದನ್ನು ಪ್ರತಿನಿಧಿಸುತ್ತದೆ.

ಸಂಗ್ರಹವಾಗಿ ಹೇಳುವುದಾದರೆ ಗಾದೆ ಸಾಂಪ್ರದಾಯಿಕ ಹೇಳಿಕೆಗಳ ಒಂದು ವರ್ಣನಾತ್ಮಕ ಮೂಲಾಂಶ. ಅದು ವಾದ ಪ್ರಕರಣ ಹಾಗೂ ಗುಣದೋಷ ವಿಮರ್ಶೆಯನ್ನು ಹೊಂದಿರುವ ಒಂದು ವರ್ಣನಾತ್ಮಕ ಮೂಲಾಂಶವಾಗಿ ತೋರಿಬರುತ್ತದೆ, ಗಾದೆಗಳು ಕಡೇಪಕ್ಷ ಎರಡು ಪ್ರಯೋಗಗಳನ್ನು ಒಳಗೊಂಡಿರುತ್ತದೆ. ಏಕ ವರ್ಣನಾತ್ಮಕ ಮೂಲಾಂಶವನ್ನೊಳಗೊಂಡ ಗಾದೆಗಳು ವಿರೋಧಾತ್ಮಕವಲ್ಲದವು. ಎರಡು ಅಥವಾ ಎರಡಕ್ಕಿಂತ ಹೆಚ್ಚು ಮೂಲಾಂಶಗಳ ಗಾದೆಗಳು ಒಂದೊ ವಿರುದ್ಧಾತ್ಮಕವಾದವು ಅಥವಾ ವಿರೋಧಾತ್ಮಕವಲ್ಲದವು. 'ಅಪ್ಪನಂತೆ ಮಗ'— ವಿರೋಧಾತ್ಮಕವಲ್ಲದ ಗಾದೆಗೆ ಒಂದು ಉದಾಹರಣೆ. 'ಬೆಳಗಾನ ದುಡಿಯೋ ಮನುಷ್ಯ ಹೆಂಗಸರ

ಕೆಲಸ ಮಾಡಲ್ಲ '—ವಿರೋಧಾತ್ಮಕ ಗಾದೆಗೆ ಇದು ಉದಾಹರಣೆ. ಸೂರ್ಯೋದಯ ದಿಂದ ಚಂದ್ರೋದಯದವರೆಗೆ ಕೆಲಸಮಾಡಿದರೂ ಗಂಡಸು ಹೆಂಗಸರ ಕೆಲಸ ಮಾಡು ವುದಿಲ್ಲ ಎನ್ನುವಲ್ಲಿ ಗಂಡಸು/ಹೆಂಗಸು : ನಿರ್ದಿಷ್ಟ ಕೆಲಸ/ಮುಗಿಯದ ಕೆಲಸ ಎಂಬ ಸೂತ್ರ ತಾನೇತಾನಾಗಿ ಸೃಷ್ಟಿಯಾಗುತ್ತದೆ. ವಿರೋಧಾತ್ಮಕವಲ್ಲದ ಗಾದೆಯು ಬಹು ವರ್ಣನಾತ್ಮಕ ಅಂಶ ಅನನ್ಯಾತ್ಮಕ ಲಕ್ಷಣಗಳನ್ನು ಒತ್ತಿ ಹೇಳುವುದು ಇಲ್ಲಿ ಗಮನಾರ್ಹ. ಸಮೀಕರಣ ರೂಪದಲ್ಲಿ ಅಥವಾ ಸಮಾನಪದಗಳ ಸರಣಿಯಲ್ಲಿ ವಿರೋಧಾತ್ಮಕ ಗಾದೆಗಳು ನಕಾರ ರೂಪದಲ್ಲಿ ವೈದೃಶ್ಯಾತ್ಮಕ ಲಕ್ಷಣಗಳನ್ನು ಒತ್ತಿ ಹೇಳುತ್ತವೆ. ಗೌರವ ವಿತರಣೆಯೊಡನೆ ಪದಗಳ ಸರಣಿಯಲ್ಲಿ ಅನನ್ಯಾತ್ಮಕ ಲಕ್ಷಣಗಳನ್ನು ಹೇಳುತ್ತವೆ. ಕೆಲವು ಗಾದೆಗಳು ಅನನ್ಯಾತ್ಮಕ ಹಾಗೂ ವೈದೃಶ್ಯಾತ್ಮಕ ಲಕ್ಷಣ ಗಳೆರಡನ್ನೂ ಒಳಗೊಳ್ಳುತ್ತವೆ. ಗಾದೆಗಳಲ್ಲಿ ವಿರೋಧ ಹುಟ್ಟುಹಾಕುವ ಸಾಧನಗಳು ಹೆಚ್ಚುಕಡಿಮೆ ಒಗಟುಗಳಲ್ಲಿಯ ವಿರೋಧ ಅಂಶಗಳಿಗೆ ಸದೃಶವಾಗಿವೆ. ಆದರೆ ಒಗಟುಗಳಲ್ಲಿ ವಿರೋಧಗಳು ಉತ್ತರದಿಂದ ನಿರ್ಧರಿಸಲ್ಪಡುತ್ತವೆ. ವಿರೋಧಾತ್ಮಕ ಗಾದೆ ವಾಸ್ತವವಾಗಿ ಗಾದೆ ಉದ್ಭವವಾಗುವ ಸನ್ನಿವೇಶಕ್ಕೆ ಒಂದು ಉತ್ತರವಾಗಿದೆ. ಅಲ್ಲಿ ವಿರೋಧವನ್ನು ಪ್ರತಿಪಾದಿಸಲಾಗಿರುತ್ತದೆ. ಈ ಅರ್ಥದಲ್ಲಿ ಗಾದೆಗಳು ಸಮಸ್ಯೆ ಗಳನ್ನು ಹೇಳುತ್ತವೆ. ಪ್ರತಿಯಾಗಿ ಒಗಟುಗಳು ಅವನ್ನು ಬಗೆಹರಿಸುತ್ತವೆ.

ಗಾದೆ ಜಾನಪದ ಅಂತರ ಸಾಂಸ್ಕೃತಿಕ ರೂಪವಾಗಿರುವುದರಿಂದ ಅಂತರ ಸಾಂಸ್ಕೃತಿಕವಾಗಿಯೇ ಅದರ ಮೌಲಿಕ ವಿವರಣೆ ಸಾಗಬೇಕಾಗಿದೆ. ಅದರಿಂದ ಪ್ರಾದೇಶಿಕ ಉಪಮಾದರಿಗಳ ವ್ಯಾಖ್ಯಾನದ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳಬಹುದಾಗಿದೆ. ಗಾದೆಗಳನ್ನು ಹೊಂದಿರುವ ಎಲ್ಲ ಸಂಸ್ಕೃತಿಗಳೂ ಅವವೇ ರಾಚನಿಕ ಬಗೆಗಳನ್ನು ಹೊಂದಿವೆಯೆ ? ಯಾವ ಸಂಸ್ಕೃತಿಗಳು ಸ್ಪಷ್ಟ ಅನನ್ಯತೆಯನ್ನು ಸಾರುವ ಗಾದೆ ಗಳನ್ನು ಹೊಂದಿವೆ? ವಸ್ತುವಿನ ದೃಷ್ಟಿಯಿಂದ ಪ್ರಾದೇಶಿಕ ಉಪಮಾದರಿಗಳ ವ್ಯಾಖ್ಯಾನ ಸಾಧ್ಯವೆ ? ಎಲ್ಲ ಸಂಸ್ಕೃತಿಗಳೂ ಕಾಲ ಮತ್ತು ಗುಣವನ್ನು ಒತ್ತಿಹೇಳುವ ವೈದೃಶ್ಯಾತ್ಮಕ ಜೋಡಿಗಳನ್ನು ಹೊಂದಿವೆಯೆ ?–ಇವು ವಿಚಾರಾರ್ಹವಾದ ಪ್ರಶ್ನೆಗಳು.

ಏನೇ ಇರಲಿ, ಗಾದೆಗಳು ಪರಂಪರೆಯ ಪ್ರಾಮಾಣ್ಯಗಳಾಗಿರುವುದರಿಂದ ಅವನ್ನು ಯುಕ್ತ ರೀತಿಯಲ್ಲಿ ವಿದ್ವಾಂಸರು ಅಧ್ಯಯನ ನಡೆಸಬೇಕಾಗಿದೆ. ಪೂರಕ ವಿಜ್ಞಾನಗಳ ನೆರವಿನಿಂದ ಅದು ಆಗಬೇಕು.

ಆಧಾರ ಗ್ರಂಥಗಳು :

1. Arewa E Oje and Alan Dundes
   1964, Proverbs and the Ethnography of speaking Folklore, *American Anthropologist* 66, 6(2) 70-85.

2. Alan Dundes
   1975, *Analytic Essays in Folklore*, Mouton, The Hague, Paris.

3. Georges and Dundes
   1963, *Toward a Structural Definition of the Riddle*, JAF 76, 111-18.

4. Kimmerle M. M.
   1947, *A method of Collecting and Clarifying Folk Sayings*, Western Folklore 6, 351-66.

5. Milner G. B.
   1969 a What is Proverb ? New Society 332 (6 Feb) 199-202.

   1969 b Quadripartite Structures, *Proverbium* 14 379-83.

6. Richard M. Dorson
   1972, *Folklore and Folklife*, University of Chicago Press, Chicago.

   1973, *African Folklore*, Indiana University Press, Bhoomington.

7. ಕೃಷ್ಣಕುಮಾರ್ ಸಿ. ಪಿ.
   1981, ಜನಪದ ಸಾಹಿತ್ಯ ಪ್ರವೇಶಿಕೆ, ಚಿತ್ರಭಾನು ಪ್ರಕಾಶನ, ಮೈಸೂರು.

8. ರಾಗೌ
   1968, ನಮ್ಮ ಗಾದೆಗಳು, ಗೀತಾ ಬುಕ್ ಹೌಸ್, ಮೈಸೂರು.

9. ಸುಧಾಕರ
   1973, ನಮ್ಮ ಸುತ್ತಿನ ಗಾದೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

10. ಸುಧಾಕರ
    1984, ಜಾನಪದ ಮತ್ತು ಕಲಬೆರಕೆತನ, ರಮ್ಯರೂಪ ಪ್ರಕಾಶನ, ಬೆಂಗಳೂರು.

ಪಿ. ಆರ್. ಶಾಲಿನಿ

ಉತ್ತರ ಕನ್ನಡ ಜಿಲ್ಲೆಯ ಸೋಂದಾ ತ್ರಿವಿಕ್ರಮ ದೇವಾಲಯದ ಒಂದು ವೈಶಿಷ್ಟ್ಯ

ಐತಿಹಾಸಿಕವಾಗಿಯೂ ಧಾರ್ಮಿಕವಾಗಿಯೂ ಮಹತ್ವವನ್ನು ಪಡೆದು 'ಸೋಂದಾ', 'ಸೋದೆ', 'ಸ್ವಾದಿ' ಇತ್ಯಾದಿ ನಾಮಗಳಿಂದ ಕರೆಯಲ್ಪಡುವ ಹೆಸರಾಂತ ಈ ಪ್ರದೇಶವು, ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿಗೆ ಹನ್ನೆರಡು ಮೈಲಿ ದೂರದಲ್ಲಿದೆ.

ಈ ಕ್ಷೇತ್ರದಲ್ಲಿರುವ ಸುಪ್ರಸಿದ್ಧ ಶ್ರೀ ವಾದಿರಾಜರ ಮಠದ ಆವರಣವು ಮೂಲತಃ ವಿಜಯನಗರದ ಮಾಂಡಲಿಕರಾದ ಸೋದೆ ಅರಸರ ಸಾಮ್ರಾಜ್ಯಕ್ಕೆ ಸೇರಿದ್ದು, ಅರಸಪ್ಪ ನಾಯಕನ ಕಾಲದಲ್ಲಿ ವಾದಿರಾಜರಿಗೆ ದಾನವಾಗಿ ಕೊಡಲ್ಪಟ್ಟು, ಅವರ ಕೃಪೆಯಿಂದ 1593ನೇ ಇಸವಿಯಲ್ಲಿ ತ್ರಿವಿಕ್ರಮ ದೇವಾಲಯವು ಸ್ಥಾಪಿತವಾಯಿತೆಂದು, ತ್ರಿವಿಕ್ರಮ ದೇವಾಲಯದ ದಕ್ಷಿಣ ಭಾಗದಲ್ಲಿ ತೇರು ಬೀದಿಯ ಬದಿಯಲ್ಲಿರುವ ಶಿಲಾಶಾಸನದ ಆಧಾರದಿಂದ ತಿಳಿದುಬರುತ್ತದೆ.

ವಾದಿರಾಜರ ಪರಿಚಯ (1480–1600)

ಮಹಾನ್ ವಿದ್ವತ್ ಶಿರೋಮಣಿಗಳೂ, ಪಂಡಿತೋತ್ತಮರೂ, ಭಗವದ್ಭಕ್ತರೂ ತಪೋಶಾಲಿಗಳೂ ಆದ ತಹ ಶ್ರೀಗುರುವಾದಿರಾಜರು ಅನೇಕ ಮಹಿಮಾಂತ ಮಹಾ ಪುರುಷರಲ್ಲಿ ಒಬ್ಬರಾಗಿದ್ದು ಅನೇಕ ಶಾಸ್ತ್ರಗ್ರಂಥಗಳನ್ನೂ ರಚಿಸಿರುತ್ತಾರೆ. ಅವರ ಮಹಿಮೆಗಳು ಅನೇಕವಾಗಿದ್ದು, ಮುಖ್ಯವಾಗಿ, ಸೋದಾ ಅರಸರ ದಿಗ್ವಿಜಯಕ್ಕೆ ಕಾರಣಪುರುಷರಾಗಿ, ಅರಸರ ಹೊಗಳಿಕೆಗೆ ಪಾತ್ರರಾಗಿದ್ದರೆಂದೂ ಐತಿಹ್ಯವಿದೆ. ಅಲ್ಲದೆ ಅನೇಕ ವರ್ಷಗಳ ಕಾಲ ಸೋದಾ ಅರಸರು ಗುರು ವಾದಿರಾಜರನ್ನು ಕೊಂಡಾಡುತ್ತಾ, ಅವರಿಗೆ ಅನೇಕ ಬಿರುದುಗಳನ್ನು ಕೊಟ್ಟು, ಕೊನೆಗೆ ಅವರ ಶಿಷ್ಯತ್ವವನ್ನು ಸ್ವೀಕರಿಸಿ, ಮುತ್ತಿನ ಸಿಂಹಾಸನ, ಛತ್ರ, ಚಾಮರ, ಸ್ವರ್ಣಪಾದುಕೆ, ಮುತ್ತಿನ ಕಿರೀಟ ಮೊದಲಾದವುಗಳನ್ನು ಕೊಟ್ಟು, ಬಸವನ ಘಂಟೆಯನ್ನು ವಿಶೇಷವಾಗಿ ಶ್ರೀಗಳವರ ಪೂಜೆಗೆ ಸಮರ್ಪಿಸಿದರೆಂದೂ ತಿಳಿದುಬರುತ್ತದೆ.

ಬಸವನ ಘಂಟೆಯ ವಿಶೇಷ

ಅದರ ಸ್ಮರಣಾರ್ಥವಾಗಿ ಅಂದಿನಿಂದ ಇಂದಿನವರೆಗೂ ಶ್ರೀವಾದಿರಾಜರ ಮಠದಲ್ಲಿ ಶ್ರೀ ವರಾಹ—ಹಯಗ್ರೀವ ಮಹಾಪೂಜೆಗಳಿಗೆ ಈ ಬಸವನ ಘಂಟೆಯನ್ನೇ ಉಪಯೋಗಿಸುತ್ತಿದ್ದಾರೆ ವೈಷ್ಣವ ಸಂಪ್ರದಾಯದ ಪ್ರಕಾರ ಗರುಡ-ಮುಖ್ಯ ಪ್ರಾಣ ದೇವರು ಘಂಟೆಯ ಲ್ಲಿ ಇರಬೇಕಾಗಿದ್ದರೂ, ಸೋದಾ ಮಠದಲ್ಲಿ ಇದನ್ನೇ ಪೂಜಿಸುತ್ತಿದ್ದಾರೆ. ಇದು ಶ್ರೀವಾದಿರಾಜರು ಅರಸರಿಗೆ ತೋರಿಸಿದ ಉದಾರಚಿತ್ತದ ಪ್ರತೀಕವಾಗಿದೆ.

ಈ ಸೋದೆಯ ಅರಸರು ಧರ್ಮ, ಶಿಲ್ಪ, ಸಾಹಿತ್ಯಗಳಿಗೆ ಹೆಸರಾಗಿದ್ದುದು ಇತಿಹಾಸ ಪುಟಗಳಿಂದ ತಿಳಿದುಬರುತ್ತದೆ. ಈ ಅರಸಪ್ಪ ನಾಯಕನ ಕಾಲದಲ್ಲಿಯೇ ವಾದಿರಾಜ ಯತಿಗಳಿಗೆ ತ್ರಿವಿಕ್ರಮನ ಉಪಾಸನೆ ಮಾಡಬೇಕೆಂಬ ಹಂಬಲ ಉಂಟಾಗಲು, ಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ಗುರುಮಧ್ವಾಚಾರ್ಯರಲ್ಲಿ ಭಿನ್ನವಿಸಿದ ರಂತೆ. ಅದಕ್ಕೆ ಮಧ್ವಯತಿಗಳು ಒಪ್ಪಿಗೆ ನೀಡಿ, ವಿಗ್ರಹವನ್ನು ಪ್ರತಿಷ್ಠಾಪಿಸುವ ಸಂದರ್ಭದಲ್ಲಿ ಅನುಗ್ರಹಮಾಡುವೆ ಎಂದು ಭರವಸೆ ಕೊಟ್ಟು ಆಶೀರ್ವದಿಸಲು, ಅದೇ ಸಮಯಕ್ಕೆ ಅರಸಪ್ಪ ನಾಯಕನೂ ವಾದಿರಾಜರ ಬಳಿಗೆ ಬಂದು, ಸಾರ್ವಭೌಮರೇ, ನಮ್ಮ ಗ್ರಾಮದಲ್ಲಿಯೂ, ಯಾವುದಾದರೂ ದೇವಾಲಯ ನಿರ್ಮಾಣವಾಗುವಂತೆ ಅನುಗ್ರಹಿಸಿ ಎಂದು ಬಿನ್ನವಿಸಿದಾಗ, ಅದಕ್ಕೆ ವಾದಿರಾಜರು ಅರಸರೇ ನಮ್ಮ ಮನಸ್ಸಿನಲ್ಲಿಯೂ ಇದೇ ಸಂಕಲ್ಪವಿರುವುದರಿಂದ ಕಾರ್ಯವು ಕೈಗೂಡಲಿ ಎಂದರಂತೆ. ಅದರಂತೆ ಅರಸರು ತನುಮನಧನಗಳಿಂದ ತ್ರಿವಿಕ್ರಮ ದೇವಾಲಯವನ್ನು ರಚಿಸಲು ಪ್ರೋತ್ಸಾಹಿಸಿ ಅನೇಕ ಶಿಲ್ಪಿಗಳನ್ನು ಕಲಾಕಾರರನ್ನು ಕರೆಸಿ, ದೇವಾಲಯವನ್ನು ನಿರ್ಮಿಸುತ್ತಿರುವಾಗ, ದೇವಾಲಯದ ಸ್ತಂಭಕ್ಕೆ ಒಂದು ದೊಡ್ಡ ಕಲ್ಲನ್ನು ಇರಿಸುವಾಗ ಆ ಶಿಲೆಯು ಜಾರಿ ಕೆಳಗೆ ಬೀಳುವಂತೆ ಇದ್ದು ನೂರಾರು ಜನರ ಪ್ರಾಣಾಪಾಯ ಒದಗಿ ಬಂದು, ಇಂತಹ ಸಂಕಷ್ಟದಲ್ಲಿ ಶಿಲ್ಪಿಯು ದಿಕ್ಕೇ ತೋಚದೆ ಆ ಕಲ್ಲನ್ನು ಕುರಿತು ನೀನು ಕೆಳಗೆ ಬಿದ್ದರೆ ಶ್ರೀ ವಾದಿರಾಜರ ಆಣೆ ಎಂದನಂತೆ. ಕೂಡಲೇ ಆ ಶಿಲೆಯು ಅಲ್ಲೇ ನಿಂತಿತಂತೆ. ಅದನ್ನು ತಿಳಿದ ವಾದಿರಾಜರು ಸ್ಥಳಕ್ಕೆ ಧಾವಿಸಿ ಕಲ್ಲನ್ನು ತಮ್ಮ ಬಲದಿಂದ ಸರಿಪಡಿಸಿದರಂತೆ. ಆದ್ದರಿಂದ ಅವರು ಹನುಮ ಭೀಮ ಮಧ್ವರಲ್ಲಿ ಒಬ್ಬರೆಂದೂ ಮುಂದೆ ಅವರೇ ವಾಯು ಪಟ್ಟಕ್ಕೆ ಬರುವರೆಂದೂ ತಿಳಿದುಬರುತ್ತದೆ.

ನಂತರ ಶ್ರೀಗಳ ಅನುಗ್ರಹದಿಂದ ದೇವಾಲಯ ಪೂರ್ಣವಾಗಲು ಯತಿಗಳು ಬದರಿ ಕ್ಷೇತ್ರದಿಂದ ರಥಾರೂಢ ತ್ರಿವಿಕ್ರಮ ಮೂರ್ತಿಯನ್ನು ತರಲು ಭೂತರಾಜರಿಗೆ ಅಪ್ಪಣೆ ಮಾಡಲು, ಭೂತರಾಜರು ಬದರಿಕಾಶ್ರಮಕ್ಕೆ ಹೋಗಿ ಅಲ್ಲಿಂದ ರಥವನ್ನು ಎತ್ತಿಕೊಂಡು ಬರುತ್ತಿರಲು ಒಬ್ಬ ಬ್ರಹ್ಮರಾಕ್ಷಸನು ಅಡ್ಡಗಟ್ಟಿ ನಿಂತಾಗ ಭೂತರಾಜರು ತಡವಾದರೆ ಮುಹೂರ್ತವು ತಪ್ಪಿಹೋದೀತೆಂದೂ, ರಥದ ಒಂದು ಗಾಲಿಯನ್ನು ತೆಗೆದು ಅದರಿಂದ ಆ ರಾಕ್ಷಸನನ್ನು ಕೊಂದು ತ್ರಿವಿಕ್ರಮ ಮೂರ್ತಿಯನ್ನು ಶ್ರೀಗಳವರ ಸನ್ನಿಧಿಗೆ ತಲುಪಿಸಿ ವಂದಿಸಿದರೆಂದೂ ಪ್ರತೀತಿ ಇದೆ.

ಸಂತರ ಶ್ರೀವಾದಿರಾಜರು ಶಾಲಿವಾಹನ ಶಕ 1504ನೇ ಚಿತ್ರಭಾನು ಸಂವತ್ಸರದ ಶುದ್ಧ ಪೂರ್ಣಿಮೆಯ ದಿನ ಮಹಾವೈಭವದಿಂದ ರಥಾರೂಢ ಲಕ್ಷ್ಮಿ ಸಹಿತ ತ್ರಿವಿಕ್ರಮ ದೇವರನ್ನು ಪ್ರತಿಷ್ಠಾಪಿಸಿದರೆಂದು ಪ್ರತೀತಿ ಇರುವುದಲ್ಲದೇ ಆ ಪ್ರತಿಷ್ಠಾಪನ ದಿನವನ್ನು ಅಲ್ಲಿನ ಶಿಲಾಶಾಸನದಲ್ಲಿ ಇಂದಿಗೂ ಕಾಣಬಹುದಾಗಿದೆ. ಅಲ್ಲದೇ ಇಂದಿಗೂ ವಾದಿರಾಜ ಮಠದ ಎದುರಿನ ತ್ರಿವಿಕ್ರಮ ದೇವಾಲಯದಲ್ಲಿನ ರಥದಲ್ಲಿ ಕೇವಲ ಮೂರು ಚಕ್ರವಿರುವುದನ್ನೂ ಸ್ತಂಭದಲ್ಲಿ ವಾದಿರಾಜರ ಮೂರ್ತಿಯನ್ನೂ ಕಾಣಬಹುದಾಗಿದೆ.

ಕಾಡಿನ ಮಧ್ಯದಲ್ಲಿರುವ ಈ ರಮಣೀಯ ಮಹಿಮಾಂತ ಮಹಾಪ್ರದೇಶದಲ್ಲಿರುವ ವಿಶಾಲವಾದ ವಾದಿರಾಜರ ಮಠಕ್ಕೆ ಇಂದಿಗೂ ಸಾವಿರಾರು ಜನರು ಬರುತ್ತಾರೆ. ಗುರು ವಾದಿರಾಜರನ್ನು ಭಕ್ತಿಯಿಂದ ಆರಾಧಿಸುವ ಎಲ್ಲ ಜನರ ಕಾರ್ಯಗಳನ್ನು ಕೈಗೂಡಿಸುತ್ತಾರಲ್ಲದೇ ಅನೇಕ ರೋಗರುಜಿನಗಳನ್ನು ಮನೋ ವೈಕಲ್ಯಗಳನ್ನು ದೂರಮಾಡುತ್ತಾರೆಂದು ತಿಳಿದುಬರುತ್ತದೆ. ಅದಕ್ಕಾಗಿಯೇ ಅನೇಕ ಭಕ್ತಾದಿಗಳು ಅಲ್ಲಿಗೆ ಬಂದು ಧವಳಗಂಗಾ ತೀರ್ಥದಲ್ಲಿ ಸ್ನಾನಮಾಡಿ ಒದ್ದೆಯಿಂದಲೇ ಫಲವನ್ನು ಕಟ್ಟಿಕೊಂಡು ವಾದಿರಾಜರಿಗೆ ಸೇವೆ ಸಲ್ಲಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆಯುತ್ತಾರೆ.

ವಾದಿರಾಜರ ಆರಾಧನೆಯ ಕಾಲದಲ್ಲಿ ಇಂದಿಗೂ ಪರ್ಯಾಯ ಪೂಜೆ, ನಿತ್ಯ ನೈವೇದ್ಯಗಳು, ಪ್ರಸಾದ ವಿನಿಯೋಗಗಳು ನಡೆಯುತ್ತಿವೆ.

ವಾದಿರಾಜರ ಮಠದ ಸುತ್ತಲೂ ಪಂಚ ಬೃಂದಾವನ, ಮುರಳೀಧರ ಕೃಷ್ಣ, ಚಂದ್ರಮೌಳೀಶ್ವರ, ವೀಣಾಪಾಣಿ ಹನುಮಂತ ದೇವರು, ಧವಲಗಂಗಾ, ಅಂತರಗಂಗಾ, ಆಕಾಶಗಂಗಾ, ಅಮೃತಗಂಗಾ, ಪಾತಾಳಗಂಗಾ ಎಂಬ ಪಂಚಗಂಗಾ ತೀರ್ಥಗಳನ್ನೂ ಅಶ್ವತ್ಥ, ಚೂತ (ಮಾವು) ಹಲಸು, ಹುಣಸೆ, ತೆಂಗು, ನೆಲ್ಲಿಕಾಯಿ, ಕಬ್ಬು, ಬಾಳೆ ಎಂಟು ವೃಕ್ಷಗಳನ್ನು, ಸಮೀಪದಲ್ಲಿರುವ ಹಯಗ್ರೀವ ಸಮುದ್ರವನ್ನು ಇಂದಿಗೂ ಕಾಣುತ್ತೇವೆ.

ಭೂತರಾಜರ ಮಹಿಮೆ

ಭೂತರಾಜರು ಒಬ್ಬ ದೊಡ್ಡ ಆಚಾರ್ಯರಾಗಿದ್ದು, ಗುರುಗಳ ಶಾಪದಿಂದ ಬ್ರಹ್ಮರಾಕ್ಷಸರಾಗಿದ್ದಾರೆಂದೂ, 'ಆ ಕಾ ಮ ವೈ' ಎಂದು ಜಪಿಸುತ್ತಿದ್ದು ಅದರ ಅರ್ಥ ತಿಳಿದ ನಂತರ ಶಾಪ ವಿಮೋಚನೆ ಎಂದು ಹೇಳಿದ್ದರಿಂದ, ಒಂದು ಘೋರಾರಣ್ಯದಲ್ಲಿ ಬಂದವರೆಲ್ಲರ ಮುಂದೆ ಅದನ್ನು ಹೇಳುತ್ತಿದ್ದು ಉತ್ತರ ಹೇಳದಿರುವವರನ್ನೆಲ್ಲಾ ತಿಂದು ಅಲೆಯುತ್ತಿರುವಾಗ, ಯಾತ್ರೆಯನ್ನು ಮಾಡಿಕೊಂಡು ಬರುತ್ತಿದ್ದ ವಾದಿರಾಜರಿಗೆ, ಮಾರ್ಗಮಧ್ಯದಲ್ಲಿ ಈ ಬ್ರಹ್ಮರಾಕ್ಷಸರು ಅಡ್ಡಲಾಗಿ ಬಂದು ಪ್ರಶ್ನೆಯನ್ನು ಮಾಡಲು ಶ್ರೀಗಳು ಅದಕ್ಕೆ ಉತ್ತರವಾಗಿ "ಅಶ್ವಿನೀ (ಆಷಾಢೇ) ಕಾರ್ತಿಕೇ ಮಾಘೇ ವೈಶಾಖೇ ಸ್ನಾನತತ್ಪರಃ ಬ್ರಹ್ಮರಾಕ್ಷಸ ವೈಶಾಚಯೋನೇರ್ಮುಕ್ತೋ ಭವೇಧ್ರುವಮ್" ಎಂದು ತಾತ್ಪರ್ಯವನ್ನು ಮಾಡಲು, ಆತನು ಬ್ರಹ್ಮ ರಾಕ್ಷಸರೂಪದಿಂದ ವಿಮೋಚನನಾಗಿ

ದಿವ್ಯ ಸ್ವರೂಪದಿಂದ ವಾದಿರಾಜರಿಗೆ ಸಾಷ್ಟಾಂಗವಾಗಿ ನಮಸ್ಕರಿಸಲು, ವಾದಿರಾಜರು ನೀನು ನಿನ್ನ ಶಕ್ತಿಯಲ್ಲಿ ಲೋಕದಲ್ಲಿರುವ ಭೂತಗಳನ್ನೆಲ್ಲಾ ಮೀರಿಸಿದ್ದರಿಂದ ಭೂತರಾಜನೆಂದು ಪ್ರಸಿದ್ಧನಾಗಿ, ನನ್ನ ಬಳಿಯಲ್ಲಿದ್ದು ಹಯವದನನ ನಿತ್ಯ ಸೇವೆಯಿಂದ ಮುಂದೆ ರುದ್ರಪಟ್ಟಕ್ಕೆ ಬರುವಂತವನಾಗು ಎಂದು ಆಶೀರ್ವದಿಸಿದರಂತೆ. ಆದ್ದರಿಂದ ಮುಂದೆ ಈ ಮಹಿಮಾಪುರುಷನೇ ರುದ್ರನ ಅವತಾರವನ್ನು ತಾಳುತ್ತಾನೆಂದು ಬಲ್ಲವರು ಹೇಳುತ್ತಾರೆ.

ವಾದಿರಾಜರ ಅನುಗ್ರಹದಂತೆ ಇಂದಿಗೂ ಭೂತರಾಜರಿಗೆ ನಿತ್ಯಪೂಜೆ ನೈವೇದ್ಯಗಳು ನಡೆಯುತ್ತಿವೆ. ಅಲ್ಲದೇ ಯಾವುದೇ ಭಕ್ತಾದಿಗಳು ಬಂದರೂ ಮೊದಲು ಭೂತರಾಜರ ದರ್ಶನಮಾಡಿ ಅವರಿಗೆ ತೆಂಗಿನಕಾಯನ್ನು ಉರುಳಿಸಿ ಅವರ ಅಪ್ಪಣೆಯನ್ನು ಪಡೆದು ಮುಂದೆ ಧವಳಗಂಗಾ ತೀರ್ಥದಲ್ಲಿ ಸ್ನಾನಮಾಡುವುದು ಇಲ್ಲಿಯ ಜನರ ಸಂಪ್ರದಾಯವಾಗಿದೆ.

ಧವಳಗಂಗಾ ತೀರ್ಥದ ಮಹಿಮೆ

ಧವಳಗಂಗಾ ತೀರ್ಥವು ಪರಿಶುದ್ಧವಾಗಿದ್ದು, ಅದರಲ್ಲಿ ಭೂತರಾಜರಿಗೆ ಒಂದು ಸ್ಥಳವನ್ನು ಪ್ರತ್ಯೇಕವಾಗಿ ಬಿಟ್ಟಿದ್ದಾರೆ. ಆ ಸ್ಥಳದಲ್ಲಿ ಯಾರೇ ಆಗಲಿ ಪರೀಕ್ಷಿಸಿದರೆ ಅಥವಾ ಸ್ನಾನಮಾಡಿದರೆ ಅವರಿಗೆ ಅಪಾಯ ಸಂಭವಿಸುವುದಂತೂ ನಿಶ್ಚಿತ ಎಂದು ಹೇಳುತ್ತಾರೆ. ಅಲ್ಲಿ ಭೂತರಾಜರು ಯಾವಾಗಲೂ ಕಾವಲಾಗಿದ್ದು ಯಾವುದೇ ಅನರ್ಥ ಕಾರ್ಯವಾಗಲೀ ಯಾವುದೇ ವಸ್ತುವಿನ ಕಳುವಾಗಲೀ ಸಂಭವಿಸುವುದಿಲ್ಲ.

ಅಲ್ಲದೇ ಭೂತರಾಜರು ಶ್ರೀ ವಾದಿರಾಜರಿಗೆ ಬೆಳಗಿನಜಾವ ಎಲ್ಲರಿಗಿಂತ ಮೊದಲು ಎದ್ದು ಸೇವೆ ಸಲ್ಲಿಸಿದ ನಂತರವೇ ಇತರರಿಗೆ ಅವಕಾಶ. ಇಂದಿಗೂ ಭೂತರಾಜರು ಮುಂಜಾವದಲ್ಲಿ ಧವಳಗಂಗಾ ತೀರ್ಥದಲ್ಲಿ ಧುಮುಕುವುದು, ಘಂಟೆ ಹೊಡೆಯುವ ಶಬ್ದ ಕೇಳಿಬರುತ್ತದೆ. ಆದರೆ ಅವರು ಯಾವಾಗಲೂ ಅದೃಶ್ಯರಾಗಿರುತ್ತಾರೆ ಎಂದು ಹೇಳುತ್ತಾರೆ.

ಈ ರೀತಿ ಸೋದಾ ವಾದಿರಾಜರ ಮಠವು, ತ್ರಿವಿಕ್ರಮ ದೇವಾಲಯವು ಅನೇಕ ಮಹಿಮೆಗಳಿಂದ ಕೂಡಿದ್ದು, ಒಮ್ಮೆ ಭೇಟಿಕೊಟ್ಟವರಿಗೆ ಶಾಂತಿ ನೆಮ್ಮದಿಗಳು ಸಿಕ್ಕುವುದೆಂದು ಐತಿಹ್ಯವಾಗಿದೆ. ಇಂತಹ ರಮಣೀಯವಾದ ಪ್ರದೇಶದಲ್ಲಿ ತುಳಸೀ ವೃಕ್ಷಗಳು ದೇವಾಲಯದ ಸುತ್ತಲೂ ಹೊಮ್ಮಾಗಿ ಬೆಳೆದು ನಿಂತಿವೆ. ಪ್ರತ್ಯಕ್ಷದರ್ಶಿಗಳಾಗಿ ಅವಲೋಕಿಸಲು ಎಂಥಹವರಿಗೂ ಮನ ಸೆಳೆಯುತ್ತದೆ.

ಡಿ. ಎ. ಗಿರಿಜಮ್ಮ

ಹೊಯ್ಸಳರ ಕಾಲದ ಉಡಿಗೆ ತೊಡಿಗೆಗಳು ಮತ್ತು ಆಭರಣಗಳು

(ಕನ್ನಡ ಸಾಹಿತ್ಯದಲ್ಲಿ ಚಿತ್ರಿಸಿರುವಂತೆ)

ಪ್ರಾಚೀನ ಕಾಲದಿಂದಲೂ ದೇವಾಲಯಗಳಲ್ಲಿ ಪೂಜಾ ಸಮಯದಲ್ಲಿ ವಿವಿಧ ಹೂಗಳು ಮತ್ತು ಹಾರಗಳನ್ನು ಭಕ್ತಿ ಪುರಸ್ಸರವಾಗಿ ದೇವರಿಗೆ ಅರ್ಪಿಸುವ ವಿಶಿಷ್ಟ ಪದ್ಧತಿ ಇವತ್ತಿನವರೆವಿಗೂ ಅನೂಚಾನವಾಗಿ ನಡೆದುಬಂದಿದ್ದು ಮಾನವನ ಧಾರ್ಮಿಕ, ಸಾಮಾಜಿಕ ಹಾಗೂ ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡು ಬಂದಿದೆ. ಆದರೆ ಹೊಯ್ಸಳರ ಕಾಲದ ಕೆಲವು ಕನ್ನಡ ಸಾಹಿತ್ಯಗಳಲ್ಲಿ ಪುಷ್ಪಾಭರಣಗಳು, ಉಡಿಗೆ ತೊಡಿಗೆಗಳು ಸಮಾಜದ ಕೆಲವೇ ವರ್ಗಗಳಿಗೆ ಸೀಮಿತವಾಗಿದ್ದವು ಎಂಬುದನ್ನು ಶ್ರುತಪಡಿಸುತ್ತವೆ. ರಾಜರುಗಳು, ಅಂತಃಪುರದ ಸ್ತ್ರೀಯರು, ಪರಿವಾರದವರು ಹಾಗೂ ಅಗರ್ಭ ಶ್ರೀಮಂತರು ಇದಕ್ಕೆ ಹೊರತಾಗಿರಲಿಲ್ಲ. ಈ ಕಾಲದ ಕವಿಪುಂಗವರಾದ ನೇಮಿಚಂದ್ರ, ಜನ್ನ, ರುದ್ರಭಟ್ಟ, ಮಲ್ಲಿಕಾರ್ಜುನ ಮತ್ತು ರಾಘವಾಂಕರುಗಳು, ಸ್ತ್ರೀಪುರುಷರುಗಳು ಆಮೋದ ಪ್ರಮೋದಗಳಲ್ಲಿ ಬಳಸುತ್ತಿದ್ದ ಹೂವಿನ ಆಭರಣಗಳು ಮತ್ತು ಉಡಿಗೆ ತೊಡಿಗೆ ಬಗ್ಗೆ ತಮ್ಮ ಕಾವ್ಯಗಳಲ್ಲಿ ಒಂದೊಂದು ಅಧ್ಯಾಯವನ್ನೇ ಮೀಸಲಾಗಿಟ್ಟಿರುವರು. ಈ ಉಡಿಗೆ ತೊಡಿಗೆಗಳನ್ನು ಅತ್ಯಮೂಲ್ಯವಾದ ಬಂಗಾರದ ಒಡವೆಗಳಿಗಿಂತ ಹೆಚ್ಚಾಗಿ ತೊಟ್ಟು ಆನಂದಿಸುತ್ತಿದ್ದರು. ಮೇಲ್ವರ್ಗದ ಗುಂಪಿನ ಜನಜೀವನವನ್ನು ಸೂಕ್ಷ್ಮವಾಗಿ, ಅಮೂಲಾಗ್ರವಾಗಿ ಗಮನಿಸುತ್ತಿರಬಹುದಾದ ಈ ಕವಿಗಳು ಸಾಮಾನ್ಯರ ಕಡೆ ಗಮನಹರಿಸುವುದಕ್ಕೆ ಅವಕಾಶವಾಗಿಲ್ಲವೆಂದು ಕಾಣುತ್ತದೆ.

ಹೊಯ್ಸಳರ ಕಾಲದ ಶಾಸನಗಳು ಹೂವಿನ ಆಭರಣಗಳನ್ನು ತಯಾರಿಸುವವರ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ನೀಡದಿದ್ದರೂ ಮಾಲೆಗಾರರಿಗೆ ಅನೇಕ ದಾನದತ್ತಿಗಳನ್ನು ನೀಡಿರುವ ವಿಷಯ ಪ್ರಸ್ತಾಪಿಸುತ್ತದೆ. ಕವಿ ರುದ್ರಭಟ್ಟ ಹೂವಿನ ಹೆಸರುಗಳ ಪದಮಾಲೆಯನ್ನೇ ಹರಿಸುತ್ತಾನೆ. ಜಿಟ್ಟತಾವರೆ, ಮಲ್ಲಿಗೆ, ಸುರಹೊನ್ನೆ, ನೈದಿಲೆ,

ಸೇವಂತಿಗೆ, ಗುಜ್ಜಗೆ, ಹೊನ್ನದಾವರೆ, ಪಾದರಿ, ಸಂಪಿಗೆ, ಇರುವಂತಿಗೆ, ಸುಗಂಧದ ತೆನೆಗಳಾದ ಮರುಗ, ತುಳಸಿ, ಜಾಜಿ[1], ಸುರಾಗಿ, ಹೊಂಗೇದಿಗೆ, ಕಾಡುಮಲ್ಲಿಗೆ (ಬಹುಶಃ ಕಾಕಡ) ಮೊಲ್ಲೆ[2], ಕೇದಿಗೆ, ಗಿರಿಮಲ್ಲಿಗೆ[3] ಇತ್ಯಾದಿ.

ರಾಜರ ಪರಿವಾರಕ್ಕೆ ಸೇರಿದ ಅಂತಃಪುರದ ಸ್ತ್ರೀಯರುಗಳು ಮೇಲ್ಕಂಡ ಹೂಗಳಿಂದ ಸುಂದರವಾದ ವೇಷಭೂಷಣಗಳು ಮತ್ತು ಆಭರಣಗಳನ್ನು ತಯಾರಿಸುತ್ತಿದ್ದರು. ರಾಜರುಗಳ ಆಮೋದ ಪ್ರಮೋದಗಳೆನಿಸಿದ್ದ ವನಕ್ರೀಡೆ, ಜಲಕ್ರೀಡೆ ಹಾಗೂ ಕುಸ್ತಿ ಪಂದ್ಯಗಳ ಸಂದರ್ಭದಲ್ಲಿ ಇವುಗಳ ಬಳಕೆ ಹೇರಳವಾಗಿದ್ದವು. ಹೂವಿನ ಆಭರಣಗಳ ತಯಾರಿಕೆ ಸ್ತ್ರೀಯರ ಜಾಣ್ಮೆ, ಕೌಶಲ್ಯ ಹಾಗೂ ಕುಶಲ ಬುದ್ಧಿಯನ್ನು ಪ್ರದರ್ಶಿಸುತ್ತಿತ್ತು. ಕವಿ ಮಲ್ಲಿಕಾರ್ಜುನ ತನ್ನ ಸಂಕಲನ ಗ್ರಂಥವಾದ ಸೂಕ್ತಿಸುಧಾರ್ಣವದಲ್ಲಿ ಹೂವಿನ ಆಭರಣಗಳ ಸರಮಾಲೆಯನ್ನೇ ಸೃಷ್ಟಿಸಿದ್ದಾನೆ. ಉದಾ.ಗೆ ಕೊಪ್ಪುಂಗುರ (ಬಹುಕೂಹ ಬುಗುಡಿ), ಕಟಸೂತ್ರ ಕಟಕ (ಕಡಗ), ಪೂ-ಬಳೆ[4] (ಹೂವಿನ ಬಳೆ) ಇವುಗಳನ್ನು ಕೆಯೂರ ಹೂವುಗಳಿಂದ ತಯಾರಿಸುತ್ತಿದ್ದರು. ಬಂದಿ, ಬಿಜ್ಜೋಲೆ[5] ಸುರಹೊನ್ನೆಯ ಮಂಜೀಹಾರ[6] ಬಹು ಪ್ರಿಯವಾದ ಆಭರಣಗಳಾಗಿದ್ದವು ಹೂವಿನ ಉಡುಗೆ ಕೇವಲವಾಗಿದ್ದವು[7].

ಒಮ್ಮೊಮ್ಮೆ ಹೂಗಾರರೂ ಕೂಡ ಆಭರಣಗಳನ್ನು ತಯಾರಿಸುತ್ತಿದ್ದರು. ರುದ್ರಭಟ್ಟ ಒಂದುಕಡೆ ಹೂಮಾರುವವರ ಕೇರಿಯನ್ನೇ ಚಿತ್ರಿಸುತ್ತಾನೆ. ಶ್ರೀಕೃಷ್ಣನು ಮಲ್ಲಯುದ್ಧದಲ್ಲಿ ಚಾಣೂರ ಮತ್ತು ಮುಷ್ಟಿಕ ಎಂಬ ರಾಕ್ಷಸರನ್ನು ಸೋಲಿಸುವುದಕ್ಕೆ ಹೋಗುವ ಸಂದರ್ಭದಲ್ಲಿ ಹೂಗಾರರೊಡನೆ ಬಂದ ತಂಡದ ನಾಯಕನು ಹೂವಿನ ವಿವಿಧ ಉಡಿಗೆ ತೊಡಿಗೆಗಳಿಂದ ಕೃಷ್ಣನನ್ನು ಅಲಂಕರಿಸಿ ಗೆದ್ದುಬರಬೇಕೆಂದು ಬೇಡಿಕೊಳ್ಳುತ್ತಾನೆ. ಹೂವಿನಿಂದ ತಯಾರಿಸಿದ ಉಡುಗೆ ನವಾಂಬರವನ್ನೂ[8] ಮೀರಿಸಿತ್ತು. ಆಗತಾನೆ ಬಿರಿದಿದ್ದ ಮಲ್ಲಿಗೆಯ ಮೊಗ್ಗುಗಳಿಂದ ಕಂಕಣವನ್ನೂ, ಸುರಹೊನ್ನೆಯ ಕರ್ಣಪೂರ, ಸೇವಂತಿಗೆ ಹಾಗೂ ಅಶೋಕ ಪಲ್ಲವದಿಂದ ಮಾಡಿದ ಬೆರಳುಂಗುರ, ಮರುಗ, ಪಾದರಿ ಮತ್ತು ತುಳಸಿಗಳ ಸುಗಂಧ ತೆನೆಗಳ ಬಹು ನೀಳವಾದ ಹಾರ, ಹೇಮ ತಾಮರಸದ ತೋಳಬಂದಿ[9] ಇವುಗಳಿಂದ ಕೃಷ್ಣನನ್ನು ಅಲಂಕರಿಸಿ ಅಖಾಡಕ್ಕೆ ಕಳಿಸಿಕೊಟ್ಟರು. ಈ ಆಭರಣಗಳು ನೈಸರ್ಗಿಕ ಗಿಡಮೂಲಿಕೆಗಳಿಂದ ತಯಾರಿಸಲ್ಪಡುತ್ತಿದ್ದವು. ಹಾಗಾಗಿ ಕುಸ್ತಿಯು ಹೊಡೆತದ ಪಟ್ಟುಗಳಿಂದ ಉಂಟಾಗುವ ನಂಜನ್ನು ಕಡಿಮೆಮಾಡುವ ಸಾಧ್ಯತೆಗೆ ಸಹಾಯಕವಾಗುತ್ತಿದ್ದವು ಎಂಬುದಾಗಿ ತೋರುತ್ತದೆ.

ಇವೇನೇ ಇರಲಿ ಆಮೋದ ಪ್ರಮೋದಗಳಲ್ಲಿ ಭಾಗವಹಿಸುವ, ಪುಷ್ಪಾಭರಣಗಳನ್ನು ವಿವಿಧ ರೀತಿಯಲ್ಲಿ ಅಲಂಕರಿಸಿಕೊಳ್ಳುವ ವಿಶೇಷಣ ಮೇಲ್ವರ್ಗದ ಗುಂಪಿನ ಜನಕ್ಕೆ ಮಾತ್ರ ಮೀಸಲಾಗಿತ್ತು. ಕಡಗ ಕಂಕಣಗಳಿಂದ ಹಿಡಿದು ದುಕೂಲದವರೆಗೆ ಧರಿಸಿ ಅಮೂಲ್ಯ ಒಡವೆಗಳನ್ನು ಧರಿಸಿದ್ದಕ್ಕಿಂತ ಹೆಚ್ಚಾಗಿ ಸಂತೋಷದ ತುತ್ತ

ತುದಿಗೇರಿ ಓಲಾಡುತ್ತಿದ್ದರು. ಆದರೆ ಈ ಆಭರಣಗಳಲ್ಲಿ ಸಾಮಾನ್ಯ ವರ್ಗದ ಮಟ್ಟಕ್ಕೆ ಅಂದಿನಿಂದ ಇಂದಿನವರೆಗೆ ತಲುಪಿದ ಒಂದೇ ಒಂದು ಆಭರಣವೆಂದರೆ ಮೊಗ್ಗಿನಜಡೆ ಎಂದರೆ ತಪ್ಪಾಗಲಾರದು.

ಗ್ರಂಥಋಣ

1. ರುದ್ರಭಟ್ಟ–ಜಗನ್ನಾಥ ವಿಜಯ : ಸಂ. ಆರ್. ಶಾಮಾಶಾಸ್ತ್ರಿ ಅ.ಅ.ಪ. 16.
2. „ „ „ ಅ. 14 ಪ. 79-84.
3. „ „ „ ಅ. 4, ಪ. 4–7.
4. ಮಲ್ಲಿಕಾರ್ಜುನ : ಸೂಕ್ತಿಸುಧಾರ್ಣವಂ, ಪು. 284 ಪ. 49 ; ಸಂ. ಅನಂತರಂಗಾಚಾರ್, ವನವಿಹಾರ ದರ್ಶನಂ.
5. ನೇಮಿಚಂದ್ರ : ಲೀಲಾವತಿ ಪ್ರಬಂಧ, ಆಶ್ವಾಸ 13. ಪ. 108.
6. ರುದ್ರಭಟ್ಟ : ಆಶ್ವಾಸ 4 ; ಪದ್ಯ 86, ಪುಟ 312.
7. ಜನ್ನ : ಅನಂತನಾಥ ಪುರಾಣ–ವಸಂತೋತ್ಸವ ; ಪುಟ 42.
   ಜನ್ನ : ಅನಂತನಾಥ ಪುರಾಣ–ಆಶ್ವಾಸ 16, ಪ. 15 ; ರಾಘವಾಂಕ, ಹರಿಶ್ಚಂದ್ರ ಕಾವ್ಯ, ಆಶ್ವಾಸ 3 ಪದ್ಯ 48.
8. ಕಿಟ್ಟೆಲ್ ನಿಘಂಟು : ಪುಟ 848 ; ರು.ಭ.ಜ.ವಿ. ಅಭ್ಯಾಸ 6, ಪುಟ 113.
9. ರು.ಭ ಜ.ವಿ. ಆಶ್ವಾಸ 6, ಪುಟ 114, 16ನೆಯ ವಚನ.

ಕೆ.ಸಂ. 31696—ಎಂ.ಯು.ಪಿ.ಎಂ.—425 ಪ್ರತಿಗಳು—11-12-90

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬